www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ದ್ವೀಪರಾಷ್ಟ್ರ ಶ್ರೀಲಂಕಾದ ಜನರ ಬವಣೆ ದಿನದಿಂದ ದಿನಕ್ಕೆ ಹೆಚ್ಚು ಅಸಹನೀಯವಾಗುತ್ತಿದೆ. ಲಂಕೆಯ ಇಂದಿನ ದಾರುಣಸ್ಥಿತಿಗೆ ಕಾರಣಗಳ ಹುಡುಕುತ್ತಾ...

ಸೆ.21ರಿಂದ ನೀಟ್–ಪಿಜಿ ಕೌನ್ಸೆಲಿಂಗ್ 8
ಬೂಕರ್ ಪ್ರಶಸ್ತಿ ಪುರಸ್ಕೃತೆ ಗೀತಾಂಜಲಿ, ಗ್ರ್ಯಾಮಿ ಪ್ರಶಸ್ತಿ ವಿಜೇತ ರಿಕ್ಕಿಕೇಜ್ ಭಾಗಿ 7
ನೇಮಕಾತಿ ಹಗರಣ: ಸಚಿವ ಚಟರ್ಜಿ ಬಂಧನ 8
ಸಾಂಸ್ಕೃತಿಕ ನಗರಿಯಲ್ಲಿ ಗರಿಗೆದರಿದ ಸಾಹಿತ್ಯ ಸಂಭ್ರಮ 7

ಒಳ ಪುಟಗಳು

ಹರ್ಡಲ್ಸ್: ಮೆಕ್‌ಲಾಫ್ಲಿನ್ ವಿಶ್ವದಾಖಲೆ 10
ರಾಜ್ಯದಲ್ಲಿ ಡೆಂಗಿ ಉಲ್ಬಣ 6

ಚಿನಕುರಳಿ

ಪ್ರಕಾಶ್ ಶೆಟ್ಟಿ

ಶಾಶ್ವತ ಕಾಮಗಾರಿ ಕೈಗೊಂಡ ಬಳಿಕವೂ ಕಾಡುತ್ತಲೇ ಇದೆ ಕಡಲ್ಕೊರೆತ

₹ 864 ಕೋಟಿ 'ಕಡಲಪಾಲು'

• ಪ್ರವೀಣ್ ಕುಮಾರ್ ಪಿ.ವಿ.

ಮಂಗಳೂರು: ರಾಜ್ಯದ ಕರಾವಳಿ ತೀರದ ಉದ್ದಕ್ಕೂ ಕಡಲ್ಕೊರೆತ ಸಮಸ್ಯೆ ನೀಗಿಸಲು ನಾಲ್ಕು ದಶಕಗಳಿಂದ ಸಾವಿರಾರು ಕೋಟಿ ರೂಪಾಯಿ ವ್ಯಯಿಸಲಾಗಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಏಷ್ಯನ್ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ನೆರವಿನಿಂದ ₹864 ಕೋಟಿ ವೆಚ್ಚದಲ್ಲಿ ಯೋಜನೆ ಜಾರಿಗೊಳಿಸಲಾಗಿದೆ. ವಿಪರ್ಯಾಸವೆಂದರೆ ಆ ಬಳಿಕವೂ ಕಡಲ್ಕೊರೆತ ಸಮಸ್ಯೆ ಹಾಗೆಯೇ ಮುಂದುವರಿದಿದೆ.

ಕರ್ನಾಟಕವು 300 ಕಿ.ಮೀ ಉದ್ದದ ಕಡಲ ತೀರವನ್ನು ಹೊಂದಿದೆ. ಅದರಲ್ಲಿ 121.62 ಕಿ.ಮೀ ಉದ್ದದ ತೀರದಲ್ಲಿ ಮಳೆಗಾಲದ ವೇಳೆ ಕಡಲ್ಕೊರೆತ ಹಾವಳಿ ಕಾಣಿಸಿಕೊಳ್ಳುತ್ತದೆ. ಇದನ್ನು ತಡೆಯಲು ಸರ್ಕಾರವು ಎಡಿಬಿ ನೆರವಿನಿಂದ 12 ವರ್ಷಗಳ ಹಿಂದೆ ಕರಾವಳಿಯ ಸುಸ್ಥಿರ ಸಂರಕ್ಷಣೆ ಮತ್ತು ನಿರ್ವಹಣೆ ಹೂಡಿಕೆ ಯೋಜನೆಯನ್ನು (ಎಸ್‌ಸಿಪಿಎಂಐಪಿ) ಎರಡು ಹಂತ ಗಳಲ್ಲಿ ಕೈಗೆತ್ತಿಕೊಂಡಿತು. ಭೌತಿಕ ಕಾಮಗಾರಿಗಳಿಗೆ ₹ 601.40 ಕೋಟಿ ವ್ಯಯಿಸಲಾಗಿದೆ. ಎರಡನೇ ಹಂತದ ಯೋಜನೆಯಲ್ಲಿ ಪರಿಕರ ಖರೀದಿ, ಅಧ್ಯಯನ ಮತ್ತು ಸಮೀಕ್ಷಾ ಕಾರ್ಯ, ಸಲಹಾ ಸಂಸ್ಥೆ, ವೇತನ ಮತ್ತಿತರ ವೆಚ್ಚವೇ ₹161.46 ಕೋಟಿಗಳಷ್ಟಿದೆ. 2021ರ ಮಾರ್ಚ್‌ನಲ್ಲೇ ಈ ಯೋಜನೆ ಮುಕ್ತಾಯವಾಗಿದ್ದು, ಕಾಮಗಾರಿಗಳನ್ನು ಮೂಲ ಸೌಕರ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆಗೆ ಹಸ್ತಾಂತರಿಸಲಾಗಿದೆ. ಇಷ್ಟೆಲ್ಲಾ ಆದ ನಂತರವೂ, ಕಿನಾರೆಗಳಲ್ಲಿ ವಾಸವಾಗಿರುವ ಕುಟುಂಬ ಗಳ ಪಾಲಿಗೆ ಕಡಲ್ಕೊರೆತ ದುಃಸ್ವಪ್ನವಾಗಿ ಕಾಡುತ್ತಲೇ ಇದೆ.

'ಎಡಿಬಿ ನೆರವಿನಿಂದ ಕಾಮಗಾರಿಯನ್ನು ಪ್ರಾಯೋಗಿಕವಾಗಿ ಅನುಷ್ಠಾನ ಮಾಡಲಾಗಿದೆ. ಈ ಯೋಜನೆಯಿಂದ ಬಹುತೇಕ ಕಡೆ ಕಡಲ್ಕೊರೆತ ಹತೋಟಿಗೆ ಬಂದಿದೆ' ಎಂದು ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಅಧಿಕಾರಿಗಳು ಸಮರ್ಥಿಸಿಕೊಳ್ಳುತ್ತಾರೆ.

ಒಳನೋಟ
ಖರ್ಚು ಅಪಾರ: ಪರಿಹಾರವಿಲ್ಲ
ಪ್ರತಿಕ್ರಿಯಿಸಿ: 9606038256
feedback@prajavani.co.in

4ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 4

ದಕ್ಷಿಣ ಕನ್ನಡ ಜಿಲ್ಲೆಯ ಸೋಮೇಶ್ವರದ ಬಟ್ಟಪಾಡಿಯಲ್ಲಿ ಮಳೆಯಿಂದಾಗಿ ಕಡಲ್ಕೊರೆತವಾಗುತ್ತಿದೆ –ಪ್ರಜಾವಾಣಿ ಚಿತ್ರ/ಇರ್ಷಾದ್ ಮಹಮ್ಮದ್

ಎಡಿಬಿ ಕಾಮಗಾರಿಯ ತನಿಖೆ: ಸಿ.ಎಂ

ಈ ಬಾರಿ ಮಳೆಗಾಲದಲ್ಲಿ ಕಡಲ್ಕೊರೆತದ ಹಾವಳಿ ಹೆಚ್ಚುತ್ತಿದ್ದಂತೆಯೇ ಎಡಿಬಿ ನೆರವಿನಿಂದ ಅನುಷ್ಠಾನಗೊಳಿಸಲಾಗಿರುವ ಕಾಮಗಾರಿಗಳನ್ನು ಸಮಗ್ರವಾಗಿ ತನಿಖೆಗೆ ಒಳಪಡಿಸಬೇಕು ಎಂಬ ಕೂಗೆದ್ದಿದೆ. ಸೋಮೇಶ್ವರ ಪುರಸಭೆ ವ್ಯಾಪ್ತಿಯ ಬಟ್ಟಪ್ಪಾಡಿಯ ಕಡಲ್ಕೊರೆತ ಪ್ರದೇಶಕ್ಕೆ ಇತ್ತೀಚೆಗೆ ಭೇಟಿ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಎಡಿಬಿ ಕಾಮಗಾರಿಯನ್ನು ತನಿಖೆಗೆ ಒಳಪಡಿಸುವ ಭರವಸೆ ನೀಡಿದ್ದಾರೆ.

ತಜ್ಞರ ಸಮಿತಿ ಶಿಫಾರಸು ಆಧರಿಸಿ ಕ್ರಮ

ರಾಜ್ಯದ ಕರಾವಳಿಯಲ್ಲಿ ಕಡಲ್ಕೊರೆತ ತಡೆಗೆ ಎಡಿಬಿ ನೆರವಿನಿಂದ ಕಾಮಗಾರಿಗಳನ್ನು ಕೈಗೊಂಡ ಬಳಿಕವೂ ಅನೇಕ ಕಡೆ ಸಮಸ್ಯೆ ಮರುಕಳಿಸುತ್ತಿದೆ. ಎಲ್ಲಿ ಲೋಪವಾಗಿದೆ ಎಂಬ ಬಗ್ಗೆ ಸರ್ಕಾರ ಕೂಲಂಕಷವಾಗಿ ತನಿಖೆ ನಡೆಸಲಿದೆ. ಕಡಲ್ಕೊರೆತ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸುವ ಬಗ್ಗೆ ಪರಿಶೀಲಿಸಲು ತಜ್ಞರ ಸಮಿತಿಯನ್ನು ನೇಮಿಸಿದ್ದೇವೆ

ಎಸ್.ಅಂಗಾರ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ

'ಬಾಯಿ ಮುಚ್ಚಿ ಕೆಲಸ ಮಾಡಿ'

ವ್ಯಕ್ತಿಪೂಜೆ ಬಿಡಿ, ಪಕ್ಷ ಪೂಜೆ ಮಾಡಿ: ಡಿ.ಕೆ.ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಾಯಿ ಮುಚ್ಚಿಕೊಂಡು ಕೆಲಸ ಮಾಡಿ ಪಕ್ಷವನ್ನು ಅಧಿಕಾರಕ್ಕೆ ತನ್ನಿ' ಎಂದು ಪಕ್ಷದ ಮುಖಂಡರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಾಕೀತು ಮಾಡಿದ್ದಾರೆ.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಪಕ್ಷದ ಬಗ್ಗೆ ನಿಜವಾಗಲೂ ಆಸಕ್ತಿ ಇದ್ದರೆ ವ್ಯಕ್ತಿ ಪೂಜೆ ಬಿಡಿ. ಪಕ್ಷ ಪೂಜೆ ಮಾಡಿ. ಹೆಚ್ಚು ಜನರನ್ನು ಪಕ್ಷಕ್ಕೆ ಕರೆತರುವ ಕಡೆಗೆ ಗಮನ ಹರಿಸಿ' ಎಂದೂ ಸಲಹೆ ನೀಡಿದರು.

ಮುಖ್ಯಮಂತ್ರಿ ಸ್ಥಾನ ವಿಚಾರವಾಗಿ ಪಕ್ಷದ ಶಾಸಕ ಜಮೀರ್ ಅಹ್ಮದ್ ಹೇಳಿಕೆ ನೀಡಿರುವ ಬೆನ್ನಲ್ಲೆ ಹೀಗೆ ಹೇಳಿರುವ ಶಿವಕುಮಾರ್, 'ಎಲ್ಲರಿಗೂ ಈ ಮಾತನ್ನು ಹೇಳುತ್ತಿದ್ದೇನೆ' ಎಂದರು.

7ನೇ ಪುಟ ನೋಡಿ

ಮುಖ್ಯಮಂತ್ರಿ ಯಾರಾಗಬೇಕು ಎಂಬುದು ಮೈಸೂರಿನಲ್ಲೋ, ಬೆಂಗಳೂರಿನಲ್ಲೋ ಅಥವಾ ಕಲಬುರಗಿಯಲ್ಲೋ ತೀರ್ಮಾನವಾಗುವುದಿಲ್ಲ. ಅವತ್ತಿನ ರಾಜಕೀಯ ಪರಿಸ್ಥಿತಿಯನ್ನು ಆಧರಿಸಿ, ಯಾರಿಗೆ ನಾಯಕತ್ವ ಕೊಡಬೇಕು ಎಂಬುದನ್ನು ಹೈಕಮಾಂಡ್ ತೀರ್ಮಾನಿಸುತ್ತದೆ

ಮಲ್ಲಿಕಾರ್ಜುನ ಖರ್ಗೆ, ವಿರೋಧ ಪಕ್ಷದ ನಾಯಕ, ರಾಜ್ಯಸಭೆ

ಮುಖ್ಯಮಂತ್ರಿ ಹುದ್ದೆಯ ಬಗ್ಗೆ ಈಗ ಹೆಚ್ಚು ಚರ್ಚಿಸುವ ಅಗತ್ಯವಿಲ್ಲ. ಅಭಿಮಾನಿಗಳು ಸೇರಿದಂತೆ ಯಾರು ಏನೇ ಹೇಳಿದರೂ ಕೊನೆಯದಾಗಿ ನಿರ್ಧರಿಸುವುದು ಪಕ್ಷದ ಶಾಸಕರು ಹಾಗೂ ಹೈಕಮಾಂಡ್

ಸಿದ್ದರಾಮಯ್ಯ, ವಿಧಾನಸಭೆಯ ವಿರೋಧ ಪಕ್ಷದ ನಾಯಕ

ಬಾಯಿ ಮುಚ್ಚಿಕೊಂಡು ಪಕ್ಷ ಕಟ್ಟಿ ಎಂದು ಶಿವಕುಮಾರ್ ಅವರು ಹೇಳಿರುವುದು ನನಗೊಬ್ಬನಿಗೇ ಅಲ್ಲ. ಕೆಪಿಸಿಸಿ ಅಧ್ಯಕ್ಷರಾದ್ದರಿಂದ ಅವರಿಗೆ ಆ ಹಕ್ಕು ಇದೆ

ಜಮೀರ್ ಅಹಮದ್ ಖಾನ್, ಶಾಸಕ

ಮುಖ್ಯಮಂತ್ರಿ ಹುದ್ದೆ ಸಾಂವಿಧಾನಿಕವಾದುದು, ಅದು ಜಾತಿ ಹುದ್ದೆಯಲ್ಲ. ಯೋಗ್ಯತೆ, ದಕ್ಷತೆ ಇರುವವರು ಆ ಸ್ಥಾನಕ್ಕೆ ಬರಬೇಕು. ದೇಶ ದುರ್ಬಲವಾಗುತ್ತಿದ್ದು, ಪ್ರಜಾಪ್ರಭುತ್ವ ಆಪಾಯದಲ್ಲಿದೆ. ದೇಶ ಪ್ರಬಲವಾಗಬೇಕಾದರೆ ಸಿದ್ದರಾಮಯ್ಯ ಅವರ ನಾಯಕತ್ವ ಅಗತ್ಯ

ಡಾ.ಎಚ್.ಸಿ.ಮಹದೇವಪ್ಪ, ಕಾಂಗ್ರೆಸ್ ಮುಖಂಡ

'ಬಿಜೆಪಿ ವರಿಷ್ಠರ ತೀರ್ಮಾನವೇ ಅಂತಿಮ'

ಬೆಂಗಳೂರು: 'ಶಿಕಾರಿಪುರ ವಿಧಾನ ಸಭಾ ಕ್ಷೇತ್ರವನ್ನು ಬಿ.ವೈ. ವಿಜಯೇಂದ್ರಗೆ ಬಿಟ್ಟು ಕೊಡುವುದಾಗಿ ಜನರ ಒತ್ತಾಯಕ್ಕೆ ಮಣಿದು ಹೇಳಿಕೆ ನೀಡಿದ್ದೆ. ಆದರೆ, ಈ ವಿಚಾರದಲ್ಲಿ ಬಿಜೆಪಿ ವರಿಷ್ಠರ ತೀರ್ಮಾನವೇ ಅಂತಿಮ' ಎಂದು ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ಹೇಳಿದರು. 7

ಕಾಂಗರೂ ನ್ಯಾಯಾಲಯ ಮಾರಕ: ಸಿಜೆಐ ರಮಣ

ರಾಂಚಿ: ಮಾಧ್ಯಮಗಳು ನಡೆಸುತ್ತಿರುವ ನಿರ್ದಿಷ್ಟ ಕಾರ್ಯಸೂಚಿಯ ಚರ್ಚೆಗಳು ಮತ್ತು 'ಕಾಂಗರೂ ನ್ಯಾಯಾಲಯ'ಗಳು ದೇಶದ ಪ್ರಜಾಪ್ರಭುತ್ವ ಆರೋಗ್ಯಕ್ಕೆ ಮಾರಕವಾಗಿ ಪರಿಣಮಿಸಿವೆ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಕಳವಳ ವ್ಯಕ್ತಪಡಿಸಿದರು. 8

ಮಂಕಿಪಾಕ್ಸ್: ವಿಶ್ವ ಆರೋಗ್ಯ ತುರ್ತುಸ್ಥಿತಿ

ಜಿನೀವಾ (ಎಪಿ): ಮಂಕಿಪಾಕ್ಸ್ ಸೋಂಕು 75ಕ್ಕೂ ಹೆಚ್ಚು ದೇಶಗಳಿಗೆ ವ್ಯಾಪಿಸಿರುವ ಕಾರಣ, ಇದನ್ನು 'ಜಾಗತಿಕ ಆರೋಗ್ಯ ತುರ್ತುಸ್ಥಿತಿ' ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಶನಿವಾರ ಘೋಷಿಸಿದೆ. 8



ಮದ್ರಾಸ್ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ.ಚಂದ್ರು ಆಶಯ

‘ರಾಷ್ಟ್ರದಲ್ಲಿ ಬಹುತ್ವದ ಬಲ ಹೆಚ್ಚಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಷ್ಟ್ರದಲ್ಲಿ ಏಕವ್ಯಕ್ತಿ, ಏಕಧರ್ಮ ಹಾಗೂ ಏಕಭಾಷೆಯ ಪ್ರತಿಪಾದನೆ ಹಾಗೂ ಜಪ ನಿಲ್ಲಬೇಕು. ಭಾರತವು ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ಬಹುತ್ವದ ಬಲವೇ ಹೆಚ್ಚಬೇಕು’ ಎಂದು ಮದ್ರಾಸ್ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ.ಚಂದ್ರು ಪ್ರತಿಪಾದಿಸಿದರು.

ನಗರದಲ್ಲಿ ಶನಿವಾರ ನಡೆದ ‘ಮಹಿಳೆಯರಿಗೆ ನ್ಯಾಯ ಮತ್ತು ನಮ್ಮ ನ್ಯಾಯ ವ್ಯವಸ್ಥೆ’ ಕುರಿತು ಉಪನ್ಯಾಸ, ಸಂವಾದ ಹಾಗೂ ‘ನನ್ನ ದೂರು ಕೇಳಿ’ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಎಲ್ಲರಿಗೂ ಸಂವಿಧಾನದ ಅರಿವು ಅಗತ್ಯ. ಸಂವಿಧಾನದ ಅರಿವುಳ್ಳ ನ್ಯಾಯಮೂರ್ತಿಗಳು ನ್ಯಾಯದ ಪರವಾಗಿಯೇ ನಿಲ್ಲುತ್ತಾರೆ. ಇಲ್ಲದ ನ್ಯಾಯಮೂರ್ತಿಗಳು ಬಹುಸಂಖ್ಯೆಯ ಭ್ರಮೆಗೆ ಒಳಗಾಗುತ್ತಾರೆ’ ಎಂದರು.

‘ಹಿಜಾಬ್ ವಿವಾದದಿಂದಲೇ 20 ಸಾವಿರಕ್ಕೂ ಹೆಚ್ಚು ಹೆಣ್ಣುಮಕ್ಕಳಿಗೆ ತೊಂದರೆ ಉಂಟಾಯಿತು. ವಿವಾದದಿಂದ ಹಲವು ಹೆಣ್ಣುಮಕ್ಕಳು ಶಿಕ್ಷಣದಿಂದ ವಂಚಿತರಾದರು. ಈ ಪ್ರಕರಣದಲ್ಲಿ ನ್ಯಾಯಾಲಯದ ತೀರ್ಪು ಬರುವುದೂ ತಡವಾಯಿತು’ ಎಂದು ಹೇಳಿದರು.

ಹೈಕೋರ್ಟ್‌ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌.ನಾಗಮೋಹನ್‌ದಾಸ್ ಮಾತನಾಡಿ, ‘ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟು ಮಹಿಳೆಯರಿದ್ದರೂ ಅವರ ಮೇಲಿನ ಶೋಷಣೆಗಳು ನಿಂತಿಲ್ಲ. ಮಹಿಳೆಯರನ್ನು ಶೋಷಣೆಗೆ ಒಳಪಡಿಸಿ ಗುಲಾಮರಂತೆ ನಡೆಸಿಕೊಳ್ಳಲಾಯಿತು. ಅದರ ವಿರುದ್ಧ ಮಹಿಳೆಯರು ನ್ಯಾಯಾಲಯದ ಮೆಟ್ಟಿಲೇರಿದ್ದರು. ಈ ಕೃತಿಯಲ್ಲಿ ನ್ಯಾಯಮೂರ್ತಿ ಕೆ.ಚಂದ್ರು ಅವರು ಪ್ರಕರಣ ಹಾಗೂ ತೀರ್ಪಿನ ಬಗ್ಗೆ ವಿವರವಾಗಿ ಬರೆದಿದ್ದಾರೆ’ ಎಂದು ಹೇಳಿದರು.

‘ಮಹಿಳೆಯರಿಗೆ ನ್ಯಾಯ ಮತ್ತು ನಮ್ಮ ನ್ಯಾಯ ವ್ಯವಸ್ಥೆ’ ವಿಷಯ ಕುರಿತು ಹಿರಿಯ ವಕೀಲೆ ಹೇಮಲತಾ ಮಹಿಷಿ ಮಾತನಾಡಿದರು.

ಕೆ.ಚಂದ್ರು ಅವರ ‘ಲಿಸನ್ ಟು ಮೈ ಕೇಸ್’ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ ಪ್ರಾಧ್ಯಾಪಕಿ ಡಾ.ಭಾರತಿ ದೇವಿ, ಜಿ.ಟಿ.ಸತೀಶ್, ಕ್ರಿಯಾ ಮಾಧ್ಯಮದ ನಿರ್ದೇಶಕಿ ಕೆ.ಎಸ್.ವಿಮಲಾ, ಗುರುರಾಜ ದೇಸಾಯಿ ಹಾಜರಿದ್ದರು.

ನಗರದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹೈಕೋರ್ಟ್‌ ನ್ಯಾಯಮೂರ್ತಿ ಎಚ್‌.ಎನ್‌.ನಾಗಮೋಹನ್‌ದಾಸ್ ಅವರು ‘ನನ್ನ ದೂರು ಕೇಳಿ’ ಕೃತಿ ಬಿಡುಗಡೆ ಮಾಡಿ ಗಣ್ಯರಿಗೆ ಹಸ್ತಾಂತರಿಸಿದರು. ಜಿ.ಟಿ.ಸತೀಶ, ಹಿರಿಯ ವಕೀಲೆ ಹೇಮಲತಾ ಮಹಿಷಿ, ಮದ್ರಾಸ್ ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶ ಕೆ.ಚಂದ್ರು, ಭಾರತಿ ದೇವಿ ಹಾಜರಿದ್ದರು.

ಮುಖ್ಯಾಂಶಗಳು

- ಹಿಜಾಬ್ ವಿವಾದ: ಹೆಣ್ಣುಮಕ್ಕಳ ಶಿಕ್ಷಣಕ್ಕೆ ತೊಂದರೆ
- ಮಹಿಳೆಯರ ಮೇಲೆ ನಿಲ್ಲದ ಶೋಷಣೆ: ವಿಷಾದ
- ಏಕವ್ಯಕ್ತಿ ಜಪ ನಿಲ್ಲಬೇಕು: ಪ್ರತಿಪಾದನೆ



‘ಮೂಲ ಕಾಂಗ್ರೆಸ್ಸಿಗರ ನಾಶಕ್ಕೆ ಸಿದ್ದರಾಮೋತ್ಸವ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿದ್ದರಾಮೋತ್ಸವ ಎನ್ನುವುದು ಸಿದ್ದರಾಮಯ್ಯ ಮತ್ತು ಅವರ ಬಣದ ರಾಜಕೀಯ ಟೂಲ್ ಕಿಟ್. ಮೂಲ ಕಾಂಗ್ರೆಸ್ಸಿಗರ ಸರ್ವನಾಶಕವೇ ಇದರ ಉದ್ದೇಶ’ ಎಂದು ಬಿಜೆಪಿ ರಾಜ್ಯ ಘಟಕ ಹೇಳಿದೆ.

ಬಿಜೆಪಿಯ ರಾಜ್ಯ ಘಟಕದ ಅಧಿಕೃತ ಟ್ವಿಟರ್ ಖಾತೆಯಿಂದ ಈ ಕುರಿತು ಶನಿವಾರ ಸರಣಿ ಟ್ವೀಟ್ ಮಾಡಿದ್ದು, ‘ಇಷ್ಟು ವರ್ಷಗಳ ಕಾಲ ಜನ್ಮದಿನವನ್ನು ಆಚರಿಸಿಕೊಳ್ಳದ ಸಿದ್ದರಾಮಯ್ಯ ಈಗ ರಾಜಕೀಯ ಲಾಭಕ್ಕಾಗಿ ಅಮೃತ ಮಹೋತ್ಸವ ಆಚರಿಸಿಕೊಳ್ಳುತ್ತಿದ್ದಾರೆ. ಸಿದ್ದರಾಮಯ್ಯ ಅವರಿಗೆ 75 ವರ್ಷ ತುಂಬುವುದು ಹಾಗೂ ವಿಧಾನಸಭಾ ಚುನಾವಣೆ ಎದುರಾಗುತ್ತಿರುವುದು ಕಾಕತಾಳೀಯ ಅಲ್ಲ. ಇದು ವ್ಯವಸ್ಥಿತವಾದ ರಾಜಕೀಯ ಟೂಲ್ ಕಿಟ್. ಮಲ್ಲಿಕಾರ್ಜುನ ಖರ್ಗೆ, ಡಾ.ಜಿ. ಪರಮೇಶ್ವರ, ಡಿ.ಕೆ. ಶಿವಕುಮಾರ್, ಎಂ.ಬಿ. ಪಾಟೀಲ ಸೇರಿದಂತೆ ಮೂಲ ಕಾಂಗ್ರೆಸ್ಸಿಗರನ್ನು ಮಟ್ಟ ಹಾಕುವ ರಹಸ್ಯ ಕಾರ್ಯಸೂಚಿ ಇದರ ಹಿಂದಿದೆ’ ಎಂದು ವಾಗ್ದಾಳಿ ನಡೆಸಲಾಗಿದೆ.

ರಾಹುಲ್ ಗಾಂಧಿ ಸಮ್ಮುಖದಲ್ಲಿ ತಮ್ಮನ್ನು ಮುಂದಿನ ಮುಖ್ಯಮಂತ್ರಿ ಎಂದು ಬಿಂಬಿಸಿಕೊಳ್ಳುವುದು ಸಿದ್ದರಾಮಯ್ಯ ಅವರ ಉದ್ದೇಶ. ಯಾವ ದಾಳವನ್ನು ಯಾವಾಗ ಉರುಳಿಸಬೇಕು ಎಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ. ಕೆಪಿಸಿಸಿ ಕಚೇರಿಯಲ್ಲಿ ಪಿಸು ಮಾತು ಬಂದಾಗಲೇ ‘ಟೂಲ್ ಕಿಟ್’ ಕಾರ್ಯಾಚರಣೆ ಆರಂಭವಾಗಿತ್ತು. ಆಗಲೇ ಶಿವಕುಮಾರ್ ಎಚ್ಚೆತ್ತುಕೊಳ್ಳಬೇಕಿತ್ತು. ಈಗ ಸಿದ್ದರಾಮಯ್ಯ ಮತ್ತೊಂದು ಸುತ್ತಿನ ‘ಟೂಲ್ ಕಿಟ್’ ಪ್ರಹಸನ ಆರಂಭಿಸಿದ್ದು, ದೊಡ್ಡ ಬೇಟೆಯಾಡುವುದು ಖಚಿತ ಎಂದು ಬಿಜೆಪಿ ಹೇಳಿದೆ.

> **ಪಕ್ಷದ ನಾಯಕರ ಹೇಳಿಕೆಗಳನ್ನು ಪರಿಶೀಲಿಸುತ್ತೇವೆ. ಶಿಸ್ತು ಉಲ್ಲಂಘಿಸಿದರೆ ನೋಟಿಸ್ ಕೊಡುತ್ತೇವೆ. ಜಮೀರ್‌ಗೆ ಈ ಹಿಂದೆಯೂ ಎಚ್ಚರಿಕೆ ನೀಡಿದ್ದು, ಮತ್ತೆ ಕರೆದು ಮಾತನಾಡುತ್ತೇವೆ.**
>
> **ರೆಹಮಾನ್ ಖಾನ್**
> ಕೆಪಿಸಿಸಿ ಶಿಸ್ತು ಪಾಲನಾ ಸಮಿತಿ ಅಧ್ಯಕ್ಷ

ರಾಗಿ ವಶ

ನಾಗಮಂಗಲ: ತಾಲ್ಲೂಕಿನ ಬೆಳ್ಳೂರು ಕ್ರಾಸ್ ಬ್ರಹ್ಮದೇವ ರೈಸ್‌ಮಿಲ್, ದೇವಿಹಳ್ಳಿ ಸಮೀಪದ ಮಹಾವೀರ ರೈಸ್‌ಮಿಲ್‌ನಲ್ಲಿ ಸಂಗ್ರಹಿಸಿಟ್ಟಿದ್ದ ₹5 ಕೋಟಿ ಮೌಲ್ಯದ ಅಕ್ರಮ ಪಡಿತರ ರಾಗಿಯನ್ನು ಆಹಾರ ಇಲಾಖೆ ವಶಕ್ಕೆ ಪಡೆದಿದೆ.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಮೋಟಾರು ವಾಹನ ನಿರೀಕ್ಷಕರ ಅಂತಿಮ ಆಯ್ಕೆ ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ಇಲಾಖೆಯಲ್ಲಿನ ಮೋಟಾರು ವಾಹನ ನಿರೀಕ್ಷಕರ (ಎಂವಿಐ) ಅಂತಿಮ ಆಯ್ಕೆ ಪಟ್ಟಿಯನ್ನು ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಶುಕ್ರವಾರ ಪ್ರಕಟಿಸಿದ್ದು, 141 ಮಂದಿ ಆಯ್ಕೆಯಾಗಿದ್ದಾರೆ.

ಸಾಮಾನ್ಯ ವೃಂದದ 127 ಮತ್ತು ಹೈದರಾಬಾದ್ ಕರ್ನಾಟಕ ಮೀಸಲು ವೃಂದದ 23 ಎಂವಿಐ ಹುದ್ದೆಗಳ ಭರ್ತಿಗೆ 2016ರ ಫೆಬ್ರುವರಿಯಲ್ಲಿ ಪ್ರಕ್ರಿಯೆ ಆರಂಭಿಸಲಾಗಿತ್ತು. 129 ಹುದ್ದೆ ಭರ್ತಿಗೆ 2019ರ ಜು. 4ರಂದು ಆಯೋಗ ಆಯ್ಕೆಪಟ್ಟಿ ಪ್ರಕಟಿಸಿತ್ತು. ಒಂದು ವರ್ಷದ ಸೇವಾ ಅನುಭವ ಕಡ್ಡಾಯಗೊಳಿಸಿ ಆಯ್ಕೆಪಟ್ಟಿ ಪ್ರಕ ಟಿಸಿರುವುದನ್ನು ಪ್ರಶ್ನಿಸಿ ಹಲವು ಅಭ್ಯರ್ಥಿಗಳು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಆಯ್ಕೆಪಟ್ಟಿಯನ್ನು ಹಿಂಪಡೆದು, ಮೂಲ ಅಧಿಸೂಚನೆ ನೇಮಕಾತಿ ಪೂರ್ಣಗೊಳಿಸಲು ಹೈಕೋರ್ಟ್ 2021ರ ಆ.25ರಂದು ತೀರ್ಪು ನೀಡಿತ್ತು. ಈ ಕಾರಣದಿಂದ ಕೆಪಿಎಸ್‌ಸಿ, 2019ರ ಆಯ್ಕೆಪಟ್ಟಿಯನ್ನು 2022ರ ಏಪ್ರಿಲ್ 29ರಂದು ಹಿಂಪಡೆದಿತ್ತು.

ಸಾಮಾನ್ಯ ವೃಂದದಲ್ಲಿ 122 ಮತ್ತು ಹೈದರಾಬಾದ್ ಕರ್ನಾಟಕ ಮೀಸಲು ವೃಂದದಲ್ಲಿ 19 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ ಎಂದು ಕೆಪಿಎಸ್‌ಸಿ ಪಟ್ಟಿ ಪ್ರಕಟಿಸಿದೆ. ಅಭ್ಯರ್ಥಿಗಳ ಕೋರಿಕೆಯಂತೆ ಮೂವರನ್ನು ಆಯ್ಕೆಪಟ್ಟಿಯಿಂದ ಕೈಬಿಡಲಾಗಿದೆ ಎಂದು ತಿಳಿಸಿದೆ.

6,601 ಕೊಠಡಿಗೆ ₹992 ಕೋಟಿ

ಬೆಂಗಳೂರು: ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ 6,601 ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕೆ ₹ 992.16 ಕೋಟಿ ಬಳಸಿಕೊಳ್ಳಲು ಸರ್ಕಾರ ಅನುಮತಿ ನೀಡಿದೆ.

ಇದನ್ನು ಆರ್ಥಿಕ ಇಲಾಖೆ ಪುರಸ್ಕರಿಸಿದ್ದು, ರಾಜ್ಯ ಬಂಡವಾಳ ವೆಚ್ಚ, ವಿಶೇಷ ಅಭಿವೃದ್ಧಿ ಯೋಜನೆ, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಗಣಿ ಪರಿಸರ ಪುನಃಶ್ಚೇತನ ಅಭಿವೃದ್ಧಿ ನಿಗಮ, ಜಿಲ್ಲಾ ಖನಿಜ ನಿಧಿಗಳಿಂದ ಭರಿಸಲು ಆದೇಶಿಸಲಾಗಿದೆ.

MBBS
Ministry Of Health Of Russia
SMOLENSK STATE MEDICAL UNIVERSITY, RUSSIA
Invites Indian students for direct Government Admissions
Recognized by India, WHO, USA & UK, Min. Qual. 50% in XII in PCB
Satisfies all requirements of NMC of India
UNIVERSITY - Founded in 1920, 102 years old, Smolensk is 380 km west of Moscow, Very high standards of education, strict disciplinary system. **1650** Indian students (**650** Girls) studying, **183** got degree in **2022,** English Medium in all years, Closed type campus system, **8** attached hospitals (**6000** Beds).
MCI SCREENING TEST – Our graduates of **2008** to **2021** have given **BEST** results among graduates of all foreign medical colleges (Official web sites of Indian Embassy, Moscow and NBE conducting Screening Test confirm this).
SPECIAL HOSTELS ONLY FOR INDIAN STUDENTS WITH INDIAN MESS
Fee (Tuition+Hostel+Med.Ins.) – **USD 6000** (Approx. Rs. 4,80,000/-) per year and one time payment of Rs.1,50,000/- (By Bank Draft only) which includes – Admission procedure, invitation letter, student visa, air ticket Delhi - Moscow.
Scholarship to all Indian students.
Bank loans from Indian banks are available.
Contact Foreign advisor to Chancellor: Dr.Alok Aeron+79605805555(Russia)
Official web site: www.sgmu.info
DM us on insta: @sgmu.info
Admission details: admission.sgmu.live
INFORMATION CENTERS (Parents of Students or Our Graduates):
Bangalore & Manglore: Mrs. Sudha Kamath - 9740622038
Hubli-Dharwad & Belgavi: Dr. Suchita Halli - 9916187559
Gulbarga & Yadgir: Mr. Chowdhry – 9886813741

ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
5ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560 001
ದೂರವಾಣಿ: 080–22865522, www.kvldcl.karnataka.gov.in, ಇ–ಮೇಲ್: mdkvldcl@karnataka.gov.in
ಕವಿಲಿಂಅನಿ/ಸಿ–4/ಸಿಆರ್–5/2022–23 **ಪ್ರಕಟಣೆ** ದಿನಾಂಕ: 20–07–2022
ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಯೋಜನೆ
ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತದಿಂದ ವೀರಶೈವ ಲಿಂಗಾಯತ ಯುವ ಜನರಿಗೆ ಕೌಶಲ್ಯ ಅಭಿವೃದ್ಧಿಪಡಿಸಿ ಉದ್ಯೋಗಮುಖಿಯನ್ನಾಗಿಸಲು ಸರ್ಕಾರದ ಸಂಸ್ಥೆಗಳಾದ ITIs, GTTC, KGTTI ರಲ್ಲಿ ಅಲ್ಪಾವಧಿ ಕೋರ್ಸ್‌ಗಳ ಮೂಲಕ ಉಚಿತ ಕೌಶಲ್ಯ ತರಬೇತಿ ನೀಡಲು ಕೌಶಲ್ಯ ಕರ್ನಾಟಕ ತಂತ್ರಾಂಶದ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿದಾರರು **https://www.kaushalkar.com** ಜಾಲತಾಣದಲ್ಲಿ ಅರ್ಜಿಯನ್ನು ಸಲ್ಲಿಸಬಹುದು ಅಥವಾ ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ **https://kvldcl.karnataka.gov.in** ವೆಬ್‌ಸೈಟ್ ನಲ್ಲಿಯು ಅರ್ಜಿ ಸಲ್ಲಿಸಲು ಸಂಪರ್ಕಿಸಬಹುದು.
ಹೆಚ್ಚಿನ ಮಾಹಿತಿಗಾಗಿ ನಿಗಮದ ಕೇಂದ್ರ ಕಛೇರಿಯ ದೂರವಾಣಿ ಸಂಖ್ಯೆ: 080–22865522 ಹಾಗೂ 9900012352 ಅಥವಾ ಆಯಾ ಜಿಲ್ಲಾ ಕಛೇರಿಯ ದೂರವಾಣಿ ಸಂಖ್ಯೆಗಳನ್ನು ವೆಬ್‌ಸೈಟ್‌ನಲ್ಲಿ ನೀಡಲಾಗಿದ್ದು ಸಂಪರ್ಕಿಸಬಹುದಾಗಿರುತ್ತದೆ. ಆನ್‌ಲೈನ್ ಮೂಲಕ ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲೆಗಳೊಂದಿಗೆ ದಿನಾಂಕ: 14–07–2022 ರಿಂದ ದಿನಾಂಕ: 29–08–2022 ರೊಳಗೆ ಸಲ್ಲಿಸಲು ಅವಕಾಶವಿರುತ್ತದೆ. ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಯಾವುದೇ ಶುಲ್ಕ ಪಾವತಿಸುವಂತಿಲ್ಲ.
ಸಹಿ/–
ವ್ಯವಸ್ಥಾಪಕ ನಿರ್ದೇಶಕರು,
DIPR/CP/RO1464/AAPL/2022-23 ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ

ಭೀಕರ ರಸ್ತೆ ಅಪಘಾತ: ಐದು ಮಂದಿ ಸಾವು

ಕೊಪ್ಪಳ: ಸಮೀಪದ ಭಾನಾಪುರ ಬಳಿ ಶನಿವಾರ ತಡರಾತ್ರಿ ನಡೆದ ಭೀಕರ ರಸ್ತೆ ಅಪಘಾತದಲ್ಲಿ ಐದು ಮಂದಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತರ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ.

ಕೊಪ್ಪಳದಲ್ಲಿ ಆಯೋಜನೆ ಆಗಿದ್ದ ಕುಟುಂಬದ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡು ಯಲಬುರ್ಗಾ ತಾಲ್ಲೂಕಿನ ಬಿನ್ನಾಳ ಗ್ರಾಮಕ್ಕೆ ವಾಪಸ್ ಹೋಗುವಾಗ ಅವಘಡ ಸಂಭವಿಸಿದೆ. ಗಾಯಾಳುಗಳನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.



'ಕನ್ನಡಿಗರಿಗೆ ಉದ್ಯೋಗ: ಶಾಶ್ವತ ಪರಿಹಾರ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡಿಗರಿಗೆ ಉದ್ಯೋಗ ಕಲ್ಪಿಸಲು ಸರ್ಕಾರವು ಶಾಶ್ವತ ಪರಿಹಾರ ಒದಗಿಸಬೇಕು' ಎಂದು ಕನ್ನಡ ಗೆಳೆಯರ ಬಳಗ ಆಗ್ರಹಿಸಿದೆ.

'ಕರ್ನಾಟಕ ಉದ್ಯೋಗ ನೀತಿಯಡಿ ಸ್ಥಳೀಯ ಕನ್ನಡಿಗರಿಗೆ 'ಸಿ' ಮತ್ತು 'ಡಿ' ವರ್ಗಗಳ ಹುದ್ದೆಯ ಜತೆಗೆ 'ಎ' ಮತ್ತು 'ಬಿ' ವರ್ಗದ ಹುದ್ದೆಗಳಿಗೂ ಉದ್ಯೋಗಾವಕಾಶ ಕಡ್ಡಾಯ ಮಾಡಿರುವುದು, ಉತ್ತರ ಕರ್ನಾಟಕದ ಪ್ರದೇಶಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ವಿಶೇಷ ಪ್ರೋತ್ಸಾಹ ನೀಡುತ್ತಿರುವುದು ಸ್ವಾಗತಾರ್ಹ. ಆದರೆ, ಇದು ತಾತ್ಕಾಲಿಕ ಪರಿಹಾರ' ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ತಿಳಿಸಿದ್ದಾರೆ.

'ರಾಜ್ಯದ ಕೈಗಾರಿಕಾ ನೀತಿಯಲ್ಲಿ ಕಾರ್ಮಿಕ ಹುದ್ದೆಗಳಲ್ಲಿ ಕನ್ನಡಿಗರಿಗೆ ಆದ್ಯತೆ ನೀಡಬೇಕೆಂಬ ಷರತ್ತಿದೆ. ಆದರೆ, ಯಾರು ಸ್ಥಳೀಯರು, ಕನ್ನಡಿಗರು ಎಂಬ ಸ್ಪಷ್ಟತೆಯಿಲ್ಲ. ಇಂತಹ ಗೊಂದಲಗಳಿಗೆ ಶಾಶ್ವತ ಪರಿಹಾರ ಸಿಗಬೇಕಾದರೆ ಪರಿಷ್ಕೃತ ಮಹಿಷಿ ವರದಿಯನ್ನು ಸದನದಲ್ಲಿ ಮಂಡಿಸಿ, ಅದಕ್ಕೆ ಕಾನೂನು ಬಲ ನೀಡಬೇಕು. ಆಗ ಕನ್ನಡಿಗರಿಗೆ ಕೆಲಸ ಎನ್ನುವ ಮಾತಿಗೆ ಶಾಶ್ವತ ಪರಿಹಾರ ಸಿಗುತ್ತದೆ' ಎಂದು ಆಗ್ರಹಿಸಿದ್ದಾರೆ.

'ಅಧಿಕಾರಿಗಳಿಗೆ ಕನ್ನಡ ಕಲಿಕೆ ತರಬೇತಿ ನೀಡಿ'

ಬೆಂಗಳೂರು: 'ಎಲ್ಲ ಸರ್ಕಾರಿ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಕಂಪ್ಯೂಟರ್‌ನಲ್ಲಿ ಕನ್ನಡ ಕಲಿಕೆಯ ತರಬೇತಿ ನೀಡಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಆಗ್ರಹಿಸಿದ್ದಾರೆ.

ಈ ಬಗ್ಗೆ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದು, 'ಈ ಹಿಂದೆ ಸರ್ಕಾರ ಹೊರಡಿಸಿದ ಆದೇಶವೊಂದರಲ್ಲಿ ಕನ್ನಡ ಪದಗಳನ್ನು ತಪ್ಪಾಗಿ ಬರೆಯಲಾಗಿತ್ತು. ಆದ್ದರಿಂದ ಆಗಸ್ಟ್ ಮೊದಲ ವಾರದಲ್ಲಿ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಬೇಕು. ಈ ಸಂಬಂಧ ಸಚಿವಾಲಯದ ತರಬೇತಿ ಸಂಸ್ಥೆಗೂ ನಿರ್ದೇಶನ ನೀಡಬೇಕು' ಎಂದು ಹೇಳಿದ್ದಾರೆ.

'ಪ್ರಾಧಿಕಾರದ ವತಿಯಿಂದ ಕರ್ನಾಟಕ ಗಣಕ ಪರಿಷತ್ತಿನ ಕಾರ್ಯದರ್ಶಿ ಜಿ.ಎನ್.ನರಸಿಂಹ ಮೂರ್ತಿ ಅವರನ್ನು ಸಂಪನ್ಮೂಲ ವ್ಯಕ್ತಿಯಾಗಿ ನಿಯೋಜಿಸಿಕೊಳ್ಳಬೇಕು' ಎಂದು ತಿಳಿಸಿದ್ದಾರೆ.

ಚಿಹ್ನೆ ವಿವಾದ: ಸೂಚನೆ

ನವದೆಹಲಿ (ಪಿಟಿಐ): ಪಕ್ಷದ ಚಿಹ್ನೆ (ಬಿಲ್ಲು ಮತ್ತು ಬಾಣ) ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ ಆ.8ರೊಳಗೆ ಅಗತ್ಯ ದಾಖಲೆ ಸಲ್ಲಿಸುವಂತೆ ಶಿವಸೇನಾದ ಏಕನಾಥ ಶಿಂದೆ ಮತ್ತು ಉದ್ಧವ್ ಠಾಕ್ರೆ ಬಣಗಳಿಗೆ ಚುನಾವಣಾ ಆಯೋಗ ಸೂಚನೆ ನೀಡಿದೆ.

ನಿಯಮ ಉಲ್ಲಂಘಿಸಿದರೆ ಪ್ರಕರಣ ದಾಖಲಿಸುವ ಎಚ್ಚರಿಕೆ

ಸಾಗಣೆ ವಾಹನಗಳ ಮೇಲೆ ಬಿಬಿಎಂಪಿ ಫಲಕ ನಿಷೇಧ

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಸುದ್ದಿ

ಮುಖ್ಯಾಂಶಗಳು
- ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಆದೇಶ
- ಘನತ್ಯಾಜ್ಯ ಸಂಗ್ರಹಣೆ, ಸಾಗಣೆ, ವಿಲೇವಾರಿ ವಾಹನಗಳಿಗೆ ಅನ್ವಯ
- ಅಪಘಾತ: ವಾಹನ ಮಾಲೀಕರಿಂದಲೇ ಪರಿಹಾರಕ್ಕೆ ಸೂಚನೆ

ಬೆಂಗಳೂರು: ಸಾಗಣೆ ವಾಹನಗಳ ಮೇಲೆ 'ಬಿಬಿಎಂಪಿ' ಎಂದು ನಾಮಫಲಕ ಹಾಕುವುದನ್ನು ನಿಷೇಧಿಸಲಾಗಿದೆ. ಇದನ್ನು ಮೀರಿದರೆ ಕ್ರಿಮಿನಲ್ ಪ್ರಕರಣ ದಾಖಲಿಸಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಆದೇಶಿಸಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಸಂಗ್ರಹಣೆ, ಸಾಗಣೆ ಮತ್ತು ವಿಲೇವಾರಿ ವಾಹನಗಳ ಮೇಲೆ 'ಪಾಲಿಕೆಯ ಮೂಲಕ ಸೇವೆಯಲ್ಲಿ/ ಬಿಬಿಎಂಪಿ/ ಬಿಬಿಎಂಪಿ ಸೇವೆಯಲ್ಲಿ/ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ' ಎಂದು ನಮೂದಿಸಿದ ನಾಮಫಲಕಗಳನ್ನು ಗುತ್ತಿಗೆದಾರರು ಹಾಕಿಸಿಕೊಂಡಿರುವುದನ್ನು ಗಮನಿಸಲಾಗಿದೆ. ಇದು ಅನಧಿಕೃತ ಎಂದು ತಿಳಿಸಲಾಗಿದೆ.

ಪಾಲಿಕೆ ನಡೆಸುವ ಕಾಮಗಾರಿಗಳಿಗೆ ಅವಶ್ಯವಿರುವ ನಿರ್ಮಾಣ ಸಾಮಗ್ರಿ ಸಾಗಿಸುವ ವಾಹನಗಳ ಮೇಲೂ ನಾಮಫಲಕಗಳನ್ನು ಹಾಕಿಕೊಳ್ಳುವುದು ಅನಧಿಕೃತ ಎಂದಿದ್ದಾರೆ.

ಇಂತಹ ವಾಹನಗಳ ಅಪಘಾತಗಳಾದಾಗ ಬಿಬಿಎಂಪಿಯ ವಾಹನದಿಂದ ಅಪಘಾತವಾಗುತ್ತಿದೆ ಎಂದು ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿರುವುದರಿಂದ ಪಾಲಿಕೆಯ ಕುರಿತು ತಪ್ಪು ಪರಿಕಲ್ಪನೆ ಮೂಡುತ್ತಿದೆ. ಅದ್ದರಿಂದ ಮುಂದಿನ ದಿನಗಳಲ್ಲಿ ವಾಹನಗಳ ಮೇಲೆ ಪಾಲಿಕೆಯ ಹೆಸರನ್ನು ನಮೂದಿಸುವುದು/ನಾಮಫಲಕಗಳನ್ನು ಹಾಕುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ ಎಂದು ಮುಖ್ಯ ಆಯುಕ್ತರ ನಿರ್ದೇಶನದ ಮೇರೆಗೆ ಘನತ್ಯಾಜ್ಯ ಹಾಗೂ ಯೋಜನಾ ವಿಭಾಗದ ವಿಶೇಷ ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ.

ಘನತ್ಯಾಜ್ಯ ವಿಭಾಗದ ಎಂಜಿನಿಯರ್‌ಗಳು, ಮಾರ್ಷಲ್‌ಗಳು ಇನ್ನು ಮುಂದೆ ಯಾವುದೇ ಸಾಗಣೆ ವಾಹನಗಳ ಮೇಲೆ ಬಿಬಿಎಂಪಿ ನಾಮಫಲಕ ಕಂಡುಬಂದರೆ ಕ್ರಮ ಕೈಗೊಳ್ಳಬೇಕು. ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಎಂದು ಸೂಚಿಸಿದ್ದಾರೆ.

ಕಸ, ಸರಕು, ನಿರ್ಮಾಣ ಸಾಮಗ್ರಿ ಸೇರಿ ಯಾವುದೇ ಸಾಗಣೆ ವಾಹನಗಳ ಮೇಲೆ ಬಿಬಿಎಂಪಿ ಫಲಕ ಇರಬಾರದು. ಇಂತಹ ಯಾವುದೇ ವಾಹನಕ್ಕೆ ಅಪಘಾತ ಸಂಭವಿಸಿದ ಸಂದರ್ಭದಲ್ಲಿ ವಾಹನ ಮಾಲೀಕರಿಂದ ಪರಿಹಾರ ಕೊಡಿಸಬೇಕು ಎಂದು ತಿಳಿಸಲಾಗಿದೆ. ಬೆಂಗಳೂರು ನಗರ ಸಂಚಾರ ಪೊಲೀಸ್ ಜಂಟಿ ಆಯುಕ್ತರಿಗೆ ಈ ಸುತ್ತೋಲೆಯ ಪ್ರತಿಯನ್ನು ಕಳುಹಿಸಲಾಗಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. SWR/W/TS/2022/07/E ದಿನಾಂಕ: 21.07.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಯ ವಿವರಣೆ (ತಯಾರಿಕೆ ಮತ್ತು ಪೂರೈಕೆ)	ಅಂದಾಜು ಮೌಲ್ಯ
1	ಆರ್‌ಡಿಎಸ್‌ಒ ಡ್ರಾಯಿಂಗ್ ಸಂಖ್ಯೆ ಟಿ-2572 ಗೆ ಗ್ಲೂಡ್ ಜಾಯಿಂಟ್ 60 ಕೆ.ಜಿ. (ಇ-ಟೆಂಡರ್ ಸಂಖ್ಯೆ. SWRTSNR2572).	ರೂ. 96,60,68,168/-
2	ಆರ್‌ಡಿಎಸ್‌ಒ ಡ್ರಾಯಿಂಗ್ ಸಂಖ್ಯೆ ಟಿ-671 ಗೆ ಗ್ಲೂಡ್ ಜಾಯಿಂಟ್ 52 ಕೆ.ಜಿ. (ಇ-ಟೆಂಡರ್ ಸಂಖ್ಯೆ. SWRTSN671).	ರೂ. 13,90,91,108/-
3	ಆರ್‌ಡಿಎಸ್‌ಒ ಡ್ರಾಯಿಂಗ್ ಸಂಖ್ಯೆ ಟಿ8749/8750 ಗೆ ಮೆಟಲ್ ಲೈನರ್ 52 ಕೆ.ಜಿ. (ಇ-ಟೆಂಡರ್ ಸಂಖ್ಯೆ. SWRTS078749).	ರೂ. 37,72,656/-
4	1 ಇನ್ 16 ಟರ್ನ್ ಔಟ್ ಗೆ ಆರ್‌ಡಿಎಸ್‌ಓ ಡ್ರಾಯಿಂಗ್ ಸಂಖ್ಯೆ ಟಿ-5712 ರಿಂದ 5719 ಗೆ ಸ್ವಿಚರ್ ಬಾರ್. (ಇ-ಟೆಂಡರ್ ಸಂಖ್ಯೆ. SWRTS 075712).	ರೂ. 7,52,310/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18-08-2022, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನೀಯರ್ ಟ್ರ್ಯಾಕ್ ಸಂಗ್ರಹಣೆ / ಎಚ್ ಕ್ಯೂ / ಹುಬ್ಬಳ್ಳಿ

PUB/254/AAV/PRB/SWR/2022-23

S.W.Railways SWRRLY SWRRLY

'ನೆಲದ ನಕ್ಷತ್ರ' ಪ್ರಶಸ್ತಿಗೆ ಆಯ್ಕೆ

ಪ್ರಜಾವಾಣಿ ವಾರ್ತೆ

ಡಾ. ಟಿ. ಇಂದಿರಾ

ಬೆಂಗಳೂರು: ಪ್ರೇರಣಾ ಫೌಂಡೇಷನ್ ವತಿಯಿಂದ ನೀಡಲಾಗುವ 'ನೆಲದ ನಕ್ಷತ್ರ' ಪ್ರಶಸ್ತಿ ನಗರದ ದೇವಾಂಗ ಸಂಘದ ಕಾಲೇಜಿನ ಪ್ರಾಂಶುಪಾಲರಾದ ಡಾ. ಟಿ. ಇಂದಿರಾ ಅವರಿಗೆ ಸಂದಿದೆ. ಪ್ರತಿವರ್ಷ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಕ್ಷೇತ್ರದ ಸಾಧಕರಿಗೆ ಪ್ರಶಸ್ತಿ ನೀಡಲಾಗುತ್ತದೆ. ಈ ಪ್ರಶಸ್ತಿ ₹10 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ ಎಂದು ಫೌಂಡೇಷನ್ ಸಂಸ್ಥಾಪಕ ಕಾರ್ಯದರ್ಶಿ ಸುರೇಶ್ ತಿಳಿಸಿದ್ದಾರೆ.

ಕರ್ನಾಟಕ ನಾಟಕ ಅಕಾಡೆಮಿ ಹಮ್ಮಿಕೊಂಡಿದ್ದ ಯೋಜನೆ ● ಅನುದಾನದ ಕೊರತೆ ಕಾರಣ

ರಂಗಭೂಮಿ ಚರಿತ್ರೆ ಡಿಜಿಟಲೀಕರಣ ನನೆಗುದಿಗೆ

● ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಹರಿದು ಹಂಚಿ ಹೋಗಿದ್ದ ರಂಗಭೂಮಿಯ ಇತಿಹಾಸವನ್ನು ಡಿಜಿಟ ಲೀಕರಣಗೊಳಿಸುವ ಕರ್ನಾಟಕ ನಾಟಕ ಅಕಾಡೆಮಿಯ ಕಾರ್ಯ ನನೆಗುದಿಗೆ ಬಿದ್ದಿದೆ. ಇದರಿಂದಾಗಿ ಡಿಜಿಟಲ್ ವೇದಿಕೆಯಲ್ಲಿ ರಂಗಭೂಮಿ ಚರಿತ್ರೆಯನ್ನು ಕಣ್ತುಂಬಿಕೊಳ್ಳುವ ಅವಕಾಶ ದೂರವಾಗಿದೆ.

ರಂಗಭೂಮಿ ಬೆಳೆದ ಬಂದ ಬಗೆ, ರಂಗ ತಂಡಗಳು, ರಂಗ ಸಾಹಿತ್ಯ, ಅಪರೂಪದ ಛಾಯಾ ಚಿತ್ರಗಳು ಸೇರಿದಂತೆ ರಂಗಭೂಮಿಗೆ ಸಂಬಂಧಿಸಿದ ವಿವಿಧ ವಿಷಯ ವಸ್ತುಗಳನ್ನು ಡಿಜಿಟಲೀಕರಣಗೊಳಿಸಲು ಅಕಾಡೆಮಿ 2018ರಲ್ಲಿ ಯೋಜನೆ ರೂಪಿಸಿತ್ತು. ಮೂರು ವರ್ಷಗಳಲ್ಲಿ ಡಿಜಿಟಲೀಕರಣ ಪೂರ್ಣಗೊಳಿಸಲು ಕಾರ್ಯಯೋಜನೆ ರೂಪಿಸಿದ್ದ ಅಕಾಡೆಮಿಯ ಅಂದಿನ ಅಧ್ಯಕ್ಷ ಜೆ. ಲೋಕೇಶ್, ರಂಗಭೂಮಿಗೆ ಸಂಬಂಧಿಸಿದ ವಿಷಯ ವಸ್ತುಗಳನ್ನು ಡಿಜಿಟಲೀಕರಣಗೊಳಿಸುವ ಪ್ರಕ್ರಿಯೆ ಪ್ರಾರಂಭಿಸಿದ್ದರು. ಸರ್ಕಾರವು 2019ರಲ್ಲಿ ಅಕಾಡೆಮಿಗಳ ಅಧ್ಯಕ್ಷರ ನೇಮಕಾತಿಯನ್ನು ರದ್ದುಗೊಳಿಸಿ, ಹೊಸದಾಗಿ ನೇಮಕ ಮಾಡಿ ಆದೇಶ ಹೊರಡಿಸಿತ್ತು. ಅನುದಾನದ ಕೊರತೆ ಸೇರಿದಂತೆ ವಿವಿಧ ಕಾರಣಗಳಿಂದ ಹೊಸ ಕಾರ್ಯಕಾರಿ ಸಮಿತಿ ಡಿಜಿಟಲೀಕರಣಕ್ಕೆ ಆಸಕ್ತಿ ತಾಳದಿದ್ದರಿಂದ ಯೋಜನೆ ನನೆಗುದಿಗೆ ಬಿದ್ದಿದೆ.

ಈ ಯೋಜನೆಗೆ ಒಟ್ಟು ₹ 20 ಲಕ್ಷ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿತ್ತು. ₹ 10 ಲಕ್ಷ ಮೊತ್ತದಲ್ಲಿ ಡಿಜಿಟಲೀಕರಣಗೊಳಿಸಲು ಬೇಕಾದ ಸಲಕರಣೆಗಳನ್ನು ಖರೀದಿಸಲಾಗಿತ್ತು. ಸಮಗ್ರ ನಾಟಕ ಚರಿತ್ರೆ ಸಂಗ್ರಹಿಸಲು ನಿಘಂಟು ತಜ್ಞ ಪ್ರೊ.ಜಿ. ವೆಂಕಟಸುಬ್ಬಯ್ಯ ಅಧ್ಯಕ್ಷತೆಯಲ್ಲಿ ಸಮಿತಿಯನ್ನೂ ರಚಿಸಲಾಗಿತ್ತು. ವಿವಿಧ ನಾಟಕ ಕಂಪನಿಗಳು, ರಂಗಭೂಮಿ ತಜ್ಞರು ಹಾಗೂ ಪುಸ್ತಕ ಪ್ರಕಾಶನ ಸಂಸ್ಥೆಗಳಿಂದ ರಂಗಭೂಮಿಗೆ ಸಂಬಂಧಿಸಿದ ವಿಷಯ ವಸ್ತುಗಳನ್ನು ಕೇಂದ್ರ ಕಚೇರಿಗೆ ತರಿಸಿಕೊಂಡು, ಡಿಜಿಟಲೀಕರಣ ಪ್ರಕ್ರಿಯೆ ನಡೆಸಲಾಗಿತ್ತು. ಯೋಜನೆ ಪೂರ್ಣಗೊಳ್ಳುವ ಮೊದಲೇ ಕಾರ್ಯಕಾರಿ ಸಮಿತಿ ವಿಸರ್ಜನೆಗೊಂಡಿದ್ದರಿಂದ ಸಂಗ್ರಹಿಸಿದ್ದ ವಿಷಯ ವಸ್ತುಗಳು ಹಾಗೇ ಉಳಿದಿವೆ

ವೆಬ್‌ಸೈಟ್‌ನಲ್ಲಿ ಅಳವಡಿಕೆ: ಡಿಜಿಟಲೀಕರಣ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಅವನ್ನು ಅಕಾಡೆಮಿಯ ವೆಬ್‌ಸೈಟ್‌ನಲ್ಲಿ ಅಳವಡಿಸುವುದೂ ಯೋಜನೆಯ ಭಾಗವಾಗಿತ್ತು. ರಂಗ ಭೂಮಿಗೆ ಸಂಬಂಧಿಸಿದ 150 ಸಾಕ್ಷ್ಯ ಚಿತ್ರಗಳನ್ನು ಸಿದ್ಧಪಡಿಸಲಾಗಿತ್ತು. 2020ರಲ್ಲಿ ಕೋವಿಡ್ ಬಳಿಕ ಅಕಾಡೆಮಿಗಳಿಗೆ ನೀಡಲಾಗುತ್ತಿದ್ದ ವಾರ್ಷಿಕ ಅನುದಾನಕ್ಕೆ ಕತ್ತರಿ ಹಾಕ ಲಾಗಿತ್ತು. ಇದರಿಂದಾಗಿ ವಾರ್ಷಿಕ ಅನು ದಾನವನ್ನು ಈ ಯೋಜನೆಗೆ ಬಳಸಲು ಹಾಲಿ ಕಾರ್ಯಕಾರಿ ಸಮಿತಿ ಆಸಕ್ತಿ ತೋರಿಲ್ಲ.

'ರಂಗಭೂಮಿಯ ಸಮಗ್ರ ಇತಿಹಾಸವನ್ನು ಡಿಜಿಟಲೀಕರಣ ಗೊಳಿಸುವ ಪ್ರಕ್ರಿಯೆಗೆ ಹಾಲಿ ಕಾರ್ಯಕಾರಿ ಸಮಿತಿ ಆಸಕ್ತಿ ತೋರುತ್ತಿಲ್ಲ. ಡಿಜಿಟಲೀಕರಣಗೊಳಿಸಲಾದ ವಿಷಯ ವಸ್ತುಗಳನ್ನು ಪರಿಷ್ಕರಿಸಿ, ವೆಬ್‌ಸೈಟ್‌ಗೆ ಅಳವಡಿಸುವ ಪ್ರಕ್ರಿಯೆಯೂ ನಡೆದಿಲ್ಲ. ವೃತ್ತಿ ಹಾಗೂ ಪೌರಾಣಿಕ ರಂಗಭೂಮಿಗೆ ಸಂಬಂಧಿಸಿದ ಸಾವಿರ ನಾಟಕ ಪುಸ್ತಕಗಳು ಡಿಜಿಟಲೀಕರಣಗೊಂಡಿದ್ದವು. ಹವ್ಯಾಸಿ ರಂಗಭೂಮಿಯ ಕೆಲ ಪುಸ್ತಕಗಳನ್ನು ಡಿಜಿಟಲೀಕರಣಗೊಳಿಸುವ ಕೆಲಸ ಬಾಕಿಯಿತ್ತು' ಎಂದು ಅಕಾಡೆಮಿಯ ನಿಕಟಪೂರ್ವ ಅಧ್ಯಕ್ಷ ಜೆ. ಲೋಕೇಶ್ ತಿಳಿಸಿದರು.

ಪ್ರಕಟವಾಗದ 'ನಾಟ್ಯಶಾಸ್ತ್ರ'ದ ಅನುವಾದ

'2 ಸಾವಿರ ವರ್ಷ ಹಳೆಯದಾದ ಸಂಸ್ಕೃತ ಮೂಲದ 'ನಾಟ್ಯಶಾಸ್ತ್ರ'ವನ್ನು ಕನ್ನಡಕ್ಕೆ ಅನುವಾದ ಮಾಡಿ, ಪರಿಷ್ಕರಣೆ ಮಾಡಲಾಗಿತ್ತು. ಆದರೆ, ಮುದ್ರಣಕ್ಕೆ ಟೆಂಡರ್ ಕರೆಯುವ ಅವಧಿಯಲ್ಲಿ ಅಧ್ಯಕ್ಷ ಸ್ಥಾನದಿಂದ ವಜಾ ಮಾಡಲಾಯಿತು. ಇದರಿಂದಾಗಿ ಅನುವಾದಿತ ಸುಮಾರು 700 ಪುಟಗಳ ನಾಟ್ಯಶಾಸ್ತ್ರ ಈವರೆಗೂ ಮುದ್ರಣಗೊಂಡಿಲ್ಲ' ಎಂದು ಜೆ. ಲೋಕೇಶ್ ಬೇಸರ ವ್ಯಕ್ತಪಡಿಸಿದರು.

'ರಾಜಾರಾಮ್ ಅವರು ಅಕಾಡೆಮಿ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಶ್ರೀರಂಗರು ರಚಿಸಿದ್ದ 'ನಾಟ್ಯಶಾಸ್ತ್ರ'ವನ್ನು ಕನ್ನಡಕ್ಕೆ ಅನುವಾದಿಸುವ ಯೋಜನೆಯನ್ನು ಕೈಗೆತ್ತಿಕೊಂಡಿದ್ದರು. ಅನುವಾದ ಕಾರ್ಯವು ಅಂತಿಮಗೊಳ್ಳುವ ಅವಧಿಗೆ ಅವರ ಅವಧಿ ಅಂತ್ಯವಾಗಿದ್ದರಿಂದ ಯೋಜನೆ ನನೆಗುದಿಗೆ ಬಿದ್ದಿತು. 10 ವರ್ಷಗಳ ಬಳಿಕ ಯೋಜನೆಗೆ ಮರುಜೀವ ನೀಡಿ, ಅಂತಿಮ ಸ್ವರೂಪ ನೀಡಲಾಗಿತ್ತು' ಎಂದರು.

ರಂಗಭೂಮಿ ಚರಿತ್ರೆಯನ್ನು ಡಿಜಿಟಲೀಕರಣ ಮಾಡುವ ಯೋಜನೆ ಸ್ಥಗಿತಗೊಂಡಿದೆ. ಈ ಯೋಜನೆ ಸಂಬಂಧ ವಿಶೇಷ ಅನುದಾನ ಬಿಡುಗಡೆಯಾಗಿರಲಿಲ್ಲ.

ಪ್ರೊ.ಆರ್. ಭೀಮಸೇನ

ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ

ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಕೆ.ಎಸ್. ಈಶ್ವರಪ್ಪನವರಿಗೆ ಕ್ಲೀನ್‌ಚಿಟ್ ನೀಡಿರುವುದನ್ನು ಖಂಡಿಸಿ ಆಮ್ ಆದ್ಮಿ ಪಕ್ಷದ(ಎಎಪಿ) ಕಾರ್ಯಕರ್ತರು ಶನಿವಾರ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಿದರು. –ಪ್ರಜಾವಾಣಿ ಚಿತ್ರ

ಸಂತೋಷ್ ಪಾಟೀಲ ಪ್ರಕರಣ: ನ್ಯಾಯಾಂಗ ತನಿಖೆಗೆ ಆಗ್ರಹ

ಬೆಂಗಳೂರು: ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಕೆ.ಎಸ್. ಈಶ್ವರಪ್ಪನವರಿಗೆ ಕ್ಲೀನ್‌ಚಿಟ್ ನೀಡಿರುವ ಪೊಲೀಸರ ನಡೆಯನ್ನು ಖಂಡಿಸಿ ಆಮ್ ಆದ್ಮಿ ಪಕ್ಷದ(ಎಎಪಿ) ಕಾರ್ಯಕರ್ತರು ಶನಿವಾರ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಿದರು.

ಎಎಪಿ ನಗರ ಘಟಕದ ರಾಜಕೀಯ ಚಟುವಟಿಕೆಗಳ ಅಧ್ಯಕ್ಷ ಚನ್ನಪ್ಪಗೌಡ ನೆಲ್ಲೂರು ಮಾತನಾಡಿ, 'ಕಳಂಕಿತ ಕೆ.ಎಸ್. ಈಶ್ವರಪ್ಪ ಅವರನ್ನು ಪುನಃ ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳಲು ರಾಜ್ಯ ಬಿಜೆಪಿ ಸರ್ಕಾರ ಹುನ್ನಾರ ನಡೆಸಿದೆ. ಇದಕ್ಕಾಗಿ ಪೊಲೀಸರ ಮೇಲೆ ಒತ್ತಡ ಹೇರಿ ಕ್ಲೀನ್‌ಚಿಟ್ ನೀಡಲಾಗಿದೆ. ಸಂತೋಷ್ ಪಾಟೀಲ ಆತ್ಮಹತ್ಯೆಗೂ ಮುನ್ನ ಈಶ್ವರಪ್ಪನವರ ವಿರುದ್ಧ ವಾಟ್ಸ್‌ಆ್ಯಪ್‌ನಲ್ಲಿ ಡೆತ್‌ನೋಟ್ ಕಳುಹಿಸಿರುವುದನ್ನು ಪೊಲೀಸರೇ ದೃಢಪಡಿಸಿದ್ದರು. ಆದರೆ ಈಗ ಈಶ್ವರಪ್ಪ ಅವರ ವಿಚಾರಣೆ ನಡೆಸದೇ ಕ್ಲೀನ್ ಚಿಟ್ ನೀಡಿರುವುದು ಖಂಡನೀಯ' ಎಂದರು.

'ರಾಜ್ಯ ಪೊಲೀಸ್ ಇಲಾಖೆ ನಡೆಸಿರುವ ದೋಷಪೂರಿತ ವರದಿಯನ್ನು ಹಿಂಪಡೆಯಬೇಕು. ಡೆತ್‌ನೋಟ್ ಆಧಾರವಾಗಿಟ್ಟುಕೊಂಡು ಈಶ್ವರಪ್ಪನವರನ್ನು ಬಂಧಿಸಿ ಈ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ನಡೆಸಬೇಕು' ಎಂದರು.

'ಆಯುಸ್ಸು ವೃದ್ಧಿಸುವ ಸ್ನೇಹ ಬಳಗ'

ಜಯದೇವ ಹೃದ್ರೋಗ ಆಸ್ಪತ್ರೆ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಪ್ರತಿಪಾದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಲತಾಣಗಳ ಮಧ್ಯೆಯೂ ಉತ್ತಮ ಸ್ನೇಹ ಬಳಗ ಹೊಂದಿರುವ, ಪರಸ್ಪರ ಕಷ್ಟಸುಖ ಹಂಚಿಕೊಳ್ಳುವ ಜನರ ಆಯುಸ್ಸು ಸರಾಸರಿ 10ರಿಂದ 12 ವರ್ಷ ಅಧಿಕವಾಗಿರುತ್ತದೆ ಎಂಬುದು ಇತ್ತೀಚಿನ ಸಮೀಕ್ಷೆಗಳಿಂದ ಸಾಬೀತಾಗಿದೆ ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಹೇಳಿದರು.

ಚಿತ್ರಕಲಾ ಪರಿಷತ್ ಸಭಾಂಗಣದಲ್ಲಿ ಶನಿವಾರ ಡಾ.ಎಚ್.ಗಿರಿಜಮ್ಮ ಸ್ನೇಹ ಬಳಗ ಹಮ್ಮಿಕೊಂಡಿದ್ದ 'ಎಚ್.ಗಿರಿಜಮ್ಮ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿಶ್ವದ ಬಹುತೇಕ ದೇಶಗಳು ಇಂತಹ ಸಮೀಕ್ಷೆ ನಡೆಸಿವೆ. ಸಮಾಜದಲ್ಲಿ ಸಂಭವಿಸುತ್ತಿರುವ ಶೇ 50ರಷ್ಟು ಸಾವಿಗೆ ಬದಲಾದ ಜೀವನಶೈಲಿಯೇ ಕಾರಣ. ಜನರು ನಿತ್ಯವೂ ಒತ್ತಡದ ಬದುಕಿನಲ್ಲಿ ಸಾಗುತ್ತಿದ್ದಾರೆ. ಇತರ ಕಾರಣಗಳ ಜತೆಗೆ ಈಚೆಗೆ ಸಾಮಾಜಿಕ ಜಾಲ ತಾಣಗಳು ಒತ್ತಡಗಳಿಗೆ ಹೊಸ ಸೇರ್ಪಡೆಯಾಗಿದೆ. ಅಧಿಕ ರಕ್ತದೊತ್ತಡ, ಹೃದಯ ಕಾಯಿಲೆ, ಕ್ಯಾನ್ಸರ್‌ಗೆ ತುತ್ತಾಗುತ್ತಿದ್ದಾರೆ. ನಿಯಮಿತ ವ್ಯಾಯಾಮ, ವಿಶ್ರಾಂತಿ, ಉತ್ತಮ ಸ್ನೇಹ, ಆತ್ಮವಿಶ್ವಾಸಗಳಿಂದ ಇಂತಹ ಕಾಯಿಲೆಗಳನ್ನು ಜಯಿಸಬಹುದು ಎಂದು ಕಿವಿಮಾತು ಹೇಳಿದರು.

ಬೆಂಗಳೂರಿನಲ್ಲಿ ಶನಿವಾರ ಡಾ.ಎಚ್.ಗಿರಿಜಮ್ಮ ಸ್ನೇಹ ಬಳಗ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೇಖಕಿ ಡಾ.ಎಚ್.ಎಸ್. ಅನುಪಮಾ ಅವರಿಗೆ ಡಾ.ಎಚ್. ಗಿರಿಜಮ್ಮ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್, ಮನೋವಿಜ್ಞಾನಿ ಡಾ.ಸಿ.ಆರ್.ಚಂದ್ರಶೇಖರ್, ಗಿರಿಜಮ್ಮ ಸ್ನೇಹ ಬಳಗದ ಡಾ.ವಸುಂಧರಾ ಭೂಪತಿ, ಆರ್.ಪೂರ್ಣಿಮಾ, ನಾಗರಾಜ್ ಮೂರ್ತಿ, ಡಾ.ಆರ್.ಕೆ.ಸರೋಜಾ, ನಿರೂಪಕಿ ಅಪರ್ಣಾ ಇದ್ದರು ಪ್ರಜಾವಾಣಿ ಚಿತ್ರ

ಖಿನ್ನತೆಗೆ ಒಂಟಿತನ ಕಾರಣ. ಆದರೆ, ಇಂದು ಸಾಮಾಜಿಕ ಜಾಲತಾಣಗಳ ಬಳಕೆಯಿಂದಾಗಿ ಒಂಟಿತನದ ವ್ಯಾಖ್ಯಾನವೇ ಬದಲಾಗಿದೆ. ಒಂದೇ ಮನೆಯಲ್ಲಿದ್ದರೂ ಮೊಬೈಲ್‌ಗಳಲ್ಲೇ ಮುಳುಗಿ, ಜತೆಗಿರುವವರನ್ನೇ ಮರೆಯುತ್ತಿದ್ದೇವೆ. ಭಾವನಾತ್ಮಕ ಸಂಬಂಧಗಳು ಇಲ್ಲವಾಗುತ್ತಿವೆ. ಕೂತು ಮಾತನಾಡುವ ತೃಪ್ತಿ ದೊರಕುತ್ತಿಲ್ಲ. ಇದರಿಂದ ಹೊಸ ರೀತಿಯ ಖಿನ್ನತೆಗಳು ಕಾಣಿಸಿಕೊಳ್ಳುತ್ತಿವೆ. ಇದು ಕೌಟುಂಬಿಕ ಜೀವನಕ್ಕೆ ಅಪಾಯಕಾರಿ ಎಂದು ವಿಶ್ಲೇಷಿಸಿದರು.

ವೈದ್ಯೆ ಡಾ.ಆರ್.ಕೆ.ಸರೋಜಾ ಮಾತನಾಡಿ, 'ರೋಗಿಗಳನ್ನು ಮುಟ್ಟದೆ, ಮಾತನಾಡದೇ ಚಿಕಿತ್ಸೆ ನೀಡುವ ಪದ್ಧತಿ ಜನಪ್ರಿಯವಾಗುತ್ತಿದೆ. ಇದು ಸರಿಯಲ್ಲ. ವೈದ್ಯರ ಸಹಾನುಭೂತಿಯ ಮಾತು, ಸ್ಪರ್ಶ ರೋಗಿಯ ಅರ್ಧ ಕಾಯಿಲೆ ವಾಸಿ ಮಾಡುತ್ತದೆ' ಎಂದು ಅಭಿಪ್ರಾಯಪಟ್ಟರು.

ಲೇಖಕಿ ಡಾ.ಎಚ್.ಎಸ್.ಅನುಪಮಾ, ಡಾ.ಶಾಂತಲಾ (ಅವರ ಪರವಾಗಿ ಪತಿ ಅನಿಲ್‌ಕುಮಾರ್) ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಡಾ.ವಸುಂಧರಾ ಭೂಪತಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಮನೋವಿಜ್ಞಾನಿ ಡಾ.ಸಿ.ಆರ್. ಚಂದ್ರಶೇಖರ್, ಪತ್ರಕರ್ತೆ ಆರ್. ಪೂರ್ಣಿಮಾ, ನಟಿ ಅರ್ಪಣಾ, ಕಲಾವಿದ ನಾಗರಾಜಮೂರ್ತಿ ಉಪಸ್ಥಿತರಿದ್ದರು.

ದಂತ ವೈದ್ಯಕೀಯ ಪರೀಕ್ಷೆ ಮುಂದೂಡಲು ಒತ್ತಾಯ

ಬೆಂಗಳೂರು: ಶೈಕ್ಷಣಿಕ ಹಾಗೂ ಭವಿಷ್ಯದ ಹಿತದೃಷ್ಟಿಯಿಂದ ಅಂತಿಮ ವರ್ಷದ ದಂತ ವೈದ್ಯಕೀಯ ವಿದ್ಯಾರ್ಥಿಗಳ ಪರೀಕ್ಷೆ ಮುಂದೂಡುವಂತೆ ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಒತ್ತಾಯಿಸಿದ್ದಾರೆ.

ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಅಂತಿಮ ವರ್ಷದ ದಂತ ವೈದ್ಯಕೀಯ ಪರೀಕ್ಷೆಗಳನ್ನು ಆಗಸ್ಟ್ ತಿಂಗಳಿಗೆ ನಿಗದಿ ಮಾಡಿರುವುದು ವಿದ್ಯಾರ್ಥಿಗಳಲ್ಲಿ ಆತಂಕ ಮೂಡಿಸಿದೆ ಎಂದು ತಿಳಿಸಿದ್ದಾರೆ.

ಕೋವಿಡ್ಡಿನಿಂದಾಗಿ ಹಿಂದಿನ ಮತ್ತು ಪ್ರಸ್ತುತ ವರ್ಷದ ಶೈಕ್ಷಣಿಕ ವೇಳಾಪಟ್ಟಿಯಲ್ಲಿ ಹಲವು ಏರುಪೇರುಗಳಾಗಿದ್ದವು. ಪರಿಣಾಮಕಾರಿ ಅಲ್ಲದ ಆನ್‌ಲೈನ್ ತರಗತಿಗಳು ಹಾಗೂ ಪರೀಕ್ಷೆಗೆ ತಯಾರಾಗಲು ಸಮಯದ ಕೊರತೆಯಿಂದಾಗಿ ವಿದ್ಯಾರ್ಥಿಗಳು ಅತ್ಯಂತ ಒತ್ತಡದಲ್ಲಿ ಸಿಲುಕಿದ್ದಾರೆ. ವಿವಿ ಮಾರ್ಗಸೂಚಿಯ ಪ್ರಕಾರ, ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ 10 ತಿಂಗಳ ಕ್ಲಿನಿಕಲ್ ಪೋಸ್ಟಿಂಗ್ ಆಗಬೇಕು. ಆದರೆ, ಈಗ ನಿಗದಿಯಾಗಿರುವ ಪರೀಕ್ಷಾ ವೇಳಾಪಟ್ಟಿ ಪ್ರಕಾರ, 10 ತಿಂಗಳ ಬದಲು ಕೇವಲ 6 ತಿಂಗಳಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಬೇಕು ಎಂದು ವಿವರಿಸಿದ್ದಾರೆ.

ಅಂತಿಮ ವರ್ಷದ ದಂತ ವೈದ್ಯಕೀಯ ವಿದ್ಯಾರ್ಥಿಗಳ ನಡುವೆ ಎಐಡಿಎಸ್‌ಒ ಸಮೀಕ್ಷೆ ನಡೆಸಿದೆ. ರಾಜ್ಯದ 1250 ಅಂತಿಮ ವರ್ಷದ ದಂತ ವೈದ್ಯಕೀಯ ವಿದ್ಯಾರ್ಥಿಗಳ ಪೈಕಿ, ಶೇ 99.7ರಷ್ಟು ವಿದ್ಯಾರ್ಥಿಗಳು ಪರೀಕ್ಷೆ ಮುಂದೂಡಲು ಮನವಿ ಮಾಡಿದ್ದಾರೆ ಎಂದು ತಿಳಿಸಿದ್ದಾರೆ.

ಕಲಾವಿದರಿಂದ ಅರ್ಜಿ ಆಹ್ವಾನ

ಬೆಂಗಳೂರು: ಮೂಡಲಪಾಯ ಯಕ್ಷಗಾನ ಪ್ರಸಂಗ ಪ್ರದರ್ಶನಕ್ಕೆ ಸಂಬಂಧಿಸಿದಂತೆ ವೃತ್ತಿಪರ ತಂಡಗಳಲ್ಲಿ ಅವಕಾಶ ಪಡೆಯಲು 18ರಿಂದ 35 ವರ್ಷದೊಳಗಿನ ಕಲಾವಿದರಿಂದ ಕರ್ನಾಟಕ ಮೂಡಲಪಾಯ ಯಕ್ಷಗಾನ ಪರಿಷತ್ತು ಅರ್ಜಿ ಆಹ್ವಾನಿಸಿದೆ.

ಮೂಡಲಪಾಯ ಯಕ್ಷಗಾನ ಕಲೆಯು ದಕ್ಷಿಣ ಕರ್ನಾಟಕದ 10 ಜಿಲ್ಲೆಗಳಲ್ಲಿ ಪ್ರಚಲಿತವಿದೆ. ಮೂಡಲಪಾಯ ಯಕ್ಷಗಾನ ಪ್ರಸಂಗಗಳ ಪ್ರದರ್ಶನಕ್ಕೆ ಸಂಬಂಧಿಸಿದಂತೆ ಆ.22ರಿಂದ ಹತ್ತು ದಿನಗಳು ಪೂರ್ವಭಾವಿ ಸಿದ್ಧತಾ ಕಾರ್ಯಾಗಾರ ನಡೆಯಲಿದೆ. ಸೆ.1ರಿಂದ ನವೆಂಬರ್ ತಿಂಗಳ ಅಂತ್ಯದವರೆಗೆ ಮೂಡಲಪಾಯದ ಭಾಗವತರು, ಮದ್ದಳೆ ಮತ್ತು ಮುಖವೀಣೆ ಕಲಾವಿದರ ನೇತೃತ್ವದಲ್ಲಿ ತರಬೇತಿ ನಡೆಯಲಿದೆ ಎಂದು ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಶಶಿಧರ್ ಭಾರಿಘಾಟ್ ಹೇಳಿದ್ದಾರೆ.

ಆಸಕ್ತರು ಅರ್ಜಿ ನಮೂನೆಯನ್ನು ಆ.16ರೊಳಗೆ ಸಂಚಾಲಕರು, ಮೂಡಲಪಾಯ ಯಕ್ಷರಂಗ ಪಯಣ, ಕರ್ನಾಟಕ ಸಂಘ, ಆರ್.ಪಿ.ರಸ್ತೆ, ಮಂಡ್ಯ-571401 ಈ ವಿಳಾಸಕ್ಕೆ ಅಥವಾ ಇ-ಮೇಲ್ ವಿಳಾಸ karnatakasanghamandya@gmail.comಗೆ ಕಳಿಸುವಂತೆ ಪ್ರಕಟಣೆ ತಿಳಿಸಿದೆ.

ಸಂಪರ್ಕ ಸಂಖ್ಯೆ:9448194456 ಅಥವಾ 9448542411

ಕುಂಬಾರ ಅಭಿವೃದ್ಧಿ ನಿಗಮಕ್ಕೆ ಸ್ವತಂತ್ರ ಸ್ಥಾನ

ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವರಾಜ ಅರಸು ಅಭಿವೃದ್ಧಿ ನಿಗಮದ ಅಧೀನದಲ್ಲಿರುವ ಕುಂಬಾರ ಅಭಿವೃದ್ಧಿ ನಿಗಮಕ್ಕೆ ಪ್ರತ್ಯೇಕ ಕಚೇರಿ, ಅನುದಾನ ಒದಗಿಸುವ ಜತೆಗೆ, ಅಧ್ಯಕ್ಷರನ್ನೂ ನೇಮಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಭರವಸೆ ನೀಡಿದರು.

ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ಶನಿವಾರ ಕರ್ನಾಟಕ ಕುಂಬಾರರ ಯುವ ಸೈನ್ಯ ಹಮ್ಮಿಕೊಂಡಿದ್ದ ಕುಂಬಾರ, ಕುಲಾಲ, ಪ್ರಜಾಪತಿ ಜಾಗೃತಿ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಮಣ್ಣಿನ ಮಡಕೆ ಮಾರಾಟ ಮಾಡಿ ಜೀವನ ಸಾಗಿಸುವ ಕುಂಬಾರ ಸಮುದಾಯ ಆಧುನಿಕ ಕಾಲಘಟ್ಟದಲ್ಲಿ ಸಾಕಷ್ಟು ಸಂಕಷ್ಟ ಅನುಭವಿಸುತ್ತಿದೆ. ಜನಾಂಗದ ಸರ್ವತೋಮುಖ ಅಭಿವೃದ್ಧಿಗೆ ನಿಗಮ ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಅಗತ್ಯವಿದೆ. ಈ ಕುರಿತು ಮುಖ್ಯಮಂತ್ರಿ ಜತೆ ಸಭೆ ನಡೆಸಿ, ಒಂದು ವಾರದಲ್ಲಿ ಅಗತ್ಯ ಸೌಲಭ್ಯ ಕಲ್ಪಿಸಲಾಗುವುದು ಎಂದು ಹೇಳಿದರು.

ಶಾಸಕ ಕೆ.ಎಸ್.ಈಶ್ವರಪ್ಪ ಮಾತನಾಡಿ, ಸಂಕಷ್ಟದಲ್ಲಿರುವ ಕುಂಬಾರ ಸಮುದಾಯ ಅಭಿವೃದ್ಧಿ ಕಾಣಬೇಕಾದರೆ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಬೇಕು. ಕುಂಬಾರಿಕೆಗೆ ಅಗತ್ಯವಾದ ಸಾಲ ಸೌಲಭ್ಯ ದೊರಕಿಸುವುದು, ಸಬ್ಸಿಡಿ ನೀಡುವುದು, ಕುಂಬಾರಿಕೆ ಸಾಮಗ್ರಿಗಳಿಗೆ ಸೂಕ್ತ ಮಾರುಕಟ್ಟೆ ದೊರಕಿಸಲು ಪ್ರಯತ್ನಿಸಲಾಗುವುದು ಎಂದರು.

ಕುಂಬಾರ ಮಠದ ಬಸವ ಕುಂಬಾರ ಗುಂಡಯ್ಯ ಸ್ವಾಮೀಜಿ, ತೇಲಸಂಗ ಶ್ರೀ, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ, ಸೈನ್ಯದ ಸಂಸ್ಥಾಪಕ ಅಧ್ಯಕ್ಷ ಶಂಕರ್ ಶೆಟ್ಟಿ ಕುಂಬಾರ ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿ ಶನಿವಾರ ಕರ್ನಾಟಕ ಕುಂಬಾರರ ಯುವ ಸೈನ್ಯ ಹಮ್ಮಿಕೊಂಡಿದ್ದ ಕುಂಬಾರ, ಕುಲಾಲ, ಪ್ರಜಾಪತಿ ಜಾಗೃತಿ ಸಮಾವೇಶವನ್ನು ಶಾಸಕ ಕೆ.ಎಸ್.ಈಶ್ವರಪ್ಪ ಉದ್ಘಾಟಿಸಿದರು. ಬಸವ ಕುಂಬಾರ ಗುಂಡಯ್ಯ ಸ್ವಾಮೀಜಿ, ಸಚಿವ ಕೋಟ ಶ್ರೀನಿವಾಸ ಪೂಜಾರಿ, ಬಿಜೆಪಿ ರಾಜ್ಯಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಇದ್ದಾರೆ.

ರಾತ್ರಿಯೂ ರಾಷ್ಟ್ರಧ್ವಜ ಹಾರಿಸಬಹುದು

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಧ್ವಜ ಸಂಹಿತೆಯಲ್ಲಿ ಬದಲಾವಣೆ ಮಾಡಿದ್ದು, ಇನ್ನು ಮುಂದೆ ರಾಷ್ಟ್ರಧ್ವಜವನ್ನು ರಾತ್ರಿಯೂ ಹಾರಿಸಬಹುದು ಮತ್ತು ಯಂತ್ರದಿಂದ ತಯಾರಿಸಿದ ಹಾಗೂ ಪಾಲಿಸ್ಟರ್ ಧ್ವಜಗಳನ್ನೂ ಬಳಸಬಹುದಾಗಿದೆ.

'ಆಜಾದಿ ಕಾ ಅಮೃತ ಮಹೋತ್ಸವ'ದ ಅಂಗವಾಗಿ ಆಗಸ್ಟ್ 13ರಿಂದ 15ರ ವರೆಗೆ ನಡೆಯಲಿರುವ 'ಹರ್ ಘರ್ ತಿರಂಗ' (ಪ್ರತಿಯೊಬ್ಬರ ಮನೆಯಲ್ಲಿ ತ್ರಿವರ್ಣ ಧ್ವಜ) ಅಭಿಯಾನದ ಅಂಗವಾಗಿ ಸರ್ಕಾರವು ಈ ಕ್ರಮ ಕೈಗೊಂಡಿದೆ.

ಬದಲಾವಣೆಯಾಗಿರುವ ಧ್ವಜ ಸಂಹಿತೆಯ ಕುರಿತು ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಭಲ್ಲಾ ಅವರು ಎಲ್ಲಾ ಸಚಿವಾಲಯಗಳು ಮತ್ತು ಇಲಾಖೆಗಳ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದಾರೆ.

ಈ ಹಿಂದೆ ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಮಾತ್ರ ತ್ರಿವರ್ಣ ಧ್ವಜ ಹಾರಿಸಲು ಅನುಮತಿ ನೀಡಲಾಗಿತ್ತು. ಯಂತ್ರದಿಂದ ತಯಾರಿಸಿದ ಮತ್ತು ಪಾಲಿಸ್ಟರ್ ಧ್ವಜಗಳನ್ನು ಬಳಸಲು ಅನುಮತಿ ಇರಲಿಲ್ಲ.

ಅನ್ನಭಾಗ್ಯ ಅಕ್ಕಿ ಅಕ್ರಮ ದಾಸ್ತಾನು ಶೆಡ್ ಮೇಲೆ ಶಾಸಕ ಗಣೇಶ್ ದಾಳಿ

ಪ್ರಜಾವಾಣಿ ವಾರ್ತೆ

ಕಂಪ್ಲಿ: ತಾಲ್ಲೂಕಿನ ನಂ.10 ಮುದ್ದಾಪುರ ಗ್ರಾಮ ವ್ಯಾಪ್ತಿಯ ಗೌರಮ್ಮ ಕೆರೆಗೆ ಹೋಗುವ ರಸ್ತೆಯಲ್ಲಿದ್ದ ಅನ್ನಭಾಗ್ಯ ಅಕ್ಕಿ ದಾಸ್ತಾನಿನ ಶೆಡ್ ಮೇಲೆ ಶಾಸಕ ಜೆ.ಎನ್. ಗಣೇಶ್ ಶನಿವಾರ ರಾತ್ರಿ ದಾಳಿ ನಡೆಸಿದರು.

'ಶೆಡ್‌ನಲ್ಲಿ 50 ಕೆ.ಜಿ ತೂಕದ ಅಂದಾಜು ಒಂದು ಸಾವಿರ ಅಕ್ಕಿ ಚೀಲಗಳು ದಾಸ್ತಾನು ಇದೆ. ಬಡವರಿಗೆ ವಿತರಣೆಯಾಗಬೇಕಾದ ಅನ್ನಭಾಗ್ಯ ಅಕ್ಕಿಯನ್ನು ಕಳೆದ ಒಂದು ವರ್ಷದಿಂದ ಗುಜರಾತ್ ಮತ್ತು ಬಿಹಾರ ರಾಜ್ಯಗಳಿಗೆ ಈ ಭಾಗದಿಂದ ದೊಡ್ಡ ಪ್ರಮಾಣದಲ್ಲಿ ಅಕ್ರಮವಾಗಿ ಸಾಗಿಸಲಾಗುತ್ತಿದೆ. ಇದರ ಹಿಂದೆ ಪ್ರಭಾವಿಗಳ ಕೈವಾಡವಿದ್ದು, ಕ್ರಮ ತೆಗೆದುಕೊಳ್ಳಬೇಕು' ಎಂದು ಗಣೇಶ್ ಆಗ್ರಹಿಸಿದರು.

ಸ್ಥಳಕ್ಕೆ ಭೇಟಿ ನೀಡಿದಾಗ ಅಕ್ಕಿ ಚೀಲಗಳನ್ನು ಲಾರಿಗೆ ಲೋಡ್ ಮಾಡಲಾಗುತ್ತಿತ್ತು. ಶೆಡ್ ಬಳಿ ಇದ್ದ ಕೆಲವರು ಪರಾರಿಯಾದರು ಎಂದು ಶಾಸಕ ಮಾಹಿತಿ ನೀಡಿದರು.

ಭೂ ವಿಜ್ಞಾನ ಇಲಾಖೆ ಹಿರಿಯ ಅಧಿಕಾರಿ ಭೇಟಿ: 'ಅಕ್ರಮ ಮರಳು ಗಣಿಗಾರಿಕೆ, ಸಾಗಾಣಿಕೆ ತಡೆಯುವ ಉದ್ದೇಶದಿಂದ ಗಸ್ತು ತಿರುಗುತ್ತಿದ್ದ ವೇಳೆ ಗೌರಮ್ಮ ಕೆರೆ ರಸ್ತೆಯಲ್ಲಿ ಜನ–ವಾಹನ ಸಂಚಾರ ಕಂಡುಬಂತು. ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ ಅಕ್ರಮ ಅಕ್ಕಿ ದಾಸ್ತಾನು ಕಂಡುಬಂತು. ಕೂಡಲೇ ಆಹಾರ ಮತ್ತು ಕಂದಾಯ ಇಲಾಖೆ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ ಮಾಹಿತಿ ನೀಡಿದೆ' ಎಂದು ಭೂ ವಿಜ್ಞಾನ ಇಲಾಖೆಯ ಹಿರಿಯ ಅಧಿಕಾರಿ ಚಂದ್ರಶೇಖರ್ ಹಿರೇಮಠ್ ತಿಳಿಸಿದರು.



ಕಂಪ್ಲಿ ತಾಲ್ಲೂಕು ನಂ.10 ಮುದ್ದಾಪುರ ಗ್ರಾಮ ವ್ಯಾಪ್ತಿಯ ಗೌರಮ್ಮ ಕೆರೆಗೆ ಹೋಗುವ ರಸ್ತೆಯಲ್ಲಿರುವ ಶೆಡ್‌ನಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ ಅನ್ನ ಭಾಗ್ಯ ಅಕ್ಕಿ. ಶಾಸಕ ಜೆ.ಎನ್. ಗಣೇಶ್, ಭೂ ವಿಜ್ಞಾನ ಇಲಾಖೆಯ ಹಿರಿಯ ಅಧಿಕಾರಿ ಚಂದ್ರಶೇಖರ್ ಹಿರೇಮಠ್ ಇದ್ದಾರೆ

ಕನಕಪುರ ತಾಲ್ಲೂಕಿನ 36 ಹಳ್ಳಿಗಳ ಮಹಿಳೆಯರಿಗೆ 8 ಸಾವಿರ ಮುಟ್ಟಿನ ಕಪ್ ವಿತರಣೆ

ಮುಟ್ಟಿನ ಸಮಸ್ಯೆ ಈಗ 'ಆಸಾನ್'

● ಆರ್. ಜಿತೇಂದ್ರ

ಪ್ರಜಾವಾಣಿ ವಿಶೇಷ

ರಾಮನಗರ: ಕನಕಪುರ ತಾಲ್ಲೂಕಿನ 36 ಹಳ್ಳಿಗಳಲ್ಲಿನ ಸಾವಿರಾರು ಮಹಿಳೆಯರ ಮುಟ್ಟಿನ ಬಾಧೆ ಈಗ 'ಆಸಾನ್' (ಸರಳ) ಆಗಿದೆ. ಋತುಚಕ್ರದ ಅವಧಿಯಲ್ಲೂ ಅವರು ಯಾವುದೇ ಅಳುಕಿಲ್ಲದೆ ದೈನಂದಿನ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ.

ಈ ಮಹಿಳೆಯರಿಗೆ ವಿತರಿಸಲಾದ 'ಆಸಾನ್' ಹೆಸರಿನ ಮುಟ್ಟಿನ ಕಪ್, ಇವರಲ್ಲಿ ಇದರ ಬಗ್ಗೆ ಇದ್ದ ತಿಳಿವಳಿಕೆ ಬದಲಿಸಿದೆ ಮತ್ತು ಅವರ ಆತ್ಮವಿಶ್ವಾಸ ಹೆಚ್ಚಿಸಿದೆ. ಕನಕಪುರ ತಾಲ್ಲೂಕಿನ 8 ಸಾವಿರಕ್ಕೂ ಹೆಚ್ಚು ಮಹಿಳೆಯರಿಗೆ ಈಗಾಗಲೇ ಈ ಕಪ್ ತಲುಪಿವೆ. 29 ವರ್ಷ ವಯಸ್ಸಿನ ಇರಾ ಗುಹಾ ಅವರ ಸಾಮಾಜಿಕ ಕಾಳಜಿಯಿಂದ ಇದು ಸಾಧ್ಯವಾಗಿದೆ.

'ಆಸಾನ್' ಹೆಸರಿನ ಕಂಪನಿ ಸ್ಥಾಪಿಸಿರುವ ಇರಾ, ಅದೇ ಹೆಸರಿನ ಬ್ರ್ಯಾಂಡ್‌ನಲ್ಲಿ ಮುಟ್ಟಿನ ಕಪ್‌ಗಳನ್ನು ಮಾರುತ್ತಿದ್ದಾರೆ. ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನದ ವೇಳೆ ಹಾರ್ವರ್ಡ್ ಇನೋವೇಶನ್ ಲ್ಯಾಬ್‌ನಲ್ಲಿ ಸತತ ಎರಡು ವರ್ಷದ ಪ್ರಯೋಗಗಳ ಮೂಲಕ ತಾವೇ ಈ ಮುಟ್ಟಿನ ಕಪ್ ಅನ್ನು ವಿನ್ಯಾಸ ಮಾಡಿದ್ದಾರೆ. ಈಗಾಗಲೇ ಇಂಗ್ಲೆಂಡ್, ಯುರೋಪ್, ಅಮೆರಿಕ ಹಾಗೂ ಭಾರತದಲ್ಲಿ ಇವು ಮಾರಾಟ ಆಗುತ್ತಿವೆ. ಹೀಗೆ ಮಾರಾಟ ಆಗುವ ಪ್ರತಿ ಕಪ್‌ಗೆ ಪ್ರತಿಯಾಗಿ ಇನ್ನೊಂದು ಕಪ್ ಅನ್ನು ಭಾರತದಲ್ಲಿನ ಗ್ರಾಮೀಣ ಮಹಿಳೆಯರಿಗೆ ವಿತರಿಸಲಾಗುತ್ತಿದೆ. ದೇಶದಲ್ಲಿನ ವಿವಿಧ ರಾಜ್ಯಗಳ 20 ಸಾವಿರಕ್ಕೂ ಹೆಚ್ಚು ಮಹಿಳೆಯರಿಗೆ ಇದು ಉಚಿತವಾಗಿ ತಲುಪಿದೆ. ಕನಕಪುರದಲ್ಲಿ ಮೂರು ವರ್ಷದ ಹಿಂದೆ ಬೆಳಕು ಸಂಸ್ಥೆಯ ಸರಸ್ವತಿ ಗಣಪತಿ ಜೊತೆಗೂಡಿ ವಿತರಣೆ ಆರಂಭಗೊಂಡಿದ್ದು, ಇಂದಿಗೂ ಶೇ 90ರಷ್ಟು ಮಹಿಳೆಯರು ಇದನ್ನು ಸಕ್ರಿಯವಾಗಿ ಬಳಸುತ್ತಿದ್ದಾರೆ ಎನ್ನುತ್ತಾರೆ ಇರಾ. ಮುಂದಿನ ಹತ್ತು ವರ್ಷದಲ್ಲಿ ಭಾರತದ 50 ಲಕ್ಷ ಮಹಿಳೆಯರಿಗೆ ಈ ಕಪ್ ತಲುಪಿಸುವ ಗುರಿಯನ್ನು ಆಸಾನ್ ಸಂಸ್ಥೆ ಹೊಂದಿದೆ.

ಗ್ರಾಮೀಣ ಮಹಿಳೆಯರಿಗೆ ಕಪ್ ವಿತರಿಸುವ ಜೊತೆಗೆ ಪ್ರತಿ ಗ್ರಾಮದಲ್ಲೂ 'ಆಸಾನ್' ಪ್ರತಿನಿಧಿಗಳ ಮೂಲಕ ಸ್ತ್ರೀಯರಿಗೆ ಇದರ ಬಳಕೆ ಕುರಿತು ಜಾಗೃತಿ– ತರಬೇತಿಯನ್ನೂ ನೀಡಲಾಗಿದೆ. ಅಂಗನವಾಡಿ–ಆಶಾ ಕಾರ್ಯಕರ್ತೆಯರು ಈ ಕಾರ್ಯದಲ್ಲಿ ಕೈ ಜೋಡಿಸಿದ್ದಾರೆ.

ಆಸಾನ್ ಕಪ್‌ನೊಂದಿಗೆ ಮಹಿಳೆಯರು

ಅನುಕೂಲಗಳೇನು?

ವೈದ್ಯಕೀಯ ಸಾಮಗ್ರಿಗಳಿಗೆ ಬಳಸುವ ಸಿಲಿಕಾನ್‌ನಿಂದ ತಯಾರಿಸಲಾದ ಈ ಕಪ್ ಅನ್ನು ಹತ್ತು ವರ್ಷ ತನಕ ಬಳಸಲು ಸಾಧ್ಯವಿದೆ. ಇದನ್ನು ಧರಿಸುವುದರಿಂದ ಮಹಿಳೆಯರು ಮುಟ್ಟಿನ ಅವಧಿಯಲ್ಲೂ ಎಂದಿನಂತೆ ದೈನಂದಿನ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದು ಸಾಧ್ಯವಾಗಲಿದೆ. ಜೊತೆಗೆ ಅವರಲ್ಲಿನ ಒತ್ತಡ, ಉದ್ವೇಗ ಕಡಿಮೆ ಆಗಿ ಆರೋಗ್ಯವೂ ಸುಧಾರಣೆ ಆಗುತ್ತಿದೆ ಎನ್ನುತ್ತಾರೆ ಇರಾ.

ಪ್ರತಿ ಮಹಿಳೆಯು ಹತ್ತು ವರ್ಷ ಇದನ್ನು ಬಳಸುವುದರಿಂದ ಸ್ಯಾನಿಟರಿ ಪ್ಯಾಡ್‌ಗಳಿಗೆ ಖರ್ಚು ಮಾಡುತ್ತಿದ್ದ ₹50 ಸಾವಿರದಷ್ಟು ಹಣ ಉಳಿಯಲಿದೆ. ಸ್ಯಾನಿಟರಿ ಪ್ಯಾಡ್‌ಗಳ ಬಳಕೆ ತಪ್ಪಿದ ಪರಿಣಾಮ ಒಟ್ಟಾರೆ 112 ಟನ್‌ನಷ್ಟು ತ್ಯಾಜ್ಯ ನೆಲ ಸೇರಿ ಮಾಲಿನ್ಯವಾಗುವುದೂ ತಪ್ಪಲಿದೆ.

ಮನೆ ಕೆಲಸದಾಕೆಯ ಕಷ್ಟ ನೋಡಿ ಈ ಕಪ್ ವಿನ್ಯಾಸ ಮಾಡಿದೆ. ಇಂದು ಭಾರತದ 20 ಸಾವಿರಕ್ಕೂ ಹೆಚ್ಚು ಮಹಿಳೆಯರಿಗೆ ಉಚಿತವಾಗಿ ತಲುಪಿದ್ದು, ಇದೊಂದು ದಾಖಲೆ

ಇರಾ ಗುಹಾ

ಆಸಾನ್ ಸಂಸ್ಥೆ ಸಂಸ್ಥಾಪಕಿ

ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ

ಪ್ರಧಾನ ಶಾಖೆ : ನಂ. 158, 8ನೇ ಮೇನ್, 17ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560003
Ph : 080-23442648, 23449450, Fax : 080-41281971, E-mail : gm@jcbank.in, managerho@jcbank.in

ಬಹಿರಂಗ ಹರಾಜಿನ ಮೂಲಕ ಸ್ಥಿರಾಸ್ತಿಗಳ ಮಾರಾಟ

ಸೆಕ್ಯುರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಅಧಿನಿಯಮ 2002 ರ ಪ್ರಕರಣ 13(4)ರನ್ವಯ ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ ಇದರ ಅಧಿಕಾರ ಹೊಂದಿದ ಅಧಿಕಾರಿ ಇವರು ಸ್ವಾಧೀನಪಡಿಸಿಕೊಂಡಿರುವ ಮತ್ತು ಈಗ ಅವರ ವಶದಲ್ಲಿರುವ ಕೆಳಕಂಡ ಸ್ಥಿರಾಸ್ತಿಗಳನ್ನು ಎಲ್ಲಿವೆಯೋ ಹೇಗಿವೆಯೋ ಹಾಗಿನ ಸ್ಥಿತಿಯಲ್ಲಿ ಸಾರ್ವಜನಿಕರ ಹರಾಜು ವಿಧಾನದಂತೆ ಬ್ಯಾಂಕಿನ ಅಧಿಕೃತ ಅಧಿಕಾರಿಯು ಈ ಕೆಳಕಂಡ ಕರಾರು ಮತ್ತು ಷರತ್ತುಗಳೊಂದಿಗೆ ಬಹಿರಂಗ ಹರಾಜು ಮಾಡಲು ನಿರ್ಧರಿಸಿರುತ್ತಾರೆ.

ಸಾಲಗಾರರ ಹೆಸರು & ವಿಳಾಸ	ಸ್ಥಿರಾಸ್ತಿಯ ವಿವರ	ಚೆಕ್ಕುಬಂದಿ	ಮೀಸಲು ಬೆಲೆ ರೂ	ಬ್ಯಾಂಕಿಗೆ ಬರಬೇಕಾದ ಬಾಕಿ ಮೊಬಲಗು	ಬಹಿರಂಗ ಹರಾಜಿನ ದಿನಾಂಕ
ಶ್ರೀ. ಸತೀಶ್ ಬಿ.ಎಸ್. ಬಿನ್ ಶ್ರೀ.ಶಿವಲಿಂಗಯ್ಯ ಬಿ. ವಾಸ : ನಂ.250, 4ನೇ ಅಡ್ಡರಸ್ತೆ, 6ನೇ ಮುಖ್ಯ ರಸ್ತೆ, ಎಚ್.ಎ.ಎಲ್ 3ನೇ ಘಟ್ಟ, ಬೆಂಗಳೂರು–560075	ಆಸ್ತಿಯ ಎಲ್ಲಾ ಭಾಗ ಮತ್ತು ತುಣುಕುಗಳು ಬಿಬಿಎಂಪಿ/ಬಿಡಿಎ/ಮುನ್ಸಿಪಲ್ ಹೊಸ ನಂ 26 (ಹಳೆಯ ಕಾರ್ಪೋರೇಷನ್ ಸಂಖ್ಯೆ.02) ಹೊಸ ನಂ.8 ಡಿಸಿ ವಿಭಾಗ ರಸ್ತೆ), 3ನೇ ಹಂತ, 4ನೇ ಬ್ಲಾಕ್, ಬಸವೇಶ್ವರನಗರ, ಕಾಮಾಕ್ಷಿಪಾಳ್ಯ, ಬೆಂಗಳೂರು (ವಾರ್ಡ್ ನಂ 18 ಕಾಮಾಕ್ಷಿಪಾಳ್ಯ) ಪಿಐಡಿ ನಂ 18–3–26. **ಸುತ್ತಳತೆ** ಪೂರ್ವದಿಂದ ಪಶ್ಚಿಮಕ್ಕೆ : 40 ಅಡಿಗಳು. ಉತ್ತರದಿಂದ ದಕ್ಷಿಣಕ್ಕೆ : 61 ಅಡಿಗಳು.	**ಪೂರ್ವಕ್ಕೆ : ಆಸ್ತಿ ಸಂಖ್ಯೆ 25, ಪಶ್ಚಿಮಕ್ಕೆ : ಆಸ್ತಿ ಸಂಖ್ಯೆ 27, ಉತ್ತರಕ್ಕೆ : ಆಸ್ತಿ ಸಂಖ್ಯೆ 51, ದಕ್ಷಿಣಕ್ಕೆ : ರಸ್ತೆ**	ರೂ. 4,00,00,000/– (ನಾಲ್ಕು ಕೋಟಿ ರೂಪಾಯಿಗಳು ಮಾತ್ರ)	ರೂ. 2,45,05,303 (ರೂ. ಎರಡು ಕೋಟಿ ನಲವತ್ತೈದು ಲಕ್ಷದ ಐದು ಸಾವಿರದ ಮೂರು ನೂರ ಮೂರು ರೂಪಾಯಿ–ಗಳು ಮಾತ್ರ) 21.07.2022 ರಿಂದ ಮುಂಬರುವ ಬಡ್ಡಿ ಮತ್ತು ಶುಲ್ಕಗಳು, ವೆಚ್ಚಗಳು ಇತ್ಯಾದಿ	ದಿ: 26.08.2022 ಬೆಳಿಗ್ಗೆ : 11:30 ಘಂಟೆಗೆ ಸ್ಥಳ: ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ ಪ್ರಧಾನ ಶಾಖೆ : ನಂ. 156, 8ನೇ ಮುಖ್ಯರಸ್ತೆ 17ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560055

ಬಹಿರಂಗ ಹರಾಜಿನ ನಿಯಮ ಮತ್ತು ಷರತ್ತುಗಳು:

1.ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ಮೀಸಲು ಬೆಲೆಯ 10% ಮರುಪಾವತಿಸಬಹುದಾದ ಇಎಂಡಿ ಹಣವನ್ನು ಅರ್ ಟಿ ಜಿ ಎಸ್ / ಎನ್ ಇ ಎಫ್ ಟಿ / ಹಣ ವರ್ಗಾವಣೆಯ ಮೂಲಕ ಖಾತೆ ಸಂಖ್ಯೆ GL Code – 2001 2004–01 **ಖಾತೆ ಹೆಸರು: ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ. ಐ ಎಫ್ ಎಸ್ ಸಿ ಸಂಖ್ಯೆ:** HDFC0CJCBKL ಬ್ಯಾಂಕ್ ಹೆಸರು: ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ. ಶಾಖೆ: ಮಲ್ಲೇಶ್ವರಂ. ಬೆಂಗಳೂರಿನಲ್ಲಿ ನಗದಿಕರಿಸುವ ರೀತಿ ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ ಹೆಸರಿನಲ್ಲಿ ಡಿಮ್ಯಾಂಡ್ ಡ್ರಾಫ್ಟ್ / ಪೇ ಆರ್ಡರ್ ನ್ನು ಮತ್ತು ಅಸಕ್ತ ಬಿಡ್ಡುದಾರರರು ಐಡಿ / ವಿಳಾಸ ಪುರಾವೆ ಮತ್ತು ಪ್ಯಾನ್ ಕಾರ್ಡ್ ಪ್ರತಿಗಳನ್ನು **ದಿನಾಂಕ: 26.08.2022ರ ಬೆಳಿಗ್ಗೆ 11:00 ಗಂಟೆಯ ಒಳಗಾಗಿ** ಬ್ಯಾಂಕಿನ ಅಧಿಕೃತ ಅಧಿಕಾರಿ. ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ. ಮಲ್ಲೇಶ್ವರಂ, ಬೆಂಗಳೂರು–560055 ಇವರಿಗೆ ತಲುಪಿಸ ಬೇಕು. ಇಎಂಡಿ ಹಣವು ಯಾವುದೇ ರೀತಿಯಾದ ಬಡ್ಡಿಯನ್ನು ಹೊಂದಿರುವುದಿಲ್ಲ. 2. ಯಾವುದೇ ಕಾರಣಕ್ಕೂ ಸ್ವತ್ತನ್ನು ಮೀಸಲು ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡುವುದಿಲ್ಲ. 3. ಯಶಸ್ವಿ ಬಿಡ್ಡುದಾರರರು ಹರಾಜು ಪ್ರಕ್ರಿಯೆ ಮುಗಿದ ನಂತರ ಶೇ25 ರಷ್ಟು (ಇಎಂಡಿ ಸೇರಿದಂತೆ) ಮೊತ್ತವನ್ನು ತಕ್ಷಣ ಪಾವತಿಸಬೇಕಾಗುತ್ತದೆ. ಉಳಿಕೆ ಶೇ 75 ರಷ್ಟು ಮೊತ್ತವನ್ನು 15 ದಿನಗಳ ಒಳಗಾಗಿ ಪಾವತಿಸಬೇಕು. ಪಾವತಿಯು ಅರ್ ಟಿ ಜಿ ಎಸ್ / ಎನ್ ಇ ಎಫ್ ಟಿ / ಹಣ ವರ್ಗಾವಣೆಯ ಮೂಲಕ ಖಾತೆ ಸಂಖ್ಯೆ GL Code – 2001 2004–01 **ಖಾತೆ ಹೆಸರು: ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ. ಐ ಎಫ್ ಎಸ್ ಸಿ ಸಂಖ್ಯೆ:** HDFC0CJCBKL ಬ್ಯಾಂಕ್ ಹೆಸರು: ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ. ಶಾಖೆ: ಮಲ್ಲೇಶ್ವರಂ. ಬೆಂಗಳೂರಿನಲ್ಲಿ ನಗದಿಕರಿಸುವ ರೀತಿಯಿರಬೇಕು. 4. ಯಶಸ್ವಿ ಬಿಡ್ಡುದಾರರರು ಹರಾಜು ಪ್ರಕ್ರಿಯೆ ಮುಗಿದ ನಂತರ ಉಳಿಕೆ ಶೇ 75 ರಷ್ಟು ಮೊತ್ತವನ್ನು 15 ದಿನಗಳ ಒಳಗಾಗಿ ಪಾವತಿಸಬೇಕು. ಯಾವುದೇ ಹಂತದಲ್ಲಿ ಪಾವತಿ ಮೊತ್ತ ವಿಳಂಬ/ ವಿಫಲವಾದರೆ, ಮಾರಾಟ ಪ್ರಕ್ರಿಯೆಯನ್ನು ರದ್ದುಗೊಳಿಸಲಾಗಿದೆಯೆಂದು ಪರಿಗಣಿಸಲಾಗುತ್ತದೆ ಮತ್ತು ಈಗಾಗಲೇ ಪಾವತಿಸಿರುವ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. 5. ಹರಾಜಿನ ಸ್ವತ್ತು "ಎಲ್ಲಿ ಇದೆಯೋ ಹಾಗೆ" ಮತ್ತು "ಏನಿದೆಯೋ ಹಾಗೆ" ಮತ್ತು "ಯಾವುದೇ ರಿಕೋರ್ಸ್" ಆಧಾರದ ಮೇಲೆ ಹರಾಜು ಪ್ರಕ್ರಿಯೆ ನೆಡೆಯುತ್ತದೆ. ಅಸಕ್ತ ಬಿಡ್ಡುದಾರರರು ಸ್ವತ್ತಿಗೆ ಸಂಬಂದಿಸಿದಂತೆ ಶೀರ್ಷಿಕೆ, ಮಾಲೀಕತ್ವ, ಶಾಸನಬದ್ಧ ಅನುಮೋದನೆಗಳು, ಕ್ಲೈಮು, ಇತ್ಯಾದಿಗಳ ಬಗ್ಗೆ ಖುದ್ದು ವಿಚಾರಿಸಿ ಹರಾಜು ಪ್ರಕ್ರಿಯೆಯಲ್ಲಿ ಬಾಗವಹಿಸಬಹುದಾಗಿದೆ. ನೋಂದಣಿ ಶುಲ್ಕಗಳು, ಸ್ಟ್ಯಾಂಪ್ ಡ್ಯೂಟಿ, ಸೆಸ್, ಮಾರಾಟ ತೆರಿಗೆ, ಮತ್ತು ಯಾವುದೇ ಇತರೆ ಶಾಸನಬದ್ಧ ಬಾಕಿಗಳನ್ನು ಅಥವಾ ಪುರಸಭೆ ತೆರಿಗೆ, ವಿದ್ಯುತ್ ಶುಲ್ಕಗಳು, ಭೂ ಬಳಕೆ ಪರಿವರ್ತನೆ ಶುಲ್ಕಗಳು, ಸೊಸೈಟಿ ಶುಲ್ಕಗಳು, ನಿರ್ವಹಣೆ ಶುಲ್ಕಗಳು, ಅಕ್ರಮ / ಸಕ್ರಮ ಮತ್ತು ಇತರೆ ಪ್ರಾಸಂಗಿಕ ವೆಚ್ಚಗಳನ್ನು ಯಶಸ್ವಿ ಬಿಡ್ಡುದಾರರೇ ಭರಿಸಬೇಕಾಗುತ್ತದೆ. 6.ಅಸಕ್ತ ಬಿಡ್ಡುದಾರರ ಪರವಾಗಿ ಏಜೆಂಟರು, ಯಾವುದೇ ಪವರ್ ಅಫ್ ಅರ್ಟಾನಿ ಹೊಂದಿರುವವರನ್ನು ಹರಾಜು ಪ್ರಕ್ರಿಯೆಯಲ್ಲಿ ಬಾಗವಹಿಸಲು ಅನುಮತಿಸುವುದಿಲ್ಲ. 7. ಸಾಲಗಾರರು/ ಜಾಮೀನುದಾರರರಿಗೆ ಈ ಪ್ರಕಟಣೆ ಮೂಲಕ ತಿಳಿಸುವುದೇನೆಂದರೆ ಹರಾಜು ಪ್ರಕ್ರಿಯೆ ದಿನಾಂಕದೊಳಗೆ ಬಾಕಿಯಿರುವ ಮೊತ್ತವನ್ನು ಮರುಪಾವತಿಸಲು ಕೊನೆಯ ಅವಕಾಶವಾಗಿದೆ. 8. ಯಾವುದೇ ಕಾರಣವನ್ನು ನೀಡದೇ ಹರಾಜನ್ನು ಅಂಗೀಕರಿಸುವ/ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ. 9. ಬ್ಯಾಂಕಿನ ಅಧಿಕೃತ ಅಧಿಕಾರಿಯವರಿಗೆ ಅಡಮಾನದ ಸ್ವತ್ತಿನ ಬಗ್ಗೆ ಮಾಹಿತಿಯಿರುತ್ತಾದೆಯಾದರೂ, ಅವರ ಗಮನಕ್ಕೆ ಬಾರದ ಯಾವುದೇ ತಪ್ಪು ಮಾಹಿತಿಗಳಿಗೆ ಬ್ಯಾಂಕಿನ ಅಧಿಕೃತ ಅಧಿಕಾರಿಗಳು ಜವಾಬ್ದಾರರಾಗುವುದಿಲ್ಲ.

ಸೂಚನೆ: 1. ಹೆಚ್ಚಿನ ವಿವರಗಳಿಗಾಗಿ ಉದ್ದೇಶಿತ ಬಿಡ್ಡುದಾರರು ದಿ.ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ. ಮಲೇಶ್ವರಂ, ಶ್ರೀಮತಿ ವಿನೋದಾ ಶಿವರಾಮಯ್ಯ ರವರನ್ನು ಮೋಬೈಲ್–9900856389 ಗೆ ಸಂಪರ್ಕಿಸಬಹುದು. ಸ್ವತ್ತಿನ ಪರಿಶೀಲನೆ ಮತ್ತು ಸ್ವತ್ತಿನ ವಿವರಗಳಿಗಾಗಿ ಮೆಸರ್ಸ್. ಪಿ.ಟಿ.ಸೆಕ್ಯೋರಿಟಿ ಸರ್ವಿಸಸ್ ಬೆಂಗಳೂರು. ಶ್ರೀ.ಎಂ.ಜಿ.ಪ್ರಕಾಶ್‌ರಾವ್, ಮೋಬೈಲ್–8197533644 ಇವರನ್ನು ಸಂಪರ್ಕಿಸಬಹುದು. 2. ಇ.ಎಂ.ಡಿಯೊಂದಿಗೆ ಮುಚ್ಚಿದ ಲಕೋಟೆಯನ್ನು ನಮ್ಮ ಪ್ರಧಾನ ಕಛೇರಿ ಮುಖ್ಯ ವ್ಯವಾಸ್ಥಾಪಕ ಅಧಿಕಾರಿಯಾದ ಶ್ರೀಮತಿ ವಿನೋದಾ ಶಿವರಾಮಯ್ಯ ರವರಿಗೆ ಖುದ್ದಾಗಿ ಹಸ್ತಾಂತರಿಸಬಹುದು. 3. ಸಾಲಗಾರರು ಬಾಕಿಯಿರುವ ಸಾಲದ ಮೊತ್ತವನ್ನು ಹರಾಜಿಗಿಂತ ಮುಂಚೆ ಪಾವತಿಸಿದಲ್ಲಿ, ಬಹಿರಂಗ ಹರಾಜನ್ನು ಮಟುಕುಗೊಳಿಸುವ/ರದ್ದುಗೊಳಿಸುವ ಅಧಿಕಾರ ಬ್ಯಾಂಕಿನ ಪರತ್ತುಗಳಿಗೆ ಅನುಗುಣವಾಗಿ ಬ್ಯಾಂಕಿನ ಅಧಿಕೃತ ಅಧಿಕಾರಿಯೂ ಕಾಯ್ದಿರಿಸಿಕೊಂಡಿದ್ದಾರೆ.

ಸ್ಥಳ : ಬೆಂಗಳೂರು
ದಿನಾಂಕ : 22.07.2022

ಸಹಿ/– ಅಧಿಕೃತ ಅಧಿಕಾರಿ
ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ

ಫುಟ್‌ಬಾಲ್: ಕಾಲಿಗೆ ಗಾಯ ಕ್ರೀಡಾಪಟುವಿಗೆ ಶಸ್ತ್ರಚಿಕಿತ್ಸೆ

ಬೆಂಗಳೂರು: ಫುಟ್‌ಬಾಲ್ ಪಂದ್ಯವೊಂದರ ವೇಳೆ ಕಾಲಿಗೆ ಗಾಯ ಮಾಡಿಕೊಂಡಿದ್ದ ಕ್ರೀಡಾಪಟು ಅಜಯ್ ಎಂಬುವವರಿಗೆ ಜಯನಗರದ ಯುನೈಟೆಡ್ ಆಸ್ಪತ್ರೆಯ ವೈದ್ಯರು ಕೀ ಹೋಲ್ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ.

‘ಅಜಯ್ ಅವರ ಕಾಲಿನ ಮೃದು ಎಲುಬಿಗೆ ಹಾನಿಯಾಗಿತ್ತು. ಆದ್ದರಿಂದ ‘ಆಟೋಲೋಗಸ್ ಕಾರ್ಟಿಲೆಜ್ ಕಸಿ’ ಮಾಡಲಾಗಿದೆ. ಈ ಕಸಿಯಿಂದಾಗಿ ಅವರು ದೀರ್ಘ ಕಾಲದ ವಿಶ್ರಾಂತಿ ತೆಗೆದುಕೊಳ್ಳುವುದು ತಪ್ಪಿದೆ. ಆದಷ್ಟು ಬೇಗ ಅವರನ್ನು ಮೈದಾನದಲ್ಲಿ ನೋಡಲು ಸಾಧ್ಯ’ ಎಂದು ಆಸ್ಪತ್ರೆಯ ವೈದ್ಯರು ಭರವಸೆ ನೀಡಿದ್ದಾರೆ.

‘ಕೀ ಹೋಲ್ ಶಸ್ತ್ರಚಿಕಿತ್ಸೆಯ ಮೂಲಕ ರೋಗಿಗೆ ಒಂದೇ ಹಂತದ ಶಸ್ತ್ರಚಿಕಿತ್ಸೆ ಮಾಡಲಾಯಿತು. ನೂತನ ತಂತ್ರಜ್ಞಾನದ ನೆರವಿನ ಮೂಲಕ ರೋಗಿಯ ಕೀಲಿನಿಂದ ಸಂಗ್ರಹಿಸಿದ ಮೃದು ಎಲುಬಿನ ಕೋಶಗಳನ್ನು, ನೋವಿರುವ ಜಾಗಕ್ಕೆ ಹಾಕಲಾಯಿತು. ಅಜಯ್ ಅವರು ಶೀಘ್ರ ಗುಣಮುಖವಾಗುವುದರ ಜತೆಗೆ ವ್ಯಾಯಾಮ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬಹುದಾಗಿದೆ’ ಎಂದು ಸುದ್ದಿಗೋಷ್ಠಿಯಲ್ಲಿ ಮೂಳೆರೋಗ ತಜ್ಞ ಡಾ. ಪ್ರದ್ಯುಮ್ನ ಆರ್. ತಿಳಿಸಿದರು.

ಆಸ್ಪತ್ರೆಯ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಶಾಂತಕುಮಾರ್ ಮುರುಡಾ, ‘ಕೋವಿಡ್ ಕಾಣಿಸಿಕೊಂಡ ಬಳಿಕ ಕ್ರೀಡಾ ಚಟುವಟಿಕೆಗೆ ಮರಳಿದವರಲ್ಲಿ ಹೆಚ್ಚಿನವರು ಗಾಯದ ಸಮಸ್ಯೆಗೆ ಒಳಗಾಗುತ್ತಿದ್ದಾರೆ. ಈ ಗಾಯಗಳಿಗೆ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಪಡೆಯದಿದ್ದಲ್ಲಿ ಮತ್ತೆ ಕ್ರೀಡಾಂಗಣಕ್ಕೆ ಇಳಿಯುವುದು ಕಷ್ಟವಾಗುತ್ತದೆ. ನಿಖರ ಚಿಕಿತ್ಸೆ ನೀಡಲು ಆಸ್ಪತ್ರೆಯಲ್ಲಿ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲಾಗಿದೆ’ ಎಂದರು.

ವರದಿ ಸಲ್ಲಿಸಲು ಬಿಬಿಎಂಪಿಗೆ ಹೈಕೋರ್ಟ್ ನಿರ್ದೇಶನ

ಮರುಕಳಿಸಿದ ಫ್ಲೆಕ್ಸ್ ಹಾವಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಫ್ಲೆಕ್ಸ್, ಹೋರ್ಡಿಂಗ್, ಬ್ಯಾನರ್ ಮುಂತಾದ ಪ್ರಚಾರ ಫಲಕಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸುವುದಕ್ಕೆ ನಿಷೇಧ ವಿಧಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ವರದಿ ಸಲ್ಲಿಸಿ’ ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಹೈಕೋರ್ಟ್ ನಿರ್ದೇಶಿಸಿದೆ.

ಸಾಮಾಜಿಕ ಕಾರ್ಯಕರ್ತ ಸಾಯಿದತ್ತ, ಮಾಯಿಗೇಗೌಡ ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು (ಪಿಐಎಲ್) ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

‘ಫ್ಲೆಕ್ಸ್ ಹಾವಳಿ ಮರುಕಳಿಸಿದೆ ಎಂಬ ಅರ್ಜಿದಾರರ ಆರೋಪಕ್ಕೆ ಬಿಬಿಎಂಪಿ ಸರಿಯಾದ ಮಾಹಿತಿ ನೀಡುತ್ತಿಲ್ಲ. ಸಾರ್ವಜನಿಕ ಹಿತದೃಷ್ಟಿಯಿಂದ ಕೋರ್ಟ್ ಈ ಬಗ್ಗೆ ವಿಶೇಷ ಗಮನಹರಿಸಲಿದೆ. ಹಾಗಾಗಿ, ಈ ಪ್ರಕರಣದಲ್ಲಿ ಹಿರಿಯ ವಕೀಲ ವಿಕ್ರಂ ಹುಯಿಲಗೋಳ ಅವರನ್ನು ಅಮಿಕಸ್ ಕ್ಯೂರಿ (ಕೋರ್ಟ್‌ಗೆ ಸಹಕರಿಸುವ ವಕೀಲ) ಆಗಿ ನೇಮಕ ಮಾಡಲಾಗುವುದು’ ಎಂದು ನ್ಯಾಯಪೀಠ ಆದೇಶಿಸಿತು.

ಅರ್ಜಿದಾರರ ಆಕ್ಷೇಪಣೆಗೆ ಸಂಬಂಧಿಸಿದಂತೆ ಸಮಗ್ರ ವರದಿ ಸಲ್ಲಿಸಲು ಬಿಬಿಎಂಪಿಗೆ ಎಂದು ಸೂಚಿಸಿ ವಿಚಾರಣೆಯನ್ನು ಎರಡು ವಾರಗಳ ಕಾಲ ಮುಂದೂಡಿದೆ.

ಸಿ.ಟಿ. ರವಿ ಹುಟ್ಟುಹಬ್ಬದ ಫ್ಲೆಕ್ಸ್: ಎಫ್‌ಐಆರ್ ದಾಖಲು

ಬೆಂಗಳೂರು: ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿ ವಿಧಾನಸೌಧದ ಎದುರು ಫ್ಲೆಕ್ಸ್ ಅಳವಡಿಸಿದ್ದ ಇಬ್ಬರ ವಿರುದ್ಧ ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಫ್ಲೆಕ್ಸ್ ಬಗ್ಗೆ ಗೀತಾ ಮಿಶ್ರಾ ಎಂಬುವರು ದೂರು ನೀಡಿದ್ದಾರೆ. ಆರೋಪಿಗಳಾದ ಜಿ. ಕಿಶನ್ ಗೌಡ್ರು ಹಾಗೂ ಎಲ್. ನರೇಂದ್ರ ಎಂಬುವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಇಬ್ಬರಿಗೂ ನೋಟಿಸ್ ನೀಡಿ, ವಿಚಾರಣೆ ನಡೆಸಲಾಗುವುದು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಹೈಕೋರ್ಟ್ ಎದುರಿಗಿರುವ ವಿಧಾನಸೌಧ ಮುಂಭಾಗದ ರಸ್ತೆಯಲ್ಲಿ ಜುಲೈ 18ರಂದು ಫ್ಲೆಕ್ಸ್ ಅಳವಡಿಸಲಾಗಿತ್ತು. ಈ ಮೂಲಕ ಹೈಕೋರ್ಟ್ ಆದೇಶ ಹಾಗೂ ರಾಜ್ಯ ಸರ್ಕಾರದ ನಿಯಮಗಳನ್ನು ಉಲ್ಲಂಘನೆ ಆಗಿರುವುದಾಗಿ ದೂರುದಾರರು ಆರೋಪಿಸಿದ್ದಾರೆ. ಫ್ಲೆಕ್ಸ್ ಫೋಟೊ ಹಾಗೂ ವಿಡಿಯೊ ಸಹ ನೀಡಿದ್ದು, ಪರಿಶೀಲನೆ ನಡೆಸಲಾಗುತ್ತಿದೆ’ ಎಂದೂ ತಿಳಿಸಿವೆ.

ಕೋವಿಡ್: 8,848 ಸಕ್ರಿಯ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಶನಿವಾರ 1,456 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 8,848ಕ್ಕೆ ಏರಿಕೆಯಾಗಿದೆ.

ಒಂದು ದಿನದ ಅವಧಿಯಲ್ಲಿ 31,183 ಪರೀಕ್ಷೆಗಳನ್ನು ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 4.66ಕ್ಕೆ ತಲುಪಿದೆ. ಯಾದಗಿರಿ ಹೊರತುಪಡಿಸಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 1,154 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಮೈಸೂರಿನಲ್ಲಿ 37, ಬೆಳಗಾವಿಯಲ್ಲಿ 30, ಧಾರವಾಡದಲ್ಲಿ 29 ಹಾಗೂ ಬಳ್ಳಾರಿಯಲ್ಲಿ 22 ಪ್ರಕರಣಗಳು ದೃಢಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ 20ಕ್ಕಿಂತ ಕಡಿಮೆ ಇದೆ.

ಕೋವಿಡ್ ಪೀಡಿತರಲ್ಲಿ 1,096 ಮಂದಿ ಹೊಸದಾಗಿ ಚೇತರಿಸಿಕೊಂಡಿದ್ದಾರೆ. ಬೆಂಗಳೂರಿನಲ್ಲಿ ಸಕ್ರಿಯ ಪ್ರಕರಣಗಳು ಹೆಚ್ಚಳವಾಗಿದ್ದು, 7,530 ಸೋಂಕಿತರಿದ್ದಾರೆ. ರಾಜ್ಯದಲ್ಲಿ ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 39.94 ಲಕ್ಷಕ್ಕೆ ಏರಿಕೆಯಾಗಿದೆ. ಸೋಂಕಿತರಲ್ಲಿ 39.45 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ.

ಕಂದಾಯ ದಾಖಲೆ ಅಯೋಮಯ: ಅರ್ಜಿದಾರನಿಗೆ ₹ 1 ಲಕ್ಷ ದಂಡ

ನೋಡಲ್ ಅಧಿಕಾರಿ ನೇಮಕಕ್ಕೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೋಗಸ್ ದಾಖಲೆ ಸೃಷ್ಟಿಸುವ ಮೂಲಕ ಕ್ರಯಪತ್ರದ ಸ್ವತ್ತಿನ ವಿವರದಲ್ಲಿ ನಕಲಿ ಖಾತೆ ಸಂಖ್ಯೆಗಳನ್ನು ಕಾಣಿಸಿ ಮೋಸದಿಂದ ಬೆಲೆ ಬಾಳುವ ಇಪ್ಪತ್ತು ಗುಂಟೆ ಸರ್ಕಾರಿ ಜಮೀನಿನ ಮೇಲೆ ಹಕ್ಕು ಸಾಧಿಸಲು ವ್ಯಾಜ್ಯ ನಡೆಸಿದ್ದೀರಿ’ ಎಂದು ತೀರ್ಮಾನಿಸಿದ ಹೈಕೋರ್ಟ್, ಅರ್ಜಿದಾರೊಬ್ಬರಿಗೆ ₹ 1 ಲಕ್ಷ ದಂಡ ವಿಧಿಸಿದೆ.

ಪ್ರಕರಣವೊಂದರಲ್ಲಿ, ಕಟ್ಟಡ ತೆರವುಗೊಳಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನೀಡಿದ್ದ ನೋಟಿಸ್ ಪ್ರಶ್ನಿಸಿ ಯಳ್ಳಿಕುಂಟೆ ಗ್ರಾಮದ ಮೆಸರ್ಸ್ ಇನ್ಫ್ರಾ ಎಸ್ಟೇಟ್ಸ್ ಪಾಲುದಾರಿಕಾ ಸಂಸ್ಥೆ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

ಸಂಸ್ಥೆಯ ಪಾಲುದಾರರೂ ಆದ ಅರ್ಜಿದಾರ ವಿ.ಸಿ.ಭಾಗ್ಯರಾಜು, ‘ದಂಡದ ಮೊತ್ತವನ್ನು ಈ ತೀರ್ಪು ಹೊರಬಿದ್ದ ದಿನದಿಂದ ಎರಡು ವಾರಗಳ ಒಳಗಾಗಿ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಪಾವತಿ ಮಾಡಬೇಕು’ ಎಂದು ಆದೇಶಿಸಿದೆ.

‘ಸ್ಥಿರಾಸ್ತಿಗೆ ಸಂಬಂಧಿಸಿದಂತೆ ಸ್ವತ್ತಿನ ವಿವರಗಳಿಗೆ ತಡಕಾಡುವಾಗ ಕಂದಾಯ ಇಲಾಖೆಯ ಮುಂದೆ ಅನೇಕ ಸವಾಲುಗಳಿವೆ’ ಎಂದು ಆತಂಕ ವ್ಯಕ್ತಪಡಿಸಿರುವ ನ್ಯಾಯಪೀಠ, ಇದೇ ವೇಳೆ ರಾಜ್ಯ ಸರ್ಕಾರವು ಕಂದಾಯ ಇಲಾಖೆಯ ವ್ಯವಸ್ಥೆ ಸುಧಾರಣೆಗೆ ಮುಂದಾಬೇಕು ಎಂದು ಕೆಲವು ಮಹತ್ವದ ನಿರ್ದೇಶನಗಳನ್ನೂ ನೀಡಿದೆ.

‘ಕಂದಾಯ ದಾಖಲೆಗಳಲ್ಲಿ ಸಮಸ್ಯೆಗಳ ಪರಿಹಾರಕ್ಕಾಗಿ; ಕಂದಾಯ, ನಗರಾಭಿವೃದ್ಧಿ ಇಲಾಖೆ ಹಾಗೂ ಪ್ರಾಧಿಕಾರಗಳು, ನಗರ ಯೋಜನಾ ಪ್ರಾಧಿಕಾರಗಳು, ನಗರಸಭೆ ಮತ್ತು ಪಾಲಿಕೆಯ ಆಡಳಿತಾಂಗಗಳು ಇ-ಆಡಳಿತದ ಜೊತೆ ಸಮನ್ವಯ ಸಾಧಿಸಬೇಕು. ಈ ದಿಸೆಯಲ್ಲಿ ಐಎಎಸ್ ದರ್ಜೆಯ ನೋಡಲ್ ಅಧಿಕಾರಿಯೊಬ್ಬರನ್ನು ನೇಮಕ ಮಾಡಬೇಕು’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

‘ನಮೂದಿತ ಕಂದಾಯ ದಾಖಲೆಗಳ ಉಲ್ಲೇಖ ಅಥವಾ ಪ್ರತಿ ವ್ಯಾಖ್ಯಾನಗಳಲ್ಲಿರುವ ಸರ್ವೆ ನಂಬರ್, ಸರ್ವೆ ನಂಬರ್‌ಗಳಿಗೆ ನೀಡಿರುವ ಉಪಸಂಖ್ಯೆ, ಖಾನೇಷುಮಾರಿ (ಊರೂರುಗಳಲ್ಲಿ ಜನ, ಮನೆ, ದನಕರುಗಳನ್ನು ಕ್ರಮವಾಗಿ ಎಣಿಕೆ ಮಾಡುವುದು ಮತ್ತು ಗಣತಿ ಮಾಡಿ ಲೆಕ್ಕಕ್ಕೆ ತೆಗೆದುಕೊಳ್ಳುವುದು) ಸಂಖ್ಯೆ, ನಿವಾಸಗಳ ಪಟ್ಟಿ ಮಾಡಿದ ಸಂಖ್ಯೆ, ಅನುಕ್ರಮ ಸಂಖ್ಯೆ ಅಥವಾ ಗ್ರಾಮ ಪಂಚಾಯಿತಿಗಳಲ್ಲಿ ನೀಡಲಾಗಿರುವ ಖಾತೆ ಸಂಖ್ಯೆ, ಖಾತಾ ಸಂಖ್ಯೆ, ಇ-ಖಾತಾ ಸಂಖ್ಯೆ, ನಗರಸಭೆ ವತಿಯಿಂದ ನೀಡಿದ ಸಂಖ್ಯೆ, ನಗರ ಯೋಜನಾ ಖಾತಾ ಸಂಖ್ಯೆ, ನಗರಸಭೆ ಖಾತಾ ಸಂಖ್ಯೆ, ಸಿಟಿಎಸ್ ನಂಬರ್, ಚಾಲ್ತಿ ನಂಬರ್, ಬಿಡಿಎ ಅಥವಾ ನಗರಾಭಿವೃದ್ಧಿ ಪ್ರಾಧಿಕಾರ ನೀಡಿದ ನಿವೇಶನ ಸಂಖ್ಯೆ, ಕೆಐಎಡಿಬಿ ಪ್ಲಾಟ್ ನಂಬರ್ ಗಳನ್ನು ಕೂಡಲೇ ನವೀಕರಣ ಪ್ರಕ್ರಿಯೆಗೆ ಒಳಪಡಿಸಬೇಕು’ ಎಂದು ನಿರ್ದೇಶಿಸಿದೆ.

ಮುಖ್ಯಾಂಶಗಳು

- ಕಂದಾಯ ದಾಖಲೆಗಳ ಸರಳೀಕರಣ, ಅನುಕ್ರಮ ಜೋಡಣೆಗೆ ತಾಕೀತು
- ವಿವಿಧ ಇಲಾಖೆಗಳ ನಡುವೆ ಸಮನ್ವಯ ಸಾಧಿಸಲು ಹುಕುಂ
- ವಿಸ್ತೃತ ಯೋಜನಾ ವರದಿ ಸಲ್ಲಿಸಲು ಮುಖ್ಯ ಕಾರ್ಯದರ್ಶಿಗೆ ನಿರ್ದೇಶನ

ಪ್ರಕರಣವೇನು?

ನಗರದ ಪ್ರತಿಷ್ಠಿತ ಎಚ್‌ಎಸ್‌ಆರ್ ಬಡಾವಣೆಗೆ ಹೊಂದಿಕೊಂಡ ಯಳ್ಳಿಕುಂಟೆ ಗ್ರಾಮ ವ್ಯಾಪ್ತಿಯಲ್ಲಿನ 20,460 ಚದರಡಿ ಜಮೀನನ್ನು ಅರ್ಜಿದಾರರು ಜಂಟಿ ಅಭಿವೃದ್ಧಿ ಒಪ್ಪಂದ ಹಾಗೂ ಕ್ರಯಪತ್ರದ ಅಡಿಯಲ್ಲಿ ಖಾಸಗಿ ವ್ಯಕ್ತಿಗಳಿಂದ ಖರೀದಿ ನೋಂದಣಿ ಮಾಡಿಸಿಕೊಂಡಿದ್ದರು. ತದ ನಂತರದಲ್ಲಿ ಅರ್ಜಿದಾರರು ಭೂ ಅಭಿವೃದ್ಧಿಗೆ ಮುಂದಾದ ಸಂದರ್ಭದಲ್ಲಿ ಬಿಡಿಎ ತೆರವು ನೋಟಿಸ್ ನೀಡಿತ್ತು.

ಈ ಜಮೀನು ಈಗಾಗಲೇ ಭೂ ಸ್ವಾಧೀನಕ್ಕೆ ಒಳಪಟ್ಟಿದೆ. ಕ್ರಯಪತ್ರ ಕಾನೂನುಬಾಹಿರ ಎಂದು ಆಕ್ಷೇಪಿಸಿತ್ತು. ಆದರೆ, ಇದನ್ನು ಅಲ್ಲಗಳೆದಿದ್ದ ಅರ್ಜಿದಾರರು, ‘ಗ್ರಾಮ ಠಾಣಾ ಖಾತಾ ಸಂದರ್ಭದಲ್ಲಿ ಸರ್ವೆ ನಂಬರ್ ದಾಖಲಾತಿಗಳು ಲಭ್ಯ ಇರುವುದಿಲ್ಲ. ಆದ್ದರಿಂದ, ಖಾಸಗಿ ವ್ಯಕ್ತಿಗಳಿಂದ ಪಡೆದ ಖರೀದಿ ಪತ್ರದಲ್ಲಿ ಸರ್ವೆ ನಂಬರ್ ರಹಿತವಾಗಿ ಗ್ರಾಮಠಾಣಾ ಖಾತಾ ನಂಬರ್ ನಮೂದಿಸಲಾಗಿದೆ' ಎಂದು ವಾದ ಮಂಡಿಸಿದ್ದರು. ಅರ್ಜಿದಾರರ ಪರ ಎಚ್. ಪವನಚಂದ್ರ ಶೆಟ್ಟಿ ವಕಾಲತ್ತು ವಹಿಸಿದ್ದರು.

ಸುದ್ದಿ 2 ನಿಮಿಷ

ಬೆಂಗಳೂರು– ಮಂಗಳೂರು ನಡುವೆ ವಿಶೇಷ ರೈಲು 26ರಿಂದ

ಮಂಗಳೂರು: ಬೆಂಗಳೂರು–ಮಂಗಳೂರು ನಡುವೆ ಇದೇ 26ರಿಂದ ಆ. 30ರವರೆಗೆ ವಾರದಲ್ಲಿ ಮೂರು ದಿನ ವಿಶೇಷ ರೈಲು ಸಂಚಾರ ನಡೆಸಲಿದೆ.

ಬೆಂಗಳೂರು ನಗರ ರೈಲು ನಿಲ್ದಾಣ ಹಾಗೂ ಮಂಗಳೂರು ಸೆಂಟ್ರಲ್ ನಿಲ್ದಾಣಗಳ ನಡುವೆ ಮೈಸೂರು ಮಾರ್ಗದಲ್ಲಿ ಈ ರೈಲು ಸಂಚರಿಸಲಿದೆ. ಬೆಂಗಳೂರಿನಿಂದ ರಾತ್ರಿ 8.30ಕ್ಕೆ ಹೊರಡುವ ರೈಲು ಮೈಸೂರು ಜಂಕ್ಷನ್‌ನ್ನು ರಾತ್ರಿ 11ಕ್ಕೆ ಹಾಗೂ ಮರುದಿನ ಬೆಳಿಗ್ಗೆ 9.05ಕ್ಕೆ ಮಂಗಳೂರು ಸೆಂಟ್ರಲ್ ನಿಲ್ದಾಣವನ್ನು ತಲುಪಲಿದೆ. ಮಂಗಳೂರು ಸೆಂಟ್ರಲ್ ನಿಲ್ದಾಣದಿಂದ ಸಂಜೆ 6.35ಕ್ಕೆ ಹೊರಡುವ ರೈಲು ಬೆಳಿಗಿನ ಜಾವ 3 ಗಂಟೆಗೆ ಹಾಗೂ ಮರುದಿನ ಬೆಳಿಗ್ಗೆ 6.15ಕ್ಕೆ ಬೆಂಗಳೂರನ್ನು ತಲುಪಲಿದೆ.

ಬೆಂಗಳೂರಿನಿಂದ ಪ್ರತಿ ಭಾನುವಾರ, ಮಂಗಳವಾರ ಹಾಗೂ ಗುರುವಾರ 06547 ಸಂಖ್ಯೆಯ ರೈಲು ಮಂಗಳೂರಿಗೆ ಹಾಗೂ ಮಂಗಳೂರಿನಿಂದ ಪ್ರತಿ ಸೋಮವಾರ, ಬುಧವಾರ ಮತ್ತು ಶುಕ್ರವಾರ 06548 ಸಂಖ್ಯೆಯ ರೈಲು ಬೆಂಗಳೂರಿಗೆ ಪ್ರಯಾಣ ಬೆಳೆಸಲಿದೆ ಎಂದು ರೈಲ್ವೆ ಇಲಾಖೆಯ ಮೂಲಗಳು ತಿಳಿಸಿವೆ.

ಶಿರಾಡಿ ಘಾಟಿಯಲ್ಲಿ ವಾಹನ ಸ್ಥಗಿತಗೊಂಡಿರುವುದರಿಂದ ಇತರ ಘಾಟಿಗಳ ಮೂಲಕ ರಸ್ತೆಗಳ ಮೇಲೆ ವಾಹನಗಳ ದಟ್ಟಣೆ ಹೆಚ್ಚಾಗಿದೆ. ಇದರಿಂದ ಪ್ರಯಾಣಿಕರಿಗೆ ಅನನುಕೂಲ ಉಂಟಾಗುವುದನ್ನು ತಪ್ಪಿಸಲು ವಿಶೇಷ ರೈಲು ಸೇವೆ ಆರಂಭಿಸುವಂತೆ ದಕ್ಷಿಣ ಕನ್ನಡ ಜಿಲ್ಲೆಯ ಸಂಸದ ನಳಿನ್ ಕುಮಾರ್ ಅವರು ಇತ್ತೀಚೆಗೆ ಕೇಂದ್ರ ರೈಲ್ವೆ ಸಚಿವ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಮನವಿ ಸಲ್ಲಿಸಿದ್ದರು. ಪಶ್ಚಿಮ ಕರಾವಳಿ ರೈಲು ಯಾತ್ರಾ ಅಭಿವೃದ್ಧಿ ಸಮಿತಿಯೂ ಈ ಬಗ್ಗೆ ಮನವಿ ಸಲ್ಲಿಸಿತ್ತು.

ಮಹದೇವಪುರ: ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ

ಕೆ.ಆರ್.ಪುರ: ನಿತ್ಯ ಬಳಕೆಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ಮಹದೇವಪುರ ಕ್ಷೇತ್ರದ ಬೆಳತ್ತೂರಿನಲ್ಲಿ ಪ್ರತಿಭಟನೆ ನಡೆಯಿತು.

ಹೂಡಿ ಬ್ಲಾಕ್ ಅಧ್ಯಕ್ಷ ಅನಿಲ್ ಮಾತನಾಡಿ, ‘ಮೊಸರಿನ ಮೇಲೆ ತೆರಿಗೆ ವಿಧಿಸಿರುವುದು ಸೇರಿದಂತೆ ಹಲವು ಬೆಲೆಗಳ ಏರಿಕೆ ಸಾರ್ವಜನಿಕರ ಹೊರೆ ಬೀಳುತ್ತಿದೆ. ಸರ್ಕಾರ ಇಡಿಯನ್ನು ದುರುಪಯೋಗ ಪಡೆಸಿಕೊಳ್ಳುತ್ತಿದೆ. ಸೋನಿಯಾ ಗಾಂಧಿ ಅವರಿಗೆ ಪ್ರಧಾನಿ ಆಗುವ ಅವಕಾಶವಿದ್ದರೂ ಆರ್ಥಿಕ ತಜ್ಞ ಮನಮೋಹನ್ ಸಿಂಗ್ ಅವರನ್ನು ಪ್ರಧಾನಿಯನ್ನಾಗಿ ಮಾಡಿದ ಹೆಮ್ಮೆ ಇದೆ. ಇದು ಬಿಜೆಪಿಯವರಿಗೆ ಅರಿವಿರಲಿ’ ಎಂದು ಹೇಳಿದರು.

ಪಟ್ಟಂದೂರು ಅಗ್ರಹಾರ ಮುಖಂಡ ಮಾಯಾಂಕ್ ಬಾಬು, ಬ್ಲಾಕ್ ಅಧ್ಯಕ್ಷ ಅನಿಲ್‌ಕುಮಾರ್, ಕಾಂಗ್ರೆಸ್ ಮುಖಂಡರಾದ ಪಿಳ್ಳಪ್ಪ, ಪಟ್ಟಂದೂರು ಅಗ್ರಹಾರ ಮಾಯಂಕ್‌ಬಾಬು, ರಮೇಶ್, ಗೋಪಾಲ್, ದಿನೇಶ್, ದೊಮ್ಮಸಂದ್ರ ಮಧು, ಹೂಡಿ ಬಾಬು, ಶ್ರೀನಿವಾಸ್‌ರೆಡ್ಡಿ, ಲೋಕೇಶ್‌ರೆಡ್ಡಿ, ರಾಖಿ, ಶಿಲ್ಪ, ಮಹಾಂಕ್‌ಬಾಬು, ಪಿಳ್ಳಪ್ಪ, ಲಾಲು, ಕೊಡಿಗೇಹಳ್ಳಿ ವಿವೇಕ್, ಮಹೇಂದ್ರ ಪ್ರಸಾದ್ ಇದ್ದರು.

ಬೆಂಗಳೂರು ರೇಸ್

ದಿಯಾನ್ ಗೆಲ್ಲುವ ನಿರೀಕ್ಷೆ

ಬೆಂಗಳೂರು ಸೇಂಟ್ ಲೆಜೆರ್ ಭಾನುವಾರ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ದಿಯಾನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಬೆಲ್ಲೊನ 2, ಆಕ್ಟಿವೇಟೆಡ್ 9, ಗ್ಯಾಲಿಕ್ 5
2ನೇ ರೇಸ್: ಎಲೆಕ್ಟ್ರಿಕ್ ಬ್ಲೂ 2, ಟೊರೊನೆರೊ 8, ಅನ್ನಾಲ್ಡೊ 9,
3ನೇ ರೇಸ್: ಮಲ್ಟಿಸ್ಟಾರರ್ 3, ಫಾರೆವರ್ ಟುಗೆದರ್ 1, ಕ್ಯಾರಕಸ್ 2
4ನೇ ರೇಸ್: ಡೊಮಿನಾ 1, ಡಾನ್ಸ್ ಡೆನ್ 9, ದಿ ಅಡ್ವೈಸರ್ 5
5ನೇ ರೇಸ್: ದಿಯಾನ್ 3, ಮೈ ಒಪಿನಿಯನ್ 1
6ನೇ ರೇಸ್: ಡ್ರಾಗನ್ಸ್ ಗೋಲ್ಡ್ 2, ವಾರ್ ಈಗಲ್ 6, ಅಕಸ್ಟರ್ 4
7ನೇ ರೇಸ್: ತೆನಾಲಿ 3, ಡಿವೈನ್ ಬ್ಲೆಸ್ಸಿಂಗ್ಸ್ 1, ಕ್ಲಾಸಿಕ್ ಚಾರ್ಮ್ 2
8ನೇ ರೇಸ್: ಥಂಡರ್ ಸ್ಟ್ರೈಕ್ 7, ಎಕೊ ಫ್ರೆಂಡ್ಲಿ 3, ಅನದರ್ ರೈನ್‌ಬೋ 2

ಉತ್ತಮ ಬೆಟ್: ಎಲೆಕ್ಟ್ರಿಕ್ ಬ್ಲೂ

ಜಾಕ್‌ಪಾಟ್	1ನೇ ಟ್ರಬಲ್	2ನೇ ಟ್ರಬಲ್
4,5,6,7,8	3,4,5	6,7,8

ಆಡಿಕೃತ್ತಿಕಾ ಮಹೋತ್ಸವ

ಹನುಮಂತನಗರದಲ್ಲಿರುವ ಕುಮಾರಸ್ವಾಮಿ ದೇವಸ್ಥಾನದಲ್ಲಿ ಶನಿವಾರ ನಡೆದ ‘ಆಡಿಕೃತ್ತಿಕಾ ಮಹೋತ್ಸವ’ದ ಅಂಗವಾಗಿ ಭಕ್ತರು ಕಾವಡಿ ಹೊತ್ತು ತೆರಳಿದರು –ಪ್ರಜಾವಾಣಿ ಚಿತ್ರ/ ರಂಜು ಪಿ

ಸಿಬಿಎಸ್‌ಇ ಪರೀಕ್ಷೆ: ವಿವಿಧ ಶಾಲೆಗಳ ಉತ್ತಮ ಸಾಧನೆ

ಹರ್ಷ ಶಾಲೆಗೆ ಶೇ 100 ಫಲಿತಾಂಶ

ವೈ.ಜೀವಿತಾ

ಎನ್‌.ಭೂಮಿಕಾ

ಪಿಹು ಓಜಾ

ಎಸ್‌.ಭಾವನಾ

ಸಂಜಯ್‌.ಎ.ಡಿಸಲೆ

ನೆಲಮಂಗಲ: ಸಿಬಿಎಸ್‌ಇ ಪಠ್ಯಕ್ರಮದ 10ನೇ ತರಗತಿ ಫಲಿತಾಂಶದಲ್ಲಿ ಹರ್ಷ ಇಂಟರ್‌ನ್ಯಾಷನಲ್ ಪಬ್ಲಿಕ್ ಶಾಲೆಗೆ ಶೇ 100 ಫಲಿತಾಂಶ ಬಂದಿದೆ ಎಂದು ಅಧ್ಯಕ್ಷ ಎಸ್.ಶಿವಕುಮಾರ್ ತಿಳಿಸಿದ್ದಾರೆ.

ವೈ.ಜೀವಿತಾ (ಶೇ 96.67), ಪಿಹು ಓಝಾ (ಶೇ 96.67), ಎನ್. ಭೂಮಿಕಾ (ಶೇ 96), ಎಸ್. ಭಾವನಾ (ಶೇ 94), ಸಂಜಯ್ ಎ. ಡಿಸಲೆ (ಶೇ 91.67), ಆರ್.ಜೀವನ್ (ಶೇ 89), ಎಂ.ಎಚ್.ಮೊಹಮ್ಮದ್ ಜುನೈದ್ (ಶೇ 88.17), ಕನವ್ ದುವಾ (ಶೇ 87.6), ಆರ್.ನಯನ (ಶೇ 87.50), ಬಿಂದುಶ್ರೀ (ಶೇ 86.33), ಜಿ.ಕೆ. ಲೀನಾ (ಶೇ 85.67), ಅರವಿಂದ್ ಎ. ಕುಲಕರ್ಣಿ (ಶೇ 84.67), ಬಿ.ಚಿರಗ್ನ (ಶೇ 84.17), ಎಸ್.ತಸ್ಮಿಯಾ (ಶೇ 83.33), ಅಲೀಫಾ ಆಲಿಯ (ಶೇ 83), ಕೆ.ಎಸ್.ಕಾರ್ತಿಕಾ ಉಮೇಶ್ (ಶೇ 82.50), ಬಿ.ಆರ್.ವಿಕಾಸ್ (ಶೇ 81.83), ಆರ್.ಡಿ.ಶುಭಾಶ್ರೀ (ಶೇ 81.15), ಬಿ.ಎ.ನಿಶಾನ್ (ಶೇ 79.50), ಸಂದ್ರ ಸುಸನ್ ಸಜು (ಶೇ 79.17), ಜೆ.ಪಿ.ಕೀರ್ತನಾ (ಶೇ 79.67), ಡಿ.ದಿಶಾ (ಶೇ 78.17), ಆರ್.ತೇಜಸ್ವಿನಿ (ಶೇ 77.33), ಬಿ.ಆರ್.ಪವನ್‌ಗೌಡ (ಶೇ 76.67), ಎಸ್.ಹೇಮಶ್ರೀ (ಶೇ 76.67), ಎಸ್.ಎನ್.ಹರ್ಷ (ಶೇ 76.50), ಚಿದ್ರಾಲ ಲಕ್ಷ್ಮೀಸಾಯಿ (ಶೇ 76.33), ಅನನ್ಯ ದಿನಕರ್ ಶೆಟ್ಟಿ (ಶೇ75.60) ಉತ್ತಮ ಅಂಕ ಗಳಿಸಿದ್ದಾರೆ ಎಂದು ತಿಳಿಸಿದ್ದಾರೆ.

ಸಿದ್ಧಗಂಗಾ ಪ್ರೌಢಶಾಲೆಯ ಸಾಧನೆ

ಬೆಂಗಳೂರು: ಚಂದ್ರಾಲೇಔಟ್ ಸಿದ್ಧಗಂಗಾ ಪ್ರೌಢಶಾಲೆಯ ಸಿಬಿಎಸ್‌ಇ ಪಠ್ಯಕ್ರಮದ ವಿದ್ಯಾರ್ಥಿಗಳು 10ನೇ ತರಗತಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.

ಎನ್.ಆರ್.ಪ್ರೇರಣಾ ಶೇ 97.3, ಸಿ.ಅನನ್ಯಾ ಶೇ 97, ಎಸ್.ಪ್ರಿಯಾಂಕಾ ಶೇ 96.16, ಎಂ.ಚಂದನಾ ಶೇ 96, ವೈ.ಎನ್.ತನುಷಾ ಶಿವ್‌ಮೈಯ್ ಶೇ 95.83, ಎಸ್.ಡಿ.ಚಂದನಾ ಶೇ 95, ಬಿ.ಆರ್.ಪಲ್ಲವಿ ಶೇ 95ರಷ್ಟು ಅಂಕ ಪಡೆದಿದ್ದಾರೆ.

ಪ್ರೇರಣಾ ಸಿ.ಅನನ್ಯಾ ಎಸ್‌.ಪ್ರಿಯಾಂಕಾ ಎಂ.ಚಂದನಾ

ತನುಷಾ ಎಸ್‌ಡಿ. ಚಂದನಾ ಪಲ್ಲವಿ

ಚೈತನ್ಯ ಶಾಲೆಗೆ ಉತ್ತಮ ಫಲಿತಾಂಶ

ಬೆಂಗಳೂರು: ನಗರದ ಚೈತನ್ಯ ಶಾಲೆಯು 10ನೇ ತರಗತಿ ಸಿಬಿಎಸ್‌ಇ ಪರೀಕ್ಷಾ ಫಲಿತಾಂಶದಲ್ಲಿ ಉತ್ತಮ ಸಾಧನೆ ಮಾಡಿದೆ.

ಸಂಸ್ಥೆಯ 18 ವಿದ್ಯಾರ್ಥಿಗಳು 495ಕ್ಕೂ ಹೆಚ್ಚು ಅಂಕ, 101 ವಿದ್ಯಾರ್ಥಿಗಳು 490ಕ್ಕೂ ಹೆಚ್ಚು ಅಂಕ, 465 ವಿದ್ಯಾರ್ಥಿಗಳು 480ಕ್ಕೂ ಹೆಚ್ಚು ಅಂಕ, 1,005 ವಿದ್ಯಾರ್ಥಿಗಳು 470ಕ್ಕೂ ಹೆಚ್ಚು ಅಂಕ, 1,513 ವಿದ್ಯಾರ್ಥಿಗಳು 460ಕ್ಕೂ ಹೆಚ್ಚು ಅಂಕ ಪಡೆದಿದ್ದಾರೆ.

ಗಣಿತ ವಿಷಯದಲ್ಲಿ 165 ವಿದ್ಯಾರ್ಥಿಗಳು, ವಿಜ್ಞಾನ ವಿಷಯದಲ್ಲಿ 120, ಸಮಾಜ ವಿಜ್ಞಾನದಲ್ಲಿ 118, ಇಂಗ್ಲಿಷ್‌ನಲ್ಲಿ 20 ವಿದ್ಯಾರ್ಥಿಗಳು ಹಾಗೂ ದ್ವಿತೀಯ ಭಾಷೆಯಲ್ಲಿ 171 ವಿದ್ಯಾರ್ಥಿಗಳು 100ಕ್ಕೆ 100 ಅಂಕ ಪಡೆದಿದ್ದಾರೆ.

ಚೈತನ್ಯ ಶಾಲೆಯ ಎಲ್ಲ ಸಿಬಿಎಸ್‌ಇ ಶಾಖೆಗಳು ಶೇ 100 ಫಲಿತಾಂಶ ಪಡೆದಿವೆ ಎಂದು ಶಿಕ್ಷಣ ಸಂಸ್ಥೆಯ ನಿರ್ದೇಶಕಿ ಸೀಮಾ ತಿಳಿಸಿದ್ದಾರೆ.

ಸಂಸ್ಥೆಯ ಐಐಟಿ, ಜೆಇಇ, ನೀಟ್, ರಾಷ್ಟ ಹಾಗೂ ಅಂತರರಾಷ್ಟ್ರೀಯ ಮಟ್ಟದ ಒಲಂಪಿಯಾಡ್ ಪರೀಕ್ಷೆ, ಸಿಬಿಎಸ್‌ಇ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಗಳಿಸುವ ಮೂಲಕ ಮಾದರಿಯಾಗಿದೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

ಆರ್ಕಿಡ್ ಶಾಲೆಯ ಪ್ರಾರ್ಥಿತಗೆ ಶೇ 98.60 ಅಂಕ

ಬೆಂಗಳೂರು: ಬಿಟಿಎಂ ಲೇಔಟ್‌ನ ಆರ್ಕಿಡ್ ಇಂಟರ್‌ನ್ಯಾಷನಲ್ ಶಾಲೆಯ ವಿದ್ಯಾರ್ಥಿನಿ ಪ್ರಾರ್ಥಿತ ದಾಸ್‌ಶರ್ಮಾ 10ನೇ ತರಗತಿಯ ಸಿಬಿಎಸ್‌ಇ ಪರೀಕ್ಷೆಯಲ್ಲಿ ಶೇ 98.60ರಷ್ಟು ಅಂಕ ಗಳಿಸಿದ್ದಾಳೆ. ಬೆಂಗಳೂರಿನ ಆರ್ಕಿಡ್ ಶಾಲೆಗಳ ಪೈಕಿ ಪ್ರಾರ್ಥಿತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿ. ಬಿಟಿಎಂ ಲೇಔಟ್‌ನ ಅನುಷ್ಕಾ ಕೆ. ಕಿಶೋರ್‌ಗೆ ಶೇ 97.8 ಹಾಗೂ ಸರ್ಜಾಪುರ ಶಾಲೆಯ ಸೋಹಾಮ್ ಸೇನ್ ಶೇ 97.6ರಷ್ಟು ಅಂಕ ಪಡೆದಿದ್ದಾಳೆ.

ಸಿದ್ದರಾಮಯ್ಯಗೆ ಸೋಲಿನ ವಿದಾಯ: ಇಂಚರ ಗೋವಿಂದರಾಜು

ಪ್ರಜಾವಾಣಿ ವಾರ್ತೆ

ಕೋಲಾರ: ‘ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕೋಲಾರ ಕ್ಷೇತ್ರದಲ್ಲಿ ಸ್ಪರ್ಧಿಸಿದರೆ ಸಿದ್ದರಾಮಯ್ಯ ಅವರನ್ನು ಸೋಲಿಸಿ, ವಿದಾಯ ಹೇಳಿ ಕಳುಹಿಸುತ್ತೇವೆ’ ಎಂದು ವಿಧಾನ ಪರಿಷತ್ ಸದಸ್ಯ ಜೆಡಿಎಸ್‌ನ ಇಂಚರ ಗೋವಿಂದರಾಜು ಅವರು ಹೇಳಿದರು.

‘75ನೇ ಜನ್ಮದಿನದ ನೆಪದಲ್ಲಿ ದಾವಣಗೆರೆಯಲ್ಲಿ ಆಯೋಜಿರುವುದು ಸಿದ್ದರಾಮಯ್ಯ ಅವರ ರಾಜಕೀಯ ಜೀವನಕ್ಕೆ ವಿದಾಯ ಹೇಳುವ ಸಮಾರಂಭ ಎಂಬುದಾಗಿ ಈಗ ಚರ್ಚೆ ನಡೆಯುತ್ತಿದೆ. ಕೋಲಾರಕ್ಕೆ ಬಂದರೆ ಅವರನ್ನು ಇಲ್ಲಿನ ಜನ ಸೋಲಿಸಿ ಬೀಳ್ಕೊಡುಗೆ ನೀಡಿ ಕಳುಹಿಸುತ್ತಾರೆ’ ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ವರ್ತೂರು ಪ್ರಕಾಶ್ ಅವರಿಗೆ ತಿರುಗೇಟು ನೀಡಿ, ‘ಈಗಾಗಲೇ 3 ಬಾರಿ ಬಿಜೆಪಿಗೆ ಹೋಗಿ ಬಂದಿದ್ದಾರೆ. ಸದ್ಯ ಕೋಲಾರ ಕ್ಷೇತ್ರದಲ್ಲಿ ಬಿಜೆಪಿಗೆ ಯಾರೂ ಇರಲಿಲ್ಲ. ರೊಟ್ಟಿ ಹಳಸಿತ್ತು, ನಾಯಿ ಹಸಿದಿತ್ತು ಎಂಬಂತೆ ಆ ಪಕ್ಷಕ್ಕೆ ಒಬ್ಬರು ಬೇಕಾಗಿತ್ತು’ ಎಂದು ವ್ಯಂಗ್ಯವಾಡಿದರು.

ಹಾರಂಗಿ ಉದ್ಯಾನಕ್ಕೆ ನುಗ್ಗಿದ ಕಾಡಾನೆ

ಕುಶಾಲನಗರ: ತಾಲ್ಲೂಕಿನ ಹಾರಂಗಿ ಜಲಾಶಯದ ಬಳಿ ಇರುವ ಉದ್ಯಾನಕ್ಕೆ ಶನಿವಾರ ಸಂಜೆ 7 ಗಂಟೆ ಸುಮಾರಿಗೆ ಕಾಡಾನೆಯೊಂದು ದಿಢೀರ್ ನುಗ್ಗಿದ್ದರಿಂದ ಸಂಗೀತ ಕಾರಂಜಿ ವೀಕ್ಷಿಸುತ್ತಿದ್ದ ಪ್ರವಾಸಿಗರು ದಿಕ್ಕಾಪಾಲಾಗಿ ಓಡಿದರು.

ಹಾರಂಗಿ ಅಣೆಕಟ್ಟೆಗೆ ಹೊಂದಿಕೊಂಡಂತೆ ಇರುವ ಅತ್ತೂರು ಮೀಸಲು ಅರಣ್ಯ ಪ್ರದೇಶದಿಂದ ಬಂದ ಕಾಡಾನೆ ಉದ್ಯಾನದೊಳಗೆ ಅಡ್ಡಾಡಿದೆ. ಸಂಜೆ ಸಂಗೀತ ಕಾರಂಜಿ ವೀಕ್ಷಿಸಲು ಬಂದಿದ್ದ ಪ್ರವಾಸಿಗರು ಆನೆಯನ್ನು ಕಂಡು ಆತಂಕಗೊಂಡು ಓಡಿದರು. ಜಲಾಶಯದ ಭದ್ರತಾ ಪಡೆ ಸಿಬ್ಬಂದಿ ಎಲ್ಲಾ ಪ್ರವಾಸಿಗರನ್ನು ಸುರಕ್ಷಿತವಾಗಿ ಹೊರಗೆ ಕಳುಹಿಸಿದರು.

ಶಾಲಾ ಆಡಳಿತ ಕಚೇರಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ಹೇಳಿಕೆ

‘ಬಂಟರ ಒಗ್ಗಟ್ಟು, ಸಂಘಟನಾ ಶಕ್ತಿ ಸಮಾಜಕ್ಕೆ ಮಾದರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಂಟ ಸಮಾಜದಲ್ಲಿರುವ ಒಗ್ಗಟ್ಟು, ಸಂಘಟನಾ ಶಕ್ತಿ, ದಾನ, ಸಮಾಜ ಸೇವೆ, ಪರೋಪಕಾರ ಮನೋಭಾವ ಇಡೀ ಸಮಾಜಕ್ಕೆ ಮಾದರಿ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ತಾವರೆಕೆರೆ ಹೋಬಳಿಯ ಯಲಚಗುಪ್ಪೆಯಲ್ಲಿ ಬೆಂಗಳೂರು ಬಂಟರ ಸಂಘದ ‘ಬಿಎಸ್ ಆರ್‌ಎನ್‌ಎಸ್ ವಿದ್ಯಾನಿಕೇತನ -2’ ಇದರ ನೂತನ ಶಾಲೆಯ ಆಡಳಿತ ಕಚೇರಿಯನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

‘ಬಂಟ ಸಮುದಾಯದವರು ದೇಶ-ವಿದೇಶಗಳಲ್ಲಿ ನೆಲೆಸಿದ್ದರೂ, ತಾಯ್ನಾಡಿನ ಮೇಲಿನ ಪ್ರೀತಿಯನ್ನು ಮರೆಯುವುದಿಲ್ಲ. ತಾವು ನೆಲೆಸಿರುವ ಊರು ಅಭಿವೃದ್ಧಿಗೊಳಿಸಿ, ಅಲ್ಲಿ ಸಾಮಾಜಿಕ ಕಳಕಳಿಯ ಕೆಲಸಗಳನ್ನು ಮಾಡುತ್ತಿರುವುದು ಶ್ಲಾಘನೀಯ. ತಮ್ಮ ಕಾಯಕವನ್ನು ನಿಷ್ಠೆಯಿಂದ ಪ್ರಾಮಾಣಿಕತೆಯಿಂದ ಮಾಡುವ ಜೊತೆಗೆ, ನೆಲೆಸಿರುವ ಸಮಾಜದಲ್ಲಿ ಸಾಮರಸ್ಯ ಹಾಗೂ ವಿಶ್ವಾಸದೊಂದಿಗೆ ಬದುಕುತ್ತಾರೆ’ ಎಂದು ಬಣ್ಣಿಸಿದರು. ‘ಬಂಟರ ಸಂಘದ ಜೊತೆಗೆ ನನಗೆ ನಿಕಟವಾದ ಸಂಪರ್ಕವಿದೆ. ಆರ್‌ಎನ್‌ಎಸ್ ವಿದ್ಯಾನಿಕೇತನ 2 ಶಾಲಾ ಕಟ್ಟಡವನ್ನು ಅದ್ಭುತವಾಗಿ ನಿರ್ಮಿಸಲಾಗಿದೆ. ಇಲ್ಲಿಯ ಪರಿಸರ, ವಿನ್ಯಾಸ, ಸೌಕರ್ಯಗಳು ಗುಣಮಟ್ಟದ ಶಿಕ್ಷಣ ನೀಡಲು ಪೂರಕವಾಗಿವೆ. ಈ ಪ್ರದೇಶದ ಸುತ್ತಮುತ್ತಲಿನ ಎಲ್ಲ ವರ್ಗದ ಮಕ್ಕಳಿಗೂ ಗುಣಮಟ್ಟದ ಶಿಕ್ಷಣದ ಅವಕಾಶವನ್ನು ಕಲ್ಪಿಸಿರುವುದು ಮೆಚ್ಚಬೇಕಾದ ಸಂಗತಿ’ ಎಂದು ಮುಖ್ಯಮಂತ್ರಿ ಹೇಳಿದರು.

ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ಕೆ. ಪ್ರಕಾಶ್ ಶೆಟ್ಟಿ, ಬೆಂಗಳೂರು ಬಂಟರ ಸಂಘದ ಅಧ್ಯಕ್ಷ ಆರ್. ಉಪೇಂದ್ರ ಶೆಟ್ಟಿ, ಕಾರ್ಯದರ್ಶಿ ಮಧುಕರ ಶೆಟ್ಟಿ, ಬಂಟರ ಸಂಘದ ಪದಾಧಿಕಾರಿಗಳು ಇದ್ದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ನೂತನ ಶಾಲಾ ಕಟ್ಟಡವನ್ನು ಭಾನುವಾರ ಲೋಕಾರ್ಪಣೆ ಮಾಡಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಮಂತ್ರಾಲಯ ರಾಘವೇಂದ್ರ ಸ್ವಾಮಿ ಮಠದ ಶ್ರೀ ಸುಬುಧೇಂದ್ರ ತೀರ್ಥರು ಆಶೀರ್ವಚನ ನೀಡಲಿದ್ದಾರೆ. ಸಹಕಾರ ಸಚಿವ ಎಸ್.ಟಿ. ಸೋಮಶೇಖರ್, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಭಾಗವಹಿಸಲಿದ್ದಾರೆ.

‘ಬಿಎಸ್ ಆರ್‌ಎನ್‌ಎಸ್ ವಿದ್ಯಾನಿಕೇತನ 2’ ಇದರ ನೂತನ ಶಾಲೆಯ ಆಡಳಿತ ಕಚೇರಿ ಉದ್ಘಾಟನೆಯ ಸಂದರ್ಭದಲ್ಲಿ ಗಣೇಶನ ಮೂರ್ತಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪುಷ್ಪ ಸಮರ್ಪಿಸಿದರು. ಶಾಲೆಯ ಆಡಳಿತ ಮಂಡಳಿ ಅಧ್ಯಕ್ಷ ಕೆ. ಪ್ರಕಾಶ್ ಶೆಟ್ಟಿ ಇದ್ದರು.

‘ಕಾಡುಗೊಲ್ಲರ ಮೀಸಲಾತಿಗೆ ವಿರೋಧವಿಲ್ಲ’

ಕೃಷ್ಣಯಾದವಾನಂದ ಸ್ವಾಮೀಜಿ

ಚಿತ್ರದುರ್ಗ: ‘ಯಾದವ ಸಮುದಾಯದ ಕಟ್ಟಕಡೆಯ ವ್ಯಕ್ತಿಯ ಅಭಿವೃದ್ಧಿಗೆ ನಮ್ಮ ಪ್ರಯತ್ನವಿದ್ದು, ಕಾಡುಗೊಲ್ಲರ ಮೀಸಲಾತಿಗೆ ವಿರೋಧವಿಲ್ಲ’ ಎಂದು ಚಿತ್ರದುರ್ಗದ ಯಾದವ ಮಠದ ಮಠಾಧೀಶ ಕೃಷ್ಣಯಾದವಾನಂದ ಸ್ವಾಮೀಜಿ ಸ್ಪಷ್ಟಪಡಿಸಿದ್ದಾರೆ.

ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನಲ್ಲಿ ಗುರುವಾರ ಶ್ರೀಕೃಷ್ಣಯಾದವ ಗೊಲ್ಲರ ಸಂಘದ ತಾಲ್ಲೂಕು ಶಾಖೆಯಿಂದ ನಡೆದ ಸಾಧಕರಿಗೆ ಸೇವಾ ಪುರಸ್ಕಾರ ಮತ್ತು ಅಭಿನಂದನಾ ಕಾರ್ಯಕ್ರಮದಲ್ಲಿ ತಾವು ಆಡಿದ ಮಾತುಗಳನ್ನು ‘ಕಾಡುಗೊಲ್ಲರ ಒಳಮೀಸಲಾತಿಗೆ ಬೆಂಬಲ ಇಲ್ಲ’ ಎಂಬರ್ಥದಲ್ಲಿ ತಪ್ಪಾಗಿ ಅರ್ಥೈಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಸಮುದಾಯವು ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ ಹಾಗೂ ಧಾರ್ಮಿಕವಾಗಿ ಅಭಿವೃದ್ಧಿಯಾಗಲು ಕಂಕಣ ತೊಟ್ಟು ಮಠವು ಶ್ರಮಿಸುತ್ತಿದೆ. ಸಂವಿಧಾನದ ಆಶಯದಂತೆ ಸರ್ವರಿಗೂ ಸಮಬಾಳು, ಸಮಪಾಲು ಸೂತ್ರದಲ್ಲಿ ಇತರ ಸಮುದಾಯದೊಂದಿಗೆ ಸರಿಸಮನಾಗಿ ಗೊಲ್ಲ ಸಮುದಾಯವನ್ನು ಸದೃಢಗೊಳಿಸಲಾಗುತ್ತಿದೆ. ಸಮುದಾಯದ ಆಂತರಿಕ ವಿಚಾರವನ್ನು ಸಮಾಜದ ತಜ್ಞರು ಚರ್ಚಿಸಿ ಅಭಿವೃದ್ಧಿ ಪೂರಕವಾಗಿ ಸರ್ಕಾರದೊಂದಿಗೆ ವ್ಯವಹರಿಸಲಾಗುತ್ತಿದೆ ಎಂದು ಹೇಳಿದರು.

ಒಗ್ಗಟಿನಲ್ಲಿ ಬಲವಿದೆ ಎಂಬಂತೆ ಎಲ್ಲಾ ಒಳಪಂಗಡಗಳು ಒಂದಾಗಿ ಸಾಗಬೇಕು. ಗೊಲ್ಲ ಸಮುದಾಯದ ಬಲವಂತರು ಅಬಲ–ಅಶಕ್ತರನ್ನು ಕೈ ಹಿಡಿದು ಶಕ್ತಿ ತುಂಬುವ ಕೆಲಸ ಮಾಡಬೇಕು. ಮಠವು ಸಮಸ್ತ ಗೊಲ್ಲ ಸಮುದಾಯದ ಕ್ಷೇಮ, ಅಭಿವೃದ್ಧಿ ಬಗ್ಗೆ ಚಿಂತನೆ ನಡೆಸುತ್ತಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಕೃಷ್ಣಯಾದವಾನಂದ ಸ್ವಾಮೀಜಿಗೆ ಬಹಿಷ್ಕಾರ’

ಹೊಳಲ್ಕೆರೆ: ಕೃಷ್ಣಯಾದವಾನಂದ ಸ್ವಾಮೀಜಿಗೆ ರಾಜ್ಯದ ಕಾಡುಗೊಲ್ಲರ ಯಾವುದೇ ಸಭೆ, ಸಮಾರಂಭಗಳಿಗೆ ಬಾರದಂತೆ ಬಹಿಷ್ಕಾರ ಹಾಕಲಾಗುವುದು ಎಂದು ಮಾಜಿ ಶಾಸಕ ಹಾಗೂ ಕಾಡುಗೊಲ್ಲ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಎ.ವಿ. ಉಮಾಪತಿ ಹೇಳಿದರು.

‘ಕೃಷ್ಣಯಾದವಾನಂದ ಸ್ವಾಮೀಜಿ ಅವರು ಮಾಗಡಿಯಲ್ಲಿ ನಡೆದ ಸಮಾರಂಭದಲ್ಲಿ ಕಾಡುಗೊಲ್ಲರ ಒಳ ಮೀಸಲಾತಿಗೆ ತಮ್ಮ ಬೆಂಬಲ ಇಲ್ಲ ಎಂದು ಹೇಳಿಕೆ ನೀಡಿದ್ದಾರೆ. ಇವರ ಹೇಳಿಕೆಯಿಂದ ಇಡೀ ಕಾಡುಗೊಲ್ಲ ಸಮುದಾಯಕ್ಕೆ ಆಘಾತವಾಗಿದೆ. ರಾಜ್ಯದ ಎಲ್ಲಾ ಕಡೆ ಸಂದೇಶ ಕಳುಹಿಸಿ ಸ್ವಾಮೀಜಿ ಅವರನ್ನು ದೇವಾಲಯ ಪ್ರಾರಂಭೋತ್ಸವ, ಗೃಹಪ್ರವೇಶ, ಮದುವೆ ಮತ್ತಿತರ ಶುಭಕಾರ್ಯಗಳಿಗೆ ಆಹ್ವಾನಿಸದಂತೆ ಸೂಚನೆ ನೀಡಲಾಗುವುದು’ ಎಂದು ಇಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಅವರು ತಿಳಿಸಿದರು.

ಕೊಳೆಗೇರಿ, ಹೊರವಲಯದ ಯುವಕರ ಬಳಿಗೆ 'ಅಮಲು ಪದಾರ್ಥ' ಪೂರೈಕೆ

ಖಾಲಿ ಜಾಗವೇ ಗಾಂಜಾ ವ್ಯಸನಿಗಳ ಅಡ್ಡೆ

• ಆದಿತ್ಯ ಕೆ.ಎ.

ಗಾಂಜಾ ವ್ಯಸನಿಗಳ ಅಡ್ಡೆಯಾಗಿರುವ ಚಿನ್ನಪ್ಪ ಗಾರ್ಡನ್ ಬಳಿಯ ರಾಮಸ್ವಾಮಿ ಪಾಳ್ಯದ ಖಾಲಿ ಪ್ರದೇಶ

ಬೆಂಗಳೂರು: 'ಸಿಲಿಕಾನ್ ಸಿಟಿ'ಯಲ್ಲಿರುವ ಖಾಲಿ ನಿವೇಶನ, ಗಿಡಗಂಟಿ ಬೆಳೆದಿರುವ ಪ್ರದೇಶ ಹಾಗೂ ವಿವಿಧ ಮೈದಾನಗಳೇ ಗಾಂಜಾ ವ್ಯಸನಿಗಳ ಅಡ್ಡೆಯಾಗಿವೆ. ರಾಜಧಾನಿಯಲ್ಲಿ ಗಾಂಜಾ ವ್ಯಸನಿಗಳ ಸಂಖ್ಯೆಯಲ್ಲಿ ಏರಿಕೆ ಕಾಣಿಸುತ್ತಿರುವುದು ಆತಂಕ ಮೂಡಿಸಿದೆ. ಗಾಂಜಾ ಅಡ್ಡೆಗಳ ಸುತ್ತಮುತ್ತ ಪ್ರದೇಶದಲ್ಲಿ ಸಂಜೆ ಮಹಿಳೆಯರು, ಯುವತಿಯರು, ಮಕ್ಕಳು ಓಡಾಟ ನಡೆಸುವುದಕ್ಕೂ ಭಯಪಡುತ್ತಿದ್ದಾರೆ. ವಿವಿಧ ಬಡಾವಣೆಯ ಖಾಲಿ ಪ್ರದೇಶದಲ್ಲಿ ಸಂಜೆಯಲ್ಲಿ ಸೇರುವ ಯುವಕರಿಗೆ 'ಮಧ್ಯವರ್ತಿಗಳು' ಗಾಂಜಾ ಪೂರೈಸುತ್ತಿರುವುದು ಬೆಳಕಿಗೆ ಬಂದಿದೆ.

ಹೋಟೆಲ್‌ಗಳ ಮೇಲೆ ಪೊಲೀಸರು ದಾಳಿ ನಡೆಸಿ... ರೆ. 'ಇದನ್ನೇ ಉಪಾಯ ಮಾಡಿಕೊಂಡಿರುವ 'ಪೆಡ್ಲರ್'ಗಳು ಆಯಾ ಬಡಾವಣೆಗೆ ಗಾಂಜಾ ಸೇರಿದಂತೆ ಅಮಲು ಪದಾರ್ಥಗಳನ್ನು ಪೂರೈಸುವ 'ತಂತ್ರ' ರೂಪಿಸಿದ್ದಾರೆ. ಹೊರವಲಯ, ಖಾಲಿ ನಿವೇಶಗಳ ಆಸುಪಾಸಿನಲ್ಲಿ ವಾಸಿಸುವ ಜನರಿಗೆ ತಲೆನೋವು ತಂದಿದೆ.

ಪ್ರಜಾವಾಣಿ ವಿಶೇಷ

ಪ್ರತಿಷ್ಠಿತರ ಮಕ್ಕಳು ಹಾಗೂ ಚಿಕ್ಕಗಳ ಹೋಟೆಲ್‌ನಲ್ಲಿ ಗಾಂಜಾ ಸೇವಿಸಿ ಅಮಲೇರಿಸಿಕೊಂಡರೆ, ಬಡವರ ಮಕ್ಕಳಿಗೆ ತಮ್ಮ ಬಡಾವಣೆಗಳೇ ಅಡ್ಡೆಯಾಗಿವೆ' ಎಂದು ಚಿನ್ನಪ್ಪ ಗಾರ್ಡನ್ ನಿವಾಸಿ ವಿನೋದ್ ಆತಂಕ ವ್ಯಕ್ತಪಡಿಸಿದರು.

'ವಾರ್ಡ್ ಸಂಖ್ಯೆ 162ರ ರಾಮಸ್ವಾಮಿ ಪಾಳ್ಯದಲ್ಲಿ ಸಾಕಷ್ಟು ವಿವಾದಿತ ಸ್ಥಳಗಳಿವೆ. ಅಲ್ಲಿ ಗಿಡಗಂಟಿ ಬೆಳೆದಿದ್ದು, ಅದರ ಒಳಹೊಕ್ಕರೆ ಯಾರಿಗೂ ಕಾಣಿಸುವುದಿಲ್ಲ. ಒಂದು ಬದಿಯಲ್ಲಿ ವಿವಾದಿತ ಸ್ಥಳ. ಮತ್ತೊಂದು ಬದಿಯಲ್ಲಿ ಬಿಬಿಎಂಪಿಯ ತ್ಯಾಜ್ಯ ಸುರಿಯುವ ಜಾಗವಿದೆ. ಅಲ್ಲಿಗೆ ಗಾಂಜಾ ಪೂರೈಕೆ ಆಗುತ್ತಿದೆ. ನಿತ್ಯ ಸಂಜೆ ವ್ಯಸನಿಗಳು ಬಂದು ಗಾಂಜಾ ಸೇವಿಸಿ ಹೋಗುತ್ತಿದ್ದಾರೆ. ಈ ಪ್ರದೇಶದಲ್ಲಿ ಸಿಸಿಟಿವಿ ಕ್ಯಾಮೆರಾಗಳೂ ಇಲ್ಲ. ಯಾರು ಬರ್ತಾರೆ– ಹೋಗ್ತಾರೆ ಎಂಬುದೇ ತಿಳಿಯುವುದಿಲ್ಲ' ಎಂದು ಹೇಳಿದರು.

ಕೆಂಗೇರಿ, ಜಾಲಹಳ್ಳಿ, ಪೈಪ್‌ಲೈನ್, ಸುಮನಹಳ್ಳಿ, ಕೊಡಿಗೆಹಳ್ಳಿ ಭಾಗದಲ್ಲೂ ಇಂತಹ ಅಡ್ಡೆಗಳ ಚಟುವಟಿಕೆಗಳು ನಡೆಯುತ್ತಿವೆ ಎಂದು ಸ್ಥಳೀಯರು ದೂರಿದ್ದಾರೆ.

ಮೊಬೈಲ್, ಬೈಕ್ ಕಳವು: ಅಮಲು ಪದಾರ್ಥ ಸೇವಿಸಿದ ನಂತರ ಬೈಕ್, ಮೊಬೈಲ್ ಹಾಗೂ ಚಿನ್ನಾಭರಣ ಕಳವು ಕೃತ್ಯಕ್ಕೆ ಮುಂದಾಗುತ್ತಿದ್ದಾರೆ. ಅಮಲಿನಲ್ಲಿ ತೇಲುವ ವ್ಯಸನಿಗಳು, ನಡೆದು ತೆರಳುವ ಮಹಿಳೆಯರು, ಯುವತಿಯರ ಬಳಿಯಿದ್ದ ಮೊಬೈಲ್, ಸರ ಕಸಿದು ಪರಾರಿಯಾಗುತ್ತಿದ್ದಾರೆ. ಇತ್ತೀಚೆಗೆ ಬೈಕ್ ಕಳವು ಪ್ರಕರಣಗಳು ಹೆಚ್ಚುತ್ತಿರುವುದು ಇದಕ್ಕೆ ಸಾಕ್ಷಿಯಾಗಿದೆ.

ಹಲವು ವರ್ಷಗಳಿಂದ ವಿವಾದಿತ ಸ್ಥಳಗಳು ಹಾಗೆಯೇ ಉಳಿದಿವೆ. ಬಿಬಿಎಂಪಿಯವರು ಗಿಡಗಂಟಿ ತೆರವುಗೊಳಿಸಿ ವಿವಾದ ಇತ್ಯರ್ಥವಾದ ಮೇಲೆ ಮಾಲೀಕರಿಂದ ಹಣ ವಸೂಲಿ ಮಾಡಲಿ
ವಿನೋದ್, ಚಿನ್ನಪ್ಪ ಗಾರ್ಡನ್ ನಿವಾಸಿ

ಸಾರ್ವಜನಿಕರು ಮಾಹಿತಿ ನೀಡಿದರೆ ಅಂತಹ ಸ್ಥಳಕ್ಕೆ ನಮ್ಮ ಸಿಬ್ಬಂದಿಯನ್ನು ಗಸ್ತಿಗೆ ಹಾಕಲಾಗುವುದು. ಪೂರೈಕೆದಾರರು ಯಾರೇ ಇದ್ದರೂ ಕ್ರಮ ಕೈಗೊಳ್ಳಲಾಗುವುದು
ರಮಣ್ ಗುಪ್ತ, ಕಮಿಷನರ್, ಸಿಸಿಬಿ

ಸುಳಿವು ಸಿಗದಂತೆ ಉಪಾಯ

ಪೆಡ್ಲರ್‌ಗಳು ಪೊಲೀಸರ ಕಣ್ತಪ್ಪಿಸಿ ರಾಜಧಾನಿಗೆ ಗಾಂಜಾ ಪೂರೈಸುತ್ತಿದ್ದಾರೆ. ಇತ್ತೀಚೆಗೆ ನಗರದಲ್ಲಿ ಹೆಚ್ಚು ಗಾಂಜಾ ಪ್ರಕರಣಗಳು ಬೆಳಕಿಗೆ ಬರುತ್ತಿವೆ. ಪೆಡ್ಲರ್‌ಗಳು ಮೊಬೈಲ್, ಗುರುತಿನ ಚೀಟಿ ಯಾವುದನ್ನೂ ಬಳಸುತ್ತಿಲ್ಲ. ಇದರಿಂದ ಈ ಜಾಲಪತ್ತೆ ಹಚ್ಚುವುದು ಪೊಲೀಸರಿಗೆ ಸವಾಲಾಗಿದೆ. ಸಿಸಿಬಿ ಪೊಲೀಸರು ಆಲೂರು ಸೋಗಿನಲ್ಲಿ ಬಡಾವಣೆಗಳಿಗೆ ಗಾಂಜಾ ಪೂರೈಸುತ್ತಿದ್ದ ಜಾಲ ಪತ್ತೆ ಮಾಡಿ ₹4 ಕೋಟಿ ಮೊತ್ತದ ಹ್ಯಾಶ್ ಆಯಿಲ್ ವಶಕ್ಕೆ ಪಡೆದಿದ್ದರು. ಆರೋಪಿಗಳು ಆಂಧ್ರಪ್ರದೇಶದ ವಿಶಾಖಪಟ್ಟಣದ ಅರಕು ಹಾಗೂ ಸೀಂಧಿಪಲ್ಲಿ ಅರಣ್ಯದಲ್ಲಿ ಗಾಂಜಾ ಬೆಳೆದು ಹ್ಯಾಶ್ ಆಯಿಲ್ ತಯಾರಿಸಿ ಬೆಂಗಳೂರಿಗೆ ಪೂರೈಸುತ್ತಿರುವುದು ಪತ್ತೆಯಾಗಿತ್ತು. ಈ ಆರೋಪಿಗಳು ಯಾರೂ ಮೊಬೈಲ್ ಅನ್ನೇ ಬಳಸುತ್ತಿರಲಿಲ್ಲ.

ನಗರಕ್ಕೆ ಕರ್ನೂಲ್, ಅನಂತಪುರ, ತಮಿಳುನಾಡಿನ ಕೃಷ್ಣಗಿರಿಯಿಂದ ಹೆಚ್ಚಿನ ಪ್ರಮಾಣದಲ್ಲಿ ಗಾಂಜಾ ಪೂರೈಕೆ ಆಗುತ್ತಿದೆ. ರಾಜ್ಯದ ಒಳಗೇ ಕಾಫಿ ತೋಟ, ಶುಂಠಿ ಬೆಳೆಯ ಮಧ್ಯೆ ಬೆಳೆದ ಗಾಂಜಾವು ಸಿಲಿಕಾನ್ ಸಿಟಿ ಸೇರಿ ಅಮಲೇರಿಸುತ್ತಿದೆ ಎಂದು ಮೂಲಗಳು ತಿಳಿಸಿವೆ.

'ಶಾಲೆ ಬಳಿ ಗಾಂಜಾ: ದಾರಿ ತಪ್ಪುತ್ತಿರುವ ಮಕ್ಕಳು'

ಪೊಲೀಸ್ ಮಾಸಿಕ ಜನಸಂಪರ್ಕ ದಿನ • ಜನರ ದೂರು

ಪ್ರಜಾವಾಣಿ ವಾರ್ತೆ

ಬಸವೇಶ್ವರನಗರದಲ್ಲಿ ಶನಿವಾರ ಆಯೋಜಿಸಿದ್ದ 'ಮಾಸಿಕ ಜನಸಂಪರ್ಕ ದಿನ' ಕಾರ್ಯಕ್ರಮದಲ್ಲಿ ಜನರ ದೂರುಗಳನ್ನು ಕಮಿಷನರ್ ಪ್ರತಾಪ್ ರೆಡ್ಡಿ ಆಲಿಸಿದರು. ಡಿಸಿಪಿ ಲಕ್ಷ್ಮಣ ನಿಂಬರಗಿ ಇದ್ದರು.

ಬೆಂಗಳೂರು: 'ನಗರದ ಬಹುತೇಕ ಶಾಲೆ-ಕಾಲೇಜು ಬಳಿಯೇ ಗಾಂಜಾ ಮಾರಲಾಗುತ್ತಿದ್ದು, ಅಪ್ರಾಪ್ತ ವಯಸ್ಸಿನವರು ದಾರಿ ತಪ್ಪುತ್ತಿದ್ದಾರೆ. ಡ್ರಗ್ಸ್ ಮತ್ತಿನಲ್ಲಿ ಅಪರಾಧ ಕೃತ್ಯ ಎಸಗಿ, ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ' ಎಂದು ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದರು.

ಬೆಂಗಳೂರು ಪೊಲೀಸ್ ಕಮಿಷನರೇಟ್ ವತಿಯಿಂದ ಬಸವೇಶ್ವರನಗರದಲ್ಲಿ ಶನಿವಾರ ಆಯೋಜಿಸಿದ್ದ 'ಮಾಸಿಕ ಜನಸಂಪರ್ಕ ದಿನ' ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಾರ್ವಜನಿಕರು, 'ಗಾಂಜಾ ಮುಕ್ತ ನಗರ ಮಾಡಲು ಪೊಲೀಸರು ಮತ್ತಷ್ಟು ಬಿಗಿ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಕಮಿಷನರ್ ಪ್ರತಾಪ್ ರೆಡ್ಡಿ, 'ಡ್ರಗ್ಸ್ ವಿರುದ್ಧ ನಿರಂತರವಾಗಿ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಶಾಲೆ-ಕಾಲೇಜು ಬಳಿ ಹೆಚ್ಚು ನಿಗಾ ವಹಿಸಲಾಗುವುದು. ಡ್ರಗ್ಸ್ ನಿರ್ಮೂಲನೆಗಾಗಿ ಸಾರ್ವಜನಿಕರು ಸಹ ಪೊಲೀಸರ ಜೊತೆ ಕೈ ಜೋಡಿಸಬೇಕು' ಎಂದರು.

ಅಡಗಿ ಕುಳಿತು ಹಿಡಿಯುವ ಪೊಲೀಸರು: ಸಂಚಾರ ಪೊಲೀಸರ ಕಾರ್ಯವೈಖರಿ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ ಸಾರ್ವಜನಿಕರು, 'ದಾಖಲೆ ನೆಪದಲ್ಲಿ ವಾಹನ ತಡೆಯದಂತೆ ಡಿಜಿ–ಐಜಿಪಿ ಆದೇಶ ಹೊರಡಿಸಿದ್ದಾರೆ. ಅಷ್ಟಾದರೂ ಪೊಲೀಸರು ಪ್ರಮುಖ ವೃತ್ತ ಹಾಗೂ ರಸ್ತೆಯಲ್ಲಿ ಅಡಗಿ ಕುಳಿತು ವಾಹನ ಹಿಡಿಯುತ್ತಿದ್ದಾರೆ. ಆದೇಶಕ್ಕೂ ಕಿಮ್ಮತ್ತು ನೀಡುತ್ತಿಲ್ಲ' ಎಂದು ದೂರಿದರು.

'ವಿಜಯನಗರ, ಕಾಮಾಕ್ಷಿಪಾಳ್ಯ, ಬಸವೇಶ್ವರನಗರ, ಮಾಗಡಿ ರಸ್ತೆ ಹಾಗೂ ಸುತ್ತಮುತ್ತ ಠಾಣೆಗಳ ವ್ಯಾಪ್ತಿಯಲ್ಲಿ ಶಾಲೆ–ಕಾಲೇಜುಗಳು ಹೆಚ್ಚಾಗಿವೆ. ಬೆಳಿಗ್ಗೆ 6ರಿಂದ 9 ಗಂಟೆವರೆಗೆ ಪೋಷಕರು, ಮಕ್ಕಳನ್ನು ಶಾಲೆಗೆ ಬಿಡಲು ಹೋಗುತ್ತಾರೆ. ಇಂಥ ಸಂದರ್ಭದಲ್ಲೂ ಪೊಲೀಸರು ವಾಹನ ಅಡ್ಡಗಟ್ಟಿ ತೊಂದರೆ ನೀಡುತ್ತಿದ್ದಾರೆ' ಎಂದೂ ಆರೋಪಿಸಿದರು.

'ದಾಖಲೆ ನೆಪದಲ್ಲಿ ವಾಹನ ತಡೆಯದಂತೆ ಪೊಲೀಸರಿಗೆ ಈಗಾಗಲೇ ಖಡಕ್ ಸೂಚನೆ ನೀಡಲಾಗಿದೆ. ಯಾರಾದರೂ ತಡೆದರೆ, ನನಗೆ ದೂರು ನೀಡಿ. ಕಠಿಣ ಕ್ರಮ ಕೈಗೊಳ್ಳುತ್ತೇನೆ' ಎಂದು ಪ್ರತಾಪ್ ರೆಡ್ಡಿ ಭರವಸೆ ನೀಡಿದರು.

ದೂರು ಸ್ವೀಕಾರಕ್ಕೆ ಹಿಂದೇಟು: 'ಅನ್ಯಾಯದ ವಿರುದ್ಧ ದೂರು ನೀಡಲು ಹೋದರೆ ಪೊಲೀಸರು ಸ್ವೀಕರಿಸುವುದಿಲ್ಲ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ದೂರು ಆಲಿಸಲು ಠಾಣೆಗಳಲ್ಲಿ ಸಭೆಗಳು ನಡೆಯುತ್ತಿಲ್ಲ. ಈ ಬಗ್ಗೆ ಠಾಣೆ ಅಧಿಕಾರಿಗಳಿಗೆ ಸೂಚನೆ ನೀಡಿ' ಎಂದು ಸಾರ್ವಜನಿಕರು ಆಗ್ರಹಿಸಿದರು.

'ದೂರು ಸ್ವೀಕಾರ ಕಡ್ಡಾಯ. ಈ ಬಗ್ಗೆ ಪೊಲೀಸರಿಗೆ ಸೂಚನೆ ನೀಡಲಾಗುವುದು. ಎಸ್.ಸಿ, ಎಸ್.ಟಿ ಸಭೆ ಆಯೋಜನೆಗೂ ಕ್ರಮ ಕೈಗೊಳ್ಳಲಾಗುವುದು' ಎಂದು ಪ್ರತಾಪ್ ರೆಡ್ಡಿ ಪ್ರತಿಕ್ರಿಯಿಸಿದರು.

ಪಶ್ಚಿಮ ವಿಭಾಗದ ಡಿಸಿಪಿ ಲಕ್ಷ್ಮಣ ನಿಂಬರಗಿ, ಎಸಿಪಿಗಳು, ಇನ್‌ಸ್ಪೆಕ್ಟರ್‌ಗಳು ಸಭೆಯಲ್ಲಿದ್ದರು.

'ಸಿಗರೇಟ್ ಸೇದುವ ಮಹಿಳೆಯರಿಗೆ ದಂಡ ವಿಧಿಸಿ': 'ಬಸವೇಶ್ವರನಗರ ಹಾಗೂ ರಾಜಾಜಿನಗರದಲ್ಲಿ ಸುಸಂಸ್ಕೃತರಿದ್ದಾರೆ. ವಿದೇಶಿ ಸಂಸ್ಕೃತಿಗೆ ಮಾರುಹೋಗಿರುವ ಕೆಲ ಮಹಿಳೆಯರು, ರಸ್ತೆ ಹಾಗೂ ಹೋಟೆಲ್‌ಗಳ ಬಳಿ ಸಿಗರೇಟ್ ಸೇದುತ್ತಾ ನಿಲ್ಲುತ್ತಾರೆ. ಪುರುಷರ ರೀತಿಯಲ್ಲೇ ಇವರಿಗೂ ದಂಡ ವಿಧಿಸಬೇಕು' ಎಂದು ಸಾರ್ವಜನಿಕರೊಬ್ಬರು ಒತ್ತಾಯಿಸಿದರು.

ಆ್ಯಸಿಡ್ ದಾಳಿ: ಕಂಡಲ್ಲಿ ಗುಂಡಿಗೆ ಒತ್ತಾಯ

ಕಾಮಾಕ್ಷಿಪಾಳ್ಯದಲ್ಲಿ ಆ್ಯಸಿಡ್ ದಾಳಿಗೆ ಒಳಗಾಗಿ ಚಿಕಿತ್ಸೆ ಪಡೆಯುತ್ತಿರುವ ಸಂತ್ರಸ್ತೆಯ ತಂದೆ ರಾಜಣ್ಣ ಸಭೆಯಲ್ಲಿ ಪಾಲ್ಗೊಂಡಿದ್ದರು. 'ನನ್ನ ಮಗಳಿಗೆ ಆದ ನೋವು ಯಾರಿಗೂ ಆಗಬಾರದು. ಆ್ಯಸಿಡ್ ದಾಳಿ ಆರೋಪಿಗಳಿಗೆ ಕಂಡಲ್ಲಿ ಗುಂಡು ಹೊಡೆಯಲು ಸರ್ಕಾರ ಹೊಸ ಕಾನೂನು ಜಾರಿಗೊಳಿಸಬೇಕು' ಎಂದು ಒತ್ತಾಯಿಸಿದರು.

ಕಮಿಷನರ್ ಪ್ರತಾಪ್ ರೆಡ್ಡಿ, 'ಆ್ಯಸಿಡ್ ದಾಳಿ ಪ್ರಕರಣ ಗಂಭೀರವಾದದ್ದು. ಆರೋಪಿಗೆ ಕಠಿಣ ಶಿಕ್ಷೆ ಕೊಡಿಸಲು ನ್ಯಾಯಾಲಯದಲ್ಲಿ ಸಮರ್ಪಕ ಪ್ರಯತ್ನ ಮಾಡಲಾಗುವುದು' ಎಂದರು.

ನಿಷೇಧಿತ ಛಾಪಾ ಕಾಗದ ಮಾರಾಟ ಜಾಲ ಪತ್ತೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ನಿಷೇಧಿತ ಛಾಪಾ ಕಾಗದ ಮುದ್ರಿಸಿ, ಅದರ ಮೇಲೆ ನಕಲಿ ಸೀಲ್ ಹಾಕಿ ಮಾರುತ್ತಿದ್ದ ಜಾಲವನ್ನು ಸಿಸಿಬಿ ಪೊಲೀಸರು ಬಂಧಿಸಿದ್ದು, ಏಳು ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ.

'ಕೆಂಪೇಗೌಡ ರಸ್ತೆಯಲ್ಲಿರುವ ಕಂದಾಯ ಭವನ ಬಳಿಯ ಮಳಿಗೆಗಳಲ್ಲಿ ಗ್ರಾಹಕರ ಸೋಗಿನಲ್ಲಿ ಇತ್ತೀಚೆಗೆ ಕಾರ್ಯಾಚರಣೆ ನಡೆಸಲಾಯಿತು. ಶ್ರೀನಗರ ಎಸ್‌ಬಿಎಂ ಕಾಲೊನಿ ನಿವಾಸಿ ವಿಶ್ವನಾಥ್ (57), ಕಾರ್ತಿಕ್ (29), ವೆಂಕಟೇಶ್ (54) ಹಾಗೂ ಶಾಮರಾಜ್ (48) ಸೇರಿದಂತೆ ಏಳು ಮಂದಿಯನ್ನು ಬಂಧಿಸಲಾಗಿದೆ. ಪ್ರಕರಣದಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿದ್ದಾರೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಟೈಪಿಂಗ್ ಕೆಲಸ ಹಾಗೂ ಅರ್ಜಿ ನಮೂನೆಗಳ ಮಾರಾಟಕ್ಕೆಂದು ಮಳಿಗೆ ಪಡೆದಿದ್ದ ಆರೋಪಿಗಳು, ನಿಷೇಧಿತ ಛಾಪಾ ಕಾಗದಗಳನ್ನು ಅಕ್ರಮವಾಗಿ ಮುದ್ರಿಸಿ ಮಾರಾಟ ಮಾಡುತ್ತಿದ್ದರು. ಇವರ ಬಳಿ ಕಾಗದ ಖರೀದಿ ಮಾಡುತ್ತಿದ್ದ ಗ್ರಾಹಕರು, ಹಳೇ ಆಸ್ತಿಗಳ ದಾಖಲೆಗಳನ್ನು ಸೃಷ್ಟಿಸುತ್ತಿದ್ದರು' ಎಂದು ತಿಳಿಸಿವೆ.

'ಸರ್ಕಾರದ ಕಂದಾಯ ಇಲಾಖೆ ದಾಖಲೆಗಳನ್ನು ತಿದ್ದುಪಡಿ ಮಾಡಿಸಲು, ಸಾರ್ವಜನಿಕರ ಆಸ್ತಿ ಕಬಳಿಸಲು, ಸುಳ್ಳು ದಾವೆ ಹೂಡಲು ಹಳೇ ಛಾಪಾ ಕಾಗದಗಳು ಬಳಕೆಯಾಗುತ್ತಿದ್ದ ಮಾಹಿತಿ ಇದೆ. ಆರೋಪಿಗಳ ಬಳಿ ಕಾಗದ ಖರೀದಿ ಮಾಡಿರುವವರನ್ನು ಪತ್ತೆ ಮಾಡಲಾಗುತ್ತಿದೆ' ಎಂದೂ ಹೇಳಿವೆ.

ಉಪನಿರ್ದೇಶಕ ಕಚೇರಿ ಸೀಲ್: 'ಮೂರು ವರ್ಷಗಳಿಂದ ಆರೋಪಿಗಳು ಕೃತ್ಯ ಎಸಗುತ್ತಿದ್ದರು. ₹ 1.50 ಮೌಲ್ಯದ 5 ಛಾಪಾ ಕಾಗದ, ₹ 2.10 ಮೌಲ್ಯದ 5 ಹಾಗೂ ₹ 10 ಮೌಲ್ಯದ 10 ಛಾಪಾ ಕಾಗದಗಳನ್ನು ಆರೋಪಿಗಳಿಂದ ಜಪ್ತಿ ಮಾಡಲಾಗಿದೆ.'

'ಛಾಪಾ ಕಾಗದಗಳ ಮೇಲೆ, ವಿಧಾನಸೌಧದ ಖಜಾನೆ ಉಪನಿರ್ದೇಶಕರ ಕಚೇರಿ ಸೀಲ್ ಇದೆ. ಜೊತೆಗೆ, ಛಾಪಾ ಕಾಗದ ಮಾರಾಟಗಾರರ ಹೆಸರೂ ನಮೂದಿಸಲಾಗಿದೆ. ಅಶೋಕ ಚಕ್ರ ಹಾಗೂ ಭಾರತ ಸರ್ಕಾರ ಎಂಬ ಮುದ್ರೆಯೂ ಇದೆ' ಎಂದೂ ಸಿಸಿಬಿ ಮೂಲಗಳು ಹೇಳಿವೆ.

ಕಾರಿಗೆ ಗುದ್ದಿದ ಆಂಬುಲೆನ್ಸ್: ಒಬ್ಬ ಸಾವು

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಶುಕ್ರವಾರ ರಾತ್ರಿ ಅಪಘಾತ ಸಂಭವಿಸಿದ್ದು, ಖಾಸಗಿ ಕಂಪನಿ ಉದ್ಯೋಗಿ ಸಂಜೀವ್‌ಕುಮಾರ್ (32) ಎಂಬುವರು ಮೃತಪಟ್ಟಿದ್ದಾರೆ.

'ಜಾರ್ಖಂಡ್‌ನ ಸಂಜೀವ್‌ಕುಮಾರ್ ಉದ್ಯೋಗಕ್ಕಾಗಿ ನಗರಕ್ಕೆ ಬಂದಿದ್ದರು. ಜಾಲಹಳ್ಳಿ ಬಳಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ ನೆಲೆಸಿದ್ದರು' ಎಂದು ಪೊಲೀಸರು ಹೇಳಿದರು.

'ಸಂಜೀವ್ ಅವರು ಶುಕ್ರವಾರ ರಾತ್ರಿ 9 ಗಂಟೆ ಸುಮಾರಿಗೆ ದೇವನಹಳ್ಳಿಯಿಂದ ಬೆಂಗಳೂರಿನತ್ತ ಕಾರಿನಲ್ಲಿ ಬರುತ್ತಿದ್ದರು. ಇದೇ ಮಾರ್ಗದಲ್ಲೇ ಆಂಬುಲೆನ್ಸ್ ಚಿಕ್ಕಬಳ್ಳಾಪುರದಿಂದ ನಗರಕ್ಕೆ ಬರುತ್ತಿತ್ತು. ಚಾಲಕ ಅತೀ ವೇಗವಾಗಿ ಆಂಬುಲೆನ್ಸ್ ಚಲಾಯಿಸಿದ್ದ. ಜಕ್ಕೂರು ಮೇಲ್ಸೇತುವೆಯಲ್ಲಿ ಎದುರಿಗೆ ಹೊರಟಿದ್ದ ಕಾರಿಗೆ ಆಂಬುಲೆನ್ಸ್ ಗುದ್ದಿತ್ತು. ನಂತರ, ಅದೇ ಕಾರು ಎದುರಿಗೆ ಹೊರಟಿದ್ದ ಆಟೊಗೆ ಡಿಕ್ಕಿ ಹೊಡೆದಿತ್ತು. ಸರಣಿ ಅಪಘಾತದಿಂದಾಗಿ ಕಾರಿನಲ್ಲಿದ್ದ ಸಂಜೀವ್‌ಕುಮಾರ್ ಹಾಗೂ ಆಟೊದಲ್ಲಿದ್ದ ಯಾರಬ್ ತೀವ್ರವಾಗಿ ಗಾಯಗೊಂಡಿದ್ದರು. ಇಬ್ಬರನ್ನೂ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಸಂಜೀವ್ ಅಸುನೀಗಿದ್ದಾರೆ' ಎಂದು ತಿಳಿಸಿದರು.

'ಚಿಕ್ಕಬಳ್ಳಾಪುರದಿಂದ ರೋಗಿಯೊಬ್ಬರನ್ನು ನಗರಕ್ಕೆ ಕರೆತರಲಾಗುತ್ತಿತ್ತು. ಆಂಬುಲೆನ್ಸ್ ಚಾಲಕನ ನಿರ್ಲಕ್ಷ್ಯದಿಂದಲೇ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದರು.

ಜನ್ಮದಿನವೇ ಕೊಲೆ: ರೌಡಿ ಮೊಬೈಲ್‌ನಲ್ಲಿ ವಿಡಿಯೊ

ಬೆಂಗಳೂರು: ಕೆಂಗೇರಿ ಠಾಣೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ನಡೆದಿದ್ದ ಹೇಮಂತ್‌ಕುಮಾರ್ ಅಲಿಯಾಸ್ ದಿಲೀಪ್ (26) ಎಂಬುವರ ಕೊಲೆ ಪ್ರಕರಣಕ್ಕೆ ಹೊಸ ತಿರುವು ಸಿಕ್ಕಿದ್ದು, ಕೊಲೆ ದೃಶ್ಯದ ವಿಡಿಯೊವೊಂದು ರೌಡಿ ಕುಳ್ಳ ರಿಜ್ವಾನ್ ಮೊಬೈಲ್‌ನಲ್ಲಿ ಪತ್ತೆಯಾಗಿದೆ.

ಹೆಮ್ಮಿಗೆಪುರದ ಎಚ್. ಗೊಲ್ಲಹಳ್ಳಿ ನಿವಾಸಿ ಹೇಮಂತ್ ಅವರನ್ನು ಜುಲೈ 16ರಂದು ಜನ್ಮದಿನವೇ ದುಷ್ಕರ್ಮಿಗಳು ಕೊಲೆ ಮಾಡಿದ್ದರು. ಜುಲೈ 17ರಂದು ಬೆಳಿಗ್ಗೆ ನೈಸ್ ರಸ್ತೆ ಬಳಿ ಮೃತದೇಹ ಪತ್ತೆಯಾಗಿತ್ತು. ಆದರೆ, ಪೊಲೀಸರಿಗೆ ಆರೋಪಿಗಳ ಸುಳಿವು ಸಿಕ್ಕಿರಲಿಲ್ಲ.

ಎದುರಾಳಿಗಳ ಹತ್ಯೆಗೆ ಸಂಚು ರೂಪಿಸಿದ್ದ ಆರೋಪದಡಿ ಶಿವಮೊಗ್ಗದ ರಿಜ್ವಾನ್ ಪಾಷಾ ಅಲಿಯಾಸ್ ಕುಳ್ಳ ರಿಜ್ವಾನ್‌ನನ್ನು (37) ಕೆಂಪೇಗೌಡ ನಗರ ಠಾಣೆ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ. ಈತನ ಮೊಬೈಲ್‌ನಲ್ಲಿ ಹೇಮಂತ್‌ಕುಮಾರ್ ಕೊಲೆ ದೃಶ್ಯದ ವಿಡಿಯೊ ಇದ್ದು, ಈ ಬಗ್ಗೆ ಪೊಲೀಸರು ವಿಚಾರಣೆ ಮುಂದುವರಿಸಿದ್ದಾರೆ.

'ಬಾಸ್' ಗೊತ್ತಿಲ್ಲವೆಂದಿದ್ದಕ್ಕೆ ಸಹಚರರಿಂದ ಕೃತ್ಯ: 'ಹೇಮಂತ್‌ಕುಮಾರ್ ಹುಟ್ಟುಹಬ್ಬ ಆಚರಿಸಿಕೊಳ್ಳಲು ಸ್ನೇಹಿತರ ಜೊತೆ ಹೋಗಿದ್ದರು. ನೈಸ್ ರಸ್ತೆಯ ಕೆಳ ಸೇತುವೆಯಲ್ಲಿ ಮದ್ಯದ ಪಾರ್ಟಿ ಮಾಡುತ್ತಿದ್ದರು. ಅದೇ ಸಂದರ್ಭದಲ್ಲೇ ರೌಡಿಗಳ ಬಗ್ಗೆ ಸ್ನೇಹಿತರು ಪರಸ್ಪರ ಮಾತನಾಡಲಾರಂಭಿಸಿದ್ದರು. ಅದೇ ಸ್ಥಳಕ್ಕೆ ಸಮೀಪದಲ್ಲೇ ಕುಳ್ಳ ರಿಜ್ವಾನ್ ಸಹಚರರು ಕುಳಿತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬೆಂಗಳೂರಿನಲ್ಲಿ ಎಲ್ಲ ರೌಡಿಗಳು ಸತ್ತಿದ್ದಾರೆ. ಈಗ ಯಾರೂ ಇಲ್ಲ' ಎಂದು ಹೇಮಂತ್ ಹೇಳಿದ್ದರು. ಅದನ್ನು ಕೇಳಿಸಿಕೊಂಡು ಹೇಮಂತ್ ಬಳಿ ಹೋಗಿದ್ದ ರಿಜ್ವಾನ್ ಸಹಚರರು, 'ನಮ್ಮ ಬಾಸ್ ಇದ್ದಾರೆ' ಎಂದು ಜೋರಾಗಿ ಹೇಳಿದ್ದರು. ಬಾಸ್ ಯಾರೆಂಬುದೇ ಗೊತ್ತಿಲ್ಲವೆಂದು ಹೇಮಂತ್ ಹೇಳಿದ್ದರು. ಅಷ್ಟಕ್ಕೆ ಕೋಪಗೊಂಡ ಆರೋಪಿಗಳು, ಹೇಮಂತ್ ಅವರನ್ನು ಕೊಲೆ ಮಾಡಿದ್ದರು. ಅದರ ವಿಡಿಯೊವನ್ನು ಚಿತ್ರೀಕರಿಸಿ ರಿಜ್ವಾನ್‌ಗೆ ಕಳುಹಿಸಿದ್ದರೆಂಬ ಸಂಗತಿ ತನಿಖೆಯಿಂದ ಗೊತ್ತಾಗಿದೆ' ಎಂದೂ ಮೂಲಗಳು ತಿಳಿಸಿವೆ.

ಅರ್ಜುನ್ ಸರ್ಜಾಗೆ ಮಾತೃ ವಿಯೋಗ

ಲಕ್ಷ್ಮೀದೇವಮ್ಮ

ಮಧುಗಿರಿ: ಬಹುಭಾಷಾ ನಟ ಅರ್ಜುನ್ ಸರ್ಜಾ ಅವರ ತಾಯಿ ಲಕ್ಷ್ಮೀದೇವಮ್ಮ (84) ವಯೋಸಹಜ ಅನಾರೋಗ್ಯದಿಂದಾಗಿ ಬೆಂಗಳೂರಿನ ಅಪೋಲೊ ಆಸ್ಪತ್ರೆಯಲ್ಲಿ ಶನಿವಾರ ನಿಧನರಾದರು.

ಕನ್ನಡ ಚಿತ್ರರಂಗದ ಹಿರಿಯ ನಟ ದಿವಂಗತ ಶಕ್ತಿ ಪ್ರಸಾದ್ ಅವರ ಪತ್ನಿ ಲಕ್ಷ್ಮೀದೇವಮ್ಮ ದಂಪತಿಗೆ ಮೂವರು ಮಕ್ಕಳು. ಕಿಶೋರ್ ಸರ್ಜಾ, ಅರ್ಜುನ್ ಸರ್ಜಾ, ಅಮ್ಮಾಜಿ ಕುಮಾರ್.

ಲಕ್ಷ್ಮೀದೇವಮ್ಮ ಅವರು ತಾಲ್ಲೂಕಿನ ದೊಡ್ಡೇರಿ ಕ್ಷೇತ್ರದ ಜಿಲ್ಲಾ ಪರಿಷತ್ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು. ಅಹೋಬಲ ಲಕ್ಷ್ಮೀನರಸಿಂಹ ದೇವಾಲಯ ಸಮಿತಿ ಅಧ್ಯಕ್ಷರಾಗಿ ದೇಗುಲ ನಿರ್ಮಾಣದ ನೇತೃತ್ವ ವಹಿಸಿಕೊಂಡಿದ್ದರು. ಭಾನುವಾರ ಬೆಳಿಗ್ಗೆ 9ಕ್ಕೆ ತಾಲ್ಲೂಕಿನ ಜಕ್ಕೇನಹಳ್ಳಿ ಗ್ರಾಮದ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ.

ಗೌಪ್ಯ ಬಾಕ್ಸ್‌ನಲ್ಲಿ ₹1 ಕೋಟಿ ಮೌಲ್ಯದ ಗಾಂಜಾ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹೀಂದ್ರಾ ಬೊಲೆರೊ ವಾಹನದ ಕೆಳಭಾಗದಲ್ಲಿ ಗೌಪ್ಯ ಬಾಕ್ಸ್ ಮಾಡಿ ಗಾಂಜಾ ಬಚ್ಚಿಟ್ಟು ಸಾಗಿಸುತ್ತಿದ್ದ ಜಾಲ ಭೇದಿಸಿರುವ ಬೇಗೂರು ಠಾಣೆ ಪೊಲೀಸರು, ಏಳು ಆರೋಪಿಗಳನ್ನು ಬಂಧಿಸಿದ್ದಾರೆ.

'ಕುಣಿಗಲ್ ತಾಲ್ಲೂಕಿನ ಬೆಳ್ಳೂರು ಕ್ರಾಸ್‌ನ ಕೆ.ಆರ್. ಅರವಿಂದ್ (26), ತಾವರೆಕೆರೆ ಅಂದಾನಪ್ಪ ಬಡಾವಣೆಯ ಪವನ್‌ಕುಮಾರ್ ಅಲಿಯಾಸ್ ಪಾಂಡು (27), ಮಂಗಳೂರು ಹೆಚ್ಕಲ್‌ನ ಅಮ್ಜದ್ ಇತಿಯಾರ್ ಅಲಿಯಾಸ್ ಇಮ್ರಾನ್ (27), ಬೀದರ್ ಜಿಲ್ಲೆಯ ಭಾಲ್ಕಿಯ ಪ್ರಭು (27), ದಕ್ಷಿಣ ಕನ್ನಡ ಜಿಲ್ಲೆಯ ನರಿಂಗಾಣದ ನಜೀಮ್ (26), ಆಂಧ್ರಪ್ರದೇಶದ ಪ್ರಸಾದ್ (24) ಹಾಗೂ ಪತ್ತಿ ಸಾಯಿ ಚಂದ್ರ ಪ್ರಕಾಶ್ (19) ಬಂಧಿತರು. ಇವರಿಂದ ₹ 1 ಕೋಟಿ ಮೌಲ್ಯದ 175 ಕೆ.ಜಿ 10 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಅಲ್ಲು ಅರ್ಜುನ್ ಅಭಿನಯದ ಪುಷ್ಪಾ ಸಿನಿಮಾದಲ್ಲಿ ಗೌಪ್ಯ ಬಾಕ್ಸ್‌ನಲ್ಲಿ ರಕ್ತಚಂದನದ ತುಂಡುಗಳನ್ನು ಸಾಗಿಸುವ ದೃಶ್ಯವಿದೆ. ಇದರಿಂದ ಪ್ರೇರಣೆಗೊಂಡಿದ್ದ ಆರೋಪಿಗಳು, ಮಹೀಂದ್ರಾ ಬೊಲೆರೊ ವಾಹನದ ಕೆಳಭಾಗದಲ್ಲಿ ಗೌಪ್ಯ ಬಾಕ್ಸ್ ಮಾಡಿಸಿ, ಗಾಂಜಾ ಸಾಗಣೆ ಮಾಡುತ್ತಿದ್ದ ಸಂಗತಿ ತನಿಖೆಯಿಂದ ಗೊತ್ತಾಗಿದೆ' ಎಂದೂ ತಿಳಿಸಿದರು.

ಬೀದರ್‌ನಲ್ಲಿ ಗಾಂಜಾ ಖರೀದಿ: 'ಹಲವು ವರ್ಷಗಳಿಂದ ಗಾಂಜಾ ಮಾರಾಟದಲ್ಲಿ ತೊಡಗಿದ್ದ ಆರೋಪಿಗಳು, ಕೆಲ ಪ್ರಕರಣಗಳಲ್ಲಿ ಜೈಲಿಗೂ ಹೋಗಿ ಬಂದಿದ್ದಾರೆ. ಬೀದರ್‌ನಲ್ಲಿ ಗಾಂಜಾ ಖರೀದಿಸಿ ತರುತ್ತಿದ್ದ ಆರೋಪಿಗಳು, ಎಲೆಕ್ಟ್ರಾನಿಕ್ ಸಿಟಿ, ಹುಳಿಮಾವು, ಬೇಗೂರು ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮಾರುತ್ತಿದ್ದರು' ಎಂದು ಪೊಲೀಸರು ಹೇಳಿದರು.

ರಾಜಕುಮಾರ ಟಾಕಳೆ ವಿರುದ್ಧ ದೂರು

ಬೆಳಗಾವಿ: ತೋಟಗಾರಿಕೆ ಇಲಾಖೆಯ ಖಾನಾಪುರದ ಸಸ್ಯ ಪಾಲನಾಲಯದ ಸಹಾಯಕ ನಿರ್ದೇಶಕ ರಾಜಕುಮಾರ ಟಾಕಳೆ ವಿರುದ್ಧ ಚನ್ನಪಟ್ಟಣದ ಸಾಮಾಜಿಕ ಕಾರ್ಯಕರ್ತೆ ನವ್ಯಶ್ರೀ ರಾವ್ ಶನಿವಾರ ಇಲ್ಲಿನ ಎಪಿಎಂಸಿ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ರಾಜಕುಮಾರ ವಿರುದ್ಧ ಐಪಿಸಿ ಸೆಕ್ಷನ್ 376, 342, 504, 354, 420, 509, 66ಇ ಕಲಂ ಅಡಿ ಪ್ರಕರಣ ದಾಖಲಿಸಲಾಗಿದೆ. ಅಲ್ಲದೇ, ಸೋಮವಾರ ವಿಚಾರಣೆಗೆ ಹಾಜರಾಗುವಂತೆ ಎಪಿಎಂಸಿ ಪೊಲೀಸರು ನವ್ಯಶ್ರೀಗೆ ನೋಟಿಸ್ ಕೂಡ ನೀಡಿದ್ದಾರೆ.

ಪ್ರತ್ಯೇಕ ಪ್ರಕರಣ: ಬಿಬಿಎಂಪಿ ಶಿಕ್ಷಕಿ, ಶುಶ್ರೂಷಕಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಶಾಲೆ ಶಿಕ್ಷಕಿ ಪೂಜಾ (34) ಎಂಬುವರು ನೇಣು ಹಾಕಿಕೊಂಡು ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಬಗ್ಗೆ ಗಿರಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಗಿರಿನಗರ ನಿವಾಸಿ ಪೂಜಾ, ಬಿಬಿಎಂಪಿ ಶಾಲೆಯೊಂದರಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಶಿಕ್ಷಕಿ ಆಗಿ ಕೆಲಸ ಮಾಡುತ್ತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮನೆಯಲ್ಲಿ ಯಾರೂ ಇಲ್ಲದ ವೇಳೆ ಕೊಠಡಿಯಲ್ಲಿ ನೇಣು ಹಾಕಿಕೊಂಡು ಪೂಜಾ ಆತ್ಮಹತ್ಯೆಗೆ ಶರಣಾಗಿದ್ದಾರೆ. ಪತಿಯಿಂದ ವಿಚ್ಛೇದನ ಪಡೆದಿದ್ದ ಪೂಜಾ, ಮಾನಸಿಕವಾಗಿ ನೊಂದಿ ದ್ದರು. ಇದೇ ವಿಚಾರವಾಗಿ ಜೀವನದಲ್ಲಿ ಜುಗುಪ್ಸೆ ಗೊಂಡು ಅವರು ಆತ್ಮಹತ್ಯೆ ಮಾಡಿಕೊಂಡಿರುವ ಮಾಹಿತಿ ಇದೆ' ಎಂದು ತಿಳಿಸಿವೆ.

ಶುಶ್ರೂಷಕಿ ಆತ್ಮಹತ್ಯೆ: ಗಿರಿನಗರ ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ ಶುಶ್ರೂಷಕಿ ಸುಮಿತ್ರಾ (33) ಎಂಬುವವರು ನೇಣು ಹಾಕಿಕೊಂಡು ಶುಕ್ರವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಆಸ್ಪತ್ರೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಸುಮಿತ್ರಾ, ಅವಿವಾಹಿತೆ. ಒಂಟಿಯಾಗಿ ಮನೆಯಲ್ಲಿ ವಾಸವಿದ್ದರು. ಅವರ ಅಕ್ಕ ಹಾಗೂ ಸಂಬಂಧಿಕರು, ಆಗಾಗ ಮನೆಗೆ ಬಂದು ಹೋಗುತ್ತಿದ್ದರು.'

'ಮನೆಯ ಕೊಠಡಿಯಲ್ಲೇ ನೇಣು ಹಾಕಿಕೊಂಡು ಸುಮಿತ್ರಾ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರು ಬರೆದಿದ್ದಾರೆ ಎನ್ನಲಾದ ಮರಣಪತ್ರ ಸ್ಥಳದಲ್ಲಿ ಸಿಕ್ಕಿದೆ. 'ನನ್ನನ್ನು ಖುಷಿಯಾಗಿ ಕಳುಹಿಸಿ ಕೊಡಿ. ನನ್ನ ಸಾವಿಗೆ ನಾನೇ ಕಾರಣ' ಎಂದು ಪತ್ರದಲ್ಲಿ ಬರೆಯಲಾಗಿದ್ದು, ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಪೊಲೀಸ್ ಸೋಗಿನಲ್ಲಿ ಸುಲಿಗೆ

ಬೆಂಗಳೂರು: ಪೊಲೀಸರ ಸೋಗಿನಲ್ಲಿ ಡೆಲಿವರಿ ಬಾಯ್ ಸುರೇಶ್ ಎಂಬುವವರ ಬೈಕ್ ಅಡ್ಡಗಟ್ಟಿದ್ದದುಷ್ಕರ್ಮಿಗಳು, ಮೊಬೈಲ್ ಸುಲಿಗೆ ಮಾಡಿ ಪರಾರಿಯಾಗಿದ್ದಾರೆ. ಶುಕ್ರವಾರ ರಾತ್ರಿ 11.30ರ ಸುಮಾರಿಗೆ ನಡೆದಿರುವ ಘಟನೆ ಸಂಬಂಧ ಸುರೇಶ್ ಅವರು ಕೊತ್ತನೂರು ಠಾಣೆಗೆ ದೂರು ನೀಡಿದ್ದಾರೆ. 'ಸುರೇಶ್ ಸ್ವಿಗ್ಗಿ ಆಹಾರ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದರು. ಶುಕ್ರವಾರ ರಾತ್ರಿ ವಾಜಿದ್ ಬಡಾವಣೆಯಲ್ಲಿ ಬೈಕ್‌ನಲ್ಲಿ ಹೊರಟಿದ್ದಾಗ, ಪೊಲೀಸರೆಂದು ಹೇಳಿಕೊಂಡು ಬೈಕ್ ಅಡ್ಡಗಟ್ಟಿದ್ದ ಆರೋಪಿಗಳು, ಹಲ್ಲೆ ಮಾಡಿ ಮೊಬೈಲ್ ಸುಲಿಗೆ ಮಾಡಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಕಮಿಷನರ್ ಕಚೇರಿ ಬಳಿಯೇ ಗಾಜು ಒಡೆದು ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್ಫೆಂಟ್ರಿ ರಸ್ತೆಯಲ್ಲಿರುವ ಪೊಲೀಸ್ ಕಮಿಷನರ್ ಕಚೇರಿ ಸಮೀಪದ ಕಾನೂನು ಮಾಪನ ಇಲಾಖೆ ಬಳಿ ನಿಲ್ಲಿಸಿದ್ದ ಕಾರಿನ ಗಾಜು ಒಡೆದಿರುವ ದುಷ್ಕರ್ಮಿಗಳು, ₹4.50 ಲಕ್ಷ ಕದ್ದುಕೊಂಡು ಪರಾರಿಯಾಗಿದ್ದಾರೆ.

'ಹಣ ಕಳೆದುಕೊಂಡಿರುವ ಲಕ್ಷ್ಮೀಶ್ ಎಂಬುವರು ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ. ಓಜಿಕುಪ್ಪಂ ತಂಡದವರು ಕೃತ್ಯ ಎಸಗಿರುವ ಅನುಮಾನವಿದೆ' ಎಂದು ವಿಧಾನಸೌಧ ಠಾಣೆ ಪೊಲೀಸ್ ಮೂಲಗಳು ಹೇಳಿವೆ.

'ಹೊಸ ಮನೆ ನಿರ್ಮಾಣಕ್ಕೆ ಪಡೆದಿದ್ದ ಸಾಲದ ಕಂತು ಕಟ್ಟಲೆಂದು ಲಕ್ಷ್ಮೀಶ್ ಅವರು ಮಹದೇವಪುರದ ಕೆನರಾ ಬ್ಯಾಂಕ್ ಶಾಖೆಯಲ್ಲಿ ₹ 4.50 ಲಕ್ಷ ಡ್ರಾ ಮಾಡಿಕೊಂಡಿದ್ದರು. ಅದನ್ನು ಬ್ಯಾಂಕ್‌ಗೆ ಪಾವತಿಸಲು ನಗರಕ್ಕೆ ಬಂದಿದ್ದರು. ಕಾನೂನು ಮಾಪನ ಇಲಾಖೆ ಕಟ್ಟಡದ ಪಾರ್ಕಿಂಗ್ ಜಾಗದಲ್ಲಿ ಕಾರು ನಿಲ್ಲಿಸಿ, ಕೆಲಸ ನಿಮಿತ್ತ ಕಚೇರಿಗೆ ಹೋಗಿದ್ದರು.'

'ಲಕ್ಷ್ಮೀಶ್ ಬಳಿ ಹಣವಿರುವುದನ್ನು ತಿಳಿದಿದ್ದ ದುಷ್ಕರ್ಮಿಗಳು, ಮಹದೇವಪುರದಿಂದ ಪಲ್ಸರ್ ಬೈಕ್‌ನಲ್ಲಿ ಹಿಂಬಾಲಿಸಿಕೊಂಡು ಬಂದಿದ್ದರು. ಲಕ್ಷ್ಮೀಶ್ ಅವರ ಕಾರಿನ ಗಾಜು ಒಡೆದು, ಒಳಗಿದ್ದ ಹಣದ ಬ್ಯಾಗ್ ಕದ್ದುಕೊಂಡು ಪರಾರಿಯಾಗಿದ್ದಾರೆ. ಲಕ್ಷ್ಮೀಶ್ ವಾಪಸು ಕಾರಿನ ಬಳಿ ಬಂದಾಗ ವಿಷಯ ಗೊತ್ತಾಗಿದೆ' ಎಂದೂ ತಿಳಿಸಿವೆ.

ಪಾನಮತ್ತನಾಗಿ ಅಡ್ಡಾದಿಡ್ಡಿ ಚಾಲನೆ: ಸರಣಿ ಅಪಘಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾನಮತ್ತ ಚಾಲಕರೊಬ್ಬರು ತಮ್ಮ ಟೆಂಪೊ ಟ್ರಾವೆಲರ್ ವಾಹನವನ್ನು ಅಡ್ಡಾದಿಡ್ಡಿಯಾಗಿ ಚಲಾಯಿಸಿ ಸರಣಿ ಅಪಘಾತವನ್ನುಂಟು ಮಾಡಿದ್ದು, ಈ ಬಗ್ಗೆ ಯಶವಂತಪುರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮತ್ತಿಕೆರೆ ಮುಖ್ಯರಸ್ತೆಯ ಬಾಂಬೆ ಡೈಯಿಂಗ್ ರಸ್ತೆಯಲ್ಲಿ ಶನಿವಾರ ಅಪಘಾತ ಸಂಭವಿಸಿದೆ. ಪಾನಮತ್ತ ಚಾಲಕನನ್ನು ಹಿಡಿದು ಥಳಿಸಿರುವ ಸ್ಥಳೀಯರು ಗಸ್ತು ಸಿಬ್ಬಂದಿ ಕೈಗೆ ಒಪ್ಪಿಸಿದ್ದಾರೆ. ಆರೋಪಿ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ನಗರದಲ್ಲಿ ಇಂದು

32ನೇ ಅಖಂಡ ಭಜನಾ ಯಜ್ಞ ಸಮಾರಂಭ: ಉದ್ಘಾಟನೆ: ಸ್ವಾಮಿ ಜಪಾನಂದ ಮಹಾರಾಜ್, ಆಯೋಜನೆ: ಶ್ರೀನಿವಾಸ ಸಹೋದರರ ಸಂಘ, ಸ್ಥಳ: ಜಯರಾಮ ಸೇವಾ ಮಂಡಳಿ, ಬೆಳಗೋಡು ಕಲ್ಯಾಣ ಮಂಟಪದ ಹತ್ತಿರ, ಜಯನಗರ, ಬೆಳಿಗ್ಗೆ 7.30

ಆರ್.ದಯಾನಂದ್ ಸಾಗರ ಅವರ ಶತಮಾನೋತ್ಸವ ಸಮಾರಂಭ: ಉದ್ಘಾಟನೆ: ಎಸ್.ಎಂ. ಕೃಷ್ಣ, ಅತಿಥಿಗಳು: ಬಸವರಾಜ ಬೊಮ್ಮಾಯಿ, ಆರ್. ಅಶೋಕ್, ಡಾ.ಸಿ.ಎನ್. ಅಶ್ವತ್ಥನಾರಾಯಣ, ಡಾ.ಕೆ. ಸುಧಾಕರ್, ಅಧ್ಯಕ್ಷತೆ: ಡಿ. ಹೇಮಚಂದ್ರ ಸಾಗರ, ಆಯೋಜನೆ ಮತ್ತು ಸ್ಥಳ: ದಯಾನಂದ ಸಾಗರ ಇನ್‌ಸ್ಟಿಟ್ಯೂಟ್ಸ್, ಕುಮಾರಸ್ವಾಮಿ ಬಡಾವಣೆ, ಬೆಳಿಗ್ಗೆ 9

ಮನೆ ಮನೆಗೆ ಸಾಹಿತ್ಯ ಸೌರಭ ಉಚಿತ ಕನ್ನಡ ಪುಸ್ತಕ ವಿತರಣೆ: ಉದ್ಘಾಟನೆ: ಟಿ.ಎಚ್. ಆಂಜಿನಪ್ಪ, ಅತಿಥಿಗಳು: ಜಿ. ಮಂಜುನಾಥ, ಕೆ.ಜಿ. ಕುಮಾರ್, ಆಯೋಜನೆ: ಕನ್ನಡ ಕ್ರಿಯಾ ಸಮಿತಿ, ಸ್ಥಳ: ಸ್ಪಂದನಾ ನರ್ಸಿಂಗ್ ಹೋಮ್, ರಾಮಮಂದಿರದ ಹತ್ತಿರ, ರಾಜಾಜಿನಗರ, ಬೆಳಿಗ್ಗೆ 9

ಗಾಯನ, ಹಾಸ್ಯ, ರಸಪ್ರಶ್ನೆ, ಕವಿಗೋಷ್ಠಿ ಕಾರ್ಯಕ್ರಮ: ಅಧ್ಯಕ್ಷತೆ: ಸದಾನಂದ, ಅತಿಥಿಗಳು: ಟಿ.ಪಿ. ಪ್ರಭುದೇವ್, ಉಪಸ್ಥಿತಿ: ವಿ.ಎಸ್. ಸತ್ಯನಾರಾಯಣ, ಬಿ.ಎಲ್. ಶ್ರೀನಿವಾಸ್, ಆಯೋಜನೆ: ಸಹಮತ, ಸ್ಥಳ: ನಂ.323, ಹೇಮ ಸದನ, 7ನೇ ಮುಖ್ಯರಸ್ತೆ, ಸಿಕ್ಯುಎಎಲ್ ಬಡಾವಣೆ, ಸಹಕಾರನಗರ, ಬೆಳಿಗ್ಗೆ 10

ರಾಮಾನುಜ ಅಧ್ಯಯನ ಕೇಂದ್ರದ ಆರಂಭ, ಕರ್ನಾಟಕದಲ್ಲಿ ರಾಮಾನುಜರ ಪ್ರಭಾವದ ಕುರಿತು ವಿಚಾರಸಂಕಿರಣ: ಸಾನ್ನಿಧ್ಯ: ಯತಿರಾಜ್ ಜೀಯರ್ ಸ್ವಾಮಿ, ಉದ್ಘಾಟನೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ: ಯದುಗಿರಿ ಯತಿರಾಜ ಮಠ, ರಾಮಾನುಜ ಸಂಸ್ಕೃತಿ ಭವನ, ಮಲ್ಲೇಶ್ವರ, ಬೆಳಿಗ್ಗೆ 10

ರಾಜ್ಯ ಮಟ್ಟದ 4ನೇ ಮಹಿಳಾ ಸಾಂಸ್ಕೃತಿಕ ಸಮಾವೇಶ, ಕಮಲಾ ರಾಜೇಶ್ ಅವರ 'ವಚನ ರಾಮಾಯಣ' ಕೃತಿ ಲೋಕಾರ್ಪಣೆ: ಉದ್ಘಾಟನೆ: ಗೀತಾ ರಾಮಾನುಜಂ, ಅಧ್ಯಕ್ಷತೆ: ಎಸ್.ಜಿ. ಸುಶೀಲಮ್ಮ, ಕೃತಿ ಬಿಡುಗಡೆ: ವೂಡೇ.ಪಿ. ಕೃಷ್ಣ, ಅತಿಥಿಗಳು: ಪದ್ಮಿನಿ ನಾಗರಾಜು, ಆಯೋಜನೆ: ಬುದ್ಧ ಬಸವ, ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಕೇಂದ್ರ ಸಾಹಿತ್ಯ ಅಕಾಡೆಮಿ, ಸ್ಥಳ: ಶಿಕ್ಷಣ ದತ್ತಿ ಸಭಾಂಗಣ, ಶೇಷಾದ್ರಿಪುರ, ಮೈನ್ ಕಾಲೇಜು, ಬೆಳಿಗ್ಗೆ 10.30

ಅಭಿನಂದನಾ ಸಮಾರಂಭ: ಸಾನ್ನಿಧ್ಯ: ಶಿವಯೋಗೀಶ್ವರ ಸ್ವಾಮೀಜಿ, ಉದ್ಘಾಟನೆ: ಶಾಮನೂರು ಶಿವಶಂಕರಪ್ಪ, ಅತಿಥಿಗಳು: ಬಿ.ಎಸ್. ಯಡಿಯೂರಪ್ಪ, ವಿ.ಸೋಮಣ್ಣ, ಜೆ.ಸಿ. ಮಾಧುಸ್ವಾಮಿ, ಎಂ.ಬಿ. ಪಾಟೀಲ್, ಅಧ್ಯಕ್ಷತೆ: ಆರ್.ಬಿ. ಸದಾಶಿವಪ್ಪ, ಆಯೋಜನೆ: ಶರಣ ವಕೀಲರ ವೇದಿಕೆ, ಸ್ಥಳ: ಬಸವೇಶ್ವರ ಸುಜ್ಞಾನ ಮಂಟಪ, ವಿಜಯನಗರ, ಬೆಳಿಗ್ಗೆ 10.30

ಸಂಗೀತ ಕಛೇರಿ: ಗಾಯನ: ಸಹನಾ ರಾಮಚಂದ್ರ, ಪಿಟೀಲು: ಅದಿತಿ ಕೃಷ್ಣಪ್ರಕಾಶ್, ಮೃದಂಗ: ದೀಪಕ್ ಶ್ರೀನಿವಾಸನ್, ಘಟ: ವಾಸವಿ ತಾರಾನಾಥ್, ಆಯೋಜನೆ: ಬಿ.ಟಿ.ಎಂ ಕಲ್ಚರಲ್ ಅಕಾಡೆಮಿ, ಸ್ಥಳ: ಶ್ರೀರಮಣ ಮಹರ್ಷಿ ಅಕಾಡೆಮಿ ಫಾರ್ ಬ್ಲೈಂಡ್, 3ನೇ ಹಂತ ಜೆ.ಪಿ. ನಗರ, ಬೆಳಿಗ್ಗೆ 10.30

ಜಯಚಾಮರಾಜ ಒಡೆಯರ ಅವರ 'ಕರ್ನಾಟಕಿ ಸಂಗೀತ' ಕೃತಿಗಳ ಇಂಗ್ಲಿಷ್ ಅವತರಣಿಕೆಯ 'ವಿದ್ಯಾ ಗಾನವಾರಧಿ' ಪುಸ್ತಕ ಬಿಡುಗಡೆ: ಬಿಡುಗಡೆ: ಎಂ.ಎನ್. ವೆಂಕಟಾಚಲಯ್ಯ, ಅತಿಥಿಗಳು: ಚಿರಂಜೀವಿ ಸಿಂಗ್, ಉಪಸ್ಥಿತಿ: ಕಾಮಾಕ್ಷಿ ದೇವಿ, ಇಂದ್ರಾಕ್ಷಿ ದೇವಿ, ಟಿ.ಎಸ್. ಸತ್ಯವತಿ, ಎಚ್.ಎನ್. ಸುರೇಶ್, ಅಧ್ಯಕ್ಷತೆ: ಕೆ.ಜಿ. ರಾಘವನ್, ಆಯೋಜನೆ: ಭಾರತೀಯ ವಿದ್ಯಾಭವನ, ಮಹಾರಾಜ ಜಯಚಾಮರಾಜ ಒಡೆಯರ್ ಫೌಂಡೇಷನ್, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ಬೆಳಿಗ್ಗೆ 10.30



ಚಂದ್ರಶೇಖರ ಕಂಬಾರ

ಚಂದ್ರಶೇಖರ ಕಂಬಾರ ಅವರ 'ಮಾತೋಶ್ರೀ ಮಾದಕ' ಬಿ.ಜಯಶ್ರೀ ಮತ್ತು ವಿ.ಆರ್. ಪ್ರತಿಭಾ ಅವರ 'ಕರಿಮಾಯಿ' ನಾಟಕ, ಕೀರ್ತಿನಾಥ ಕುರ್ತಕೋಟಿ ಅವರ ಕಂಬಾರರ ಕಾವ್ಯ ಮತ್ತು ನಾಟಕ ವಿಮರ್ಶಾ ಲೇಖನಗಳ ಪುಸ್ತಕ ಬಿಡುಗಡೆ ಕಾರ್ಯಕ್ರಮ: ಬಿಡುಗಡೆ: ಎಚ್.ಎಸ್.ಶಿವಪ್ರಕಾಶ್, ಅತಿಥಿ: ಎಸ್.ಆರ್. ವಿಜಯಶಂಕರ್, ನಾರಾಯಣ ರಾಯಚೂರ್, **ಉಪಸ್ಥಿತಿ:** ಚಂದ್ರಶೇಖರ ಕಂಬಾರ, ಬಿ.ಜಯಶ್ರೀ, ಆಯೋಜನೆ: ಅಂಕಿತ ಪುಸ್ತಕ, ಬುಕ್ ಬ್ರಹ್ಮ, ಬೆಳಿಗ್ಗೆ 11
(ಆನ್‌ಲೈನ್ ಕಾರ್ಯಕ್ರಮ)

ಪ್ರೊ.ದಯಾನಂದ ಅವರ ವಿಶ್ವಾಸ ಪುಸ್ತಕ ಬಿಡುಗಡೆ: ಉದ್ಘಾಟನೆ: ಸುರೇಂದ್ರಕುಮಾರ ಅಧ್ಯಕ್ಷತೆ: ಹಂ.ಪ. ನಾಗರಾಜಯ್ಯ, ಕೃತಿ ಪರಿಚಯ: ಪದ್ಮರಾಜ ದಂಡಾವತಿ, ಆಯೋಜನೆ: ಶೃಂಗಾರ ಪ್ರಕಾಶನ, ಸ್ಥಳ: ಡಿ.ವೀರೇಂದ್ರ ಹೆಗ್ಗಡೆ, ಸಭಾಂಗಣ, ಕೆ.ಆರ್. ರಸ್ತೆ, ಶಂಕರಪುರ, ಬೆಳಿಗ್ಗೆ 10.30



ಹಂ.ಪ. ನಾಗರಾಜಯ್ಯ

ಕೀಚಕ ವಧೆ ಯಕ್ಷಗಾನ ಪ್ರದರ್ಶನ: ಉದ್ಘಾಟನೆ: ರಮೇಶ್ ಭಟ್, ಅರಗ ಜ್ಞಾನೇಂದ್ರ, ಎನ್.ಎಸ್. ಶ್ರೀಧರಮೂರ್ತಿ, ಆಯೋಜನೆ: ಬೆಂಗ್ಳೂರ್ ಮಲೆನಾಡು ಉತ್ಸವ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 11

ಕವಿತಾ ಮಲ್ಲಿಕಾರ್ಜುನ ಪರ್ಮಾ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ: ಉದ್ಘಾಟನೆ: ಶೈಲಜಾ, ಅಧ್ಯಕ್ಷತೆ: ಡಿ.ಮಹೇಂದ್ರ, ಅತಿಥಿಗಳು: ಬಲವಂತರಾವ್, ಪಾಟೀಲ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ಕೆ.ಜಿ.ಎಲ್.ಡಿ ಆರ್ಟ್ ಗ್ಯಾಲರಿ, ಹೊಯ್ಸಳನಗರ, ಸುಂಕದಕಟ್ಟೆ, ಬೆಳಿಗ್ಗೆ 11

'ನುಡಿಗೆ ಮಡಿಯುಂಟೆ' ಆನ್‌ಲೈನ್ ಕಾರ್ಯಕ್ರಮ: ವಿಷಯ ಮಂಡನೆ: ಎ.ಮುರುಗೆಪ್ಪ, ಅಧ್ಯಕ್ಷತೆ: ಎ.ಎಸ್. ನಟರಾಜ್, ಉಪಸ್ಥಿತಿ: ಎಂ.ಅಬ್ದುಲ್ ರೆಹಮಾನ್ ಪಾಷ, ಆಯೋಜನೆ: ಅಖಿಲ ಕರ್ನಾಟಕ ವಿಚಾರವಾದಿ ಟ್ರಸ್ಟ್, ಬೆಳಿಗ್ಗೆ 11

ತಲಕಾಡು ರಂಗೇಗೌಡ ಸ್ಮಾರಕ ದತ್ತಿ ಉಪನ್ಯಾಸ: ವಿಷಯ: ದಲಿತರ ಏಳಿಗೆಗೆ ಸವರ್ಣೀಯರ ಕೊಡುಗೆ, ಉಪನ್ಯಾಸ: ವಾದಿರಾಜ್, ಅಧ್ಯಕ್ಷತೆ: ಎನ್. ನಾರಾಯಣಸ್ವಾಮಿ, ಆಯೋಜನೆ ಮತ್ತು ಸ್ಥಳ: ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಮಧ್ಯಾಹ್ನ 12

ಯಕ್ಷಗಾನ ಬಯಲಾಟ ಶ್ರೀದೇವಿ ಭಗವತಿ: ಭಾಗವತರು: ಗಿರೀಶ್ ರೈ, ಧೀರಜ್ ರೈ ಸಂಪಾಜೆ, ಆಯೋಜನೆ: ತೀಯಾ ಸಮಾಜ, ಸ್ಥಳ: ವಿಲ್ಸನ್ ಗಾರ್ಡನ್ ಕ್ಲಬ್, ಹೊಂಬೇಗೌಡನಗರ, ಮಧ್ಯಾಹ್ನ 2

21ನೇ ವಾರ್ಷಿಕೋತ್ಸವ, ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ವಿಚಾರಸಂಕಿರಣ: ಅಧ್ಯಕ್ಷತೆ: ಹಂ.ಪ. ನಾಗರಾಜಯ್ಯ, ಆಯೋಜನೆ: ಸಾಲಿಗ್ರಾಮ ಜೈನ ಮಿತ್ರ ಮಂಡಲಿ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್, ಚಾಮರಾಜಪೇಟೆ, ಮಧ್ಯಾಹ್ನ 3

'ಬಡಗತಿಟ್ಟು' ಪೌರಾಣಿಕ ಯಕ್ಷಗಾನ ಪ್ರದರ್ಶನ: ಅತಿಥಿಗಳು: ಬಿ.ಆರ್. ಲಕ್ಷ್ಮಣರಾವ್, ಜಿ.ಎಲ್. ಹೆಗಡೆ, ಆನಂದರಾಮ ಉಪಾಧ್ಯ, ರಾಜಶೇಖರ ಜೋಗಿನ್ಮನೆ, ಆಯೋಜನೆ: ಯಕ್ಷ ಸಿಂಚನ ಟ್ರಸ್ಟ್, ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಮಧ್ಯಾಹ್ನ 3

ಯಕ್ಷಸಿಂಚನ

ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ–2 ಉದ್ಘಾಟನಾ ಸಮಾರಂಭ: ಸಾನ್ನಿಧ್ಯ: ಸುಭುದೇಂದ್ರತೀರ್ಥ ಸ್ವಾಮೀಜಿ, ಉದ್ಘಾಟನೆ: ಥಾವರಚಂದ್ ಗೆಹಲೋತ್, ಅತಿಥಿಗಳು: ಬಸವರಾಜ ಬೊಮ್ಮಾಯಿ, ಸಿ.ಟಿ. ರವಿ, ಉಪಸ್ಥಿತಿ: ಕೆ. ಪ್ರಕಾಶ್ ಶೆಟ್ಟಿ, ಆಯೋಜನೆ: ಬಂಟರ ಸಂಘ, ಸ್ಥಳ: ಯಲಚಗುಪ್ಪೆ ಗ್ರಾಮ, ತಾವರೆಕೆರೆ, ಸಂಜೆ 4

ಮಾನಸ ಎನ್

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಮಾನಸ.ಎನ್., ನಿರ್ದೇಶನ: ರೇಖಾ ದಿನೇಶ್ ಕುಮಾರ್, ಆಯೋಜನೆ: ಬೆನಕಾ ನಾಟ್ಯ ಮಂದಿರ, ಸ್ಥಳ: ಜೆ.ಎಸ್.ಎಸ್ ಸಭಾಂಗಣ, ಜಯನಗರ, ಸಂಜೆ 6

'ಡಿಸ್‌ಟ್ರಾಟಿಂಗ್ ಇಂಡಿಯನ್ ಹಿಸ್ಟರಿ ಇನ್ ದಿ ನೇಮ್ ಆಫ್ ರಿರೈಟಿಂಗ್' ವೆಬಿನಾರ್: ಉದ್ಘಾಟನೆ: ಪ್ರಕಾಶ್ ಭಾಯಿ ಶಾ, ಇರ್ಫಾನ್ ಹಬೀಬ್, ಉಪನ್ಯಾಸ: ಎ.ಕರುಣಾನಂದನ್, ರಾಮ್ ಪುನಿಯಾನಿ, ಅನಿತಾ ರಾಮ್‌ಪಾಲ್, ಆಯೋಜನೆ: ಆಲ್ ಇಂಡಿಯಾ ಸೇವ್ ಎಜುಕೇಷನ್ ಕಮಿಟಿ, ಸಂಜೆ 4

ವೀಣೆ ಶೇಷಣ್ಣ ಅವರ 96ನೇ ಪುಣ್ಯದಿನಾಚರಣೆ: ಉಪನ್ಯಾಸ: ಮೈಸೂರು.ವಿ. ಸುಬ್ರಹ್ಮಣ್ಯ, ಅಧ್ಯಕ್ಷತೆ: ಆರ್. ಪೂರ್ಣಿಮಾ, ಆಯೋಜನೆ: ಅನನ್ಯ, ಸ್ಥಳ: ಅನನ್ಯ ಸಭಾಂಗಣ, ಮಲ್ಲೇಶ್ವರ, ಸಂಜೆ 6

ನೀತುಗೌಡ ಅವರ 'ಐ ಒನ್ಸ್ ಲಿವ್ಡ್' ಪುಸ್ತಕ ಬಿಡುಗಡೆ: ಅತಿಥಿಗಳು: ಇಂದ್ರಜಿತ್ ಲಂಕೇಶ್, ಗಣ ಶ್ರವಣ, ಶ್ರೀನಾಥ ಜೋಶಿ, ಆಯೋಜನೆ: ಕ್ಲೇವರ್‌ಫಾಕ್ಸ್ ಪಬ್ಲಿಶಿಂಗ್, ಸ್ಥಳ: ಹೋಟೆಲ್ ದ್ವಾರಕ ಗ್ರ್ಯಾಂಡ್, ಕುಮಾರಸ್ವಾಮಿ ಬಡಾವಣೆ, ಸಂಜೆ 6.30

ಕಡಲತೀರಗಳಲ್ಲಿ ಬೆಳೆಯುವ ಸ್ಥಳೀಯ ಸಸ್ಯಗಳ ಅಭಿವೃದ್ಧಿಗೆ ವಿಜ್ಞಾನಿಗಳ ಸಲಹೆ

ಕೊರೆತ ತಡೆಯುವುದೇ 'ಹಸಿರು ಕವಚ'?

● ಸದಾಶಿವ ಎಂ.ಎಸ್

ಕಾರವಾರ: ಸಮುದ್ರ ತೀರದ ಅನೇಕ ಪ್ರದೇಶಗಳನ್ನು ಭಾರಿ ಗಾತ್ರದ ಅಲೆಗಳು ಆಪೋಶನ ಪಡೆಯುತ್ತಲೇ ಇವೆ. ಇದನ್ನು ತಡೆಯಲು ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ವಿವಿಧ ಯೋಜನೆಗಳನ್ನು ಸರ್ಕಾರ ಜಾರಿಗೆ ತಂದರೂ ಪ್ರಯೋಜನವಾಗಿಲ್ಲ ಎಂಬ ಅಸಮಾಧಾನದ ಅಲೆಗಳೂ ಏಳುತ್ತಿರುತ್ತವೆ. ಇದಕ್ಕೆ ಕಡಲತೀರಗಳಲ್ಲಿ 'ಹಸಿರು ಕವಚ'ವನ್ನು ಬೆಳೆಸುವುದೇ ಸೂಕ್ತ ಎಂಬ ಅಭಿಪ್ರಾಯ ವಿಜ್ಞಾನಿಗಳದ್ದು.

'13 ವರ್ಷಗಳ ಹಿಂದೆ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಕರಾವಳಿಯಲ್ಲಿ 'ಹಸಿರು ಕವಚ' ಯೋಜನೆಯನ್ನು ಜಾರಿ ಮಾಡಲಾಗಿತ್ತು. ಸಂಪೂರ್ಣ ವೈಜ್ಞಾನಿಕವಾಗಿದ್ದ ಈ ಯೋಜನೆಯಿಂದ ಕಡಲ್ಕೊರೆತವನ್ನು ಪರಿಣಾಮಕಾರಿಯಾಗಿ ತಡೆಯಬಹುದಾಗಿದೆ' ಎನ್ನುವ ಅಭಿಪ್ರಾಯ ವಿಜ್ಞಾನಿ ಡಾ.ವಿ.ಎನ್. ನಾಯಕ ಅವರದು.

'ವಿಶ್ವದಾದ್ಯಂತ ಕಡಲತೀರಗಳ ಸಂರಕ್ಷಣೆಗೆ ಇಂಥದ್ದೇ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ. ಕಡಲಿನ ಮರಳಿನ ದಿಬ್ಬಗಳ ಮೇಲೆ ಮೊದಲು ಇದ್ದ ಸ್ಥಳೀಯ ಸಸ್ಯಗಳನ್ನು ನೆಟ್ಟು ಬೆಳೆಸುವುದು ಯೋಜನೆಯ ಪ್ರಮುಖ ಹಂತ. ಅವು ಗಾಳಿಯ ವೇಗವನ್ನು ಕಡಿಮೆ ಮಾಡುತ್ತವೆ. ಆಗ ತೆರೆಗಳ ಅಬ್ಬರವೂ ಕಡಿಮೆಯಾಗುತ್ತದೆ. ಇದರಿಂದ ಕಡಲ್ಕೊರೆತ ಕಡಿಮೆಯಾಗುತ್ತದೆ' ಎಂದು ಅವರು ವಿವರಿಸುತ್ತಾರೆ.

'ಹಸಿರು ಕವಚ ಯೋಜನೆಯನ್ನು ರಾಜ್ಯದ ಎಲ್ಲ ಭಾಗಗಳಲ್ಲಿ ಆರಂಭಿಸಲಾಗಿತ್ತು. ಕಾರವಾರದ ವಿಜ್ಞಾನ ಕೇಂದ್ರ ಹಾಗೂ ಕೋಡಿಬಾಗದ ಭಾಗದಲ್ಲಿ ಈ ಯೋಜನೆಯಡಿ ಸ್ಥಳೀಯ ಬಳ್ಳಿ (ಬಾಂಗ್ಡೆ ಬಳ್ಳಿ) ನೆಡಲಾಗಿತ್ತು. ಅವು ಈಗಲೂ ಇವೆ, ಕೊರೆತ ಕಡಿಮೆಯಾಗಿದೆ' ಎಂದು ಅವರು ನಿದರ್ಶನಗಳನ್ನು ನೀಡುತ್ತಾರೆ.

'ಹಸಿರು ಕವಚ ಜಾರಿಗೂ ಮೊದಲು ಕಾರವಾರದ ವಿಜ್ಞಾನ ಕೇಂದ್ರದ ಹಿಂದೆ ಕಲ್ಲುಬಂಡೆಗಳನ್ನು ಹಾಕಲಾಗಿತ್ತು. ಈಗ ಬಳ್ಳಿಗಳಿಂದಾಗಿ 500 ಮೀಟರ್‌ವರೆಗೂ ಉಸುಕು ಶೇಖರಣೆಯಾಗಿದೆ. ಇದನ್ನೇ ಉದಾಹರಣೆಯಾಗಿ ಪರಿಗಣಿಸಿ ಜಿಲ್ಲಾಡಳಿತ, ಅರಣ್ಯ ಇಲಾಖೆ ಕೂಡಲೇ ಹಸಿರೀಕರಣ ಮಾಡಬೇಕು' ಎಂದು ಡಾ.ನಾಯಕ ಅವರು ಒತ್ತಾಯಿಸುತ್ತಾರೆ.

'ಮೀನುಗಾರರೇ ಸಮುದ್ರ ದಂಡೆಯ ಮೊದಲ ಬಳಕೆದಾರರು. ಇಲ್ಲಿ ಇತರ ಮೂಲಸೌಕರ್ಯಗಳ ಅಭಿವೃದ್ಧಿಗೆ ಸ್ಥಳಾವಕಾಶ ಅತ್ಯಂತ ಕಡಿಮೆ ಪ್ರಮಾಣದಲ್ಲಿದೆ' ಎನ್ನುತ್ತಾರೆ ಕಡಲ ವಿಜ್ಞಾನಿ ಡಾ.ಪ್ರಕಾಶ ಮೇಸ್ತ.

'ಕರಾವಳಿ ತೀರದ ಸಮೀಪದಲ್ಲೇ ರಸ್ತೆ ನಿರ್ಮಾಣ, ಅಭಿವೃದ್ಧಿ ಕಾರ್ಯಗಳು, ಮಳೆಗಾಲದಲ್ಲಿ ಸಮುದ್ರ ನೀರಿನ ಉಬ್ಬರದ ಗೆರೆಯಿಂದ ಕನಿಷ್ಠ 10 ಮೀಟರ್ ದೂರದಲ್ಲೇ ಮಾಡಬೇಕು. ಮಳೆಗಾಲವಲ್ಲದ ಸಮಯದಲ್ಲಿ ಸಮುದ್ರದ ನೀರಿನ ಉಬ್ಬರ ಮತ್ತು ಆರ್ಭಟ ಕಡಿಮೆ ಇರುತ್ತದೆ. ಆ ಸಂದರ್ಭವನ್ನು ಪರಿಗಣಿಸಿ, ಅಲೆಗಳು ಅಪ್ಪಳಿಸುವ ವ್ಯಾಪ್ತಿಯನ್ನು ತಪ್ಪಾಗಿ ವಿಶ್ಲೇಷಿಸಿ ಯೋಜನೆ ರೂಪಿಸಲಾಗುತ್ತಿದೆ. ಇದು ಬಹಳಷ್ಟು ಸಂಪನ್ಮೂಲ, ಆರ್ಥಿಕ ನಷ್ಟಕ್ಕೆ ಕಾರಣವಾಗುತ್ತಿದೆ' ಎಂದು ಅವರು ವಿಶ್ಲೇಷಿಸುತ್ತಾರೆ.

'ಕಡಲ್ಕೊರೆತ ಮತ್ತು ಮರಳಿನ ದಿಬ್ಬದ ರಚನೆಗಳು ಇವು ವರ್ಷಪೂರ್ತಿ ನಡೆಯುವ ನೈಸರ್ಗಿಕ ವಿದ್ಯಮಾನಗಳು. ಇವುಗಳನ್ನು ಬೇರೆ ಬೇರೆಯಾಗಿ ಅರ್ಥೈಸಿ ನಿರ್ಣಯ ಮಾಡಿದರೆ ಅವಘಡಗಳು ತಪ್ಪಿದ್ದಲ್ಲ' ಎಂದು ಅವರು ಹೇಳುತ್ತಾರೆ.

ಸಮುದ್ರ ತನ್ನ ಜಾಗವನ್ನು ಯಾವತ್ತೂ ಬಿಟ್ಟು ಕೊಡುವುದಿಲ್ಲ. ಒಂದು ವೇಳೆ ಬಿಟ್ಟರೂ ತಾತ್ಕಾಲಿಕ. ಮಳೆಗಾಲದಲ್ಲಿ ಅದರ ರೌದ್ರಾವತಾರದ ಅಲೆಗಳು ಕಾಮಗಾರಿ ನಾಶ ಪಡಿಸುತ್ತವೆ.
ಡಾ.ಪ್ರಕಾಶ ಮೇಸ್ತ
ಕಡಲ ವಿಜ್ಞಾನಿ, ಹೊನ್ನಾವರ

ಸಮುದ್ರ ಕೊರೆತ ತಾತ್ಕಾಲಿಕ. ನಾವು ಅಲ್ಲಿಂದ ಸ್ವಲ್ಪ ಹಿಂದೆ ಸರಿಯಬೇಕು. ಬೇಕಾಬಿಟ್ಟಿ ಕಲ್ಲು ಹಾಕುವುದು ಸರಿಯಲ್ಲ. ವೈಜ್ಞಾನಿಕ ವಿಧಾನವನ್ನು ಅನುಸರಿಸಬೇಕು.
ಡಾ.ವಿ.ಎನ್.ನಾಯಕ
ವಿಜ್ಞಾನಿ, ಕಾರವಾರ

'ದತ್ತಾಂಶ ಆಧರಿಸಿ ಕಾಮಗಾರಿ ರೂಪಿಸಿ'

ಕಡಲ್ಕೊರೆತದಿಂದ ಕಟ್ಟಡಗಳು ಸಮುದ್ರ ಪಾಲಾಗುವುದನ್ನು ತಾತ್ಕಾಲಿಕವಾಗಿ ತಡೆಯಲು ಭಾರಿ ಗಾತ್ರದ ಬಂಡೆಕಲ್ಲುಗಳನ್ನು ಬಳಸುವುದುಂಟು. ಆದರೆ, ಕಲ್ಲುಗಳ ಗಾತ್ರ ಮತ್ತು ಆಕಾರ ಸೂಕ್ತವಾಗಿಲ್ಲದಿದ್ದರೆ, ಅಗತ್ಯವಿರುವಷ್ಟು ಪ್ರಮಾಣದಲ್ಲಿ ಕಲ್ಲುಗಳು ಸಿಗದಿದ್ದರೆ, ಅವುಗಳಿಂದ ನಿರ್ಮಿಸುವ ತಾತ್ಕಾಲಿಕ ತಡೆಗೋಡೆಯೂ ವಿಫಲವಾಗುತ್ತದೆ. ಘನಾಕಾರಾದ ಕಲ್ಲುಗಳು ಹೆಚ್ಚು ಪರಿಣಾಮಕಾರಿ ಎನ್ನುತ್ತಾರೆ ಸುರತ್ಕಲ್‌ನ ಎನ್‌ಐಟಿಕೆಯ ವಾಟರ್ ರಿಸೋರ್ಸಸ್ ಆ್ಯಂಡ್ ಓಷೀನ್ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕ ಪ್ರೊ.ಸುಬ್ಬಾ ರಾವ್.

ಕಡಲ್ಕೊರೆತದ ತೀವ್ರತೆ ಹಾಗೂ ಅವುಗಳು ಉಂಟಾಗುವುದಕ್ಕೆ ಕಾರಣಗಳು ಸ್ಥಳದಿಂದ ಸ್ಥಳಕ್ಕೆ ಬದಲಾಗುತ್ತವೆ. ಕಡಲ್ಕೊರೆತ ತಡೆ ಕಾಮಗಾರಿಗಳನ್ನು ವಿನ್ಯಾಸಗೊಳಿಸುವಾಗ ಸ್ಥಳೀಯ ದತ್ತಾಂಶಗಳು ಯಥೇಚ್ಛವಾಗಿ ಲಭ್ಯವಿರಬೇಕು. ಇಲ್ಲದಿದ್ದರೆ ಪರಿಹಾರ ಕಾಮಗಾರಿ ವಿಫಲವಾಗುವ ಸಾಧ್ಯತೆ ಇದೆ. ಕಡಲ ನೀರಿನ ಗರಿಷ್ಠ ಮತ್ತು ಕನಿಷ್ಠ ಮಟ್ಟಗಳ ವ್ಯಾಪ್ತಿಗನುಗುಣವಾಗಿ ತಡೆಗೋಡೆ ನಿರ್ಮಿಸಲು ಸೂಕ್ತ ಸ್ಥಳವನ್ನು ಆಯ್ಕೆ ಮಾಡಬೇಕು. 5 ಮೀ. ಆಳದ ಪಾಯ ಅಗೆದು ಕಲ್ಲಿನ ತಡೆಗೋಡೆ ಕಟ್ಟಬೇಕು. ತಡೆಗೋಡೆ 10 ಡಿಗ್ರಿಯಿಂದ 20 ಡಿಗ್ರಿಯಷ್ಟು ಇಳಿಜಾರನ್ನು ಹೊಂದಿರಬೇಕು. 50 ವರ್ಷದಲ್ಲಿ ಆಗುವ ಬದಲಾವಣೆ ಆಧರಿಸಿ ಹೆಚ್ಚು ಎತ್ತರದ ಅಲೆ ಎಲ್ಲಿಯವರೆಗೆ ಬಂದಿದೆ ಎಂಬುದನ್ನು ನೋಡಿಕೊಂಡು ತಡೆಗೋಡೆಯ ಸ್ಥಳ ನಿಗದಿ ಮಾಡಬೇಕು ಎಂದು ಅವರು ಸಲಹೆ ನೀಡಿದರು.



ಕಡಲ್ಕೊರೆತ...

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ವಿಡಿಯೊ

ತಾಪಮಾನ ಏರಿಕೆಯ ಪಾಲು

● ಸಂಧ್ಯಾ ಹೆಗಡೆ

ಗಂಗಾಧರ ಭಟ್

ಮಂಗಳೂರು: 'ಕಡಲತೀರಗಳೆಂದರೆ ಅಲೆಗಳಿಗೆ ಆಟದ ಮೈದಾನವಿದ್ದಂತೆ ಎಂಬುದು ಕಡಲತೀರ ಅಧ್ಯಯನಕಾರರ ಅಭಿಪ್ರಾಯ. ಈ ಮೈದಾನವನ್ನು ನಾವು ಅತಿಕ್ರಮಿಸಿದರೆ ಅಲೆಗಳು ಉನ್ಮಾದಗೊಂಡಾಗ ನಮ್ಮ ಮನೆಯಂಗಳವನ್ನು ಅತಿಕ್ರಮಿಸುತ್ತವೆ..' ಎನ್ನುತ್ತ ವೈಜ್ಞಾನಿಕ ಸತ್ಯವನ್ನು ಸರಳಮಾತಿನಲ್ಲಿ ಬಿಚ್ಚಿಟ್ಟರು ಸಾಗರ ಭೂ ವಿಜ್ಞಾನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ. ಹೆಜಮಾಡಿ ಗಂಗಾಧರ ಭಟ್.

ಎಲ್ಲ ಕಡೆ ಸಮುದ್ರ ಒಂದೇ ತೆರನಾಗಿ ಇರುವುದಿಲ್ಲ. ಕೆಲವು ಕಡೆ ಒರಟಾದ ಅಲೆಗಳು ತರಲೆ ಮಾಡುತ್ತವೆ, ಇನ್ನು ಕೆಲವು ಕಡೆ ಶಿಸ್ತಿನ ಸಿಪಾಯಿಗಳಂತೆ ಇರುತ್ತವೆ. ಇವುಗಳ ವೈಜ್ಞಾನಿಕ ಅಧ್ಯಯನ ನಡೆಸಿ, ಕಡಲಿಗೆ ತಡೆಗೋಡೆ ಕಟ್ಟಿದಾಗ ಮಾತ್ರ ಸುಸ್ಥಿರವಾಗಲು ಸಾಧ್ಯ. ಕಡಲ ಸಂರಚನೆ ಅಧ್ಯಯನವು ಅದು ಮರಳು ಪ್ರಧಾನವೇ ಅಥವಾ ಕಲ್ಲಿನಿಂದ ಕೂಡಿದ ತೀರವೇ ಎಂಬುದನ್ನು ಸ್ಪಷ್ಟಪಡಿಸುತ್ತದೆ. ತರಲೆ ಮಾಡುವ ಅಲೆಗಳನ್ನು ನಿಯಂತ್ರಿಸಲು ತಡೆಗೋಡೆ ಕಟ್ಟುವುದೇ ಪರಿಹಾರವಲ್ಲ. ಕಲ್ಲುತಂದು ಹಾಕಿದರೆ ತಡೆಗೋಡೆ ಕಟ್ಟಿದಂತೆಯೂ ಅಲ್ಲ. ಅಬ್ಬರಿಸುವ ಅಲೆಗಳು ಕಲ್ಲನ್ನು ಸಮುದ್ರಕ್ಕೆ ಸೆಳೆದುಕೊಂಡು ಹೋಗುತ್ತವೆ ಎಂದು ಅಲೆಗಳ ಅಂತರಂಗವನ್ನು ಅವರು ವಿವರಿಸಿದರು.

ಕಡಲ ಅಧ್ಯಯನದಲ್ಲಿ ಕೆಸರು ಹಾಗೂ ಅಂಟು ಮಣ್ಣಿನ (ಸೆಡಿಮೆಂಟ್ಸ್) ಶೇಖರಣೆ ಹಾಗೂ ಜಾರುವಿಕೆ, ಅವು ಸಮುದ್ರ ದಡಕ್ಕೆ ಸಮಾನಾಂತರವಾಗಿ ಚಲಿಸುತ್ತಿವೆಯೇ ಎಂಬುದೂ ಮಹತ್ವದ್ದು. ಅಲೆಗಳು, ಉಬ್ಬರವಿಳಿತಗಳು ಮತ್ತು ಪ್ರವಾಹಗಳಿಂದ ದಡಕ್ಕೆ ಸಮಾನಾಂತರವಾಗಿರುವ ಕೆಸರುಗಳ ಚಲನೆಯನ್ನು ಸಮುದ್ರದ ದಿಕ್ಚ್ಯುತಿ (littoral drift) ಎಂದು ಪರಿಗಣಿಸಲಾಗುತ್ತದೆ. ಕರಾವಳಿಯ ತೀರದಲ್ಲಿ, ಕೆಲವು ಕಡೆ ಅವೈಜ್ಞಾಕವಾಗಿ ರಚಿಸಿರುವ ತಡೆಗೋಡೆಗಳು (sea walls) ಮತ್ತು ಇತರ ರಚನೆಗಳು ಅಲೆಯ ಗತಿಯನ್ನು ಬದಲಿಸುತ್ತವೆ. ನದಿ ಮತ್ತು ಸಮುದ್ರ ಸಂಗಮ ಪ್ರದೇಶದಲ್ಲಿ ಮಾನವ ನಿರ್ಮಿತ ನೆಲೆಗಳು ಮೇಲೆದ್ದಾಗ ಅಲ್ಲಿ ಸಂಗ್ರಹವಾಗುವ ಸೆಡಿಮೆಂಟ್ಸ್ ಆಚೀಚೆ ಹಂಚಿಕೆಯಾಗುತ್ತವೆ. ಇವು ಹೆಚ್ಚು ಶೇಖರಣೆಯಾಗದ ಭಾಗದಲ್ಲಿ ಮಳೆಗಾಲದಲ್ಲಿ ಕಡಲ್ಕೊರೆತ ತೀವ್ರವಾಗುವ ಸಾಧ್ಯತೆ ಇರುತ್ತದೆ. ತಡೆಗೋಡೆ, ಬ್ರೇಕ್ ವಾಟರ್‌ನಂತಹ ನಿಯಂತ್ರಕಗಳಿಂದ ಒಂದು ಕಡೆ ಲಾಭವಾದರೆ, ಇನ್ನೊಂದು ಕಡೆ ದೊಡ್ಡ ನಷ್ಟವಾಗುತ್ತದೆ. ವಿಭಿನ್ನ ಕಾಲದ ಉಪಗ್ರಹ ಆಧಾರಿತ ನಕ್ಷೆಗಳನ್ನು ತುಲನೆ ಮಾಡಿದರೆ, ಒಂದೆಡೆ ಕಡಲ ತಡಿ ಹಿಗ್ಗಿರುವ, ಇನ್ನೊಂದೆಡೆ ಕುಗ್ಗಿರುವ ವ್ಯತ್ಯಾಸ ಗೋಚರಿಸುತ್ತದೆ ಎಂದು ತಿಳಿಸಿದರು.

'ಭೌಗೋಳಿಕ ನೆಲೆ, ಸಮುದ್ರದ ಆಳ, ಅಲೆಗಳ ಗಾತ್ರ, ಏರಿಳಿತ, ಅವಧಿ ಇಂತಹ ಸೂಕ್ಷ್ಮ ಸಂಗತಿಗಳು ಸಮುದ್ರ ತಡೆಗೋಡೆಯ ಸಾಫಲ್ಯ ಅಥವಾ ವೈಫಲ್ಯವನ್ನು ನಿರ್ಧರಿಸುತ್ತವೆ. ಕಲ್ಲಿನಿಂದ ಕೂಡಿದ ತೀರದಲ್ಲಿ ಕಡಲ್ಕೊರೆತ ಕಡಿಮೆ. ಇಂತಹ ಸ್ಥಳಗಳಲ್ಲಿ ತಡೆಗೋಡೆ ನಿರ್ಮಿಸಿದಾಗ ಅಷ್ಟಾಗಿ ಸಮಸ್ಯೆ ಆಗದು. ಅಳಿವೆ ಬಾಗಿಲಿನಲ್ಲಿ ಅಭಿವೃದ್ಧಿ, ಬಂದರು ನಿರ್ಮಾಣ, ಇವುಗಳ ವಿಸ್ತರಣೆ ಆಗುವ ಕಾರಣ ಇಂತಹ ಪ್ರದೇಶಗಳಲ್ಲಿ ಕಡಲ್ಕೊರೆತ ಹೆಚ್ಚು. ಸಮುದ್ರಕ್ಕೆ ತಡೆಗೋಡೆ ಕಟ್ಟುವುದು ಸಂಪೂರ್ಣ ವಿಫಲ ಎನ್ನಲಾಗದು. ಆದರೆ, ಅಗಾಧ ಬಂಡವಾಳ ಹೂಡಿಕೆ, ಪಶ್ಚಿಮ ಘಟ್ಟದ ಅಮೂಲ್ಯ ಕಲ್ಲುಗಳನ್ನು ತಂದು, ಕಡಲ ತಡಿಗೆ ಸುರಿಯುವುದು ಎಷ್ಟರ ಮಟ್ಟಿಗೆ ಸುಸ್ಥಿರ ಎಂಬುದರ ಬಗ್ಗೆ ಯೋಚಿಸಬೇಕಾಗಿದೆ' ಎನ್ನುತ್ತಾರೆ ತಜ್ಞರಾದ ಪ್ರೊ. ಆರ್.ಸಿ.ಭಟ್ಟ.

ಆರ್.ಸಿ.ಭಟ್ಟ

ಉಷ್ಣತೆ ಹೆಚ್ಚಿದಂತೆ ಸಮುದ್ರ ಮಟ್ಟ ಏರಿಕೆಯಾಗಿ ಅಲೆಗಳ ಚಲನೆಯಲ್ಲಿ ವ್ಯತ್ಯಾಸ ಉಂಟಾಗುತ್ತದೆ. ಸಂಚಯಗೊಂಡ (accretion) ಭೂಮಿ ಮತ್ತೆ ಸಮುದ್ರದ ಒಡಲು ಸೇರುವ ಸಂದರ್ಭಗಳೂ ಇರುತ್ತವೆ. ಹೀಗಾಗಿ, ಜಾಗತಿಕ ತಾಪಮಾನ ಏರಿಕೆ ಕೂಡ ಕಡಲ್ಕೊರೆತದ ಮೇಲೆ ಪರಿಣಾಮ ಉಂಟುಮಾಡಿದೆ ಎಂಬುದು ಅವರ ಅಭಿಪ್ರಾಯ.

ಕರಾವಳಿಯಲ್ಲಿ ಸಾಧ್ಯತೆ ಇದ್ದಲ್ಲಿ ಕಾಂಡ್ಲಾ ಬೆಳೆಸಬಹುದು. ಕಡಲ ಅಂಚಿನಲ್ಲಿ ಬೆಳೆಯುವ ಬಳ್ಳಿಗಳು, ಪಾಮ್ ಟ್ರೀ, ಕುರುಚಲು ಗಿಡಗಳ ಹಸಿರು ಗೋಡೆ ನಿರ್ಮಾಣದಿಂದ ಸ್ವಲ್ಪ ಮಟ್ಟಿಗೆ ಕಡಲ್ಕೊರೆತ ತಡೆಗಟ್ಟಬಹುದು. ಸಿಆರ್‌ಝೆಡ್ ನಿಯಮಗಳ ಪುನರಾವರ್ತಿತ ತಿದ್ದುಪಡಿ, ರೆಸಾರ್ಟ್‌ಗಳು, ಕಾಂಕ್ರೀಟ್ ಕಟ್ಟಡಗಳ ನಿರ್ಮಾಣ ಹೆಚ್ಚಿದರೆ, ಸಮಸ್ಯೆಯ ಗಂಭೀರತೆಯೂ ಹೆಚ್ಚುತ್ತದೆ. ಸಮುದ್ರದ ತೀರದಲ್ಲಿ ಮಾನವ ಹಸ್ತಕ್ಷೇಪ ಕಡಿಮೆ ಮಾಡಿದರೆ, ಸಮಸ್ಯೆಗಳು ಬಿಗಡಾಯಿಸಲಾರವು ಎಂಬುದು ಅವರ ಸಲಹೆ.

ಕರಾವಳಿಯ ಸುಸ್ಥಿರ ಸಂರಕ್ಷಣೆ ಮತ್ತು ನಿರ್ವಹಣೆ ಹೂಡಿಕೆ ಯೋಜನೆ ವಿವರ

ಮೊದಲ ಕಂತು
- ಯೋಜನಾ ವೆಚ್ಚ: ₹ 223.1 ಕೋಟಿ
- ಎಡಿಬಿ ಸಾಲ: ₹ 188.6 ಕೋಟಿ
- ಕರ್ನಾಟಕ ಸರ್ಕಾರ ಭರಿಸಿದ್ದು: ₹ 34.5 ಕೋಟಿ

ಎರಡನೇ ಕಂತು
- ಯೋಜನಾ ವೆಚ್ಚ: ₹ 640.75 ಕೋಟಿ
- ಎಡಿಬಿ ಸಾಲ: ₹ 448.67 ಕೋಟಿ
- ಕರ್ನಾಟಕ ಸರ್ಕಾರ ಭರಿಸಿದ್ದು: 192.07 ಕೋಟಿ

ನೆಲ್ಲಿಕುನ್ನು ಮಾದರಿ ಬಳಕೆಗೆ ಆಸಕ್ತಿ

ಕಾಸರಗೋಡಿನ ಉದ್ಯಮಿ ಯು.ಕೆ.ಯೂಸುಫ್ ಎಂಬುವರು ಕಡಲ್ಕೊರೆತ ತಡೆಗೆ 'ಸೀ ವೇವ್ ಬ್ರೇಕರ್' ಮಾದರಿಯನ್ನು ಅಭಿವೃದ್ಧಿಪಡಿಸಿದ್ದು, ಇದಕ್ಕೆ ಪೇಟೆಂಟ್ ಕೂಡಾ ಪಡೆದುಕೊಂಡಿದ್ದಾರೆ. ಕಾಸರಗೋಡು ಜಿಲ್ಲೆಯ ನೆಲ್ಲಿಕುನ್ನು ಎಂಬಲ್ಲಿ ವರ್ಷದ ಹಿಂದೆ ಈ ಮಾದರಿಯಲ್ಲಿ ತಡೆಗೋಡೆ ನಿರ್ಮಿಸಿದ್ದಾರೆ. ಆ ಬಳಿಕ ಅಲ್ಲಿ ಕಡಲ್ಕೊರೆತ ಕಾಣಿಸಿಲ್ಲ.

ಕರ್ನಾಟದ ಅಧಿಕಾರಿಗಳ ನಿಯೋಗವು ಇತ್ತೀಚೆಗೆ ನೆಲ್ಲಿಕುನ್ನುವಿಗೆ ಭೇಟಿ ನೀಡಿ ಪರಿಶೀಲಿಸಿದೆ. ಬಟ್ಟಪ್ಪಾಡಿಯಲ್ಲಿ ಪ್ರಾಯೋಗಿಕವಾಗಿ ಸೀ ವೇವ್ ಬ್ರೇಕರ್ ಮಾದರಿ ಅಳವಡಿಸಲು ಬಂದರು ಇಲಾಖೆ ಚಿಂತನೆ ನಡೆಸಿದೆ.

₹ 864 ಕೋಟಿ 'ಕಡಲಪಾಲು'...

ಒಂದನೇ ಪುಟದಿಂದ

ಅಚ್ಚರಿಯೆಂದರೆ ಈ ಯೋಜನೆಯಡಿ ಕಿನಾರೆಗೆ ಸಮಾನಾಂತರವಾಗಿ ಬಂಡೆ ಸಾಲು (ರೀಫ್) ಅಳವಡಿಸಿರುವ ಸೋಮೇಶ್ವರ ಪುರಸಭೆ ವ್ಯಾಪ್ತಿಯ ಬಟ್ಟಪ್ಪಾಡಿಯಲ್ಲಿ ಅರಬ್ಬೀಸಮುದ್ರವು ಸುಮಾರು 600 ಮೀ. ನೆಲವನ್ನು ಕಬಳಿಸಿದೆ. ಸುಮಾರು 700 ಮೀ ಉದ್ದದ ಡಾಂಬರು ರಸ್ತೆ ಕಡಲ ಒಡಲು ಸೇರಿದೆ. 30ಕ್ಕೂ ಅಧಿಕ ಕಟ್ಟಡಗಳು ಸಮುದ್ರದ ಪಾಲಾಗುವ ಆತಂಕ ಎದುರಿಸುತ್ತಿವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಟ್ಟಪ್ಪಾಡಿ, ಉಚ್ಚಿಲ, ಸೀ ಗ್ರೌಂಡ್, ಮೊಗವೀರಪಟ್ಣ, ಮೀನಕಳಿಯ, ಸುರತ್ಕಲ್ ದೀಪಸ್ತಂಭ ಹಾಗೂ ಸಸಿಹಿತ್ಲುವಿನಲ್ಲಿ ಈಗಲೂ ಕಡಲ್ಕೊರೆತ ಉಂಟಾಗುತ್ತಿದೆ. ಪಣಂಬೂರು ಸಮೀಪದ ಮೀನಕಳಿಯದಲ್ಲಿ ಕಾಂಕ್ರೀಟ್ ರಸ್ತೆಯನ್ನೂ ಕಡಲ ಅಲೆಗಳು ಬುಡಮೇಲು ಮಾಡಿವೆ. ಇಲ್ಲಿ 15ಕ್ಕೂ ಅಧಿಕ ಮನೆಗಳು ಕೊಚ್ಚಿಹೋಗುವ ಆತಂಕ ಎದುರಿಸುತ್ತಿವೆ.

ಉಡುಪಿ ಜಿಲ್ಲೆಯಲ್ಲಿ ಮೂಳೂರು ತೊಟ್ಟಂ, ಪಡುಬಿದ್ರಿ ನಡಿಪಟ್ನ, ಕೈಪುಂಜಾಲು, ನಡಿಪಟ್ನ ಬ್ಲೂ ಫ್ಲಾಗ್ ಕಿನಾರೆ, ಮೂಳೂರು ಪಡು, ಕುತ್ಪಾಡಿ ಪಡುಕೆರೆ, ಕೋಟ, ಕೋಡಿ ಕನ್ಯಾನ, ಹೊಸಬೆಂಗ್ರೆ, ಮರವಂತೆ, ಗುಜ್ಜಾಡಿ, ಕಂಚಗೋಡು ರಾಣರಕೇರಿ, ಕಿರಿ ಮಂಜೇಶ್ವರದ ಆದ್ರಗೋಳಿಯಲ್ಲಿ ಕಡಲ್ಕೊರೆತ ಉಂಟಾಗುತ್ತಿದೆ. ಮರವಂತೆಯಲ್ಲಿ ಉತ್ತರ ಭಾಗದ ಬ್ರೇಕ್ ವಾಟರ್ ಬಳಿಯೂ ಸಮಸ್ಯೆ ಮುಂದುವರಿದಿದೆ.

ಉತ್ತರ ಕನ್ನಡ ಜಿಲ್ಲೆಯ ಗೋರ್ಟೆ, ಬೆಳ್ಕೆ, ಹೊನ್ನಿಗದ್ದೆ, ತೆಂಗಿನಗುಂಡಿ, ಭಾವಿಕೇರಿ, ಬೇಲೆಕೇರಿ, ಬೆಳಂಬಾರ, ಗಾಬೀತಕೇಣಿ, ಹಾರವಾಡ, ಬಾಡ, ಹೊಲನಗದ್ದೆ, ಅಳ್ವೆಕೋಡಿ, ಪಾವಿನಕುರ್ವ, ತೊಪ್ಪಲ ಕೇರಿ, ಕಾರವಾರ, ದೇವಬಾಗದಲ್ಲೂ ಅರಬ್ಬೀ ಸಮುದ್ರದ ದೈತ್ಯ ಅಲೆಗಳು ಈಗಲೂ ನೆಲವನ್ನು ಕಬಳಿಸುತ್ತಿವೆ.

ಎಡಿಬಿ ಕಾಮಗಾರಿ ಕೈಗೊಳ್ಳುವ ಮುನ್ನ ಕಡಲ್ಕೊರೆತ ಕಾಣಿಸಿಕೊಂಡಾಗಲೆಲ್ಲ ಭಾರಿ ಗಾತ್ರದ ಬಂಡೆಕಲ್ಲುಗಳನ್ನು ಸಮುದ್ರಕ್ಕೆ ಸುರಿಯಲಾಗುತ್ತಿತ್ತು. ಇದಕ್ಕೆ ಲೆಕ್ಕ ಇಡುವ ಪರಿಪಾಟವಿಲ್ಲ. ಈ ತುರ್ತು ಕಾಮಗಾರಿ ಹೆಸರಿನಲ್ಲಿ ಪ್ರತಿವರ್ಷವೂ ಕೋಟಿಗಟ್ಟಲೆ ರೂಪಾಯಿ ವ್ಯಯಿಸಲಾಗುತ್ತಿತ್ತು. ಶಾಶ್ವತ ಪರಿಹಾರ ಕಾಮಗಾರಿ ಕೈಗೊಂಡ ಬಳಿಕವೂ ಕಡಲಿಗೆ ಕಲ್ಲುಗಳನ್ನು ಸುರಿಯುವುದು ನಿಂತಿಲ್ಲ.

2018ರಿಂದ 2021ರ ನಡುವೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 30 ಹೊಸ ಕಾಮಗಾರಿಗಳಿಗೆ ₹ 23.54 ಕೋಟಿ ಮೊತ್ತದ ಪ್ರಸ್ತಾವಗಳನ್ನು ಹಾಗೂ ಉಡುಪಿ ಜಿಲ್ಲೆಯಲ್ಲಿ 40 ಕಾಮಗಾರಿಗಳಿಗೆ ₹ 91.67 ಕೋಟಿ ಮೊತ್ತದ ಪ್ರಸ್ತಾವಗಳನ್ನು ಮೂಲಸೌಕರ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆ ಸಿದ್ಧಪಡಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯೊಂದರಲ್ಲೇ ₹114.45 ಕೋಟಿ ವೆಚ್ಚದಲ್ಲಿ ಏಳು ಕಡೆ ಶಾಶ್ವತ ಪರಿಹಾರ ಕಾಮಗಾರಿಗಳನ್ನು ನಡೆಸುವ ಹೊಸ ಪ್ರಸ್ತಾವಗಳನ್ನು ಇಲಾಖೆಯಿಂದ ಸರ್ಕಾರಕ್ಕೆ ಈ ವರ್ಷ ಮತ್ತೆ ಸಲ್ಲಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2022ನೇ ಸಾಲಿನಲ್ಲಿ ಕಡಲ್ಕೊರೆತ ತಡೆಗೆ ₹ 14.75 ಕೋಟಿ ಮೊತ್ತದ ತಾತ್ಕಾಲಿಕ ಕಾಮಗಾರಿಗಳನ್ನು ಮತ್ತೆ ಏಳು ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ಇದುವರೆಗೆ ₹ 5.83 ಕೋಟಿ ವೆಚ್ಚವಾಗಿದೆ. ತುರ್ತು ತಡೆಗೋಡೆ ನಿರ್ಮಿಸಲು ಮತ್ತೆ ₹ 6 ಕೋಟಿ ಮೊತ್ತದ ಏಳು ಕಾಮಗಾರಿಗಳ ಪ್ರಸ್ತಾವವನ್ನು ಇಲಾಖೆಯು ಸರ್ಕಾರಕ್ಕೆ ಸಲ್ಲಿಸಿದೆ. ವರ್ಷವೂ ನೂರಾರು ಕೋಟಿ ರೂಪಾಯಿ ಅನುದಾನ ಸಮುದ್ರಪಾಲಾಗುತ್ತಿದ್ದರೂ ಕಡಲ್ಕೊರೆತ ಮಾತ್ರ ಹತೋಟಿಗೆ ಬರುತ್ತಿಲ್ಲ.

ಪೂರಕ ಮಾಹಿತಿ: ಬಾಲಚಂದ್ರ ಎಚ್.

ಎಡಿಬಿ ಯೋಜನೆ ಅಡಿ ಕೈಗೊಂಡ ಕಡಲ್ಕೊರೆತ ತಡೆ ಕಾಮಗಾರಿಗಳು

ದಕ್ಷಿಣ ಕನ್ನಡ ಜಿಲ್ಲೆ

ಕಾಮಗಾರಿ	ಅಂದಾಜು ವೆಚ್ಚ (₹ ಕೋಟಿ)	ಅಂತಿಮ ವೆಚ್ಚ (₹ ಕೋಟಿ)
ಉಳ್ಳಾಲದಲ್ಲಿ 2 ಕಡೆ ಸಮುದ್ರದೊಳಗೆ ತಲಾ 250 ಮೀ ಉದ್ದದ ಬಂಡೆಸಾಲು (ರೀಫ್) ನಿರ್ಮಾಣ	88	107
ಉಳ್ಳಾಲದಲ್ಲಿ 8 ಕಡೆ 65 ಮೀ ಚಾಚು ತಡೆಗೋಡೆಗಳ (ಬರ್ಮ್ಸ್) ನಿರ್ಮಾಣ	26.25	36.25
ಉಳ್ಳಾಲ ಬ್ರೇಕ್‌ವಾಟರ್ ಅಭಿವೃದ್ಧಿ	46.40	58.32
ಸೋಮೇಶ್ವರದಲ್ಲಿ 68 ಮೀ ಉದ್ದದ ಜಿಯೋಟೆಕ್ಸ್‌ಟೈಲ್‌ನ 2 ರಿವೆಟ್‌ಮೆಂಟ್ ನಿರ್ಮಾಣ	32.15	23.58
ಸೋಮೇಶ್ವರದಲ್ಲಿ 2 ಕಡೆ ಸಮುದ್ರದೊಳಗೆ 200 ಮೀ ಉದ್ದದ ಬಂಡೆಸಾಲು (ರೀಫ್) ನಿರ್ಮಾಣ	108.80	104.69
ಮುಕ್ಕಚ್ಚೇರಿಯಲ್ಲಿ ಸಮುದ್ರದ ತಡೆಗೋಡೆ ದುರಸ್ತಿ	20.19	24.72

ಉಡುಪಿ ಜಿಲ್ಲೆ

ಕಾಮಗಾರಿ	ಅಂದಾಜು ವೆಚ್ಚ (₹ ಕೋಟಿ)	ಅಂತಿಮ ವೆಚ್ಚ (₹ ಕೋಟಿ)
ಮರವಂತೆಯಲ್ಲಿ ನೇರ ಮತ್ತು ಆಕಾರದ ಕರೆಗೋಡೆ ಗ್ರಾಯ್ನ್ಸ್ ನಿರ್ಮಾಣ	92.23	67.50
ಕೋಡಿ ಬೆಂಗ್ರೆಯಲ್ಲಿ ಬಂಡೆಕಲ್ಲು ಜೋಡಣೆ (ರಿವೆಟ್‌ಮೆಂಟ್)	78.88	75.88
ಉದ್ಯಾವರ ಬಂಡೆಕಲ್ಲಿನ ಕರೆಗೋಡೆ (ಗ್ರಾಯ್ನೆ) ನಿರ್ಮಾಣ ಮತ್ತು ಮರಳು ಪೋಷಣೆ	98.85	64.02
ತೆಂಕ ಎರ್ಮಾಳು: ಬಂಡೆಕಲ್ಲು ಜೋಡಣೆ (ರಿವೆಟ್‌ಮೆಂಟ್) ಮತ್ತು ಮರಳು ಪೋಷಣೆ	53.22	43.81
ಉತ್ತರ ಕನ್ನಡ ಜಿಲ್ಲೆ		
ಮುರುಡೇಶ್ವರದಲ್ಲಿ ಕಿನಾರೆ ಬಳಿ ಬಂಡೆಸಾಲು ನಿರ್ಮಾಣ ಮತ್ತು ಮರಳು ದಿಬ್ಬಗಳ ನಿರ್ಮಾಣ	₹24.28 ಕೋಟಿ	(ಅಂತಿಮ ವೆಚ್ಚ ಲಭ್ಯವಿಲ್ಲ)

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಜುಲೈ 24, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ಏಕಾದಶಿ ಗಂ. 13-46 ನಕ್ಷತ್ರ: ರೋಹಿಣಿ ಗಂ. 22-00 ಯೋಗ: ವೃದ್ಧಿ ಗಂ. 14-00, ಕರಣ: ಬಾಲವ ಗಂ. 13-46, ಕರ್ಕಾಟಕ ಮಾಸದ 07 ನೇ ದಿನ.
ರಾಹುಕಾಲ : ಸಾಯಂಕಾಲ 04:30 - 06:00
ಸೂರ್ಯೋದಯ : 06-17 ಸೂರ್ಯಾಸ್ತ : 06-57 ಮುಸ್ಲಿಂ ದಿನಾಂಕ : 24 ಜುಲ್‌ಹಿಜಾನ್
ದಿನ ವಿಶೇಷ : ಕಾಮಿಕ ಏಕಾದಶಿ
ಅದೃಷ್ಟ ಸಂಖ್ಯೆ : 7, 10

ಮೇಷ: ದಿನದ ಪೂರ್ವಾರ್ಧದಲ್ಲಿ ಶುಭಫಲ ಅನುಭವಿಸುವ ನಿಮಗೆ ಉತ್ತರಾರ್ಧದಲ್ಲಿ ಸಿಹಿ-ಕಹಿಯ ಮಿಶ್ರ ಫಲವನ್ನು ಸವಿಯಬೇಕಾಗುತ್ತದೆ. ಎಷ್ಟೇ ಅನುಭವ ಇದ್ದರೂ ಇನ್ನೂ ಜೀವನದ ಪಾಠ ಕಲಿಯುವುದು ಅಗತ್ಯವೆನಿಸುವುದು.

ವೃಷಭ: ಕಾರ್ಯಕ್ಷೇತ್ರದಲ್ಲಿ ಚಾಣಾಕ್ಷ ವರ್ತನೆ ತೋರಿಸುವುದರಿಂದ ಊರಿನಲ್ಲಿ ಅಥವಾ ವಂಶದಲ್ಲಿ ಮುಖ್ಯಸ್ಥನಾಗುವ ಯೋಗ. ವೃತ್ತಿಯಲ್ಲಿ ಮೇಲಧಿಕಾರಿಗಳ ಮೆಚ್ಚುಗೆ ಪಡೆಯಲು ವಾಮಮಾರ್ಗದ ಪ್ರಯತ್ನ ಮಾಡಬೇಡಿ.

ಮಿಥುನ: ನಿಮ್ಮ ವ್ಯವಹಾರದಲ್ಲಿ ಸಮಂಜಸವಾದ ನಿರ್ಧಾರವನ್ನು ಕೈಗೊಳ್ಳುವುದರಿಂದ ಬದುಕನ್ನು ಅರ್ಥಪೂರ್ಣವಾಗಿ ನಡೆಸಬಹುದು. ಆಧ್ಯಾತ್ಮಿಕ ವಿಷಯಗಳ ಬಗ್ಗೆ ಹೆಚ್ಚಿನ ಗಮನ ನೀಡುವುದರಿಂದ ಮನಃಶಾಂತಿ ಸಿಗುತ್ತದೆ.

ಕರ್ಕಾಟಕ: ಚರ್ಮಕ್ಕೆ ಸಂಬಂಧಿಸಿದ ರೋಗಗಳು ಎದುರಾಗಬಹುದು. ಉಪನ್ಯಾಸಕರಿಗೆ, ಸಂಗೀತಗಾರರಿಗೆ, ಕ್ರೀಡಾಪಟುಗಳಿಗೆ ಗೌರವ ಸಿಗಲಿದೆ. ಪದವೀಧರರಿಗೆ ವಿದೇಶದಲ್ಲಿ ಉದ್ಯೋಗ ದೊರೆಯುವ ಸಂಭವವಿದೆ.

ಸಿಂಹ: ನೂತನ ಮನೆ ಖರೀದಿಯ ಅಥವಾ ನಿವೇಶನಗಳ ಖರೀದಿಯ ಆಲೋಚನೆಗಳಿಗೆ ಪೂರಕವಾದ ವಾತಾವರಣ ಸ್ನೇಹಿತರಿಂದ ಸಿಗಲಿದೆ. ಶನಿಯು ಅಶುಭ ಫಲವನ್ನು ನೀಡಿಯಾನು. ಆರೋಗ್ಯದ ಬಗ್ಗೆ ಜಾಗ್ರತೆ ಇರಲಿ.

ಕನ್ಯಾ: ಮಾತುಗಾರಿಕೆಯಿಂದ ಸಹೋದರರಿಗೆ ನೋವಾಗಬಹುದು ಅಥವಾ ಕಲಹ ಉಂಟಾಗಬಹುದು. ಮಾತನಾಡುವಾಗ ಎಚ್ಚರವಹಿಸಿ. ಕೆಲಸಗಳನ್ನು ಸಮರ್ಥವಾಗಿ ನಿರ್ವಹಿಸಿದ ತೃಪ್ತಿ ನಿಮಗಿದೆ. ವಿದ್ಯಾಭ್ಯಾಸದಲ್ಲಿ ಗಮನವಿರಲಿ.

ತುಲಾ: ವ್ಯಾಪಾರದಲ್ಲಿ ಕೈಗೊಂಡ ಕಾರ್ಯಗಳನ್ನು ದೇವರ ಪ್ರಾರ್ಥನೆಯ ಮೂಲಕ ಮುಂದುವರೆಸಿ. ಹೊಸ ಪರಿಚಯದ ರಾಜಕೀಯ ವ್ಯಕ್ತಿಯೊಂದಿಗೆ ನಿಮ್ಮ ಸಂಬಂಧ ಉತ್ತಮಗೊಳ್ಳುವುದು. ಮಾನಸಿಕವಾಗಿ ಸದೃಢರಾಗುವಿರಿ.

ವೃಶ್ಚಿಕ: ದಾಂಪತ್ಯದಲ್ಲಿ ಎಲ್ಲಾ ವಿಚಾರಗಳನ್ನು ಹಂಚಿಕೊಳ್ಳುವಿಕೆಯು ಸಮಸ್ಯೆ ಬಾರದಂತೆ ಕಾಪಾಡುತ್ತದೆ. ಪರಿಸ್ಥಿತಿಗೆ ಅನುಗುಣವಾಗಿ ಭಾವನೆಗಳನ್ನು ವ್ಯಕ್ತಪಡಿಸಿ, ಇಲ್ಲವಾದಲ್ಲಿ ಮುಜುಗರದ ಸಂದರ್ಭ ಎದುರಿಸಬೇಕಾಗಬಹುದು.

ಧನು: ಕೆಲಸದಲ್ಲಿ ಪ್ರಮುಖ ಬದಲಾವಣೆಯನ್ನು ಜಾರಿಗೊಳಿಸಬೇಕಾಗುವುದು. ಇಲ್ಲವಾದಲ್ಲಿ ನಷ್ಟದ ಪರಿಸ್ಥಿತಿ ಗಮನಕ್ಕೆ ಬರಲಿದೆ. ಸಾಧುಸಂತರ ದರ್ಶನವಾಗಲಿದೆ. ನೂತನ ವಾಹನ ಕೊಳ್ಳುವುದನ್ನು ಸ್ವಲ್ಪ ದಿನಗಳ ಮಟ್ಟಿಗೆ ಮುಂದೂಡಿ.

ಮಕರ: ಅಭ್ಯಾಸದ ಕೊರತೆ ಕ್ರೀಡಾಪಟುಗಳ ವೈಫಲ್ಯಕ್ಕೆ ಕಾರಣವಾಗುವುದು. ಲೇಖನ ಬರಹಗಾರರಿಗೆ ಕೀರ್ತಿ ಅರಸಿ ಬರುವುದು, ಆದರೂ ಬದುಕಿನಲ್ಲಿ ಸ್ಥಿರತೆಯ ಅಭಾವ ಕಾಣಲಿದೆ. ಹಣಕ್ಕಾಗಿ ಚಿಂತಿಸುವ ಅಗತ್ಯವಿಲ್ಲ.

ಕುಂಭ: ಸಮೀಪವರ್ತಿಗಳ ಆಶ್ವಾಸನೆ, ಸಲಹೆ ದೊರೆತು ಶುಭಕಾರ್ಯಗಳತ್ತ ಯೋಚನೆ ಸಾಧ್ಯತೆ. ಇಂದು ಹೆಚ್ಚು ಕಾಲ ವ್ಯಾಪಾರ ವ್ಯವಹಾರದಿಂದ ದೂರ ಇರುವುದು ಉತ್ತಮ. ಉಮಾಮಹೇಶ್ವರನ ಆರಾಧನೆಯಿಂದ ಶುಭವಾಗಲಿದೆ.

ಮೀನ: ವಿದ್ಯಾರ್ಥಿಗಳಿಗೆ ಆಲಸ್ಯ ಎದುರಾಗುವುದರಿಂದ ವಿದ್ಯಾರ್ಜನೆಯಲ್ಲಿ ಸ್ವಲ್ಪ ಹಿನ್ನಡೆ. ಮಿತ್ರರಲ್ಲಿ ಸ್ನೇಹ, ಬಂಧುಗಳಲ್ಲಿ ಸಂಬಂಧ ಉಳಿಸಿಕೊಂಡು ಹೋಗುವುದು ಇಹಕ್ಕೂ ಪರಕ್ಕೂ ಒಳಿತು ಉಂಟುಮಾಡುತ್ತದೆ.

25 ವರ್ಷಗಳ ಹಿಂದೆ

ಗುರುವಾರ, 24-7-1997

● **'ಕೃಷ್ಣಾ ಯೋಜನೆ: ಸಚಿವರ ಹೇಳಿಕೆ ವಸ್ತು ಸ್ಥಿತಿಗೆ ವಿರುದ್ಧ'**

ಬೆಂಗಳೂರು, ಜುಲೈ 23– 'ಕೃಷ್ಣಾ ಮೇಲ್ದಂಡೆ ಯೋಜನೆ ಕಾಮಗಾರಿಗಳು ಎರಡು ವರ್ಷದಲ್ಲಿ ಪೂರ್ಣಗೊಳ್ಳುವುದಾಗಿ ಭಾರಿ ನೀರಾವರಿ ಸಚಿವ ಕೆ.ಎನ್. ನಾಗೇಗೌಡ ಅವರ ಹೇಳಿಕೆ ವಸ್ತು ಸ್ಥಿತಿಗೆ ವಿರುದ್ಧವಾಗಿದೆ. ಕೇವಲ ಪ್ರಚಾರಕ್ಕಾಗಿ ಅವರು ಹೀಗೆ ಹೇಳಿದ್ದಾರೆ' ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಎಂ. ಮಲ್ಲಿಕಾರ್ಜುನ ಖರ್ಗೆ ಇಂದು ಇಲ್ಲಿ ನುಡಿದರು.

'ಯೋಜನೆಯ ಕಾಮಗಾರಿಗಳು ಕಳೆದ 2 ತಿಂಗಳಿಂದ ಸ್ಥಗಿತವಾಗಿವೆ. ಅನೇಕ ಕೆಲಸಗಳು ಇನ್ನೂ ಆರಂಭವೇ ಆಗಿಲ್ಲ. ಎರಡೇ ವರ್ಷಗಳಲ್ಲಿ ಪೂರ್ಣಗೊಳಿಸಿ ಬಚಾವತ್ ತೀರ್ಪಿನಂತೆ 2000 ಇಸವಿ ಒಳಗೆ ರಾಜ್ಯದ ಪಾಲಿನ ನೀರು ಬಳಸಿಕೊಳ್ಳಲಾಗುವುದು ಎಂಬುದು ಅವಾಸ್ತವಿಕ' ಎಂದು ಟೀಕಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 24-7-1972

● **ಅರ್ಧಬೆಲೆಗೆ ನಿಘಂಟು: ಸಾಹಿತ್ಯ ಪರಿಷತ್ತಿಗೆ ಸರ್ಕಾರದಿಂದ ಎರಡೂವರೆ ಲಕ್ಷ ರೂ. ನೀಡಿಕೆ**

ಬೆಂಗಳೂರು, ಜುಲೈ 23– ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತೆ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಲಿರುವ ಸುಮಾರು ಒಂದು ಸಾವಿರ ಪುಟಗಳ ನಿಘಂಟನ್ನು ಅರ್ಧಬೆಲೆಗೆ ಒದಗಿಸಲು ಮಾರ್ಗವಾಗುವಂತೆ ಸರ್ಕಾರ ಎರಡೂವರೆ ಲಕ್ಷ ರೂಪಾಯಿ ನೆರವನ್ನು ನೀಡಲು ಒಪ್ಪಿದೆ.

ಕರ್ನಾಟಕ ಪತ್ರಕರ್ತರ ಸಂಘದಲ್ಲಿ ಪತ್ರಿಕಾ ಸಂದರ್ಶನ ಕಾರ್ಯಕ್ರಮದಲ್ಲಿ ಇಂದು ಭಾಗವಹಿಸಿದ್ದ ಪರಿಷತ್ತಿನ ಅಧ್ಯಕ್ಷ ಶ್ರೀ ಜಿ. ನಾರಾಯಣ ಅವರು ಈ ವಿಚಾರವನ್ನು ತಿಳಿಸಿದರು.

ಪದಬಂಧ 5028

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪದದಲ್ಲಿರುವ ಪುಸ್ತಕದ ಸರ್ಗ (4)
3.ಆಕ್ರಮಣದ ವೇಳೆ ತೋರಿದ ಶೌರ್ಯ (4)
5.ಮಣ ಭಾರ ಹೊತ್ತಿರುವ ನಲ್ಲ (3)
6.ಲಕ ಲಕ ಹೊಳೆಯುತ್ತಿರುವ ಬೊಟ್ಟು (3)
8.ನೂರು ಸಾವಿರದಿಂದ ಆರಂಭವಾಗಿರುವ ಶುಭಚಿಹ್ನೆ (3)
9.ನೀರು ಒಸರುವ ಜಾಗ (2)
10.ಹೆಜ್ಜೆ ಹಾಕುವಾಗ ಮೂಡಿದ ನಾಚಿಕೆ (2)
11.ಕಡಾಯಿ ಹಿಡಿದು ತೋರಿದ ಒಣ ಡೌಲು (3)
12.ಕೆಲವರು ಮಾಡುವ ಕಾರ್ಯ (3)
14.ಪಾಲನ್ನು ಇಟ್ಟುಕೊಂಡು ರಕ್ಷಿಸುವುದು! (3)
16.ಕನ್ನಡಿಗನಿಗೆ ಸಿಗುತ್ತಿರುವ ರಿಬೇಟು! (4)
17.ಬೇರೆಯವರಿಗೆ ವಹಿಸಿಕೊಂಡುವುದು (4)

ಮೇಲಿಂದ ಕೆಳಕ್ಕೆ
1.ಪತಿಯು ರೂಢಿಸಿಕೊಂಡಿರುವ ರೀತಿ (3)
2.ಆದರ ತೋರಿ ಹೇಳಿರುವ ಬೆಲೆ (2)
3.ಪಯಣದಲ್ಲಿ ಮಾಡಿದ ಪ್ರತಿಜ್ಞೆ (2)
4.ವೃಕ್ಷದ ಬಳಿ ಸಂಭವಿಸಿದ ಸಾವು (3)
7.ಇದು ಬಡವರ ಬಾದಾಮಿ (5)
8.ಲವನಿಂದ ಬಂದಿರುವ ಹುರುಪು (5)
11.ದಿನ ತುಂಬಿರುವ ಗರ್ಭಿಣಿ(3)
13.ಅಕ್ಕರೆಯಿಂದ ತಿನ್ನಿಸಿರುವ ಸಿಹಿ (3)
14.ಬೀಜ ಬಿತ್ತಲು ಮಾಡಿರುವ ಮಡಿ (2)
15.ನೆನಪಲ್ಲೇ ಉಳಿದಿರುವ ಕಾರಣ (2)



5027ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಾರಂಗತ 3.ದಗಾಖೋರ
5.ತಿಗುರಿ 7.ಮಿಣಿ
8.ರಸ 11.ಯಮ
13.ಪಾಶ 14.ಗಡಸು
16.ಸರಪಣಿ 17.ಖಡ್ಗಮೃಗ

ಮೇಲಿಂದ ಕೆಳಕ್ಕೆ:
1.ಪಾಲುಗಾರ 2.ತತಿ
3.ದರಿ 4.ರಮಣಿ
6.ಗುದಾಮು 7.ಮಿತವ್ಯಯ
9.ಸಮಾವೇಶ 10.ಬರಡು
12.ಮಲಮಗ 13.ಪಾಯಸ
14.ಗಣಿ 15.ಸುಖ

ಸುಡೊಕು 5414

		5	6		2			3
	3	1			4	6		
6				1			5	9
	8	3		6				4
1				4				8
2			8		1	5	6	
					3			
4		2		9			3	1
	1		4		6		7	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5413 ಸುಡೊಕು

8	7	6	1	4	9	3	2	5
1	3	4	5	2	7	8	6	9
5	9	2	6	3	8	7	4	1
2	1	5	9	7	3	6	8	4
6	4	7	8	1	2	9	5	3
3	8	9	4	5	6	1	7	2
9	2	8	3	6	5	4	1	7
7	6	1	2	9	4	5	3	8
4	5	3	7	8	1	2	9	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.46	16,279	19,597
ಹಾರಂಗಿ	2,859	2,856.04	2,820	2,800
ಕಬಿನಿ	2284.00	2,284	15,000	15,000
ಹೇಮಾವತಿ	2,922	2,921.50	7,009	1,925
ಲಿಂಗನಮಕ್ಕಿ	1,819	1797.65	9,932	6,166
ಸೂಪಾ (ಮೀ)	564	541.48	3,594	2,678
ಮಾಣಿ	595	583.68	1,142	-
ತುಂಗಭದ್ರಾ	1,633	1,632.68	33,493	16,449
ಮಲಪ್ರಭಾ	2079.5	2,068.30	1,586	394
ಘಟಪ್ರಭಾ	2175	2,152.76	5,316	168
ಭದ್ರಾ	186	184.2	8,206	2,778
ಆಲಮಟ್ಟಿ (ಮೀ)	519.6	517.92	48,911	51,666
ನಾರಾಯಣಪುರ (ಮೀ)	492.25	491.48	40,000	12,000

* ನೆಲಮಟ್ಟದಿಂದ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಬೇಡ ಜಂಗಮ ಸಂಘಟನೆಗಳ ಒಕ್ಕೂಟದ ಪ್ರತಿಭಟನೆ

‘ಬೇಡಿಕೆ: ಆತ್ಮಾರ್ಪಣೆಗೂ ಸಿದ್ಧ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಕರ್ನಾಟಕ ಬೇಡಜಂಗಮ ಸಂಘಟನೆಗಳ ಒಕ್ಕೂಟದಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಸುತ್ತಿರುವ ‘ಸತ್ಯ ಪ್ರತಿಪಾದನಾ ಸತ್ಯಾಗ್ರಹ’ ಶನಿವಾರವೂ ಮುಂದುವರಿಯಿತು. ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಸಮುದಾಯದ ಜನ ಹಾಗೂ ಸ್ವಾಮೀಜಿಗಳು ಸತ್ಯಾಗ್ರಹಕ್ಕೆ ಬೆಂಬಲ ವ್ಯಕ್ತಪಡಿಸಿದರು.

ಸ್ವಾಮೀಜಿಗಳ ಸಮ್ಮುಖದಲ್ಲಿ ಪ್ರಮುಖ ನಿರ್ಣಯ ಕೈಗೊಂಡ ಒಕ್ಕೂಟದ ಮುಖಂಡರು, ‘ಆಗಸ್ಟ್ 15ರೊಳಗೆ ನಮ್ಮ ಬೇಡಿಕೆ ಈಡೇರಿಸಬೇಕು. ಇಲ್ಲದಿದ್ದರೆ, ಒಕ್ಕೂಟದ ಅಧ್ಯಕ್ಷ ಬಿ.ಡಿ. ಹಿರೇಮಠ ಆತ್ಮಾರ್ಪಣೆಗೂ ಸಿದ್ಧರಿದ್ದಾರೆ’ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಕಲ್ಯಾಣ ಸಮಿತಿ ವಿರುದ್ಧ ಮೊಕದ್ದಮೆ: ‘ಬೇಡ ಜಂಗಮ ಪ್ರಮಾಣಪತ್ರ ಪಡೆಯುವುದು ಕಾನೂನುಬದ್ಧ ಹಕ್ಕು. ಆದರೆ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಕಲ್ಯಾಣ ಸಮಿತಿ ಸದಸ್ಯರು, ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಕಾನೂನುಬಾಹಿರವಾಗಿ ಪತ್ರ ಬರೆದಿದ್ದಾರೆ. ನ್ಯಾಯಾಲಯದ ಆದೇಶಕ್ಕೆ ವಿರುದ್ಧವಾಗಿ ನಡೆದುಕೊಂಡಿರುವ ಕಲ್ಯಾಣ ಸಮಿತಿ ವಿರುದ್ಧ ರಾಜ್ಯದ ಎಲ್ಲ ಜಿಲ್ಲಾ ನ್ಯಾಯಾಲಯಗಳಲ್ಲಿ ಮೊಕದ್ದಮೆ ಹೂಡಲು ನಿರ್ಣಯ ಕೈಗೊಳ್ಳಲಾಗಿದೆ’ ಎಂದು ಒಕ್ಕೂಟದ ಪದಾಧಿಕಾರಿಗಳು ಹೇಳಿದರು.

‘ಕಾನೂನುಬದ್ಧವಾಗಿ ಬೇಡ ಜಂಗಮ ಜಾತಿ ಪ್ರಮಾಣಪತ್ರ ಪಡೆದವರು ಹಾಗೂ ಅದನ್ನು ನೀಡಿದ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವುದನ್ನು ತಕ್ಷಣ ನಿಲ್ಲಿಸಬೇಕು. ಬೇಡ ಜಂಗಮರಲ್ಲದವರಿಗೆ ಜಾತಿ ಪ್ರಮಾಣ ನೀಡಿದರೆ, ಅಂಥವರ ವಿರುದ್ಧ ಕ್ರಮ ಕೈಗೊಳ್ಳಲು ನಮ್ಮ ಅಭ್ಯಂತರವಿಲ್ಲ’ ಎಂದರು.

‘ಬೇಡ ಜಂಗಮ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು. ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಕೈಬಿಟ್ಟಿರುವ ಬೇಡ ಜಂಗಮ ಜಾತಿಯನ್ನು ಪುನಃ ಸೇರ್ಪಡೆ ಮಾಡಬೇಕು’ ಎಂದೂ ಒತ್ತಾಯಿಸಿದರು.

ಅಖಿಲ ಕರ್ನಾಟಕ ಬೇಡಜಂಗಮ ಸಂಘಟನೆಗಳ ಒಕ್ಕೂಟದಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಸುತ್ತಿರುವ ‘ಸತ್ಯ ಪ್ರತಿಪಾದನಾ ಸತ್ಯಾಗ್ರಹ’ ಶನಿವಾರವೂ ಮುಂದುವರಿಯಿತು – ಪ್ರಜಾವಾಣಿ ಚಿತ್ರ

ಅಗ್ನಿ ದುರಂತ: 8 ಕಾರ್ಮಿಕರಿಗೆ ಗಾಯ

ಹುಬ್ಬಳ್ಳಿ: ನಗರದ ಹೊರವಲಯದ ತಾರಿಹಾಳ ಕೈಗಾರಿಕಾ ಪ್ರದೇಶದ ಆಕ್ಸನಿಕ್ ಇನ್ನೋವೇಷನ್ ಪ್ರೈ.ಲಿ. ಕಂಪನಿಯ ಕಾರ್ಖಾನೆಯಲ್ಲಿ ಶನಿವಾರ ನಡೆದ ಅಗ್ನಿ ದುರಂತದಲ್ಲಿ 8 ಕಾರ್ಮಿಕರು ಗಾಯಗೊಂಡು, ಮೂವರ ಸ್ಥಿತಿ ಗಂಭೀರವಾಗಿದೆ. ಗಾಯಾಳುಗಳನ್ನು ಕಿಮ್ಸ್‌ಗೆ ದಾಖಲಿ ಸಲಾಗಿದೆ. ಕಾರ್ಖಾನೆಯಲ್ಲಿ‘ಸ್ಪಾರ್ಕ್ ಕ್ಯಾಂಡಲ್’ ತಯಾರಿ ಸಲಾಗುತ್ತಿತ್ತು.

ಹಳ್ಳದಲ್ಲಿ ಕೊಚ್ಚಿ ಹೋದ ಟ್ರ್ಯಾಕ್ಟರ್: ವ್ಯಕ್ತಿ ಸಾವು

ಕಲಬುರಗಿ: ತಾಲ್ಲೂಕಿನ ಕಡಣಿ–ಮಿಣಜಿಗಿ ನಡುವೆ ಶುಕ್ರವಾರ ರಾತ್ರಿ ತುಂಬಿ ಹರಿಯುತ್ತಿದ್ದ ಹಳ್ಳ ದಾಟು ವಾಗ ಟ್ರ್ಯಾಕ್ಟರ್ ಕೊಚ್ಚಿ ಹೋದ ಪರಿಣಾಮ ಕಡಣಿ ಗ್ರಾಮಸ್ಥ ಸಿದ್ದು ಕೆರಮಗಿ(37) ಎಂಬುವರು ಮೃತ ಪಟ್ಟರೆ, ಚಾಲಕ ಉಮೇಶ ಮಲ್ಕಾಜಪ್ಪ ಎಂಬುವರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಕಲಬುರಗಿ ನಗರ ಸೇರಿ ಜಿಲ್ಲೆಯ ಚಿಂಚೋಳಿ, ಜೇವರ್ಗಿ, ಯಡ್ರಾಮಿ, ಸೇಡಂ, ಚಿತ್ತಾಪುರದಲ್ಲಿ ಶುಕ್ರವಾರ ರಾತ್ರಿ ಉತ್ತಮ ಮಳೆಯಾಯಿತು. ಕಳೆದ 24 ಗಂಟೆಗಳ ಅವಧಿಯಲ್ಲಿ 45 ಮಿ.ಮೀ ಮಳೆಯಾಗಿದೆ. ಬೀದರ್ ಜಿಲ್ಲೆಯ ವಿವಿಧೆಡೆ ಶನಿವಾರ ಬೆಳಗಿನ ಜಾವ ಸುರಿದ ಧಾರಾಕಾರ ಮಳೆಗೆ ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿದೆ. ಔರಾದ್ ತಾಲ್ಲೂಕಿನ ಬೆಳಕುಣಿ ಬಳಿ ಚಿಕ್ಕ ಸೇತುವೆ ಕುಸಿದಿದೆ. ಭಾಲ್ಕಿ ತಾಲ್ಲೂಕಿನಲ್ಲಿ 10, ಔರಾದ್ ಹಾಗೂ ಹುಮನಾಬಾದ್ ತಾಲ್ಲೂಕಿನಲ್ಲಿ ತಲಾ 5 ಮನೆಗಳು ಸೇರಿ ಒಟ್ಟು 20 ಮನೆಗಳು ಭಾಗಶಃ ಕುಸಿದಿವೆ.

ಔರಾದ್ ತಾಲ್ಲೂಕಿನ ಖಾಶೆಂಪುರ ಬಳಿ ಸೇತುವೆ ಮುಳುಗಿ ಕೆಲ ಗ್ರಾಮಗಳ ಸಂಪರ್ಕ ಕಡಿತವಾಗಿದೆ. ಬೀದರ್‌ನ ಟೀಚರ್ಸ್ ಕಾಲೊನಿಯಲ್ಲಿ ರಸ್ತೆ ಮೇಲೆ ನೀರು ಹರಿದು ವಾಹನಗಳ ಸುಗಮ ಸಂಚಾರಕ್ಕೆ ತೊಂದರೆ ಯಾಯಿತು. ಜಿಲ್ಲೆಯಲ್ಲಿ ಶನಿವಾರ ಅಂಗನವಾಡಿ ಮತ್ತು ಕಿರಿಯ ಪ್ರಾಥ ಮಿಕ ಶಾಲೆಗಳಿಗೆ ಜಿಲ್ಲಾಡಳಿತ ರಜೆ ಘೋಷಿಸಿತ್ತು.

ಎರಡು ದಿನ ಗುಡುಗು ಸಹಿತ ಮಳೆ (ಬೆಂಗಳೂರು ವರದಿ): ಕರಾವಳಿ ಮತ್ತು ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಎರಡು ದಿನ ಮಳೆ ಮುಂದುವರೆಯಲಿದೆ. ಕೆಲವೆಡೆ ಗುಡುಗು ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಒಳನಾಡಿನ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಹಾಸನ, ಕೋಲಾರ, ಮಂಡ್ಯ, ಮೈಸೂರು ಹಾಗೂ ರಾಮನಗರ ಜಿಲ್ಲೆಗಳ ಕೆಲವೆಡೆ ಮಳೆಯಾಗುವ ಸಾಧ್ಯತೆಯಿದೆ. ಕರಾವಳಿಯ ಎಲ್ಲ ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆಯಾಗಲಿದೆ ಎಂದು ತಿಳಿಸಿದೆ.

ಸುದ್ದಿ 2 ನಿಮಿಷ

ರಾಜ್ಯದಲ್ಲಿ ಡೆಂಗಿ ಉಲ್ಬಣ

ಬೆಂಗಳೂರು: ಹವಾಮಾನ ವೈಪರೀತ್ಯ ಹಾಗೂ ಮಳೆಯಿಂದಾಗಿ ರಾಜ್ಯದಲ್ಲಿ ಡೆಂಗಿ ಪೀಡಿತರ ಸಂಖ್ಯೆ ಉಲ್ಬಣಗೊಂಡಿದ್ದು, ಕಳೆದ 20 ದಿನಗಳಲ್ಲಿ 1,172 ಪ್ರಕರಣಗಳು ದೃಢಪಟ್ಟಿವೆ.

ಕಳೆದೊಂದು ತಿಂಗಳಿನಿಂದ ಪ್ರಕರಣ ಗಳ ಸಂಖ್ಯೆ ಏರುಗತಿ ಪಡೆದಿದೆ. ಈವರೆಗೆ ಡೆಂಗಿ ಪೀಡಿತರಾದವರ ಒಟ್ಟು ಸಂಖ್ಯೆ 3,714ಕ್ಕೆ ಏರಿಕೆಯಾಗಿದೆ. ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ. ಕಳೆದ ವರ್ಷ ಈ ವೇಳೆ 1,502 ಡೆಂಗಿ ಪ್ರಕರಣಗಳು ದೃಢಪಟ್ಟಿದ್ದವು.

ಈ ವರ್ಷ 69 ಸಾವಿರಕ್ಕೂ ಅಧಿಕ ಡೆಂಗಿ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 29 ಸಾವಿರಕ್ಕೂ ಅಧಿಕ ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿಯೇ 26,827 ಮಂದಿಯಲ್ಲಿ ಡೆಂಗಿ ಶಂಕೆ ವ್ಯಕ್ತವಾಗಿದ್ದು, 723 ಮಂದಿಯಲ್ಲಿ ಈ ಜ್ವರ ದೃಢಪಟ್ಟಿದೆ. 388 ಪ್ರಕರಣಗಳು 7 ತಿಂಗಳಲ್ಲಿ ವರದಿ ಯಾದರೇ, ನಂತರದ 20 ದಿನಗಳಲ್ಲಿ 335 ಮಂದಿ ಡೆಂಗಿ ಪೀಡಿತರಾಗಿದ್ದಾರೆ.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ಪತ್ತೆಯಾಗಿವೆ. ಪ್ರಕರಣಗಳ ಸಂಖ್ಯೆ 10 ಜಿಲ್ಲೆಗಳಲ್ಲಿ ಮೂರಂಕಿ, 18 ಜಿಲ್ಲೆಗಳಲ್ಲಿ ಎರಡಂಕಿಯಲ್ಲಿದೆ. 2021ರಲ್ಲಿ 7,189 ಮಂದಿ ಡೆಂಗಿ ಪೀಡಿತರಾಗಿದ್ದರು. ಅವರಲ್ಲಿ ಐವರು ಮೃತಪಟ್ಟಿದ್ದರು.

857 ಮಂದಿಗೆ ಚಿಕೂನ್ ಗುನ್ಯಾ: 28 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣ ಗಳು ಪತ್ತೆಯಾಗಿವೆ. 23 ಸಾವಿರಕ್ಕೂ ಅಧಿಕ ಮಂದಿ ಚಿಕೂನ್‌ಗುನ್ಯಾ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 13 ಸಾವಿರಕ್ಕೂ ಅಧಿಕ ಮಂದಿಯ ರಕ್ತ ಪರೀಕ್ಷೆ ನಡೆಸ ಲಾಗಿದೆ. ಅವರಲ್ಲಿ 857 ಮಂದಿ ಈ ಜ್ವರಕ್ಕೆ ಒಳಗಾಗಿರುವುದು ದೃಢಪಟ್ಟಿದೆ.



ವಿಜಯಾನಂದ ಕಾಶಪ್ಪನವರ 2ನೇ ಮದುವೆ? ಚಿತ್ರಗಳು ವೈರಲ್

ಕುಷ್ಟಗಿ (ಕೊಪ್ಪಳ ಜಿಲ್ಲೆ): ಬಾಗಲಕೋಟೆ ಜಿಲ್ಲೆ ಹುನಗುಂದ ಕ್ಷೇತ್ರದ ಮಾಜಿ ಶಾಸಕ ವಿಜಯಾನಂದ ಕಾಶಪ್ಪನವರ ಅವರು ಎರಡನೇ ಮದುವೆಯಾಗಿದ್ದಾರೆ ಎಂಬ ವಿಷಯಕ್ಕೆ ಸಂಬಂಧಿಸಿದ ಚಿತ್ರ ಮತ್ತು ಇನ್ನಿತರ ಮಾಹಿತಿ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿವೆ. ಆದರೆ, ಇದರ ಬಗ್ಗೆ ಪ್ರತಿಕ್ರಿಯೆ ನೀಡಲು ವಿಜಯಾನಂದ ಕಾಶಪ್ಪನವರ ನಿರಾಕರಿಸಿದರು.

ಶನಿವಾರ ಪಟ್ಟಣಕ್ಕೆ ಬಂದಿದ್ದ ವಿಜಯಾನಂದ ಕಾಶಪ್ಪನವರ ಅವರಿಗೆ ಎರಡನೇ ಮದುವೆ ಬಗ್ಗೆ ಸುದ್ದಿಗಾರರು ಪ್ರಶ್ನಿಸಿದಾಗ, ‘ಎರಡನೇ ಮದುವೆಯಾದ ಬಗ್ಗೆ ದಾಖಲೆ ಇದ್ದರೆ ತೋರಿಸಿ. ನಂತರ ಮಾತನಾಡುವೆ. ಈ ವಿಷಯದ ಬಗ್ಗೆ ಏನನ್ನೂ ಹೇಳುವುದಿಲ್ಲ’ ಎಂದರು..

ವೈರಲ್ ಆಗಿರುವ ಚಿತ್ರಗಳಲ್ಲಿ ಹೆಣ್ಣು ಮಗುವಿನ ಜನನ ಪ್ರಮಾಣಪತ್ರವೂ ಸೇರಿದೆ. ಆ ಪ್ರಮಾಣಪತ್ರದಲ್ಲಿ ಹೆಣ್ಣು ಮಗುವಿನ ತಂದೆಯ ಹೆಸರಿನ ಮುಂದೆ ವಿಜಯಾನಂದ ಕಾಶಪ್ಪನವರ ಹೆಸರಿದೆ.

ಪ್ರಮಾಣಪತ್ರದ ಪ್ರಕಾರ, 2021ರ ಸೆಪ್ಟೆಂಬರ್ 1ರಂದು ಬೆಂಗಳೂರಿನ ಬಿಬಿಎಂಪಿ ಮದರ್‌ಹುಡ್ ಆಸ್ಪತ್ರೆಯಲ್ಲಿ ಹೆಣ್ಣುಮಗುವಿನ ಜನನವಾಗಿದೆ. ತಂದೆ ತಾಯಿಯ ಕಾಯಂ ವಿಳಾಸ ಕಾಲಂನಲ್ಲಿ 'ಪ್ರೆಸ್ಟೀಜ್ ಮಿಸ್ಟಿ ವಾಟರ್ ಅಪಾರ್ಟ್‌ಮೆಂಟ್, ಕೆಂಪಾಪುರ ಮುಖ್ಯರಸ್ತೆ, ಹೆಬ್ಬಾಳ ಬೆಂಗಳೂರು ಉತ್ತರ' ಎಂದಿದೆ.

‘ಪ್ರಮಾಣಪತ್ರ ಸೇರಿ ಯಾವುದರ ಬಗ್ಗೆಯೂ ಪ್ರತಿಕ್ರಿಯೆ ನೀಡುವುದಿಲ್ಲ. ವೈಯಕ್ತಿಕ ಬದುಕು ಮತ್ತು ರಾಜಕೀಯ ಬೇರೆ ಬೇರೆ. ಅದನ್ನು ಯಾರೂ ಕೆದಕಬಾರದು. ಚುನಾವಣಾ ಸಂದರ್ಭದಲ್ಲಿ ನಮ್ಮ ವಿರೋಧಿಗಳು ಈ ರೀತಿ ಮಾಡುತ್ತ ಇರುತ್ತಾರೆ’ ಎಂದು ವಿಜಯಾನಂದ ಕಾಶಪ್ಪನವರ ತಿಳಿಸಿದರು.

बैंक ऑफ़ बड़ौदा
Bank of Baroda

ವಲಯ ಕಛೇರಿ, ಎರಡನೇ ಮಹಡಿ, ವಿಜಯಾ ಟವರ್ಸ್, ಎಮ್.ಎಸ್.ಅರ್.ಎಸ್. ರಸ್ತೆ, ಮಂಗಳೂರು 575003
ಫೋನ್ : 0824 2413916

ಟೆಂಡರ್ ನೋಟಿಸು

ಬ್ಯಾಂಕ್ ಆಫ್ ಬರೋಡಾ, ಮಂಗಳೂರಿನ ವಲಯದ ಶಾಖೆಗಳಿಗಾಗಿ ಯುಪಿಎಸ್ ವ್ಯವಸ್ಥೆಗಳ ಪೂರೈಕೆ, ಇನ್‌ಸ್ಟಾಲೇಶನ್ ಮತ್ತು ಕಮಿಶನ್‌ಗಾಗಿ ಎರಡು ಬಿಡ್ ವ್ಯವಸ್ಥೆಯಲ್ಲಿ ಮೊಹರು ಹಾಕಿದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 16.08.2022 ಸಂಜೆ 5:00 ಗಂಟೆ ಟೆಂಡರ್ ಕಾಪಿ, ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ ದಯವಿಟ್ಟು ಈ ಕೆಳಗಿನ ಬ್ಯಾಂಕಿನ ವೆಬ್‌ಸೈಟ್‌ನ ಟೆಂಡರ್ ವಿಭಾಗಕ್ಕೆ ಭೇಟಿ ನೀಡಿ :
www.bankofbaroda.com
ಸ್ಥಳ : ಮಂಗಳೂರು
ದಿನಾಂಕ : 24.07.2022
ಸಹಿ/–
ಜನರಲ್ ಮ್ಯಾನೇಜರ್

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ಯಾದಗಿರಿ ವಿಭಾಗ, ಯಾದಗಿರಿ

ಸಂ.ಕಾನಿಅ/ಲೋಇ/ಯಾವಿ/ತಾಶಾ–1/ಇ–ಟೆಂಡರ್ ಪ್ರಕಟಣೆ/2022–23/1711 ದಿನಾಂಕ: 22.07.2022

:: ಅಲ್ಪಾವಧಿ ಇ –ಟೆಂಡರ್ ಅಧಿಸೂಚನೆ ::

1) ಕಾಮಗಾರಿ ವಿವರ: ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–1,2,3&4 ರಂತೆ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2020–21, 2021–22 ಮತ್ತು 2022–23ನೇ ಸಾಲಿನ ಲೆಕ್ಕಶೀರ್ಷಿಕೆ ಕೆಕೆಆರ್‌ಡಿಬಿ ಯೋಜನೆ ಅಡಿಯಲ್ಲಿ ಏಕ–ಲಕೋಟೆ ಮತ್ತು ದ್ವಿ–ಲಕೋಟೆ ಪದ್ಧತಿಯಲ್ಲಿ e-procurement ಮುಖಾಂತರ ಯಾದಗಿರಿ ತಾಲೂಕಿನ ತಾಲೂಕಿನ 06 ಮತ್ತು ಶಹಾಪೂರ ತಾಲೂಕಿನ ತಾಲೂಕಿನ 08 ಒಟ್ಟು 14 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ವರ್ಕ ಇಂಡೆಂಟ್ ಸಂಖ್ಯೆಃ (1)154100, (2)154628, (3)154453, (4)154069, (5)154272, (6)154559, (7)154281, (8)154292, (9)154638, (10)153947 ಮತ್ತು (11)154733. ಎಸ್.ಸಿ. ಮೀಸಲು: (1)154271 ಮತ್ತು (2)154278 ಎಸ್.ಟಿ ಮೀಸಲು: (1)154683, 2) ಕಾಮಗಾರಿ ಅಂದಾಜು ಮೊತ್ತ: **ಕನಿಷ್ಠ ರೂ. 10.00 ಲಕ್ಷ ಹಾಗೂ ಗರಿಷ್ಠ ರೂ:500.00 ಲಕ್ಷ**, 3) ಗುತ್ತಿಗೆದಾರರ ಅರ್ಹತೆ ವಿವರ: 4 ನೇ ದರ್ಜೆ ಹಾಗೂ ಮೇಲ್ಪಟ್ಟು (ನಿಯಮಾನುಸಾರ), 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ: ಅರ್ಜಿ ಬೆಲೆ e-procurement ನಂತೆ, ಇ.ಎಮ್.ಡಿ. ಕನಿಷ್ಠ ರೂ: 10,300.00 ಗರಿಷ್ಠ ರೂ:6,63,700.00, 5) ಪ್ರೀ–ಬಿಡ್ ಮೀಟಿಂಗ್ ದಿನಾಂಕ: **28.07.2022 (11.30 ಗಂಟೆ ನಂತರ)(ಕೆಡಬ್ಲ್ಯೂ–4ರ ಕಾಮಗಾರಿಗಳಿಗೆ ಮಾತ್ರ)**, 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: **01.08.2022 (17.30 ಗಂಟೆವರೆಗೆ)**, 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : **06.08.2022 (16.00 ಗಂಟೆವರೆಗೆ)**, 8) ಟೆಂಡರ/ಆರ್ಥಿಕ ಬಿಡ್ ತೆರೆಯುವ ದಿನಾಂಕ : **08.08.2022 (11.30 ಗಂಟೆ ನಂತರ) (ಕೆಡಬ್ಲ್ಯೂ–1&2ರ ಕಾಮಗಾರಿಗಳಿಗೆ ಮಾತ್ರ)**, 9) ಟೆಂಡರ/ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **08.08.2022 (11.30 ಗಂಟೆ ನಂತರ) (ಕೆಡಬ್ಲ್ಯೂ–3&4ರ ಕಾಮಗಾರಿಗಳಿಗೆ ಮಾತ್ರ)**, 10) ಆರ್ಥಿಕ ಬಿಡ್ ತೆರೆಯುವ ದಿನಾಂಕ **12.08.2022 (11.30 ಗಂಟೆ ನಂತರ) (ಕೆಡಬ್ಲ್ಯೂ–3&4ರ ಕಾಮಗಾರಿಗಳಿಗೆ ಮಾತ್ರ)**, 11) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ, 12) ಅಂತರ್ಜಾಲ ತಾಣದ ವಿಳಾಸ: www.e-proc.karnataka.gov.in

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರರು,
ವಾ.ಸಾ.ಸಂ.ಇ/ಯಾದಗಿರಿ/175/ಎಂಸಿ&ಎ/2022–23 ಲೋಕೋಪಯೋಗಿ ಇಲಾಖೆ. ವಿಭಾಗ: ಯಾದಗಿರಿ

ಕರ್ನಾಟಕ ಸರ್ಕಾರ – ಧಾರ್ಮಿಕ ದತ್ತಿ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ
ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು – 571301
ದೂರವಾಣಿ ಸಂಖ್ಯೆ: 08221–226245, 223320, 227245 Mail ID : sstnanjangud@gmail.com

ಸಂಖ್ಯೆ : ಎನ್‌ಎಸ್‌ಟಿ:ಪಿಆರ್ 01/ಮುಡಿಕೂದಲು/2022–23 ದಿನಾಂಕ : 29–06–2022

ಇ–ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಇ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 1999–2000 ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ಸೂಕ್ತ ಕೆ/ಸಿ ನಿಯಮದನ್ವಯ ಇ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಟೆಂಡರ್‌ನಲ್ಲಿ ಸ್ಪರ್ಧಾತ್ಮಕ ದರಗಳನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು 2021–22 ನೇ ಸಾಲಿನ ಆಹ್ವಾನಿಸಿರುತ್ತಾರೆ. ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನಕ್ಕೆ ಸೇರಿದ ಮುಡಿಕಟ್ಟೆಯಲ್ಲಿ ಶೇಖರಣೆಯಾಗಿರುವ ಉದ್ದನೆಯ ಕೂದಲು (ಮುಡಿ) ಅಂದಾಜು 33 ಕೆ.ಜಿ. ಮತ್ತು ತುಂಡು ಕೂದಲು ಅಂದಾಜು 16 ಕೆ.ಜಿ., ಇದ್ದು ಒಟ್ಟು 49 ಕೆ.ಜಿ. ಇದ್ದು ಇದನ್ನು ಪಡೆಯಲು ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಕರೆಯಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸುವವರು ಖುದ್ದು ಭೇಟಿ ಮಾಡಿ ಹಾಲಿ ಇರುವ ಕೂದಲನ್ನು ಪರಿಶೀಲಿಸಿ ಇದನ್ನು ಪಡೆಯಲು ಇ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಭಾಗವಹಿಸಬಹುದು. ಇ ಟೆಂಡರ್ ದಾಖಲೆಗಯಲ್ಲಿ ತಿಳಿಸಿರುವಂತೆ ಎಲ್ಲ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಟೆಂಡರ್ ದಿನಾಂಕ : ಈ ಕೆಳಗಿನಂತೆ ಇರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಹಾಗೂ ಮೊಬೈಲ್ ಸಂಖ್ಯೆ : 9141537918. ಶ್ರೀ ಹೆಚ್.ಎಲ್. ರವಿಕುಮಾರ್, ಸಹಾಯಕ ಅಭಿಯಂತರರಿಂದ ಮಾಹಿತಿ ಪಡೆಯಬಹುದು. ಕೆಳಕಂಡಂತೆ ನಿಗದಿಪಡಿಸಿದ ಇಎಂಡಿಯನ್ನು ಇ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರೊಂದು ರೀತಿಯಲ್ಲಿ ಸಲ್ಲಿಸತಕ್ಕದ್ದು.

ಕ್ರ.ಸಂ.	ಟೆಂಡರ್‌ನ ವಿವರ	ಇ.ಎಂ.ಡಿ. ಮೊತ್ತ
1.	ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ 2022–23 ನೇ ಸಾಲಿಗೆ ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನಕ್ಕೆ ಸೇರಿದ ಮುಡಿಕಟ್ಟೆಯಲ್ಲಿ ಶೇಖರಣೆಯಾಗಿರುವ ಉದ್ದನೆಯ ಕೂದಲು (ಮುಡಿ) ಅಂದಾಜು 33 ಕೆ.ಜಿ ಮತ್ತು ತುಂಡು ಕೂದಲು ಅಂದಾಜು 16 ಕೆ.ಜಿ. ಒಟ್ಟು ಅಂದಾಜು 49 ಕೆ.ಜಿ ಇದ್ದು ಇದನ್ನು ಪಡೆಯಲು ಇ ಟೆಂಡರ್ ಮೂಲಕ ಟೆಂಡರ್‌ನ್ನು ಕರೆದಿರುವ ಬಗ್ಗೆ	25,000.00

ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಇ–ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ.

1.	ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ	25–07–2022	ರ ನಂತರ
2.	ಇ–ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ಕಾಲ	26–08–2022	ಸಂಜೆ 5.00 ಗಂಟೆಯವರೆಗೆ
3.	ಇ–ಟೆಂಡರ್ ತೆರೆಯುವ ದಿನಾಂಕ ಮತ್ತು ಕಾಲ	29–08–2022	03.00 P.M. ನಂತರ

ಸಹಿ/– ಕಾರ್ಯ ನಿರ್ವಾಹಕ ಅಧಿಕಾರಿಗಳು
ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು

ಕೊಪ್ಪಳದ ಪ್ರಮುಖರು ಜೆಡಿಎಸ್‌ಗೆ: ಇಬ್ರಾಹಿಂ

ಕುಷ್ಟಗಿ (ಕೊಪ್ಪಳ ಜಿಲ್ಲೆ): ‘ಸಂಸದ ಸಂಗಣ್ಣ ಕರಡಿ, ಮಾಜಿ ಶಾಸಕರಾದ ಹಸನಸಾಬ್, ದೊಡ್ಡನಗೌಡ ಪಾಟೀಲ, ಇಕ್ಬಾಲ್ ಅನ್ಸಾರಿ ಸೇರಿ ಕೊಪ್ಪಳ ಜಿಲ್ಲೆಯ ಕಾಂಗ್ರೆಸ್, ಬಿಜೆಪಿಯ ಅನೇಕ ಪ್ರಮುಖರು ಜೆಡಿಎಸ್ ಸೇರುವ ಸಾಧ್ಯತೆಯಿದೆ’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಹೇಳಿದರು.

‘ಪಕ್ಷಕ್ಕೆ ಬರುವ ಎಲ್ಲರಿಗೂ ಸ್ವಾಗತವಿದೆ. ನಾವು ಆಹ್ವಾನಿಸಿಲ್ಲ. ಪಕ್ಷಕ್ಕೆ ಸೇರುವ ಅಪೇಕ್ಷೆ ಅವರಿಂದಲೂ ವ್ಯಕ್ತವಾಗಿದೆ. ಎಲ್ಲವೂ ಚರ್ಚೆ ಹಂತದಲ್ಲಿದ್ದು, ಊಹಾಪೋಹ ಅಲ್ಲ. ಈಗಷ್ಟೇ 'ನಿಶ್ಚಿತಾರ್ಥ' ನಡೆದಿದೆ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ನಿಧನ ವಾರ್ತೆ

ಸಂಶೋಧಕ ಶಿ.ಬಾ.ಪಾಟೀಲ



ಶಿ.ಬಾ.ಪಾಟೀಲ

ಸಂಕೇಶ್ವರ (ಬೆಳಗಾವಿ ಜಿಲ್ಲೆ): ಇಲ್ಲಿನ ಸಂಶೋಧಕ, ಸಾಹಿತಿ ಶಿವನಗೌಡ ಬಾಳಗೌಡ ಪಾಟೀಲ (83) ಶನಿವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಇದ್ದಾರೆ. ಅವರ ಕೊನೆಯ ಇಚ್ಛೆಯಂತೆ ದೇಹವನ್ನು ಕೆಎಲ್‌ಇ ಸಂಸ್ಥೆಯ ಡಾ.ಪ್ರಭಾಕರ ಕೋರೆ ಆಸ್ಪತ್ರೆಗೆ ದಾನ ಮಾಡಲಾಯಿತು.

ಪ್ರಾಥಮಿಕ ಶಾಲಾ ಶಿಕ್ಷಕರಾಗಿ ವೃತ್ತಿ ಆರಂಭಿಸಿದ ಶಿವನಗೌಡ ಅವರು, ರಟ್ಟ ಅರಸರ ಕಾಲದ ಸಂಸ್ಕೃತಿ ಕುರಿತು ಸಾಕಷ್ಟು ಅಧ್ಯಯನ ನಡೆಸಿದ್ದರು. ಕೂಹುಂಡಿ ನಾಡು, ನಾಣ್ಯಗಳ ಇತಿಹಾಸ, ಶ್ರೀಕ್ಷೇತ್ರ ಸೊಗಲ ದರ್ಶನ, ದುಂಡೀಶನ ವಚನಗಳು ಮುಂತಾದ ಕೃತಿಗಳನ್ನು ಅವರು ಬರೆದಿದ್ದಾರೆ.

ಕೂಡಲ ಸಂಗಮದ ಬಸವಧರ್ಮ ಪೀಠದ ಸಂಸ್ಥಾಪಕ ಸದಸ್ಯರಾಗಿ, ರಾಷ್ಟ್ರೀಯ ಬಸವ ದಳದ ಬೆಳಗಾವಿ ಜಿಲ್ಲಾ ಘಟಕದ ಅಧ್ಯಕ್ಷರಾಗಿ, ಪಠ್ಯರಚನಾ ಸಮಿತಿಯ ಸದಸ್ಯರಾಗಿಯೂ ದುಡಿದಿದ್ದಾರೆ. ಸಂಕೇಶ್ವರ ಸಮೀಪದ ಅರ್ಜುನವಾಡದಲ್ಲಿ ಬಸವೇಶ್ವರರ ಬಗ್ಗೆ ಬೆಳಕು ಚೆಲ್ಲುವ ಶಿಲಾ ಶಾಸನವೊಂದನ್ನು ಸಂಶೋಧಿಸಿದ್ದರು.

ಹುಕ್ಕೇರಿಯಲ್ಲಿ ಜರುಗಿದ ತಾಲ್ಲೂಕು ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿಯೂ ಅವರು ಕಾರ್ಯ ನಿರ್ವಹಿಸಿದ್ದರು. ಪಟ್ಟಣದಲ್ಲಿ ಬಸವ ಮಂಟಪ ಸ್ಥಾಪಿಸಿ ಪ್ರತಿ ವಾರ ವಚನಗಳ ಸಾರವನ್ನು ಜನಸಾಮಾನ್ಯರಿಗೆ ತಿಳಿಸುತ್ತಿದ್ದರು. ಅವರ ಸ್ವಂತ ಊರಾದ ಕೊಚರಿಯಲ್ಲಿ ಕನ್ನಡ ಶಾಲೆಯನ್ನೂ ಆರಂಭಿಸಿದ್ದಾರೆ. ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಹಲವು ಪ್ರಶಸ್ತಿಗಳು ಅವರಿಗೆ ಸಂದಿವೆ.



ಪಠ್ಯ ಸಮಿತಿ: ಮೀಸಲಾತಿ ಏಕಿಲ್ಲ?

ಬಂಡಾಯ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಚಿಂತಕ ಜಿ.ರಾಮಕೃಷ್ಣ ಪ್ರಶ್ನೆ

ಪ್ರಜಾವಾಣಿ ವಾರ್ತೆ

ದಾವಣಗೆರೆಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ರಾಜ್ಯ ಬಂಡಾಯ ಸಾಹಿತ್ಯ ಸಮ್ಮೇಳನವನ್ನು ಚಿಂತಕ ಜಿ.ರಾಮಕೃಷ್ಣ ಅವರು ನಗಾರಿ ಬಾರಿಸುವ ಮೂಲಕ ಉದ್ಘಾಟಿಸಿದರು. ಎ.ಬಿ ರಾಮಚಂದ್ರಪ್ಪ, ಸುಕನ್ಯ ಮಾರುತಿ, ಸಿ.ವಿ. ಪಾಟೀಲ, ಬರಗೂರು ರಾಮಚಂದ್ರಪ್ಪ, ಬಿ.ಎಂ. ಹನೀಫ್, ಎಂ.ಟಿ. ಸುಭಾಶ್ಚಂದ್ರ, ಬಿ.ಎನ್. ಮಲ್ಲೇಶ್ ಇದ್ದಾರೆ –ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

ದಾವಣಗೆರೆ: 'ನಮ್ಮ ಮಕ್ಕಳ ಭವಿಷ್ಯವನ್ನು ರೂಪಿಸುವ, ತಿಳಿವಳಿಕೆಯನ್ನು ಕಟ್ಟಿಕೊಡುವ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪಠ್ಯ ಪರಿಷ್ಕರಿಸುವ ಸಮಿತಿಯಲ್ಲಿ ಮೀಸಲಾತಿ ಏಕಿಲ್ಲ? ದಲಿತರು, ಹಿಂದುಳಿದವರು ಇದರಲ್ಲಿ ಏಕೆ ಮೀಸಲಾತಿ ಕೇಳಿಲ್ಲ' ಎಂದು ಚಿಂತಕ ಜಿ.ರಾಮಕೃಷ್ಣ ಪ್ರಶ್ನಿಸಿದರು.

ಬಂಡಾಯ ಸಾಹಿತ್ಯ ಸಂಘಟನೆ ಇಲ್ಲಿ ಹಮ್ಮಿಕೊಂಡಿದ್ದ ಎರಡು ದಿನಗಳ ರಾಜ್ಯ ಬಂಡಾಯ ಸಾಹಿತ್ಯ ಸಮ್ಮೇಳನವನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

'ಕನಿಷ್ಠ ತಿಳಿವಳಿಕೆ ಇಲ್ಲದ, ವೈಚಾರಿಕತೆ ಬಗ್ಗೆ ಅಸಡ್ಡೆಯಿರುವ, ಜನಸಾಮಾನ್ಯರ ಬಗ್ಗೆ ಗೌರವ ಇಲ್ಲದವರು ದೇಶವನ್ನು ಮರುಭೂಮಿ ಮಾಡುತ್ತಿದ್ದಾರೆ. ಅಂಥವರೇ ಪಠ್ಯಪುಸ್ತಕ ಪರಿಷ್ಕರಣೆ ಮಾಡುತ್ತಿದ್ದಾರೆ. ಶಿಕ್ಷಣವನ್ನು ತುಳಿದು ಚರಂಡಿಗೆ ಹಾಕಿ ಸಂಭ್ರಮಿಸುತ್ತಿದ್ದಾರೆ. ಶಿಕ್ಷಣ ದಿಕ್ಸೂಚಿ, ಮಾರ್ಗದರ್ಶಿ ಎಂದು ಅವೈಜ್ಞಾನಿಕ, ಅವೈಚಾರಿಕಗಳನ್ನು ಹೇಳಲಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಆರು, ಏಳನೇ ತರಗತಿಯ ಕನ್ನಡ ಪಠ್ಯದಲ್ಲಿ ತಿದ್ದುಪಡಿ ಮಾಡಿ ಶಿಕ್ಷಕರಿಗೆ ತಿಳಿಸುತ್ತಾರಂತೆ. ಅದನ್ನು ಶಿಕ್ಷಕರು ಮಕ್ಕಳಿಗೆ ಹೇಳಿ ಪುಸ್ತಕದಲ್ಲಿ ತಿದ್ದುಪಡಿ ಮಾಡಿಸಬೇಕಂತೆ. ಪಠ್ಯಪುಸ್ತಕವನ್ನು ಮಕ್ಕಳೇ ತಿದ್ದುಪಡಿ ಮಾಡುವುದಾದರೆ ಅವರು ಆರು- ಏಳನೇ ಕ್ಲಾಸ್‌ನಲ್ಲಿ ಏಕೆ ಇರುತ್ತಿದ್ದರು' ಎಂದು ರಾಮಕೃಷ್ಣ ಪ್ರಶ್ನಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಾಹಿತಿ ಬರಗೂರು ರಾಮಚಂದ್ರಪ್ಪ ಮಾತನಾಡಿ, 'ಜಾತಿ, ಲಿಂಗ, ವರ್ಗ, ಧರ್ಮ ತಾರತಮ್ಯದ, ಅಸಮಾನತೆ-ಅಸಹಿಷ್ಣುತೆಯ ಸಮಾಜವನ್ನು ಸಮಾನತೆಯ, ಸಹಿಷ್ಣುತೆಯ ಸಮಾಜವನ್ನಾಗಿ ಬದಲಾಯಿಸುವ ಆಶಯದೊಂದಿಗೆ ಕೆಲಸ ಮಾಡುವ ಸಾಂಸ್ಕೃತಿಕ ಸಂಘಟನೆಯೇ ಬಂಡಾಯ ಸಾಹಿತ್ಯ' ಎಂದು ಅಭಿಪ್ರಾಯಪಟ್ಟರು.

'ಲಜ್ಜೆಗೆಟ್ಟು ಪಕ್ಷಾಂತರ ಮಾಡುವ ಶಾಸಕರಿಗೆ ಬಂಡಾಯ ಶಾಸಕರು ಎಂದು ಕರೆದು ಬಂಡಾಯ ಎಂಬ ಶಬ್ದದ ಅರ್ಥವೇ ಅನರ್ಥ, ಅಪಾರ್ಥ ಆಗುವಂತೆ ಮಾಡಲಾಗಿದೆ. ಬಂಡಾಯ ಅಂದರೆ ಅದಲ್ಲ' ಎಂದು ತಿಳಿಸಿದರು.

'ಸಮೂಹ ಚಳವಳಿಗಳು ಮತ್ತು ಸಾಂಸ್ಕೃತಿಕ ಚಳವಳಿಗಳು ಬೇರೆ ಬೇರೆ. ಸಮೂಹ ಚಳವಳಿಗೆ ಪೂರಕವಾದ ಮನೋಭೂಮಿಕೆಯನ್ನು ತಯಾರು ಮಾಡುವ ಕೆಲಸವನ್ನು ಸಾಂಸ್ಕೃತಿಕ, ಸಾಹಿತ್ಯ ಚಳವಳಿಗಳು ಮಾಡುತ್ತವೆ' ಎಂದು ವಿಶ್ಲೇಷಿಸಿದರು.

'ಯಾರದೋ ತಪ್ಪಿಗೆ ಸಮೂಹವನ್ನೇಕೆ ಗುರಿ ಮಾಡಬೇಕು?'

'ಸಾಹಿತ್ಯದಲ್ಲಿ ಸಿದ್ಧಾಂತ ಇರಬಾರದು, ಸತ್ಯ ಇರಬೇಕು ಎಂದು ಪ್ರತಿಪಾದಿಸುವ ಸಾಹಿತಿ ಎಸ್.ಎಲ್. ಭೈರಪ್ಪ ಅವರು ಹೇಳುವ ಸಾಹಿತ್ಯದಲ್ಲಾದರೂ ಸತ್ಯ ಎಷ್ಟಿದೆ' ಎಂದು ಜಿ.ರಾಮಕೃಷ್ಣ ಪ್ರಶ್ನಿಸಿದರು.

'ಖಿಲ್ಜಿ ಬಗೆಗಿನ ಇತಿಹಾಸಕ್ಕೆ ಇವರದ್ದೇ ಕಲ್ಪನೆಗಳನ್ನು ಸೇರಿಸುತ್ತಾರೆ. ಖಿಲ್ಜಿ ಮಾಡಿದ ತಪ್ಪಿಗೆ ಇಡೀ ಮುಸ್ಲಿಂ ಸಮುದಾಯವನ್ನೇ ಗುರಿ ಮಾಡುತ್ತಾರೆ. ಆದರೆ, ಆ ಕಾಲದಲ್ಲಿ ದೌರ್ಜನ್ಯದ ವಿರುದ್ಧ ಜನರು ಸೆಣಸಾಡದಿರಲು ಕಾರಣವೇನು? ಅಸಮಾನತೆಯ ಪಾತ್ರವೇನು ಎಂಬುದನ್ನು ವಿಶ್ಲೇಷಿಸುತ್ತಿಲ್ಲ' ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಬೂಕರ್ ಪ್ರಶಸ್ತಿ ಪುರಸ್ಕೃತೆ ಗೀತಾಂಜಲಿ, ಗ್ರ್ಯಾಮಿ ಪ್ರಶಸ್ತಿ ವಿಜೇತ ರಿಕ್ಕಿಕೇಜ್ ಭಾಗಿ

ಸಾಂಸ್ಕೃತಿಕ ನಗರಿಯಲ್ಲಿ ಗರಿಗೆದರಿದ ಸಾಹಿತ್ಯ ಸಂಭ್ರಮ

ಪ್ರಜಾವಾಣಿ ವಾರ್ತೆ



ಸಾಹಿತ್ಯ ಸಂಭ್ರಮದಲ್ಲಿ ಪುಸ್ತಕವನ್ನು ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್ ಬಿಡುಗಡೆ ಮಾಡಿ ರಿಕ್ಕಿ ಕೇಜ್ ಅವರಿಗೆ ನೀಡಿದರು. ಶುಭಾ ಸಂಜಯ್ ಅರಸ್, ಅರುಣ್ ರಾಮನ್, ಗೀತಾಂಜಲಿ ಶ್ರೀ, ತಂಗಂ ಪಣಕ್ಕಲ್, ಪ್ರೊ.ಬೆಳ್ಳಿಯಪ್ಪ ಇದ್ದಾರೆ

ಮೈಸೂರು: ಮುಂಗಾರಿನ ತುಂತುರು ಮಳೆ ಹೊರಗೆ; ಸಾಹಿತ್ಯ, ಕ್ರಿಕೆಟ್, ವರ್ತಮಾನದ ತಲ್ಲಣ, ಭರವಸೆ ಹಾಗೂ ಇತಿಹಾಸದ ಕುರಿತ ಚರ್ಚೆಗಳ ಕಾವು ಒಳಗೆ. ಜೊತೆಗೆ ಶಿರಸಿಯ ಯಕ್ಷಗಾನ, ರಿಕ್ಕಿ ಕೇಜ್ ಅವರ ಸಂಗೀತದ ಮೋಡಿ!

– ನಗರದ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಶನಿವಾರ ಗರಿಬಿಚ್ಚಿದ 6ನೇ ಆವೃತ್ತಿಯ 'ಮೈಸೂರು ಸಾಹಿತ್ಯ ಸಂಭ್ರಮ'ದ ವೈವಿಧ್ಯಮಯ ಚಿತ್ರಣ ಇದು.

ಮೈಸೂರು ಲಿಟರರಿ ಫೋರಂ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ ಆಯೋಜಿಸಿದ್ದ ಉತ್ಸವಕ್ಕೆ ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್ ಚಾಲನೆ ನೀಡಿದರು. ಬೂಕರ್ ಪ್ರಶಸ್ತಿ ಪುರಸ್ಕೃತೆ ಗೀತಾಂಜಲಿ ಶ್ರೀ, ಗ್ರ್ಯಾಮಿ ಪ್ರಶಸ್ತಿ ವಿಜೇತ ರಿಕ್ಕಿ ಕೇಜ್, ಟ್ರಸ್ಟ್ ಅಧ್ಯಕ್ಷೆ ಶುಭಾ ಸಂಜಯ್ ಅರಸ್, ಲೇಖಕ ಅರುಣ್ ರಾಮನ್ ಸಾಕ್ಷಿಯಾದರು.

ಜಗತ್ತಿನಲ್ಲಿ ಯಾವುದೂ ಸಾಯುವುದಿಲ್ಲ: ಉತ್ಸವದ ಮೊದಲ ಗೋಷ್ಠಿಯಲ್ಲಿ ಲೇಖಕಿ ಗೀತಾಂಜಲಿ ಶ್ರೀ ಪುಸ್ತಕದ ಓದಿನೊಂದಿಗೆ ಮಾತನ್ನಾರಂಭಿಸಿ, 'ಜಗತ್ತಿನಲ್ಲಿ ಯಾವುದೂ ಸಾಯುವುದಿಲ್ಲ. ಸಮಾಧಿಗೆ ಹೋಗುತ್ತವಷ್ಟೇ. ಮತ್ತೆ ಮರುಹುಟ್ಟು ಪಡೆಯಲು ಸಮಯ ತೆಗೆದುಕೊಳ್ಳುತ್ತದೆ. ಕೆಲವರು ತತ್ವ-ಸಿದ್ಧಾಂತಗಳು ನಾಶವಾಗುತ್ತಿವೆ ಎಂದೆಲ್ಲಾ ಹೇಳುತ್ತಾರೆ. ಅವೆಲ್ಲ ತಾತ್ಕಾಲಿಕ' ಎಂದರು.

'ಬಹುತ್ವದ ದಮನವಾಗುತ್ತಿದೆ, ಅಭಿವ್ಯಕ್ತಿ ಸ್ವಾತಂತ್ರ್ಯ ಹರಣವಾಗುತ್ತಿದೆ, ದೇಶದ ಸಮಾನತೆ- ಭ್ರಾತೃತ್ವಗಳು ನಾಶವಾಗುತ್ತಿದೆ ಎಂಬ ಅಭಿಪ್ರಾಯಗಳು ನಮ್ಮ ಮುಂದಿವೆ. ಮಾನವೀಯತೆ, ಪ್ರೀತಿ, ಸ್ನೇಹಗಳು ಮಾನವಸಹಜವಾದವು. ನೆಲಮೂಲದವು. ಅವನ್ನು ಎಂದೂ ಅಳಿಸಲಾಗುವುದಿಲ್ಲ' ಎಂದರು.

'ಜಗತ್ತಿನ ರಾಜಕೀಯ ಹಾಗೂ ಸಾಮಾಜಿಕ ತಲ್ಲಣಗಳು ಚಿಕ್ಕ ಕುಟುಂಬಗಳನ್ನು ಬಾಧಿಸುತ್ತವೆ. ಗಡಿಗಳಿಗೆ ಸೇತುವೆ ಕಟ್ಟುವ ಕೆಲಸವನ್ನು ಮಾಡಿದರೂ, ಹಿಂಸೆ ಹಾಗೂ ಪೂರ್ವಗ್ರಹಗಳ ಹೊಸ ದಾರಿಯಲ್ಲಿ ಗಡಿಗಳು ಮತ್ತೆ ಎದುರಾಗುತ್ತವೆ' ಎಂದು ಕಳವಳ ವ್ಯಕ್ತಪಡಿಸಿದರು.

ಬೆಸೆಯುವ ಕ್ರೀಡೆ: 'ಕ್ರಿಕೆಟ್ ಆ್ಯಸ್ ಡೆಮಾಕ್ರಸಿ ಇನ್ ಆ್ಯಕ್ಶನ್' ಸಂವಾದದಲ್ಲಿ ಮಾತನಾಡಿದ ಪತ್ರಕರ್ತ ರಾಜದೀಪ್ ಸರ್ದೇಸಾಯಿ 'ರಾಜಕೀಯವು ಜನರಲ್ಲಿ ಗಡಿಗಳನ್ನು ಸೃಷ್ಟಿಸಿದರೆ, ಕ್ರೀಡೆಯು ವೇಗವಾಗಿ ಬೆಸೆಯುತ್ತದೆ' ಎಂದರು.

'ಜಮ್ಮು-ಕಾಶ್ಮೀರದಿಂದ ಬಂದ ನಾಗರಿಕನಿಗೆ ದೆಹಲಿಯಲ್ಲಿ ಬಾಡಿಗೆ ಮನೆ ಸಿಗುವುದಿಲ್ಲ. ಅದಕ್ಕೆ ರಾಜಕಾರಣ ಸೃಷ್ಟಿಸಿದ ಪೂರ್ವಗ್ರಹಗಳೇ ಕಾರಣ. ಆದರೆ, ಜಮ್ಮುವಿನ ಉಮ್ರಾನ್ ಮಲಿಕ್ ಬೌಲ್ ಮಾಡುತ್ತಿದ್ದರೆ ಇಡೀ ಕಾಶ್ಮೀರದಲ್ಲಿ ದೇಶಪ್ರೇಮ ಉಕ್ಕುತ್ತದೆ' ಎಂದರು.

'ಎಲ್ಲ ಪಕ್ಷಗಳಲ್ಲೂ ಕುಟುಂಬ ರಾಜಕಾರಣ ಹಾಸುಹೊಕ್ಕಾಗಿದೆ. ಆದರೆ, ಕ್ರೀಡೆಯಲ್ಲಿ ಪ್ರತಿಭೆಯಿದ್ದರೆ ಸಾಧಕರಾಗಬಹುದು' ಎಂದು ಸರ್ದೇಸಾಯಿ ಹೇಳಿದರು. ಕ್ರಿಕೆಟ್ ವೀಕ್ಷಕ ವಿವರಣೆಕಾರ ಚಾರು ಶರ್ಮ, ಸೀತಾ ಭಾಸ್ಕರ್ ಸಂವಾದ ನಡೆಸಿಕೊಟ್ಟರು.

ವರಿಷ್ಠರ ತೀರ್ಮಾನವೇ ಅಂತಿಮ: ಬಿಎಸ್‌ವೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿಕಾರಿಪುರ ವಿಧಾನಸಭಾ ಕ್ಷೇತ್ರವನ್ನು ನನ್ನ ಮಗ ಬಿ.ವೈ. ವಿಜಯೇಂದ್ರಗೆ ಬಿಟ್ಟು ಕೊಡುವುದಾಗಿ ಅಲ್ಲಿನ ಜನರ ಒತ್ತಾಯಕ್ಕೆ ಮಣಿದು ಶುಕ್ರವಾರ ಹೇಳಿಕೆ ನೀಡಿದ್ದೆ. ಆದರೆ, ಈ ವಿಚಾರದಲ್ಲಿ ಬಿಜೆಪಿ ವರಿಷ್ಠರ ತೀರ್ಮಾನವೇ ಅಂತಿಮ' ಎಂದು ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಹಳೆ ಮೈಸೂರು ಸೇರಿದಂತೆ ಯಾವುದೇ ಭಾಗದಲ್ಲಿ ಸ್ಪರ್ಧಿಸಿದರೂ ಗೆದ್ದು ಬರುವ ಶಕ್ತಿ ವಿಜಯೇಂದ್ರಗೆ ಇದೆ. ಶಿಕಾರಿಪುರದ ಜನರ ಬೇಡಿಕೆಯಂತೆ ಹೇಳಿಕೆ ನೀಡಿದ್ದೆ. ಆದರೆ, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಸೇರಿದಂತೆ ಪಕ್ಷದ ವರಿಷ್ಠರ ನಿರ್ಧಾರದಂತೆ ನಡೆದುಕೊಳ್ಳುತ್ತೇವೆ' ಎಂದರು.

'ಶುಕ್ರವಾರ ನಾನು ನೀಡಿದ ಹೇಳಿಕೆಯಿಂದ ಗೊಂದಲ ಉಂಟಾಗಿದೆ. ನಾನು ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವುದಿಲ್ಲ. ಆದರೆ, ಮುಂದಿನ ಚುನಾವಣೆಗೆ ಸ್ಪರ್ಧಿಸುವಂತೆ ಶಿಕಾರಿಪುರದ ಜನರು ಒತ್ತಾಯ ಮಾಡಿದರು. ಆಗ, ನಾನು ಸ್ಪರ್ಧಿಸುವುದಿಲ್ಲ, ವಿಜಯೇಂದ್ರ ಸ್ಪರ್ಧೆ ಮಾಡುತ್ತಾರೆ ಎಂದು ಹೇಳಿಕೆ ನೀಡಿದ್ದೆ' ಎಂದು ಹೇಳಿದರು.

'ನಾನು ನೀಡಿರುವುದು ಸಲಹೆ ಮಾತ್ರ. ವಿಜಯೇಂದ್ರ ಯಾವ ಕ್ಷೇತ್ರದಲ್ಲಿ ಸ್ಪರ್ಧಿಸಬೇಕು ಎಂಬುದನ್ನು ಪಕ್ಷದ ವರಿಷ್ಠರೇ ತೀರ್ಮಾನಿಸುತ್ತಾರೆ. ಮೋದಿ, ಅಮಿತ್ ಶಾ, ನಡ್ಡಾ ಸೂಚಿಸಿದ ಕ್ಷೇತ್ರದಲ್ಲಿ ವಿಜಯೇಂದ್ರ ಸ್ಪರ್ಧಿಸುತ್ತಾರೆ' ಎಂದರು.

ಮೂಲೆಗುಂಪು ಮಾಡಿಲ್ಲ: 'ನನ್ನನ್ನು ಪಕ್ಷದಲ್ಲಿ ಮೂಲೆಗುಂಪು ಮಾಡಿದ್ದಾರೆ ಎಂಬುದು ಸತ್ಯಕ್ಕೆ ದೂರವಾದ ಮಾತು. ಪುರಸಭೆ ಸದಸ್ಯನಾಗಿದ್ದವನನ್ನು ನಮ್ಮ ಪಕ್ಷ ನಾಲ್ಕು ಬಾರಿ ಮುಖ್ಯಮಂತ್ರಿ ಮಾಡಿದೆ. ಸಾಮಾನ್ಯ ಕಾರ್ಯಕರ್ತನನ್ನು ಇಷ್ಟು ಎತ್ತರಕ್ಕೆ ಬೆಳೆಸಿರುವುದೇ ಬಿಜೆಪಿ. ನಾನು ಸಂತೃಪ್ತಿ, ಸಮಾಧಾನದಿಂದ ಇದ್ದೇನೆ' ಎಂದು ಯಡಿಯೂರಪ್ಪ ಹೇಳಿದರು.

'ರಾಜ್ಯದಾದ್ಯಂತ ಪ್ರವಾಸ ಮಾಡಿ ಪಕ್ಷ ಸಂಘಟಿಸುತ್ತೇನೆ. ಮುಂದಿನ ಚುನಾವಣೆಯಲ್ಲಿ 140 ಶಾಸಕರನ್ನು ಗೆಲ್ಲಿಸಿಕೊಂಡು ಬಂದು, ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರುತ್ತೇನೆ' ಎಂದರು.

ಸಿದ್ದರಾಮಯ್ಯ ಕ್ಷಮೆ ಯಾಚಿಸಲಿ: 'ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ನೇಮಕಾತಿ ಪರೀಕ್ಷೆಯ ಅಕ್ರಮದಲ್ಲಿ ವಿಜಯೇಂದ್ರ ಭಾಗಿಯಾಗಿದ್ದಾರೆ ಎಂದು ಸಿದ್ದರಾಮಯ್ಯ ಮಾಡಿರುವ ಆರೋಪದಲ್ಲಿ ಹುರುಳಿಲ್ಲ. ವಿರೋಧ ಪಕ್ಷದ ನಾಯಕರ ಸ್ಥಾನಕ್ಕೆ ಇಂತಹ ಹೇಳಿಕೆ ಶೋಭೆ ತರುವುದಿಲ್ಲ. ತಾನು ಕಳ್ಳ ಪರರ ನಂಬ ಎಂಬ ಗಾದೆಯಂತೆ ಅವರು ವರ್ತಿಸುತ್ತಿದ್ದಾರೆ. ಸಿದ್ದರಾಮಯ್ಯ ರಾಜ್ಯದ ಜನರ ಕ್ಷಮೆ ಯಾಚಿಸಲಿ' ಎಂದು ಆಗ್ರಹಿಸಿದರು.

ಯಡಿಯೂರಪ್ಪ ಭೇಟಿಯಾದ ಮುಖ್ಯಮಂತ್ರಿ ಬೊಮ್ಮಾಯಿ

ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶನಿವಾರ ಭೇಟಿಮಾಡಿ ಚರ್ಚೆ ನಡೆಸಿದರು

ಬೆಂಗಳೂರು: ಶಿಕಾರಿಪುರ ಕ್ಷೇತ್ರವನ್ನು ತಮ್ಮ ಮಗ ಬಿ.ವೈ. ವಿಜಯೇಂದ್ರ ಅವರಿಗೆ ಬಿಟ್ಟುಕೊಡುವುದಾಗಿ ಶುಕ್ರವಾರ ಹೇಳಿಕೆ ನೀಡಿದ್ದ ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ಅವರನ್ನು ಶನಿವಾರ ಭೇಟಿಮಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೆಲಕಾಲ ಚರ್ಚೆ ನಡೆಸಿದರು.

ಯಡಿಯೂರಪ್ಪ ಅವರು ಶಿವಮೊಗ್ಗದಿಂದ ಶನಿವಾರ ಮಧ್ಯಾಹ್ನ ಬೆಂಗಳೂರಿಗೆ ವಾಪಸಾದರು. ಅಧಿಕೃತ ನಿವಾಸ ಕಾವೇರಿಯಲ್ಲಿದ್ದ ಅವರನ್ನು ಭೇಟಿಮಾಡಿದ ಬೊಮ್ಮಾಯಿ ಮತ್ತು ಕಂದಾಯ ಸಚಿವ ಆರ್. ಅಶೋಕ, ಶಿಕಾರಿಪುರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯ ಕುರಿತ ಹೇಳಿಕೆ ಬಗ್ಗೆ ಚರ್ಚಿಸಿದರು.

ಭೇಟಿ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬೊಮ್ಮಾಯಿ, 'ಪುನಃ ಸ್ಪರ್ಧಿಸುವಂತೆ ಶಿಕಾರಿಪುರದ ಜನರು ಒತ್ತಾಯ ಮಾಡಿದ್ದರಿಂದ ಯಡಿಯೂರಪ್ಪ ಅವರು ಆ ರೀತಿ ಹೇಳಿಕೆ ನೀಡಿದ್ದರು. ಅವರು ಸಲಹೆ ಮಾತ್ರ ನೀಡಿದ್ದಾರೆ. ಶಿಕಾರಿಪುರ ಸೇರಿದಂತೆ ರಾಜ್ಯದ ಎಲ್ಲ ಕ್ಷೇತ್ರದ ಅಭ್ಯರ್ಥಿಗಳನ್ನು ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಪಕ್ಷದ ವರಿಷ್ಠರು ಆಯ್ಕೆ ಮಾಡುತ್ತಾರೆ' ಎಂದರು.

ನಿವೃತ್ತಿ ಇಲ್ಲ: 'ಯಡಿಯೂರಪ್ಪ ಅವರು ರಾಜ್ಯದ ಅತ್ಯಂತ ಜನಪ್ರಿಯ ನಾಯಕ. ಅವರು ರಾಜಕಾರಣದಿಂದ ನಿವೃತ್ತರಾಗುತ್ತಾರೆ ಎಂಬುದು ಸುಳ್ಳು. ರಾಜ್ಯ ಪ್ರವಾಸಕ್ಕೆ ಸಿದ್ಧರಿರುವುದಾಗಿ ಹೇಳಿದ್ದಾರೆ. ಆಗಸ್ಟ್ 28ರಂದು ದೊಡ್ಡಬಳ್ಳಾಪುರದಲ್ಲಿ ನಡೆಯುವ ಸಮಾವೇಶದಲ್ಲೂ ಅವರು ಭಾಗವಹಿಸುತ್ತಾರೆ. ಬಿಜೆಪಿಯ ಮುಂದಿನ ರಣನೀತಿಯನ್ನು ಅವರೇ ಪ್ರಕಟಿಸುತ್ತಾರೆ' ಎಂದು ಹೇಳಿದರು.

ಮುಖ್ಯಮಂತ್ರಿ ಸ್ಥಾನ ಬಿಟ್ಟು ಕೊಡುವಾಗಲೇ ಯಡಿಯೂರಪ್ಪ ಅವರು ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸಲಿಲ್ಲ, ಈಗ ಅಂತಹ ಕೆಲಸ ಮಾಡುತ್ತಾರೆಯೆ ಎಂದು ಪ್ರಶ್ನಿಸಿದರು.

ಬಿಎಸ್‌ವೈ ಘೋಷಣೆ ಈಶ್ವರಪ್ಪ ವ್ಯಂಗ್ಯ

ಬೆಂಗಳೂರು: ಮುಖಂಡರಾದ ಬಿ.ಎಸ್. ಯಡಿಯೂರಪ್ಪ ಅವರು ತೆಗೆದುಕೊಳ್ಳುವ ತಕ್ಷಣದ ನಿರ್ಧಾರಗಳು ರಾಜ್ಯಕ್ಕೆ, ಬಿಜೆಪಿಗೆ ಅನುಕೂಲ ಎನ್ನುವ ಮೂಲಕ ಬಿಜೆಪಿ ಶಾಸಕ ಕೆ.ಎಸ್. ಈಶ್ವರಪ್ಪ ವ್ಯಂಗ್ಯಮಿಶ್ರಿತ ಪ್ರತಿಕ್ರಿಯೆ ನೀಡಿದರು.

ಸುದ್ದಿಗಾರರ ಜತೆ ಮಾತನಾಡಿ, 'ಚುನಾವಣಾ ರಾಜಕಾರಣದಿಂದ ನಿವೃತ್ತಿ ಘೋಷಿಸಿರುವ ಯಡಿಯೂರಪ್ಪ ತಮ್ಮ ಪುತ್ರ ವಿಜಯೇಂದ್ರ ಅವರಿಗೆ ಶಿಕಾರಿಪುರ ಕ್ಷೇತ್ರ ಬಿಟ್ಟುಕೊಡುವ ನಿರ್ಧಾರ ಸ್ವಾಗತಿಸುವೆ. ತಮ್ಮ ಪುತ್ರನಿಗೂ ಶಿವಮೊಗ್ಗ ಕ್ಷೇತ್ರ ಬಿಟ್ಟುಕೊಡುವಿರಾ ಎಂಬ ಪ್ರಶ್ನೆಗೆ ಹಾರಿಕೆಯ ಪ್ರತಿಕ್ರಿಯೆ ನೀಡಿದರು.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ನಾಳೆ

ವಿಜಯೇಂದ್ರಗೆ ಶಿಕಾರಿಪುರ: ಬಿಎಸ್‌ವೈ ಘೋಷಣೆಯ ಪರಿಣಾಮವೇನು?
ಸಂವಾದ
ಭಾಗವಹಿಸುವವರು:
ಸಂದೀಪ್ ಶಾಸ್ತ್ರಿ, ಕುಲಪತಿ, ಜಾಗರಣ್ ಲೇಕ್‌ಸಿಟಿ ಯೂನಿವರ್ಸಿಟಿ, ಭೋಪಾಲ್
ಬಿ.ಎಸ್. ಅರುಣ್, ಹಿರಿಯ ಪತ್ರಕರ್ತರು, ಬೆಂಗಳೂರು
ಪಲ್ಲವಿ ಇಡೂರು, ರಾಜಕೀಯ ವಿಶ್ಲೇಷಕರು, ಬೆಂಗಳೂರು
ಮಧ್ಯಾಹ್ನ 12 ರಿಂದ 1

ಹೊರಗೆ ಹೋಗುವಾಗ ಮುಖಗವಸು ಧರಿಸಿ

'ಪುತ್ರನಿಗೆ ಸ್ಥಾನ ಬಿಟ್ಟುಕೊಡುವೆ'

ರಾಣೆಬೆನ್ನೂರು (ಹಾವೇರಿ ಜಿಲ್ಲೆ): 'ಮುಂದಿನ ವಿಧಾನಸಭಾ ಚುನಾವಣೆಗೆ ನಾನು ಸ್ಪರ್ಧಿಸುವುದಿಲ್ಲ. ನನ್ನ ಪುತ್ರ ಪ್ರಕಾಶ ಕೋಳಿವಾಡ ಅವರಿಗೆ ರಾಣೆಬೆನ್ನೂರು ಕ್ಷೇತ್ರ ಬಿಟ್ಟುಕೊಡುತ್ತಿದ್ದೇನೆ' ಎಂದು ಕಾಂಗ್ರೆಸ್ ಮುಖಂಡ ಹಾಗೂ ಮಾಜಿ ಸ್ಪೀಕರ್ ಕೆ.ಬಿ.ಕೋಳಿವಾಡ ಹೇಳಿದರು.

ಇಲ್ಲಿನ ವಾಗೀಶನಗರದ ತಮ್ಮ ಗೃಹಕಚೇರಿಯಲ್ಲಿ ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿ, 'ನನ್ನ ನಿರ್ಧಾರವನ್ನು ಹೈಕಮಾಂಡ್‌ಗೆ ತಿಳಿಸಿದ್ದೇನೆ. ಪುತ್ರನೇ ಈ ಬಾರಿ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಲಿದ್ದಾರೆ' ಎಂದರು. 'ರಾಜ್ಯದ ಚುನಾವಣಾ ರಾಜಕೀಯದಿಂದ ಹಿಂದೆಸರಿದು ಪುತ್ರನಿಗೆ ಅವಕಾಶ ಮಾಡಿಕೊಡಿ, ಅವರಿಗೆ ಟಿಕೆಟ್ ನೀಡಲಾಗುವುದು ಎಂದು ಪಕ್ಷದ ನಾಯಕರು ಭರವಸೆ ನೀಡಿದ್ದಾರೆ. ಹೀಗಾಗಿ ರಾಜ್ಯದ ಎಲ್ಲ ಚುನಾವಣೆಗಳಿಂದ ಹಿಂದೆಸರಿದಿದ್ದೇನೆ. ಹಿರಿಯರು ಚುನಾವಣೆಗೆ ತಯಾರಿ ಮಾಡಿಕೊಳ್ಳಲಿಕ್ಕೆ ತಿಳಿಸಿದ್ದಾರೆ' ಎಂದರು.

ನಿವೃತ್ತಿ ಘೋಷಿಸಿದ ಸಂಸದ ಬಸವರಾಜು

ತುಮಕೂರು: ಮುಂದಿನ ಬಾರಿ ಲೋಕಸಭೆ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಸಂಸದ ಜಿ.ಎಸ್. ಬಸವರಾಜು ಶನಿವಾರ ಘೋಷಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ-ಮಾತನಾಡಿ, 'ನನಗೆ ಈಗ 84 ವಯಸ್ಸಾಗಿದ್ದು, ವಯಸ್ಸಿನ ಲೆಕ್ಕಾಚಾರದಲ್ಲೂ ಪಕ್ಷದಿಂದ ಟಿಕೆಟ್ ಕೊಡುವುದಿಲ್ಲ. ಹಾಗಾಗಿ ಸ್ಪರ್ಧೆಯಿಂದ ಹಿಂದೆ ಸರಿಯುತ್ತೇನೆ' ಎಂದು ಸ್ಪಷ್ಟಪಡಿಸಿದರು.

'ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ತುಮಕೂರಿನಿಂದಲೇ ಲೋಕಸಭೆಗೆ ಸ್ಪರ್ಧಿಸುವುದಾಗಿ ಹೇಳಿದ್ದಾರೆ. ಒಂದು ವೇಳೆ ಅವರು ಸ್ಪರ್ಧೆ ಮಾಡಿದರೆ ನಾನು ಮತ್ತೆ ಸ್ಪರ್ಧಿಸುತ್ತೇನೆ. ಪಕ್ಷದಿಂದ ಟಿಕೆಟ್ ಕೊಡದಿದ್ದರೂ ಪಕ್ಷೇತರನಾಗಿ ಕಣಕ್ಕಿಳಿಯುತ್ತೇನೆ' ಎಂದು ಸ್ಪಷ್ಟಪಡಿಸಿದರು.

'ಬಾಯಿ ಮುಚ್ಚಿ ಕೆಲಸ ಮಾಡಿ'

ಒಂದನೇ ಪುಟದಿಂದ...

'ಎಲ್ಲರೂ ತಮ್ಮ ಸಮುದಾಯಗಳನ್ನು ಸಂಘಟಿಸಿ, ಪಕ್ಷವನ್ನು ಅಧಿಕಾರಕ್ಕೆ ತರುವ ಕೆಲಸ ಮಾಡಬೇಕು' ಎಂದು ಹೇಳಿದರು.

'ಸಿದ್ದರಾಮಯ್ಯ ಮತ್ತು ಶಿವಕುಮಾರ್ ಸ್ಪರ್ಧೆಯ ಮಧ್ಯೆ ನಾನು ಹೋಗುವುದಿಲ್ಲ. ನನಗೆ ನನ್ನದೇ ಪ್ರತ್ಯೇಕ ಗುರುತು ಇದೆ' ಎಂಬ ಎಂ.ಬಿ. ಪಾಟೀಲರ ಹೇಳಿಕೆಗೆ, '224 ಕ್ಷೇತ್ರಗಳಲ್ಲಿ ಗೆಲ್ಲುವ ಎಲ್ಲರೂ ಮುಖ್ಯಮಂತ್ರಿ ಸ್ಥಾನಕ್ಕೆ ಆಸೆ ಪಟ್ಟರೆ ತಪ್ಪಿಲ್ಲ' ಎಂದರು.

ಮುಸ್ಲಿಮರ ಸಲೂನ್ ಬಂದ್ ಮಾಡಿಸಬೇಕು ಎಂಬ ಶ್ರೀರಾಮ ಸೇನೆಯ ಪ್ರಮೋದ್ ಮುತಾಲಿಕ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಇದೆಲ್ಲವನ್ನು ಬಿಜೆಪಿ ಹಾಗೂ ಬಿಜೆಪಿ ಸರ್ಕಾರವೇ ಅವರ ಮೂಲಕ ಹೇಳಿಸುತ್ತಿದೆ. ಹಳೆ ಮೈಸೂರು ಸೇರಿದಂತೆ ಅನೇಕ ಭಾಗಗಳಲ್ಲಿ ಅವರು ಈ ರೀತಿ ಪ್ರಚೋದಿಸುತ್ತಿದ್ದಾರೆ. ರಾಜ್ಯದಲ್ಲಿ ಸಂವಿಧಾನ ಬದ್ಧವಾಗಿ ಎಲ್ಲರಿಗೂ ರಕ್ಷಣೆ ನೀಡುತ್ತೇವೆಂದು ಪ್ರಮಾಣ ಮಾಡಿರುವ ಮುಖ್ಯಮಂತ್ರಿ, ಸಚಿವರು ಉತ್ತರ ನೀಡಬೇಕು' ಎಂದರು.

ಕರ್ನಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 CIN: L85110KA1924PLC001128 ಇಮೇಲ್: info@ktkbank.com ವೆಬ್‌ಸೈಟ್: www.karnatakabank.com

ಠೇವಣಿಗಳು ₹ 80576 ಕೋಟಿ
ಮುಂಗಡಗಳು ₹58359 ಕೋಟಿ
ಕಾಸಾ 32.80%
ಒಟ್ಟು ವ್ಯವಹಾರ ₹ 138935 ಕೋಟಿ
ಎನ್.ಐ.ಎಂ. 3.33%
ನಿವ್ವಳ ಲಾಭ ₹ 114 ಕೋಟಿ

ಪ್ರಗತಿಯ ಖುಷಿ

ದಿನಾಂಕ 30ನೇ ಜೂನ್ 2022 ಕ್ಕೆ ಅಂತ್ಯಗೊಂಡ ಸ್ವತಂತ್ರ ಅಪರಿಶೋಧಿತ ತ್ರೈಮಾಸಿಕ ಹಣಕಾಸು ಫಲಿತಾಂಶಗಳು

(₹ ಕೋಟಿಗಳಲ್ಲಿ)

ವಿವರಗಳು	30.06.2022 ಕ್ಕೆ ಅಂತ್ಯಗೊಂಡ ತ್ರೈಮಾಸಿಕ (ಅಪರಿಶೋಧಿತ)	31.03.2022 ಕ್ಕೆ ಅಂತ್ಯಗೊಂಡ ತ್ರೈಮಾಸಿಕ (ಪರಿಶೋಧಿತ)	30.06.2021 ಕ್ಕೆ ಅಂತ್ಯಗೊಂಡ ತ್ರೈಮಾಸಿಕ (ಅಪರಿಶೋಧಿತ)	31.03.2022 ಕ್ಕೆ ಅಂತ್ಯಗೊಂಡ ವಾರ್ಷಿಕ (ಪರಿಶೋಧಿತ)
ಒಟ್ಟು ನಿರ್ವಹಣಾ ಆದಾಯ (ನಿವ್ವಳ)	1761.87	1835.68	1749.15	7175.54
ನಿವ್ವಳ ಲಾಭ / (ನಷ್ಟ) ಪ್ರಸಕ್ತ ಸಾಲಿನಲ್ಲಿ (ತೆರಿಗೆಗೂ ಮುನ್ನ, ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ಮೊದಲು)	49.88	284.21	46.14	694.56
ನಿವ್ವಳ ಲಾಭ /(ನಷ್ಟ) ತೆರಿಗೆಗೂ ಮುನ್ನ (ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ನಂತರ)	49.88	284.21	46.14	694.56
ನಿವ್ವಳ ಲಾಭ /(ನಷ್ಟ) ಪ್ರಸಕ್ತ ಸಾಲಿನಲ್ಲಿ ತೆರಿಗೆಯ ನಂತರ (ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ನಂತರ)	114.18	130.35	106.08	508.62
ಪಾವತಿಸಲಾದ ಈಕ್ವಿಟಿ ಷೇರು ಬಂಡವಾಳ	311.23	311.17	310.88	311.17
ಮೀಸಲುಗಳು (ಮರು ಮೌಲ್ಯಾಂಕನ ಮೀಸಲುಗಳನ್ನು ಹೊರತುಪಡಿಸಿ)	-----	----	----	6324.61
ಸೆಕ್ಯುರಿಟೀಸ್ ಪ್ರೀಮಿಯಂ ಖಾತೆ	1256.15	1255.97	1255.01	1255.97
ನಿವ್ವಳ ಸಂಪತ್ತು	6751.40	6635.78	6284.30	6635.78
ಪಾವತಿಯಾದ ಸಾಲ ಬಂಡವಾಳ / ಬಾಕಿ ಇರುವ ಸಾಲ	1270	1270	970	1270
ಕ್ಯಾಪಿಟಲ್ ರಿಡೆಂಪ್ಷನ್ ರಿಸರ್ವ್ / ಡಿಬೆಂಚರ್ ರಿಡೆಂಪ್ಷನ್ ರಿಸರ್ವ್	Nil	Nil	Nil	Nil
ಬಾಕಿ ಇರುವ ಮರುಗಳಿಕೆಯ ಆದ್ಯತೆಯ ಷೇರುಗಳು	Nil	Nil	Nil	Nil
ಸಾಲ ಬಂಡವಾಳ ಅನುಪಾತ (ಡೆಬ್ಟ್ ಈಕ್ವಿಟಿ ರೇಷಿಯೋ)	0.15	0.15	0.17	0.15
ಷೇರಿನ ತಲಾ ಆದಾಯ (ಪ್ರತಿ ರೂ. 10/- ರಂತೆ)				
ಮೂಲಭೂತ (ಬೇಸಿಕ್)	3.67*	4.19*	3.41*	16.36
ಡೈಲ್ಯೂಟೆಡ್	3.66*	4.17*	3.40*	16.29

*ವಾರ್ಷಿಕವಲ್ಲ.

ಮೇಲಿನ ವಿವರಗಳು SEBI (ಸೆಬಿ) (ಲಿಸ್ಟಿಂಗ್ ಮತ್ತು ಇತರ ಪ್ರಕಟಣೆ ಅಗತ್ಯತೆಗಳು) ನಿಯಮಾವಳಿ 2015 ರ ನಿಯಮ 33 ಮತ್ತು 52 ರ ಪ್ರಕಾರ ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ಸಲ್ಲಿಸಲಾದ ಜೂನ್ 30, 2022 ಕ್ಕೆ ಅಂತ್ಯಗೊಂಡ ಫಲಿತಾಂಶಗಳ ವಿವರವಾದ ಸ್ವರೂಪದ ಸಾರವಾಗಿದೆ. ಜೂನ್ 30, 2022 ಕ್ಕೆ ಅಂತ್ಯಗೊಂಡ ಫಲಿತಾಂಶಗಳ ಎಲ್ಲಾ ವಿವರಗಳು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಲ್ಲಿ BSE: http://www.bseindia.com,NSE: http://www.nseindia.com, ಮತ್ತು ಬ್ಯಾಂಕಿನ ವೆಬ್‌ಸೈಟ್ https://www.karnatakabank.com/index.jsp. ನಲ್ಲಿ ಲಭ್ಯವಿದೆ.

ದಿನಾಂಕ 30ನೇ ಜೂನ್ 2022 ಕ್ಕೆ ಅಂತ್ಯಗೊಂಡ ಕ್ರೋಢೀಕರಿಸಿದ ಅಪರಿಶೋಧಿತ ತ್ರೈಮಾಸಿಕ ಹಣಕಾಸು ಫಲಿತಾಂಶಗಳು

(₹ ಕೋಟಿಗಳಲ್ಲಿ)

ವಿವರಗಳು	30.06.2022 ಕ್ಕೆ ಅಂತ್ಯಗೊಂಡ ತ್ರೈಮಾಸಿಕ (ಅಪರಿಶೋಧಿತ)	31.03.2022 ಕ್ಕೆ ಅಂತ್ಯಗೊಂಡ ತ್ರೈಮಾಸಿಕ (ಪರಿಶೋಧಿತ)	30.06.2021 ಕ್ಕೆ ಅಂತ್ಯಗೊಂಡ ತ್ರೈಮಾಸಿಕ (ಅಪರಿಶೋಧಿತ)	31.03.2022 ಕ್ಕೆ ಅಂತ್ಯಗೊಂಡ ವಾರ್ಷಿಕ (ಪರಿಶೋಧಿತ)
ಒಟ್ಟು ನಿರ್ವಹಣಾ ಆದಾಯ (ನಿವ್ವಳ)	1761.87	1835.76	1749.12	7175.54
ನಿವ್ವಳ ಲಾಭ / (ನಷ್ಟ) ಪ್ರಸಕ್ತ ಸಾಲಿನಲ್ಲಿ (ತೆರಿಗೆಗೂ ಮುನ್ನ, ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ಮೊದಲು)	49.75	284.06	45.96	693.93
ನಿವ್ವಳ ಲಾಭ /(ನಷ್ಟ) ತೆರಿಗೆಗೂ ಮುನ್ನ (ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ನಂತರ)	49.75	284.06	45.96	693.93
ನಿವ್ವಳ ಲಾಭ /(ನಷ್ಟ) ಪ್ರಸಕ್ತ ಸಾಲಿನಲ್ಲಿ ತೆರಿಗೆಯ ನಂತರ (ಅಸಾಮಾನ್ಯ ಮತ್ತು /ಅಥವಾ ಅಸಾಧಾರಣ ಬಾಬ್ತುಗಳ ನಂತರ)	114.05	130.20	105.91	507.99
ಪಾವತಿಸಲಾದ ಈಕ್ವಿಟಿ ಷೇರು ಬಂಡವಾಳ	311.23	311.17	310.88	311.17
ಮೀಸಲುಗಳು (ಮರು ಮೌಲ್ಯಾಂಕನ ಮೀಸಲುಗಳನ್ನು ಹೊರತುಪಡಿಸಿ)	---	----	-----	6323.87
ಸೆಕ್ಯುರಿಟೀಸ್ ಪ್ರೀಮಿಯಂ ಖಾತೆ	1256.15	1255.97	1255.01	1255.97
ನಿವ್ವಳ ಸಂಪತ್ತು	6750.53	6635.04	6284.01	6635.04
ಪಾವತಿಯಾದ ಸಾಲ ಬಂಡವಾಳ / ಬಾಕಿ ಇರುವ ಸಾಲ	1270	1270	970	1270
ಕ್ಯಾಪಿಟಲ್ ರಿಡೆಂಪ್ಷನ್ ರಿಸರ್ವ್ / ಡಿಬೆಂಚರ್ ರಿಡೆಂಪ್ಷನ್ ರಿಸರ್ವ್	Nil	Nil	Nil	Nil
ಬಾಕಿ ಇರುವ ಮರುಗಳಿಕೆಯ ಆದ್ಯತೆಯ ಷೇರುಗಳು	Nil	Nil	Nil	Nil
ಸಾಲ ಬಂಡವಾಳ ಅನುಪಾತ (ಡೆಬ್ಟ್ ಈಕ್ವಿಟಿ ರೇಷಿಯೋ)	0.15	0.15	0.17	0.15
ಷೇರಿನ ತಲಾ ಆದಾಯ (ಪ್ರತಿ ರೂ. 10/- ರಂತೆ)				
ಮೂಲಭೂತ (ಬೇಸಿಕ್)	3.66*	4.19*	3.41*	16.36
ಡೈಲ್ಯೂಟೆಡ್	3.65*	4.17*	3.39*	16.29

*ವಾರ್ಷಿಕವಲ್ಲ.

ಮೇಲಿನ ವಿವರಗಳು SEBI (ಸೆಬಿ) (ಲಿಸ್ಟಿಂಗ್ ಮತ್ತು ಇತರ ಪ್ರಕಟಣೆ ಅಗತ್ಯತೆಗಳು) ನಿಯಮಾವಳಿ 2015 ರ ನಿಯಮ 33 ರ ಪ್ರಕಾರ ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ಸಲ್ಲಿಸಲಾದ ಜೂನ್ 30, 2022 ಕ್ಕೆ ಅಂತ್ಯಗೊಂಡ ಫಲಿತಾಂಶಗಳ ವಿವರವಾದ ಸ್ವರೂಪದ ಸಾರವಾಗಿದೆ. ಜೂನ್ 30, 2022 ಕ್ಕೆ ಅಂತ್ಯಗೊಂಡ ಫಲಿತಾಂಶಗಳ ಎಲ್ಲಾ ವಿವರಗಳು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಲ್ಲಿ BSE: http://www.bseindia.com,NSE: http://www.nseindia.com, ಮತ್ತು ಬ್ಯಾಂಕಿನ ವೆಬ್‌ಸೈಟ್ https://www.karnatakabank.com/index.jsp. ನಲ್ಲಿ ಲಭ್ಯವಿದೆ.

ಸ್ಥಳ : ಮಂಗಳೂರು
ದಿನಾಂಕ : 23.07.2022

ನಿರ್ದೇಶಕ ಮಂಡಳಿಯ ಪರವಾಗಿ
ಸಹಿ/-
ಮಹಾಬಲೇಶ್ವರ ಎಂ.ಎಸ್.
ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಸಿಇಒ

ದೆಹಲಿ: ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ

ನವದೆಹಲಿ (ಪಿಟಿಐ): ಇಲ್ಲಿನ ರೈಲು ನಿಲ್ದಾಣದ ಕೊಠಡಿಯಲ್ಲಿ ಮಹಿಳೆಯೊಬ್ಬರ ಮೇಲೆ ಇಬ್ಬರು ರೈಲ್ವೆ ನೌಕರರು ಅತ್ಯಾಚಾರ ಎಸಗಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಅತ್ಯಾಚಾರ ಎಸಗಿರುವ ಆರೋಪಿಗಳು ಹಾಗೂ ಕೊಠಡಿಯ ಹೊರಗಡೆ ಕಾವಲು ನಿಂತಿದ್ದ ಇಬ್ಬರು ಸೇರಿ ಒಟ್ಟು ನಾಲ್ಕು ಮಂದಿ ರೈಲ್ವೆ ನೌಕರರನ್ನು ಬಂಧಿಸಲಾಗಿದೆ. ಈ ನಾಲ್ವರೂ ರೈಲ್ವೆಯ ಎಲೆಕ್ಟ್ರಿಕಲ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು ಎಂದೂ ಹೇಳಿದ್ದಾರೆ.

ಸತೀಶ್ ಕುಮಾರ್ (35), ವಿನೋದ್ ಕುಮಾರ್ (38), ಮಂಗಲ್ ಚಂದ್ ಮೀನಾ(33) ಮತ್ತು ಜಗದೀಶ್ ಚಂದ್ (37) ಬಂಧಿತ ಆರೋಪಿಗಳು.

ರೈಲು ನಿಲ್ದಾಣದ ಪ್ಲಾಟ್‌ಫಾರ್ಮ್‌ನಲ್ಲಿ ಕಂಡುಬಂದ ಮಹಿಳೆಯು ತನ್ನ ಮೇಲೆ ಅತ್ಯಾಚಾರ ನಡೆದಿರುವ ಬಗ್ಗೆ ಅಧಿಕಾರಿಗಳ ಬಳಿ ದೂರಿದ್ದರು. ಅವರು ರೈಲ್ವೆ ರಕ್ಷಣಾ ಪಡೆಗೆ (ಆರ್‌ಪಿಎಫ್) ಮಾಹಿತಿ ನೀಡಿದ್ದಾರೆ ಎಂದು ರೈಲ್ವೆಯ ಅಧಿಕಾರಿಗಳು ತಿಳಿಸಿದ್ದಾರೆ.

'ಗಂಡನಿಂದ ಪ್ರತ್ಯೇಕವಾಗಿರುವ ನನಗೆ ರೈಲ್ವೆ ನೌಕರನೊಬ್ಬನ ಪರಿಚಯವಾಗಿತ್ತು. ಆತ ಜುಲೈ 21ರಂದು ಪಾರ್ಟಿಯಲ್ಲಿ ಪಾಲ್ಗೊಳ್ಳಲು ಮನೆಗೆ ಆಹ್ವಾನಿಸಿದ್ದ. ಅದಕ್ಕಾಗಿ ಬಂದಿದ್ದ ನನ್ನನ್ನು ಮೆಟ್ರೊ ನಿಲ್ದಾಣದಿಂದ ರೈಲು ನಿಲ್ದಾಣಕ್ಕೆ ಕರೆದೊಯ್ದಿದ್ದ. ಅಲ್ಲಿ ಆತ ಹಾಗೂ ಆತನ ಗೆಳೆಯ ನನ್ನ ಮೇಲೆ ಅತ್ಯಾಚಾರ ಎಸಗಿದ್ದಾರೆ' ಎಂದು ಮಹಿಳೆ ತಿಳಿಸಿರುವುದಾಗಿ ಹೇಳಿದ್ದಾರೆ.

ಪಶ್ಚಿಮ ಬಂಗಾಳ: ನಿಕಟವರ್ತಿ ಅರ್ಪಿತಾ ಮುಖರ್ಜಿ ಸಹ ಇ.ಡಿ ಕಸ್ಟಡಿಗೆ

ನೇಮಕಾತಿ: ಸಚಿವ ಚಟರ್ಜಿ ಬಂಧನ

ಪಾರ್ಥ ಚಟರ್ಜಿ

ಸಚಿವ ಪಾರ್ಥ ಚಟರ್ಜಿ ಅವರ ಆಪ್ತರಿಗೆ ಸೇರಿದ ಜಾಗಗಳಲ್ಲಿ ಶುಕ್ರವಾರ ಶೋಧ ನಡೆಸಿದ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ₹20 ಕೋಟಿ ನಗದನ್ನು ವಶಪಡಿಸಿಕೊಂಡರು–ಪಿಟಿಐ ಚಿತ್ರ

ಪಾರ್ಥ ಚಟರ್ಜಿ ಅವರು ತಪ್ಪಿತಸ್ಥರು ಎಂದು ನ್ಯಾಯಾಲಯ ಘೋಷಿಸಿದರೆ, ಅವರ ವಿರುದ್ಧ ಪಕ್ಷ ಕ್ರಮ ತೆಗೆದುಕೊಳ್ಳಲಿದೆ
ಕುನಾಲ್ ಘೋಷ್
ಟಿಎಂಸಿ ವಕ್ತಾರ

ಟಿಎಂಸಿ ಸರ್ಕಾರದ ಭ್ರಷ್ಟಾಚಾರ ಆಘಾತಕಾರಿ ಮಟ್ಟ ತಲುಪಿದೆ. ಜನರ ಸರ್ಕಾರವಾಗುವ ಬದಲು ಭ್ರಷ್ಟರ ಸರ್ಕಾರವಾಗಿದೆ
ಜ್ಯೋತಿರಾದಿತ್ಯ ಸಿಂಧಿಯಾ
ಕೇಂದ್ರ ಸಚಿವ

ಕೋಲ್ಕತ್ತ (ಪಿಟಿಐ): ಶಿಕ್ಷಕರ ನೇಮಕಾತಿ ಹಗರಣಕ್ಕೆ ಸಂಬಂಧಪಟ್ಟಂತೆ ಪಶ್ಚಿಮ ಬಂಗಾಳದ ಕೈಗಾರಿಕೆ ಹಾಗೂ ವಾಣಿಜ್ಯ ಸಚಿವ ಪಾರ್ಥ ಚಟರ್ಜಿ ಅವರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಶನಿವಾರ ಬಂಧಿಸಿದ್ದಾರೆ. ಚಟರ್ಜಿ ಅವರನ್ನು ವಿಚಾರಣೆಗಾಗಿ ಎರಡು ದಿನ ಇ.ಡಿ ವಶಕ್ಕೆ ನೀಡಲಾಗಿದೆ.

ಸಂಜೆಯ ಹೊತ್ತಿಗೆ ಆರೋಗ್ಯದಲ್ಲಿ ವ್ಯತ್ಯಾಸ ಕಂಡುಬಂದಿದ್ದರಿಂದ ಚಟರ್ಜಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ವೈದ್ಯರು ತೀವ್ರ ನಿಗಾ ವಹಿಸಿದ್ದಾರೆ.

ಚಟರ್ಜಿ ಅವರ ಬಂಧನದ ಬೆನ್ನಲ್ಲೇ, ಅವರ ನಿಕಟವರ್ತಿ ಅರ್ಪಿತಾ ಮುಖರ್ಜಿ ಅವರನ್ನೂ ಅಧಿಕಾರಿಗಳು ಬಂಧಿಸಿದ್ದಾರೆ. ಅರ್ಪಿತಾ ಅವರ ನಿವಾಸದ ಮೇಲೆ ಶುಕ್ರವಾರ ಶೋಧ ಕಾರ್ಯಾಚರಣೆ ನಡೆಸಿದ್ದ ಇ.ಡಿ. ಅಧಿಕಾರಿಗಳು ಸುಮಾರು ₹20 ಕೋಟಿ ನಗದು, ಚಿನ್ನಾಭರಣ ಹಾಗೂ ವಿದೇಶಿ ಕರೆನ್ಸಿ ವಶಪಡಿಸಿಕೊಂಡಿದ್ದರು.

ತೃಣಮೂಲ ಕಾಂಗ್ರೆಸ್ ಪಕ್ಷದ (ಟಿಎಂಸಿ) ಪ್ರಧಾನ ಕಾರ್ಯದರ್ಶಿಯೂ ಆಗಿರುವ ಚಟರ್ಜಿ ಅವರು ಈ ಹಿಂದೆ ಶಿಕ್ಷಣ ಸಚಿವರಾಗಿದ್ದ ಅವಧಿಯಲ್ಲಿ ಹಗರಣ ನಡೆದಿತ್ತು ಎಂದು ಆರೋಪಿಸಲಾಗಿದೆ. ಚಟರ್ಜಿ ಅವರನ್ನು ಶುಕ್ರವಾರದಿಂದಲೇ ವಿಚಾರಣೆಗೆ ಒಳಪಡಿಸಿದ್ದ ಇ.ಡಿ. ಅಧಿಕಾರಿಗಳು 26 ಗಂಟೆಗಳ ವಿಚಾರಣೆ ಬಳಿಕ ಶನಿವಾರ ಬಂಧಿಸಿದರು.

ಬಂಧನದ ನಂತರ ಅವರನ್ನು ಇಎಸ್‌ಐ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆಗೆ ಒಳಪಡಿಸಿ, ಬ್ಯಾಂಕ್‌ಶಾಲ ಕೋರ್ಟ್ ನ್ಯಾಯಾಧೀಶರ ಎದುರು ಹಾಜರುಪಡಿಸಲಾಯಿತು. ಚಟರ್ಜಿ ಅವರು ತನಿಖೆಗೆ ಸಹಕರಿಸುತ್ತಿಲ್ಲ ಎಂದು ಆರೋಪಿಸಿರುವ ಇ.ಡಿ ಅಧಿಕಾರಿಗಳು ತಮ್ಮ ಕಸ್ಟಡಿಗೆ ನೀಡುವಂತೆ ಕೋರ್ಟ್‌ಗೆ ಮನವಿ ಮಾಡಿದರು.

'ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಸಂಪರ್ಕಿಸಲು ನೀವು ಯತ್ನಿಸಿದಿರಾ' ಎಂಬ ಸುದ್ದಿಗಾರರ ಪ್ರಶ್ನೆಗೆ, 'ಯತ್ನಿಸಿದೆ, ಆದರೆ ಸಂಪರ್ಕ ಸಾಧ್ಯವಾಗಲಿಲ್ಲ' ಎಂದು ಚಟರ್ಜಿ ಅವರು ಉತ್ತರಿಸಿದರು.

ಗ್ರೂಪ್‌-ಸಿ, ಗ್ರೂಪ್‌-ಡಿ ಸಿಬ್ಬಂದಿ ನೇಮಕಾತಿ ಹಾಗೂ ಸರ್ಕಾರಿ ಮತ್ತು ಅನುದಾನಿತ ಶಾಲಾ ಶಿಕ್ಷಕರ ನೇಮಕಾತಿ ಅವ್ಯವಹಾರ ಪ್ರಕರಣದ ಬಗ್ಗೆ ತನಿಖೆ ನಡೆಸುವಂತೆ ಸಿಬಿಐಗೆ ಕಲ್ಕತ್ತಾ ಹೈಕೋರ್ಟ್ ನಿರ್ದೇಶನ ನೀಡಿತ್ತು. ತನಿಖೆ ನಡೆಸುವಂತೆ ಪಶ್ಚಿಮ ಬಂಗಾಳ ಸ್ಕೂಲ್ ಸರ್ವೀಸ್ ಕಮಿಷನ್ (ಎಸ್‌ಎಸ್‌ಸಿ) ಶಿಫಾರಸು ಮಾಡಿತ್ತು.

2014–21ರ ಅವಧಿಯಲ್ಲಿ ರಾಜ್ಯದ ಶಿಕ್ಷಣ ಸಚಿವರಾಗಿ ಕೆಲಸ ಮಾಡಿದ್ದ ಚಟರ್ಜಿ ಅವರನ್ನು ಸಿಬಿಐ ಅಧಿಕಾರಿಗಳು ಶಿಕ್ಷಕರ ನೇಮಕಾತಿ ಹಗರಣ ಕುರಿತಂತೆ ಇದೇ ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ತನಿಖೆಗೆ ಒಳಪಡಿಸಿದ್ದರು. ಈ ಪ್ರಕರಣದಲ್ಲಿ ನಡೆದಿರಬಹುದಾದ ಹಣ ಅಕ್ರಮ ವರ್ಗಾವಣೆ ಕುರಿತು ಜಾರಿ ನಿರ್ದೇಶನಾಲಯ ತನಿಖೆ ಕೈಗೆತ್ತಿಕೊಂಡಿದೆ.

ಬಿಜೆಪಿ ಟೀಕಾ ಪ್ರಹಾರ

ಸಚಿವ ಪಾರ್ಥ ಚಟರ್ಜಿ ಬಂಧನ ಕುರಿತಂತೆ ಮುಖ್ಯಮಂತ್ರಿ ಹೇಳಿಕೆ ಬಿಡುಗಡೆ ಮಾಡಬೇಕು ಎಂದು ಪ್ರತಿಪಕ್ಷ ಬಿಜೆಪಿ ಪಟ್ಟು ಹಿಡಿದಿದೆ. ರಾಜ್ಯದ ಆಡಳಿತಾರೂಢ ಟಿಎಂಸಿ ಸರ್ಕಾರವೂ ಭ್ರಷ್ಟಾಚಾರದಲ್ಲಿ ತೊಡಗಿಸಿಕೊಂಡಿದೆ ಎಂಬುದನ್ನು ಸಚಿವರ ಬಂಧನವು ಸಾಬೀತುಪಡಿಸುತ್ತದೆ ಎಂದು ಬಿಜೆಪಿ ರಾಷ್ಟ್ರೀಯ ಉಪಾಧ್ಯಕ್ಷ ದಿಲೀಪ್ ಘೋಷ್ ಆರೋಪಿಸಿದ್ದಾರೆ.

'ಭ್ರಷ್ಟಾಚಾರದಲ್ಲಿ ಟಿಎಂಸಿ ಸಚಿವರು ಹಾಗೂ ಮುಖಂಡರು ತೊಡಗಿಸಿಕೊಂಡಿರುವುದು 'ಬಂಗಾಳದ ಅಭಿವೃದ್ಧಿ ಮಾದರಿ'ಗೆ ಉದಾಹರಣೆಯಾಗಿದೆ. ₹20 ಕೋಟಿ ನಗದು ಜಪ್ತಿ ಮಾಡಿರುವುದು ಭ್ರಷ್ಟಾಚಾರದ ತುಣುಕು ಮಾತ್ರ' ಎಂದು ರಾಜ್ಯ ಬಿಜೆಪಿ ಮುಖ್ಯಸ್ಥ ಸುಕಾಂತ್ ಮಜುಂದಾರ್ ಆರೋಪಿಸಿದ್ದಾರೆ.

ಚಟರ್ಜಿ ಬಂಧನಕ್ಕೆ ಪಶ್ಚಿಮ ಬಂಗಾಳದ ವಿಧಾನಸಭೆ ಸ್ಪೀಕರ್ ಬಿಮನ್ ಬ್ಯಾನರ್ಜಿ ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. 'ನಿಯಮದ ಪ್ರಕಾರ, ಲೋಕಸಭೆ ಅಥವಾ ವಿಧಾನಸಭೆಯ ಸದಸ್ಯರನ್ನು ಬಂಧಿಸುವ ಮುನ್ನ, ತನಿಖಾ ಸಂಸ್ಥೆಗಳು ಆ ಬಗ್ಗೆ ಸ್ಪೀಕರ್‌ಗೆ ಮಾಹಿತಿ ನೀಡಬೇಕು' ಎಂದು ಹೇಳಿದ್ದಾರೆ.

ಚಟರ್ಜಿ ಬಂಧನದ ಬಗ್ಗೆ ಪಕ್ಷ ಯಾವ ನಿಲುವು ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಟಿಎಂಸಿ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ನೇತೃತ್ವದಲ್ಲಿ ಶನಿವಾರ ಸಂಜೆ ತುರ್ತು ಸಭೆ ನಡೆಯಿತು. ಚಟರ್ಜಿ ಅವರನ್ನು ಸಚಿವ ಸ್ಥಾನದಿಂದ ತಕ್ಷಣಕ್ಕೆ ತೆಗೆಯದಿರಲು ಸಭೆ ನಿರ್ಧರಿಸಿತು.

ಚಟರ್ಜಿ ಅವರ ಜೊತೆ ಬಂಧನಕ್ಕೆ ಒಳಗಾಗಿರುವ ಅರ್ಪಿತಾ ಮುಖರ್ಜಿ ಅವರ ಜೊತೆ ಪಕ್ಷಕ್ಕೆ ಯಾವುದೇ ನಂಟಿಲ್ಲ ಎಂದು ವಕ್ತಾರ ಕುನಾಲ್ ಘೋಷ್ ಸ್ಪಷ್ಟಪಡಿಸಿದ್ದಾರೆ. 'ಚಟರ್ಜಿ ಅವರು ಬಿಜೆಪಿಯಲ್ಲಿ ಇದ್ದಿದ್ದರೆ ಅವರನ್ನು ಯಾರೂ ಮುಟ್ಟುತ್ತಿರಲಿಲ್ಲ' ಎಂದು ಟಿಎಂಸಿ ಹಿರಿಯ ನಾಯಕ ಫರ್ಹಾನ್ ಹಕೀಮ್ ಹೇಳಿದ್ದಾರೆ.

ಸುದ್ದಿ 2 ನಿಮಿಷ

ಕಸ: ಪಂಜಾಬ್ ಸಿ.ಎಂ ನಿವಾಸಕ್ಕೆ ₹ 10 ಸಾವಿರ ದಂಡ

ಚಂಡೀಗಡ (ಪಿಟಿಐ): ಅಸಮರ್ಪಕ ಕಸ ವಿಲೇವಾರಿಗೆ ಸಂಬಂಧಿಸಿದಂತೆ ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ನಿವಾಸಕ್ಕೆ ₹ 10 ಸಾವಿರ ದಂಡವನ್ನು ಚಂಡೀಗಡ ಮಹಾನಗರ ಪಾಲಿಕೆ ವಿಧಿಸಿದೆ. ಆದರೆ ಈ ಮನೆಗೂ, ಮುಖ್ಯಮಂತ್ರಿಗೂ ಸಂಬಂಧ ಇಲ್ಲ ಎಂದು ಸಿ.ಎಂ ಕಚೇರಿ ಹೇಳಿದೆ.

ಕೇಂದ್ರ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ಬೆಟಾಲಿಯನ್ ಡಿಎಸ್‌ಪಿ ಹರ್ಜಿಂದರ್ ಸಿಂಗ್ ಅವರ ಹೆಸರನ್ನು ನಮೂದಿಸಿ ದಂಡದ ಮೊತ್ತದ ಚಲನ್ ನೀಡಲಾಗಿದೆ.

'ಮುಖ್ಯಮಂತ್ರಿಗಳ ನಿವಾಸದ ಮನೆ ಸಂಖ್ಯೆ 7ರಲ್ಲಿ ಇರುವವರು ಸರಿಯಾಗಿ ಕಸ ವಿಲೇವಾರಿ ಮಾಡುತ್ತಿಲ್ಲ. ಅವರು ನಮ್ಮ ಮನೆಯ ಹೊರಭಾಗದಲ್ಲಿ ಕಸವನ್ನು ಸುರಿಯುತ್ತಿದ್ದಾರೆ. ಇದರಿಂದ ನಮಗೆ ತೊಂದರೆ ಆಗಿದೆ ಎಂದು ಆ ಮನೆಯ ಹಿಂಭಾಗದ ಮನೆಗಳ ನಿವಾಸಿಗಳು ಹಲವು ಬಾರಿ ದೂರು ನೀಡಿದ್ದರು. ಆದರೆ ಪಾಲಿಕೆ ಸಿಬ್ಬಂದಿ ಕ್ರಮ ತೆಗೆದುಕೊಂಡಿರಲಿಲ್ಲ. ಇದೀಗ ದಂಡ ವಿಧಿಸಲಾಗಿದೆ' ಎಂದು ಬಿಜೆಪಿ ಕೌನ್ಸಿಲರ್ ಮಹೇಶಿಂದರ್ ಸಿಧು ಅವರು ಮಾಹಿತಿ ನೀಡಿದ್ದಾರೆ.

ಮನೆ ಸಂಖ್ಯೆ 44, 45, 6 ಮತ್ತು 7ರ ಮನೆಗಳು ಮುಖ್ಯಮಂತ್ರಿಗಳ ನಿವಾಸದ ಭಾಗವಾಗಿವೆ ಎಂದು ಸಿಧು ವಿವರಿಸಿದರು.

ಸಿಎಂಒ ನಿರಾಕರಣೆ: 'ಸೆಕ್ಟರ್ 2ರಲ್ಲಿರುವ 7ನೇ ಸಂಖ್ಯೆಯ ಮನೆಗೆ ಚಲನ್ ನೀಡಲಾಗಿದೆ. ಈ ಮನೆಯನ್ನು ಸದ್ಯ ಅರೆಸೇನಾ ಪಡೆಯೊಂದು ಬಳಸುತ್ತಿದ್ದು, ಮುಖ್ಯಮಂತ್ರಿ ಅವರಿಗೆ ಇದು ಯಾವುದೇ ರೀತಿಯಲ್ಲಿ ಸಂಬಂಧಿಸಿದ್ದಲ್ಲ' ಎಂದು ಮುಖ್ಯಮಂತ್ರಿ ಕಚೇರಿಯ ವಕ್ತಾರರು ಸ್ಪಷ್ಟಪಡಿಸಿದ್ದಾರೆ.

ಸೆ.1ರಿಂದ ನೀಟ್–ಪಿಜಿ ಕೌನ್ಸೆಲಿಂಗ್

ನವದೆಹಲಿ (ಪಿಟಿಐ): ವೈದ್ಯಕೀಯ ಕೋರ್ಸ್‌ಗಳ ಪ್ರವೇಶ ಪರೀಕ್ಷೆ ನೀಟ್–ಪಿಜಿ ಕೌನ್ಸೆಲಿಂಗ್ ಸೆಪ್ಟೆಂಬರ್ 1ರಿಂದ ಆರಂಭವಾಗಲಿದೆ ಎಂದು ಅಧಿಕೃತ ಮೂಲಗಳು ಶನಿವಾರ ತಿಳಿಸಿವೆ.

ನೀಟ್–ಪಿಜಿ 2022ನೇ ಸಾಲಿನ ಪರೀಕ್ಷೆಯಲ್ಲಿ ಅರ್ಹತೆ ಪಡೆದ ವಿದ್ಯಾರ್ಥಿಗಳು ಕೌನ್ಸೆಲಿಂಗ್ ಸಮಯದಲ್ಲಿ ತಮ್ಮ ಆಯ್ಕೆಯ ಕೋರ್ಸ್ ಮತ್ತು ಕಾಲೇಜನ್ನು ಆಯ್ಕೆ ಮಾಡಿಕೊಳ್ಳಬಹುದು.

ಸಾಮಾನ್ಯವಾಗಿ ನೀಟ್–ಪಿಜಿ ಪರೀಕ್ಷೆಯು ಜನವರಿಯಲ್ಲಿ ನಡೆದು, ಮಾರ್ಚ್‌ನಲ್ಲಿ ಕೌನ್ಸೆಲಿಂಗ್ ಆರಂಭವಾಗುತ್ತದೆ. ಆದರೆ ಕೋವಿಡ್ ಕಾರಣದಿಂದ ಕಳೆದ ವರ್ಷದ ಪ್ರವೇಶ ಪ್ರಕ್ರಿಯೆ ವಿಳಂಬವಾಗಿದ್ದುದರಿಂದ ಈ ವರ್ಷ ಮೇ 21ರಂದು ಪರೀಕ್ಷೆ ನಡೆಸಿ, ಜೂನ್ 1ರಂದು ಫಲಿತಾಂಶ ಪ್ರಕಟಿಸಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಾಧ್ಯಮಗಳ ನಿರ್ದಿಷ್ಟ ಕಾರ್ಯಸೂಚಿಯ ಚರ್ಚೆಗಳನ್ನು ಪ್ರಶ್ನಿಸಿದ ಸಿಜೆಐ ರಮಣ

'ಕಾಂಗರೂ ನ್ಯಾಯಾಲಯ ಪ್ರಜಾಪ್ರಭುತ್ವಕ್ಕೆ ಮಾರಕ'

ಎನ್‌.ವಿ. ರಮಣ

ರಾಂಚಿ (ಪಿಟಿಐ): ಮಾಧ್ಯಮಗಳು ನಡೆಸುತ್ತಿರುವ ನಿರ್ದಿಷ್ಟ ಕಾರ್ಯಸೂಚಿಯ ಚರ್ಚೆಗಳು ಮತ್ತು 'ಕಾಂಗರೂ ನ್ಯಾಯಾಲಯ'ಗಳು (ನಿರ್ದಿಷ್ಟ ಹಿತಾಸಕ್ತಿಗಾಗಿ ನಡೆಸುವ ವಿಚಾರಣೆ) ದೇಶದ ಪ್ರಜಾಪ್ರಭುತ್ವ ಆರೋಗ್ಯಕ್ಕೆ ಮಾರಕವಾಗಿ ಪರಿಣಮಿಸಿವೆ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಎನ್‌.ವಿ. ರಮಣ ಶನಿವಾರ ಕಳವಳ ವ್ಯಕ್ತಪಡಿಸಿದರು.

ನ್ಯಾಯಮೂರ್ತಿ ಸತ್ಯವ್ರತ ಸಿನ್ಹಾ ಅವರ ಸ್ಮರಣಾರ್ಥ ಇಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಅವರು, 'ಮಾಧ್ಯಮಗಳು ನಡೆಸುತ್ತಿರುವ ವಿಚಾರಣೆಗಳಿಂದಾಗಿ ದೇಶದ ನ್ಯಾಯಾಲಯ ವ್ಯವಸ್ಥೆಯ ಸ್ವತಂತ್ರ, ನಿಷ್ಪಕ್ಷಪಾತ ಕಾರ್ಯ ನಿರ್ವಹಣೆಗೆ ಧಕ್ಕೆ ಎದುರಾಗಿದೆ' ಎಂದರು.

'ಮಾಧ್ಯಮಗಳು ನಡೆಸುತ್ತಿರುವ ವಿಚಾರಣೆಗಳು ಪ್ರಕರಣವನ್ನು ಇತ್ಯರ್ಥಪಡಿಸುವುದಕ್ಕೆ ಮಾರ್ಗದರ್ಶಿಯಾಗಲು ಸಾಧ್ಯವಿಲ್ಲ. ಅಲ್ಲದೆ ಮಾಧ್ಯಮಗಳ ಕಾಂಗರೂ ಕೋರ್ಟ್‌ಗಳಿಂದಾಗಿ ಅನುಭವಿ ನ್ಯಾಯಾಧೀಶರಿಗೂ ಪ್ರಕರಣಗಳನ್ನು ಇತ್ಯರ್ಥಪಡಿಸಲು ಕಷ್ಟಕರವಾಗಿ ಪರಿಣಮಿಸಿದೆ. ಈ ರೀತಿಯ ಮಾಧ್ಯಮ ವರ್ತನೆಗಳು ದೇಶದ ಪ್ರಜಾಪ್ರಭುತ್ವದ ಆರೋಗ್ಯಕ್ಕೆ ಹಾನಿ ತರುತ್ತಿವೆ' ಎಂದು ಅವರು ದೂರಿದರು. 'ಮಾಧ್ಯಮಗಳು ತಮ್ಮ ಜವಾಬ್ದಾರಿಯನ್ನು ಮರೆತಿರುವುದರಿಂದ ನಮ್ಮ ಪ್ರಜಾಪ್ರಭುತ್ವ ಎರಡು ಹೆಜ್ಜೆ ಹಿಂದಕ್ಕೆ ಹೋದಂತಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಿವೃತ್ತಿಯ ಬಳಿಕ ರಕ್ಷಣೆ ಇಲ್ಲ: 'ನ್ಯಾಯಾಧೀಶರು ತಮ್ಮ ಸೇವಾ ಅವಧಿಯಲ್ಲಿ ಹಲವು ಅಪರಾಧಿಗಳಿಗೆ ಶಿಕ್ಷೆ ನೀಡಿ ಜೈಲಿಗೆ ಕಳುಹಿಸಿರುತ್ತಾರೆ. ನ್ಯಾಯಾಧೀಶರು ನಿವೃತ್ತಿಯಾಗುತ್ತಿದ್ದಂತೆ ಎಲ್ಲ ರೀತಿಯ ರಕ್ಷಣೆಯನ್ನು ಕಳೆದುಕೊಳ್ಳುತ್ತಾರೆ. ನಿವೃತ್ತಿ ಬಳಿಕ ಅವರು ಯಾವುದೇ ಭದ್ರತೆಯಿಲ್ಲದೆ ಜೀವನ ಕಳೆಯಬೇಕಾಗುತ್ತದೆ' ಎಂದರು.

ಮುದ್ರಣ ಮಾಧ್ಯಮಕ್ಕೆ ಪ್ರಶಂಸೆ

'ಮುದ್ರಣ ಮಾಧ್ಯಮಗಳು ಈಗಲೂ ಒಂದು ಮಟ್ಟದ ಉತ್ತರದಾಯಿತ್ವ ಹೊಂದಿವೆ. ಆದರೆ ವಿದ್ಯುನ್ಮಾನ ಮಾಧ್ಯಮಗಳ ಉತ್ತರದಾಯಿತ್ವ ಶೂನ್ಯವಾಗಿದೆ. ಅವರು ನೀಡುವ ಸುದ್ದಿಗಳು ಕೆಲವೇ ಹೊತ್ತಲ್ಲಿ ಕಣ್ಮರೆಯಾಗಿಬಿಟ್ಟಿರುತ್ತವೆ' ಎಂದು ನ್ಯಾಯಮೂರ್ತಿ ರಮಣ ಹೇಳಿದರು.

'ಕೆಲ ಸಂದರ್ಭಗಳಲ್ಲಿ ಮಾಧ್ಯಮಗಳಲ್ಲಿ, ಪ್ರಮುಖವಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ನ್ಯಾಯಾಧೀಶರ ವಿರುದ್ಧ ಆಂದೋಲನಗಳನ್ನು ನಡೆಸಲಾಗುತ್ತಿವೆ. ಸಾಮಾಜಿಕ ಅಶಾಂತಿ ಹೆಚ್ಚುತ್ತಿರುವ ಸಂದರ್ಭದಲ್ಲಿ ಮಾಧ್ಯಮಗಳ ಹೊಣೆಗಾರಿಕೆ ಮೆರೆಯಬೇಕು ಎಂಬ ಅಪೇಕ್ಷೆಯೂ ಹೆಚ್ಚಿದೆ' ಎಂದರು.

'ಇತ್ತೀಚಿನ ಬೆಳವಣಿಗೆಗಳನ್ನು ಗಮನಿಸಿದರೆ, ಮಾಧ್ಯಮಗಳು ಸ್ವಯಂ ನಿಯಂತ್ರಣ ಮಾಡಿಕೊಳ್ಳುವುದು ಸೂಕ್ತ. ನಿಮ್ಮ ಮಾತಿಗೆ ಮಿತಿ ಇರಲಿ, ನೀವು ಎಲ್ಲೆಯನ್ನೂ ಮೀರಬೇಡಿ ಹಾಗೂ ಸರ್ಕಾರ ಅಥವಾ ನ್ಯಾಯಾಲಯದ ಕಾರ್ಯದಲ್ಲಿ ಹಸ್ತಕ್ಷೇಪವನ್ನೂ ಮಾಡಬೇಡಿ' ಎಂದರು.

ಏನಿದು ಕಾಂಗರೂ ಕೋರ್ಟ್?

ನಿರ್ದಿಷ್ಟ ಹಿತಾಸಕ್ತಿಗಾಗಿ ನಡೆಸುವ ವಿಚಾರಣೆಯನ್ನು ಕಾಂಗರೂ ಕೋರ್ಟ್ ಎಂದು ಕರೆಯಲಾಗುತ್ತದೆ. ಇಲ್ಲಿ ಕಾನೂನು ಮತ್ತು ನ್ಯಾಯದ ತತ್ವಗಳನ್ನು ಕಡೆಗಣಿಸಲಾಗುತ್ತದೆ. ಇಂತಹ ಕೋರ್ಟ್‌ಗಳಲ್ಲಿ ಬರುವ ನ್ಯಾಯನಿರ್ಣಯಗಳು ಪೂರ್ವನಿರ್ಧರಿತವಾಗಿರುತ್ತವೆ. ನೆಲದ ಕಾನೂನಿಗೆ ಇಲ್ಲಿ ಅಂತಹ ಕಿಮ್ಮತ್ತನ್ನು ನೀಡುವುದಿಲ್ಲ.

ಎಸ್‌ಪಿ ಮೈತ್ರಿಯಿಂದ ರಾಜ್‌ಭರ್, ಶಿವಪಾಲ್ ಹೊರಕ್ಕೆ

ಲಖನೌ: ಸುಹೇಲ್‌ದೇವ್ ಭಾರತೀಯ ಸಮಾಜ ಪಕ್ಷದ (ಎಸ್‌ಬಿಎಸ್‌ಪಿ) ಮುಖ್ಯಸ್ಥ ಓಂ ಪ್ರಕಾಶ್ ರಾಜ್‌ಭರ್ ಅವರು ಸಮಾಜವಾದಿ ಪಕ್ಷ (ಎಸ್‌ಪಿ) ನೇತೃತ್ವದ ಮೈತ್ರಿಕೂಟದಿಂದ ಹೊರಬರಲು ಶನಿವಾರ ನಿರ್ಧರಿಸಿದ್ದಾರೆ. ಕಳೆದ ಕೆಲವು ದಿನಗಳಿಂದ ರಾಜ್‌ಭರ್ ಮತ್ತು ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ನಡುವೆ ವಾಕ್ಸಮರ ನಡೆಯುತ್ತಿತ್ತು. ಇದೇ ವೇಳೆ, ಅಖಿಲೇಶ್ ಯಾದವ್ ಅವರ ಚಿಕ್ಕಪ್ಪ, ಪ್ರಗತಿಶೀಲ ಸಮಾಜವಾದಿ ಪಕ್ಷ (ಎಲ್) ಮುಖ್ಯಸ್ಥ ಶಿವಪಾಲ್ ಸಿಂಗ್ ಯಾದವ್ ಅವರು ಕೂಡ ಎಸ್‌ಪಿಯಿಂದ ಹೊರನಡೆಯುವುದಾಗಿ ಹೇಳಿದ್ದಾರೆ.

ಈ ವರ್ಷದ ಆರಂಭದಲ್ಲಿ ನಡೆದಿದ್ದ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಎಸ್‌ಪಿ ನೇತೃತ್ವದ ಮೈತ್ರಿಕೂಟಕ್ಕೆ ಎಸ್‌ಬಿಎಸ್‌ಪಿ ಸೇರಿತ್ತು. ಪ್ರಗತಿಶೀಲ ಸಮಾಜವಾದಿ ಪಕ್ಷವು ಎಸ್‌ಪಿಯಲ್ಲಿ ವಿಲೀನವಾಗಿತ್ತು.

ಎಸ್‌ಪಿ ಎರಡು ಪ್ರತ್ಯೇಕ ಪತ್ರಗಳನ್ನು ಬರೆದು, 'ಯಾವ ಪಕ್ಷದಲ್ಲಿ ಗೌರವ ಸಿಗುತ್ತದೆಯೋ ಆ ಪಕ್ಷದ ಜೊತೆ ಸೇರಲು ಓಂ ಪ್ರಕಾಶ್ ರಾಜ್‌ಭರ್ ಮತ್ತು ಶಿವಪಾಲ್ ಸಿಂಗ್ ಯಾದವ್ ಅವರು ಸ್ವತಂತ್ರರು' ಎಂದು ಹೇಳಲಾಗಿತ್ತು.

ಪತ್ರಕ್ಕೆ ಪ್ರತಿಕ್ರಿಯಿಸಿರುವ ರಾಜ್‌ಭರ್ ಅವರು ಅಖಿಲೇಶ್ ಯಾದವ್ ವಿರುದ್ಧ ಹರಿಹಾಯ್ದಿದ್ದಾರೆ. ಬಿಎಸ್‌ಪಿ ಅಥವಾ ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡು 2024ರ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸುವ ಕುರಿತು ಸೂಚನೆ ನೀಡಿದ ಅವರು, 'ಮುಂದಿನ ಮೈತ್ರಿಯ ಕುರಿತು ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಜೊತೆ ಚರ್ಚಿಸಿ ನಿರ್ಧರಿಸುತ್ತೇನೆ' ಎಂದು ಹೇಳಿದ್ದಾರೆ.

ಸ್ಮೃತಿ ಇರಾನಿ ಪುತ್ರಿಯಿಂದ ಅಕ್ರಮ ಬಾರ್: ಕಾಂಗ್ರೆಸ್

ನವದೆಹಲಿ (ಪಿಟಿಐ): ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರ ಮಗಳು ಝೋಯಿಶ್ ಇರಾನಿ ಅವರು ಮೃತರೊಬ್ಬರ ಹೆಸರಿನಲ್ಲಿ ಗೋವಾದಲ್ಲಿ ಬಾರ್‌ವೊಂದನ್ನು ನಡೆಸುತ್ತಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ. ಹೀಗಾಗಿ, ಸ್ಮೃತಿ ಅವರನ್ನು ಸಂಪುಟದಿಂದ ವಜಾ ಮಾಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರನ್ನು ಶನಿವಾರ ಆಗ್ರಹಿಸಿದೆ.

ಈ ಕುರಿತು ಸುದ್ದಿಗೋಷ್ಠಿ ನಡೆಸಿರುವ ಕಾಂಗ್ರೆಸ್ ವಕ್ತಾರ ಪವನ್ ಖೇರಾ, '2021 ಮೇ ತಿಂಗಳಿನಲ್ಲಿ ಮೃತಪಟ್ಟ ವ್ಯಕ್ತಿಯೊಬ್ಬರ ಹೆಸರಿನಲ್ಲಿ 2022 ಜೂನ್‌ನಲ್ಲಿ ಪರವಾನಗಿ ಪಡೆದುಕೊಳ್ಳಲಾಗಿದೆ' ಎಂದು ಆರೋಪಿಸಿದರು.

'ಒಂದು ರೆಸ್ಟೋರೆಂಟ್‌ಗೆ ಒಂದೇ ಬಾರ್ ಪರವಾನಗಿ ಎಂಬ ನಿಯಮ ಗೋವಾದಲ್ಲಿದೆ. ಆದರೆ ಇರಾನಿ ಅವರ ಮಗಳು ನಡೆಸುತ್ತಿರುವ ಸಿಲ್ಲಿ ಸೋಲ್ಸ್ ಕೆಫೆ ರೆಸ್ಟೋರೆಂಟ್‌ಗೆ ಎರಡು ಬಾರ್ ಪರವಾನಗಿ ಇದೆ. ಸ್ಮೃತಿ ಅವರ ಗಮನಕ್ಕೆ ಬಾರದೆಯೇ ಇದು ನಡೆದಿದೆಯೇ' ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

ಅಧಿಕಾರಿ ವರ್ಗಾವಣೆ: 'ಸ್ಮೃತಿ ಅವರ ಮಗಳು ಅಕ್ರಮವಾಗಿ ನಡೆಸುತ್ತಿರುವ ಬಾರ್‌ಗೆ ಅಬಕಾರಿ ಅಧಿಕಾರಿಗಳು ನೀಡಿರುವ ಶೋಕಾಸ್ ನೋಟಿಸ್‌ನ ಪ್ರತಿಯನ್ನು ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಪ್ರದರ್ಶಿಸಿದೆ. ನೋಟಿಸ್ ನೀಡಿರುವ ಅಧಿಕಾರಿಯನ್ನು, ತಕ್ಷಣವೇ ವರ್ಗಾವಣೆ ಮಾಡಲಾಗಿದೆ' ಎಂದು ಕಾಂಗ್ರೆಸ್ ಗಂಭೀರ ಆರೋಪ ಮಾಡಿದೆ.

'ಕಾಂಗ್ರೆಸ್ ಮುಖಂಡರು ಪ್ರದರ್ಶಿಸಿರುವ ಶೋಕಾಸ್ ನೋಟಿಸ್‌ನಲ್ಲಿ ನನ್ನ ಮಗಳ ಹೆಸರಿದೆಯೇ? ನನ್ನ ಮಗಳು ಮೊದಲ ವರ್ಷದ ಪದವಿ ವಿದ್ಯಾರ್ಥಿನಿ. ಆಕೆ ಯಾವ ಬಾರ್ ಅನ್ನು ನಡೆಸುತ್ತಿಲ್ಲ. ನಾನು ಗಾಂಧಿ ಕುಟುಂಬವನ್ನು ಪ್ರಶ್ನಿಸಿದ್ದಕ್ಕಾಗಿಯೇ ಕಾಂಗ್ರೆಸ್ ನನ್ನ ಮಗಳ ತೇಜೋವಧೆಗೆ ಇಳಿದಿದೆ' ಎಂದರು.

'2024ರಲ್ಲಿ ಅಮೇಠಿಯಲ್ಲಿಯೇ ರಾಹುಲ್ ಗಾಂಧಿ ಸ್ಪರ್ಧಿಸವ ಧೈರ್ಯ ಮಾಡಲಿ. ನಾನು ಅವರನ್ನು ಸೋಲಿಸಲಿದ್ದೇನೆ. 18 ವರ್ಷದ ಮಗಳ ಅಮ್ಮನಾಗಿ ಹಾಗೂ ಒಬ್ಬ ಬಿಜೆಪಿ ಕಾರ್ಯಕರ್ತೆಯಾಗಿ ಇದು ನನ್ನ ಪ್ರತಿಜ್ಞೆ' ಎಂದರು.

ಚಿನ್ನ, ಬೆಳ್ಳಿ (ಬೆಂಗಳೂರು)

ಸ್ಟ್ಯಾಂಡರ್ಡ್ ಚಿನ್ನ (10 ಗ್ರಾಂ)	₹52,550
ಆಭರಣ ಚಿನ್ನ (1 ಗ್ರಾಂ)	₹4,835
ಬೆಳ್ಳಿ (ಕೆ.ಜಿಗೆ)	₹56,400

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1640 (1640)
ಸೋಯಾ (ರಿಫೈನ್ಡ್)	₹1225 (1220)
ಸೂರ್ಯಕಾಂತಿ (ರಿಫೈನ್ಡ್)	₹1580 (1580)
ಪಾಮೋಲಿನ್	₹1185 (1185)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹67
ಮೈಸೂರು	
100 ಮೊಟ್ಟೆಗೆ	₹445

ಎನ್‌.ಆರ್‌.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್‌-4	₹170
ಆರ್‌ಎಸ್‌ಎಸ್‌-5	₹161
ಗುಡ್ ಲಾಟ್	₹155

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹277-560
ದ್ವಿತಳಿ (ಬಿ.ವಿ)	₹211-745

ಕೋಟಕ್ ಮಹೀಂದ್ರ ಬ್ಯಾಂಕ್‌ಗೆ ಲಾಭ

ನವದೆಹಲಿ (ಪಿಟಿಐ): ಕೋಟಕ್ ಮಹೀಂದ್ರ ಬ್ಯಾಂಕ್‌ನ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹ 2,071 ಕೋಟಿ ಆಗಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹ 1,642 ಕೋಟಿ ನಿವ್ವಳ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿಯ ಲಾಭವು ಶೇಕಡ 26ರಷ್ಟು ಹೆಚ್ಚಾಗಿದೆ. ಸುಸ್ತಿ ಸಾಲಗಳ ಪ್ರಮಾಣದಲ್ಲಿ ಇಳಿಕೆ ಆಗಿರುವುದೇ ಇದಕ್ಕೆ ಕಾರಣ ಎಂದು ಬ್ಯಾಂಕ್ ತಿಳಿಸಿದೆ.

ಬ್ಯಾಂಕ್‌ನ ಒಟ್ಟು ವರಮಾನ ₹8,063 ಕೋಟಿಯಿಂದ ₹8,582 ಕೋಟಿಗೆ ಏರಿಕೆ ಆಗಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಯೆಸ್ ಬ್ಯಾಂಕ್ ಲಾಭ ಏರಿಕೆ

ನವದೆಹಲಿ (ಪಿಟಿಐ): ಯೆಸ್ ಬ್ಯಾಂಕ್‌ನ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹ 311 ಕೋಟಿ ಆಗಿದೆ. ಹಿಂದಿನ ಹಣಕಾಸು ವರ್ಷ ಇದೇ ಅವಧಿಯಲ್ಲಿ ಗಳಿಸಿದ್ದ ಲಾಭಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇ 54ರಷ್ಟು ಹೆಚ್ಚಾಗಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಭವಿಷ್ಯದಲ್ಲಿ ಎದುರಾಗಬಹುದಾದ ನಷ್ಟ ಭರಿಸಲು ತೆಗೆದಿರಿಸುವ ಮೊತ್ತದಲ್ಲಿ ಇಳಿಕೆ ಹಾಗೂ ವರಮಾನದಲ್ಲಿ ಉತ್ತಮ ಬೆಳವಣಿಗೆಯಿಂದ ಲಾಭ ಹೆಚ್ಚಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ದೇಶಿ, ಜಾಗತಿಕ ವಿದ್ಯಮಾನಗಳ ಪ್ರಭಾವ: ತಜ್ಞರ ಅಭಿಪ್ರಾಯ

ಪೇಟೆಯತ್ತ ವಿದೇಶಿ ಹೂಡಿಕೆದಾರರು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಹೆಚ್ಚಿನ ಪ್ರಮಾಣದಲ್ಲಿ ಬಡ್ಡಿದರ ಏರಿಕೆ ಸಾಧ್ಯತೆ ಕಡಿಮೆ
- ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಇಳಿಕೆ
- ಹಣದುಬ್ಬರ ಪ್ರಮಾಣ ಅಲ್ಪ ಇಳಿಕೆ

ಬೆಂಗಳೂರು: ಈ ವರ್ಷದ ಆರಂಭದಿಂದಲೂ ಷೇರುಗಳ ಮಾರಾಟಕ್ಕೆ ಗಮನ ಹರಿಸಿದ್ದ ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಇದೀಗ ಮತ್ತೆ ಬಂಡವಾಳ ಹೂಡಿಕೆ ಮಾಡಲು ಆಸಕ್ತಿ ತೋರಿರುವಂತೆ ಕಾಣುತ್ತಿದೆ.

2022ರ ಜನವರಿಯಿಂದ ಜುಲೈ 16ರವರೆಗಿನ ವಹಿವಾಟು ಅವಧಿಗಳಲ್ಲಿ ₹ 2.3 ಲಕ್ಷ ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಆ ಬಳಿಕ ಜುಲೈ 22ಕ್ಕೆ ಕೊನೆಗೊಂಡ ವಾರದಲ್ಲಿ ₹ 2,026 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸುವ ಮೂಲಕ ಮತ್ತೆ ಹೂಡಿಕೆ ಆರಂಭಿಸುವ ಸೂಚನೆ ನೀಡಿದ್ದಾರೆ.

ದೇಶಿ ಮತ್ತು ಜಾಗತಿಕ ವಿದ್ಯಮಾನಗಳ ಪ್ರಭಾವದಿಂದಾಗಿ ವಿದೇಶಿ ಹೂಡಿಕೆದಾರರು ಮತ್ತೆ ಭಾರತದ ಷೇರು ಪೇಟೆಯತ್ತ ಮುಖಮಾಡಿದ್ದಾರೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

'ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಸ್ಥಳೀಯ ಷೇರುಗಳ ಖರೀದಿಯನ್ನು ಆರಂಭಿಸಿದ್ದಾರೆ' ಎಂದು ಮೆಹ್ತಾ ಈಕ್ವಿಟೀಸ್ ಲಿಮಿಟೆಡ್‌ನ ಉಪಾಧ್ಯಕ್ಷ ಪ್ರಶಾಂತ್ ತಾಪ್ಸೆ ಹೇಳಿದ್ದಾರೆ.

ಕೇಂದ್ರೀಯ ಬ್ಯಾಂಕ್‌ಗಳು ವೇಗವಾಗಿ ಬಡ್ಡಿದರ ಹೆಚ್ಚಳ ಮಾಡದೇ ಇರಲು ಮುಂದಾಗಿವೆ. ರಾಯಿಟರ್ಸ್ ವರದಿಯ ಪ್ರಕಾರ, ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರ ಹೆಚ್ಚಳ ಮಾಡುವುದರ ಕುರಿತಾಗಿ ಆರ್ಥಿಕ ತಜ್ಞರಲ್ಲಿ ಇದ್ದ ಆತಂಕ ಕಡಿಮೆ ಆಗಿದೆ.

ಎಫ್‌ಐಐ ಹೂಡಿಕೆ ವಿವರ (ಕೋಟಿಗಳಲ್ಲಿ)
ಮಾಹಿತಿ: ಪಿಟಿಐ



ಶೇ 1ರಷ್ಟು ಬಡ್ಡಿದರ ಹೆಚ್ಚಳ ಆಗಲಿದೆ ಎಂದು ಜುಲೈ 14ರಿಂದ 20ರ ಅವಧಿಯಲ್ಲಿ ರಾಯಿಟರ್ಸ್ ನಡೆಸಿದ್ದ ಸಮೀಕ್ಷೆಯಲ್ಲಿ ಹೇಳಿದ್ದ ಆರ್ಥಿಕ ತಜ್ಞರು ಇದೀಗ ಬಡ್ಡಿದರವು ಶೇ 0.75ರಷ್ಟು ಹೆಚ್ಚಳ ಆಗಲಿದೆ ಎಂದಿದ್ದಾರೆ. ಇದೇ 27 ಮತ್ತು 28ರಂದು ಫೆಡರಲ್ ಬ್ಯಾಂಕ್ ಸಭೆ ನಡೆಯಲಿದೆ.

ಅಮೆರಿಕವು ಆರ್ಥಿಕ ಹಿಂಜರಿತಕ್ಕೆ ಒಳಗಾಗುವ ಸಾಧ್ಯತೆ ಕಡಿಮೆ. ಒಂದೊಮ್ಮೆ ಹಿಂಜರಿತಕ್ಕೆ ಒಳಗಾದರೂ ಅದರ ತೀವ್ರತೆ ಕಡಿಮೆ ಇರುತ್ತದೆ ಎನ್ನುವ ವರದಿಯು ಸಹ ವಿದೇಶಿ ಹೂಡಿಕೆದಾರರು ಮತ್ತೆ ಭಾರತದತ್ತ ಮುಖಮಾಡಲು ಕಾರಣವಾಗಿದೆ.

ಭಾರತದಲ್ಲಿ ಒಟ್ಟಾರೆಯಾಗಿ ಆರ್ಥಿಕ ಸ್ಥಿತಿ ಉತ್ತಮವಾಗಿರುವಂತೆ ಕಂಡುಬರುತ್ತಿದೆ. ಜಿಎಸ್‌ಟಿ ಸಂಗ್ರಹ, ಹಣದುಬ್ಬರವು ಎರಡಂಕಿ ಮಟ್ಟದಲ್ಲಿಯೇ ಇದ್ದರೂ ಅಲ್ಪ ಪ್ರಮಾಣದಲ್ಲಿ ಇಳಿಕೆ ಕಾಣುತ್ತಿರುವುದು, ಕಾರ್ಪೊರೇಟ್ ವಲಯದ ಮೊದಲ ತ್ರೈಮಾಸಿಕ ಫಲಿತಾಂಶವು ಸಕಾರಾತ್ಮಕವಾಗಿ ಇರುವುದು... ಹೀಗೆ ಇನ್ನೂ ಹಲವು ಕಾರಣಗಳು ಸಹ ಹೂಡಿಕೆದಾರರನ್ನು ಷೇರುಪೇಟೆಯತ್ತ ಮತ್ತೆ ಸೆಳೆಯುತ್ತಿವೆ.

ದೇಶದ ಬಂಡವಾಳ ಮಾರುಕಟ್ಟೆಗಳಲ್ಲಿ 2020–21ನೇ ಹಣಕಾಸು ವರ್ಷದಲ್ಲಿ ₹ 2.7 ಲಕ್ಷ ಕೋಟಿ ಹೂಡಿಕೆ ಮಾಡಿದ್ದರು. 2021–22ನೇ ದಾಖಲೆಯ ₹ 1.4 ಲಕ್ಷ ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ.

ಐಸಿಐಸಿಐ ಬ್ಯಾಂಕ್ ಲಾಭ ಶೇ 50 ಏರಿಕೆ

ನವದೆಹಲಿ (ಪಿಟಿಐ): ಖಾಸಗಿ ವಲಯದ ಐಸಿಐಸಿಐ ಬ್ಯಾಂಕ್, ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹6,905 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹4,616 ಕೋಟಿ ನಿವ್ವಳ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭದಲ್ಲಿ ಶೇ 50ರಷ್ಟು ಏರಿಕೆ ಆಗಿದೆ. ಒಟ್ಟು ವರಮಾನವು ₹24,379 ಕೋಟಿಯಿಂದ ₹ 28,336 ಕೋಟಿಗೆ ಏರಿಕೆ ಆಗಿದೆ ಎಂದು ಬ್ಯಾಂಕ್ ಷೇರುಪೇಟೆಗೆ ಮಾಹಿತಿ ನೀಡಿದೆ.

ವಸೂಲಾಗದ ಸಾಲದ ಸರಾಸರಿ (ಎನ್‌ಪಿಎ) ಪ್ರಮಾಣವು ಶೇ 5.15 ರಿಂದ ಶೇ 3.41ಕ್ಕೆ ಇಳಿಕೆ ಕಂಡಿದೆ. ನಿವ್ವಳ ಎನ್‌ಪಿಎ ಶೇ 1.16 ರಿಂದ ಶೇ0.70ಕ್ಕೆ ಇಳಿಕೆ ಆಗಿದೆ.

ಮುಂಬೈ ಧಾರಣೆ

ಶೇಂಗಾ

23-7-2022

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	10700-10750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (1650)
ಒಂದು ವಾರದ ಡೆಲಿವರಿ	1645 (1645)
ಸೋಯಾ ಕಚ್ಚಾ	1150 (1140)
ಪಾಮ್ ವಾರದ ಡೆಲಿವರಿ	1183 (1183)
ಸೂರ್ಯಕಾಂತಿ ಎಣ್ಣೆ ಕಚ್ಚಾ	1500 (1500)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,700 (50,600)
ಬೆಳ್ಳಿ ಕೆ.ಜಿ 54,500 (54,950)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ

ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	490

ತಿಪಟೂರು ಕೊಬ್ಬರಿ

ಕನಿಷ್ಠ	13500
ಗರಿಷ್ಠ	15111
ಮಾದರಿ	14500

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15800	15600	15750	215.85 ಸೆಂಟ್ಸ್
ಎಸಿ	8680	8300	8550	
ಆರ್‌ಪಿ	9500	9500	9650	ಲಂಡನ್
ಆರ್‌ಸಿ	4700	4500	4475	1987 ಡಾಲರ್ಸ್

ಕರ್ನಾಟಕ ಬ್ಯಾಂಕ್ ಲಾಭ ಹೆಚ್ಚಳ

ಪ್ರಜಾವಾಣಿ ವಾರ್ತೆ


ಮಹಾಬಲೇಶ್ವರ

ಮಂಗಳೂರು: ಕರ್ಣಾಟಕ ಬ್ಯಾಂಕ್, ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದ ಅಂತ್ಯಕ್ಕೆ ₹ 114 ಕೋಟಿಗಳ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಮೊದಲ ತ್ರೈಮಾಸಿಕದ ಅಂತ್ಯಕ್ಕೆ ₹ 105.91 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭದಲ್ಲಿ ಶೇ 7.69ರಷ್ಟು ಬೆಳವಣಿಗೆ ಸಾಧ್ಯವಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಬ್ಯಾಂಕ್‌ನ ನಿರ್ವಹಣಾ ಲಾಭವು ₹ 412.65 ಕೋಟಿ ತಲುಪಿದೆ. ನಿವ್ವಳ ಬಡ್ಡಿ ಆದಾಯ ಶೇ 19.62ರ ಬೆಳವಣಿಗೆಯೊಂದಿಗೆ ₹ 687.56 ಕೋಟಿಗಳಿಗೆ ಏರಿಕೆ ಆಗಿದೆ.

'ಬ್ಯಾಂಕ್‌ನ ಒಟ್ಟು ವ್ಯವಹಾರವು ಶೇ 8.67ರಷ್ಟು ವೃದ್ಧಿಯೊಂದಿಗೆ ₹1,38,935 ಕೋಟಿ ತಲುಪಿದ್ದು, ಹಿಂದಿನ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹1,27,846 ಕೋಟಿ ಇತ್ತು. ಠೇವಣಿಗಳ ಮೊತ್ತವು ಶೇ 5.72ರಷ್ಟು ಏರಿಕೆ ಆಗಿದ್ದು, ₹ 80,576.38 ಕೋಟಿಗೆ ತಲುಪಿದೆ. ಮುಂಗಡವು ಶೇ 13.03ರಷ್ಟು ವೃದ್ಧಿಯೊಂದಿಗೆ ₹ 58,359 ಕೋಟಿಗೆ ಏರಿಕೆಯಾಗಿದೆ' ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಮಹಾಬಲೇಶ್ವರ ಎಂ.ಎಸ್ ತಿಳಿಸಿದ್ದಾರೆ.

'ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಉತ್ತಮ ಫಲಿತಾಂಶ ಗಳಿಸುವುದರೊಂದಿಗೆ ಬ್ಯಾಂಕ್‌ನ ಕಾರ್ಯನಿರ್ವಹಣೆಯು ಶುಭಾರಂಭಗೊಂಡಿದೆ' ಎಂದು ಅವರು ತಿಳಿಸಿದ್ದಾರೆ.

75ಕ್ಕೂ ಹೆಚ್ಚು ದೇಶಗಳಿಗೆ ಹರಡಿದ ಸೋಂಕು

ಮಂಕಿಪಾಕ್ಸ್: ವಿಶ್ವ ಆರೋಗ್ಯ ತುರ್ತುಸ್ಥಿತಿ

ಜಿನೀವಾ (ಎಪಿ): ಮಂಕಿಪಾಕ್ಸ್ ಸೋಂಕು 75ಕ್ಕೂ ಹೆಚ್ಚು ದೇಶಗಳಿಗೆ ವ್ಯಾಪಿಸಿರುವ ಕಾರಣ, ಇದನ್ನು 'ಜಾಗತಿಕ ಆರೋಗ್ಯ ತುರ್ತುಸ್ಥಿತಿ' ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಶನಿವಾರ ಘೋಷಿಸಿದೆ. ಜಾಗತಿಕವಾಗಿ 16,000ಕ್ಕೂ ಹೆಚ್ಚು ಮಂಕಿಪಾಕ್ಸ್ ಪ್ರಕರಣಗಳು ವರದಿಯಾಗಿದ್ದು, ಈವರೆಗೆ ಐವರು ಮೃತಪಟ್ಟಿದ್ದಾರೆ.

'ಹಲವು ರಾಷ್ಟ್ರಗಳಿಗೆ ಸೋಂಕು ಅತಿ ವೇಗವಾಗಿ ಹರಡುತ್ತಿದೆ. ಇದು ಹರಡುತ್ತಿರುವ ವಿವಿಧ ವಿಧಾನಗಳ ಬಗ್ಗೆ ನಮಗೆ ಗೊತ್ತಿರುವುದು ತೀರಾ ಕಡಿಮೆ. ತುರ್ತುಸ್ಥಿತಿ ಎಂಬುದಾಗಿ ಘೋಷಿಸಲು ರೂಪಿಸಿರುವ ಅಂತರರಾಷ್ಟ್ರೀಯ ಆರೋಗ್ಯ ಮಾನದಂಡಗಳ ಅನ್ವಯವೇ ಈ ಘೋಷಣೆ ಮಾಡಲಾಗಿದೆ' ಎಂದು ಸಂಸ್ಥೆಯ ಮಹಾನಿರ್ದೇಶಕ ಟೆಡ್ರೊಸ್ ಅಧಾನಮ್ ಗೆಬ್ರಿಯೇಸಸ್ ಹೇಳಿದ್ದಾರೆ.

ಪುರುಷರ ಜತೆ ಪುರುಷ ಲೈಂಗಿಕ ಕ್ರಿಯೆ ನಡೆಸುವ ಸಮುದಾಯಗಳಲ್ಲಿ ಸೋಂಕು ಕಾಣಿಸಿಕೊಂಡಿರುವ ದೇಶಗಳು ನಿಗಾ ವಹಿಸಬೇಕು ಎಂದು ಸೂಚಿಸಿರುವ ಡಬ್ಲ್ಯುಎಚ್‌ಒ, ಇಂತಹ ಸಮುದಾಯಗಳ ಆರೋಗ್ಯ, ಮಾನವ ಹಕ್ಕುಗಳು ಹಾಗೂ ಘನತೆಯನ್ನು ಕಾಯುವ ಕ್ರಮಗಳನ್ನು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದೆ.

ಮಂಕಿಪಾಕ್ಸ್ ಅನ್ನು ಆರೋಗ್ಯ ತುರ್ತುಸ್ಥಿತಿ ಎಂದು ವರ್ಗೀಕರಿಸುವ ಬಗ್ಗೆ ತುರ್ತು ಸಮಿತಿ ಸದಸ್ಯರು ಒಮ್ಮತಕ್ಕೆ ಬಾರದಿದ್ದರೂ, ಟೆಡ್ರೊಸ್ ಈ ಘೋಷಣೆ ಮಾಡಿದ್ದಾರೆ. ಡಬ್ಲ್ಯುಎಚ್‌ಒ ಮುಖ್ಯಸ್ಥರು ಇಂತಹ ನಿರ್ಧಾರ ತೆಗೆದುಕೊಂಡಿದ್ದು ಇದೇ ಮೊದಲು.

'ಸಮಿತಿಯ ಸದಸ್ಯರು ಭಿನ್ನ ಅಭಿಪ್ರಾಯಗಳನ್ನು ಹೊಂದಿದ್ದರು. ಒಂದು ತಿಂಗಳ ಹಿಂದೆ ಸಭೆ ಕರೆದಿದ್ದಾಗ 4 ಸಾವಿರ ಪ್ರಕರಣಗಳಿದ್ದವು. ಈಗ ಅವುಗಳ ಸಂಖ್ಯೆ 16 ಸಾವಿರ ದಾಟಿದೆ. ಹೀಗಾಗಿ ಈ ಸೋಂಕಿನ ಬಗ್ಗೆ ಜಾಗತಿಕ ಸಂಘಟಿತ ಹೋರಾಟ ಅಗತ್ಯ' ಎಂದು ಟೆಡ್ರೊಸ್ ಹೇಳಿದ್ದಾರೆ.

ತುರ್ತು ಪರಿಸ್ಥಿತಿ ಎಂದು ಘೋಷಿಸುವುದರಿಂದ, ಸೋಂಕಿನ ತೀವ್ರತೆಯ ಬಗ್ಗೆ ಜಾಗತಿಕ ಗಮನ ಸೆಳೆಯಲು ಹಾಗೂ ಅಂತರರಾಷ್ಟ್ರೀಯ ನೆರವು ಪಡೆಯಲು ಸಹಾಯವಾಗುತ್ತದೆ.

ನಾಟಕೀಯ ಮರು ಮತದಾನ: ಹಮ್ಜಾ ಪಂಜಾಬ್ ಪ್ರಾಂತ್ಯ ಸಿ.ಎಂ

ಲಾಹೋರ್ (ಪಿಟಿಐ): ಪ್ರಧಾನಿ ಶೆಹಬಾಜ್ ಷರೀಫ್ ಅವರ ಮಗ ಹಮ್ಜಾ ಷರೀಫ್ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಮುಖ್ಯಮಂತ್ರಿಯಾಗಿ ಶನಿವಾರ ಪ್ರಮಾಣ ವಚನ ಸ್ವೀಕರಿಸಿದರು. ಇದರ ಬೆನ್ನಲ್ಲೇ ಹಮ್ಜಾ ಪ್ರತಿಸ್ಪರ್ಧಿ ಪಾಕಿಸ್ತಾನ್ ಮುಸ್ಲಿಂ ಲೀಗ್-ಕ್ಯೂ (ಪಿಎಂಎಲ್-ಕ್ಯೂ) ಪಕ್ಷದ ಚೌಧರಿ ಪರ್ವೆಜ್ ಇಲಾಹಿ ಅವರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ.

47 ವರ್ಷದ ಹಮ್ಜಾ ಅವರಿಗೆ ಪಂಜಾಬ್‌ನ ರಾಜ್ಯಪಾಲ ಬಲಿಘುರ್ ರೆಹಮಾನ್ ಅವರು ಪ್ರಮಾಣ ವಚನ ಬೋಧಿಸಿದರು.

ಪಾಕಿಸ್ತಾನದ ಸುಪ್ರೀಂಕೋರ್ಟ್ ಸೂಚನೆಯಂತೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಹಮ್ಜಾ ಅವರು ಮುಖ್ಯಮಂತ್ರಿಯಾಗಿ ಆಯ್ಕೆಯಾಗಿದ್ದರು. ಜುಲೈ 17ರಂದು ನಡೆದ ಉಪಚುನಾವಣೆ ಬಳಿಕವೂ ಪಾಕಿಸ್ತಾನ್ ಮುಸ್ಲಿಂ ಲೀಗ್-ನವಾಜ್ (ಪಿಎಂಎಲ್-ಎನ್) ಪಕ್ಷಕ್ಕೆ ಬಹುಮತವಿಲ್ಲ. ಆದರೂ ಹಮ್ಜಾ ಅವರನ್ನು ಆಯ್ಕೆ ಮಾಡಲಾಗಿದೆ.

ಪಂಜಾಬ್ ವಿಧಾನಸಭೆಯ ಉಪಾಧ್ಯಕ್ಷ ದೋಸ್ತ್ ಮುಹಮ್ಮದ್ ಮಜಾರಿ ಅವರು, ಚೌಧರಿ ಪರ್ವೆಜ್ ಇಲಾಹಿ ನೇತೃತ್ವದ ಪಾಕಿಸ್ತಾನ್ ಮುಸ್ಲಿಂ ಲೀಗ್-ಕ್ಯೂನ (ಪಿಎಂಎಲ್-ಕ್ಯೂ) 10 ಮತಗಳನ್ನು ತಿರಸ್ಕರಿಸಿದರು. ಹೀಗಾಗಿ ಹಮ್ಜಾ ಪಂಜಾಬ್‌ನ ಮುಖ್ಯಮಂತ್ರಿಯಾಗುವುದರಲ್ಲಿ ಯಶಸ್ವಿಯಾದರು.

ಉಪಾಧ್ಯಕ್ಷರ ತೀರ್ಪನ್ನು ಇಲಾಹಿ ಅವರು ಶನಿವಾರ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದಾರೆ. ಸುಪ್ರೀಂ ಕೋರ್ಟ್ ಇಲಾಹಿ ಅವರ ಅರ್ಜಿಯನ್ನು ಅಂಗೀಕರಿಸಿದ್ದು, ಮಜಾರಿ ಮತ್ತು ಹಮ್ಜಾ ಅವರಿಗೆ ನೋಟಿಸ್ ನೀಡಿದೆ.

ಅಮೆರಿಕ: ಉಕ್ರೇನ್‌ಗೆ ₹ 21,566 ಕೋಟಿ ಹೆಚ್ಚುವರಿ ನೆರವು

ವಾಷಿಂಗ್ಟನ್ (ಎಪಿ): ಅಮೆರಿಕವು ಯುದ್ಧಪೀಡಿತ ಉಕ್ರೇನ್‌ಗೆ ಮತ್ತಷ್ಟು ರಾಕೆಟ್ ಲಾಂಚರ್‌ಗಳು ಸೇರಿದಂತೆ ₹ 21,566 ಕೋಟಿ ಮೌಲ್ಯದ ಹೆಚ್ಚುವರಿ ಭದ್ರತಾ ನೆರವನ್ನು ನೀಡಲಿದೆ ಎಂದು ಶ್ವೇತಭವನ ಪ್ರಕಟಿಸಿದೆ.

ರಾಷ್ಟ್ರೀಯ ರಕ್ಷಣಾ ಮಂಡಳಿಯ ವಕ್ತಾರ ಜಾನ್ ಕಿರ್ಬಿ ಈ ಬಗ್ಗೆ ಮಾಹಿತಿ ನೀಡಿದ್ದಾರೆ. ಅಧ್ಯಕ್ಷ ಜೋ ಬೈಡನ್ ಆಡಳಿತವು ಹೆಚ್ಚುವರಿಯಾಗಿ ನಾಲ್ಕು ಟ್ರಕ್-ಮೌಂಟೆಡ್ ರಾಕೆಟ್ ಲಾಂಚರ್‌ಗಳು, ಹೈ ಮೊಬಿಲಿಟಿ ಆರ್ಟಿಲರಿ ರಾಕೆಟ್ ಸಿಸ್ಟಮ್ಸ್, ಡ್ರೋನ್‌ಗಳನ್ನು ರವಾನಿಸಲಿದೆ ಎಂದು ತಿಳಿಸಿದ್ದಾರೆ.

ಉಕ್ರೇನ್ ಮೇಲೆ ಆಕ್ರಮಣ ಮುಂದುವರಿಸಿರುವ ರಷ್ಯಾ ಪಡೆಗಳಿಗೆ ಮೊಬೈಲ್ ರಾಕೆಟ್ ಲಾಂಚರ್‌ಗಳು ತೀವ್ರ ಹಾನಿಯನ್ನುಂಟುಮಾಡಲಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ವೆಸ್ಟ್ ಇಂಡೀಸ್ ಎದುರಿನ ಏಕದಿನ ಪಂದ್ಯದಲ್ಲಿ ಮೂರು ರನ್‌ಗಳ ಗೆಲುವು

ಶಿಖರ್ ಬಳಗಕ್ಕೆ ರೋಚಕ ಜಯ

ವಿಕೆಟ್ ಗಳಿಸಿದ ಶಾರ್ದೂಲ್ ಠಾಕೂರ್ ಅವರನ್ನು ಅಭಿನಂದಿಸಿದ ಸಹ ಆಟಗಾರರು –ಎಎಫ್‌ಪಿ ಚಿತ್ರ

ಪೋರ್ಟ್ ಆಫ್ ಸ್ಪೇನ್ (ಪಿಟಿಐ): ಪಂದ್ಯದ ಕೊನೆಯ ಎಸೆತದಲ್ಲಿ ವಿಕೆಟ್ ಕೀಪರ್ ಸಂಜು ಸ್ಯಾಮ್ಸನ್ ತೋರಿದ ಕೌಶಲದಿಂದಾಗಿ ಭಾರತ ತಂಡವು ಶುಕ್ರವಾರ ತಡರಾತ್ರಿ ಮುಗಿದ ವೆಸ್ಟ್ ಇಂಡೀಸ್ ಎದುರಿನ ಮೊದಲ ಏಕದಿನ ಪಂದ್ಯದಲ್ಲಿ ರೋಚಕ ಜಯ ಸಾಧಿಸಿತು.

309 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಆತಿಥೇಯ ತಂಡಕ್ಕೆ ಕೊನೆಯ ಎಸೆತದಲ್ಲಿ ನಾಲ್ಕು ರನ್‌ಗಳ ಅಗತ್ಯವಿತ್ತು. ಮಧ್ಯಮವೇಗಿ ಮೊಹಮ್ಮದ್ ಸಿರಾಜ್ ಹಾಕಿದ ಎಸೆತದಲ್ಲಿ ಬ್ಯಾಟರ್ ರೊಮೆರಿಯೊ ಶೆಫರ್ಡ್ ಬೀಟ್ ಆದರು. ಆದರೂ ಅವರು ಒಂದು ರನ್ ಬೈ ಪಡೆಯುವಲ್ಲಿ ಯಶಸ್ವಿಯಾದರು. ಸಂಜು ಸ್ಯಾಮ್ಸನ್ ಚೆಂಡನ್ನು ಹಿಡಿತಕ್ಕೆ ಪಡೆಯುವಲ್ಲಿ ಯಶಸ್ವಿಯಾದರು. ವೇಗವಾಗಿ ಸಾಗುತ್ತಿದ್ದ ಚೆಂಡು ಬೌಂಡರಿಗೆರೆ ದಾಟುವುದನ್ನು ತಪ್ಪಿಸಿದರು. ಇದರಿಂದಾಗಿ ಪ್ರವಾಸಿ ಭಾರತವು 3 ರನ್‌ಗಳ ಜಯ ದಾಖಲಿಸಿತು. ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ಟಾಸ್ ಗೆದ್ದು ಫೀಲ್ಡಿಂಗ್ ಮಾಡಿದ ವಿಂಡೀಸ್ ಯೋಜನೆ ತಲೆಕೆಳಗಾಯಿತು. ಶಿಖರ್ ಧವನ್ (97; 99ಎ, 4X10, 6X3) ಮತ್ತು ಶುಭಮನ್ ಗಿಲ್ (64; 53ಎ, 4X6, 6X2) ಮೊದಲ ವಿಕೆಟ್‌ಗೆ 119 ರನ್ ಸೇರಿಸಿ ಉತ್ತಮ ಅಡಿಪಾಯ ಹಾಕಿದರು. ತಂಡವು 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 308 ರನ್ ಗಳಿಸಿತು.

ಇದಕ್ಕುತ್ತರವಾಗಿ ದಿಟ್ಟ ಹೋರಾಟ ಮಾಡಿದ ವಿಂಡೀಸ್ ತಂಡವು 50 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 305 ರನ್ ಗಳಿಸಿತು. ಇನಿಂಗ್ಸ್‌ನ ಐದನೇ ಓವರ್‌ನಲ್ಲಿ ಸಿರಾಜ್ ಎಸೆತಕ್ಕೆ ಶಾಯ್ ಹೋಪ್ ಔಟಾದರು. ಆದರೆ ಎರಡನೇ ವಿಕೆಟ್ ಜೊತೆಯಾಟದಲ್ಲಿ ಕೈಲ್ ಮೇಯರ್ಸ್ (75; 68ಎ, 4X10, 6X1) ಮತ್ತು ಬ್ರೂಕ್ಸ್ (46; 61ಎ, 4X4, 6X1) 117 ರನ್ ಸೇರಿಸಿದರು.

ಇವರಿಬ್ಬರೂ ಔಟಾದ ನಂತರ ಬ್ರೆಂಡನ್ ಕಿಂಗ್ (54; 66ಎ) ಅರ್ಧಶತಕ ಗಳಿಸಿದರು. ಕೊನೆಯ ಹಂತದಲ್ಲಿ ಹುಸೇನ್ (ಔಟಾಗದೆ 32) ಮತ್ತು ಶೇಫರ್ಡ್ (ಔಟಾಗದೆ 39) ಮುರಿಯದ ಆರನೇ ವಿಕೆಟ್ ಜೊತೆಯಾಟದಲ್ಲಿ 56 ರನ್ ಸೇರಿಸಿದರು. ಆದರೆ ಅವರ ಪ್ರಯತ್ನಕ್ಕೆ ಫಲ ಸಿಗಲಿಲ್ಲ. ಶಾರ್ದೂಲ್, ಚಾಹಲ್ ಮತ್ತು ಸಿರಾಜ್ ತಲಾ ಎರಡು ವಿಕೆಟ್ ಉರುಳಿಸಿದರು. ಈ ಪಂದ್ಯದಲ್ಲಿ ಬೌಲಿಂಗ್ ಮಾಡಿದ ಆರು ಬೌಲರ್‌ಗಳಲ್ಲಿ ಪ್ರಸಿದ್ಧ ಕೃಷ್ಣ ಒಬ್ಬರೇ ಒಂದು ಮೇಡನ್ ಮಾಡಿದರು. ಅವರು ಒಟ್ಟು 10 ಓವರ್‌ಗಳಲ್ಲಿ 62 ರನ್‌ಗಳನ್ನು ನೀಡಿದರು.

ಸಂಕ್ಷಿಪ್ತ ಸ್ಕೋರ್: ಭಾರತ: 50 ಓವರ್‌ಗಳಲ್ಲಿ 7ಕ್ಕೆ308, ವೆಸ್ಟ್ ಇಂಡೀಸ್: 50 ಓವರ್‌ಗಳಲ್ಲಿ 6ಕ್ಕೆ305 (ಕೈಲ್ ಮೇಯರ್ಸ್ 75, ಶಾಮ್ರಾ ಬ್ರೂಕ್ಸ್ 46, ಬ್ರೆಂಡನ್ ಕಿಂಗ್ 54, ನಿಕೊಲಸ್ ಪೂರನ್ 25, ಅಕೀಲ್ ಹುಸೇನ್ ಔಟಾಗದೆ 32, ರೊಮೆರಿಯೊ ಶೇಫರ್ಡ್ ಔಟಾಗದೆ 39, ಮೊಹಮ್ಮದ್ 57ಕ್ಕೆ2, ಶಾರ್ದೂಲ್ ಠಾಕೂರ್ 54ಕ್ಕೆ2, ಯಜುವೇಂದ್ರ ಚಾಹಲ್ 58ಕ್ಕೆ2) ಫಲಿತಾಂಶ: ಭಾರತಕ್ಕೆ 3 ರನ್‌ಗಳಿಂದ ಜಯ. ಸರಣಿಯಲ್ಲಿ 1–0 ಮುನ್ನಡೆ.

ಎರಡನೇ ಪಂದ್ಯ ಇಂದು: ಸರಣಿ ಕೈವಶಕ್ಕೆ ಭಾರತ ಚಿತ್ತ

ಮೊದಲ ಪಂದ್ಯದಲ್ಲಿ ರೋಚಕ ಜಯದಿಂದಾಗಿ ಭರ್ತಿ ಆತ್ಮವಿಶ್ವಾಸದಲ್ಲಿರುವ ಭಾರತ ತಂಡವು ಭಾನುವಾರ ನಡೆಯುವ ಎರಡನೇ ಪಂದ್ಯದಲ್ಲಿ ಗೆದ್ದು ಸರಣಿ ಕೈವಶ ಮಾಡಿಕೊಳ್ಳುವ ಛಲದಲ್ಲಿದೆ.

ಆತಿಥೇಯ ವಿಂಡೀಸ್ ಎದುರಿನ ಮೊದಲ ಪಂದ್ಯದಲ್ಲಿ ಭಾರತದ ಅಗ್ರ-ಕ್ರಮಾಂಕದ ಬ್ಯಾಟರ್‌ಗಳು ಸಫಲರಾಗಿದ್ದರು. ಉತ್ತಮ ಆರಂಭ ನೀಡಿದ್ದರು. ಆದರೆ, ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ನಿಧಾನಗತಿಯಲ್ಲಿ ಆಡಿದ್ದರಿಂದ ಬೃಹತ್ ಮೊತ್ತ ಗಳಿಸುವ ಅವಕಾಶವನ್ನು ಕಳೆದುಕೊಂಡಿತ್ತು. ಬೌಲರ್‌ಗಳು ಕೂಡ ಹೆಚ್ಚು ರನ್‌ಗಳನ್ನು ಬಿಟ್ಟುಕೊಟ್ಟಿದ್ದರು. ಈ ಎರಡೂ ಲೋಪಗಳನ್ನು ಬಿಟ್ಟರೆ ಉಳಿದಂತೆ ತಂಡವು ಸಮತೋಲನವಾಗಿದೆ.

ಆದರೆ, ಆತಿಥೇಯ ಬಳಗದಲ್ಲಿ ಬೌಲಿಂಗ್ ದುರ್ಬಲವಾಗಿದೆ. ಬ್ಯಾಟಿಂಗ್‌ನಲ್ಲಿ ಉತ್ತಮ ಆಟ ಮೂಡಿ ಬಂದಿತ್ತು. ಅದರಿಂದಾಗಿ ಬೌಲಿಂಗ್ ಮತ್ತು ಫೀಲ್ಡಿಂಗ್‌ನಲ್ಲಿ ಸುಧಾರಣೆಗಳೊಂದಿಗೆ ಕಣಕ್ಕಿಳಿದರೆ ಸರಣಿ ಜಯದ ಕನಸು ಕಮರದಂತೆ ನೋಡಿಕೊಳ್ಳಬಹುದು.

ಪಂದ್ಯ ಆರಂಭ: ರಾತ್ರಿ 7
ನೇರಪ್ರಸಾರ: ಡಿಡಿ ಸ್ಪೋರ್ಟ್ಸ್, ಫ್ಯಾನ್‌ಕೋಡ್

ಕೌಂಟಿ ಕ್ರಿಕೆಟ್ ಟೂರ್ನಿ: ಸ್ಯಾಮ್ 410 ನಾಟೌಟ್!

ಸ್ಯಾಮ್ ನಾರ್ತ್‌ಈಸ್ಟ್ – ಗ್ಲಮಾರ್ಗನ್ ಟ್ವಿಟರ್ ಚಿತ್ರ

ಲೆಸ್ಟರ್, ಇಂಗ್ಲೆಂಡ್ (ಎಪಿ): ಇಂಗ್ಲಿಷ್ ಕೌಂಟಿ ಕ್ರಿಕೆಟ್ ಚಾಂಪಿಯನ್‌ಷಿಪ್‌ನಲ್ಲಿ ಗ್ಲಮಾರ್ಗನ್ ತಂಡದ ಸ್ಯಾಮ್ ನಾರ್ತ್‌ಈಸ್ಟ್ ಅವರು ಅಜೇಯ 410 ರನ್ ಗಳಿಸಿ ದಾಖಲೆ ಮಾಡಿದ್ದಾರೆ.

ಲೆಸ್ಟರ್‌ಷೈರ್ ಎದುರಿನ ಪಂದ್ಯದಲ್ಲಿ ಶನಿವಾರದ ಆಟದಲ್ಲಿ ಅವರು 400 ರನ್‌ಗಳ ಗಡಿ ದಾಟಿದರು. ಗ್ಲಮಾರ್ಗನ್ ತಂಡ 5 ವಿಕೆಟ್‌ಗೆ 795 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು.

ಇದರಿಂದ ಬ್ರಯನ್ ಲಾರಾ ಹೆಸರಿನಲ್ಲಿರುವ ವಿಶ್ವದಾಖಲೆ ಮುರಿಯುವ ಅವಕಾಶ 32 ವರ್ಷದ ಈ ಬಲಗೈ ಬ್ಯಾಟರ್‌ಗೆ ಸಿಗಲಿಲ್ಲ. ಲಾರಾ ಅವರು 1994 ರಲ್ಲಿ ವಾರ್ವಿಕ್‌ಷೈರ್ ಪರ 501 ರನ್ ಕಲೆಹಾಕಿದ್ದರು.

ಪ್ರಥಮದರ್ಜೆ ಕ್ರಿಕೆಟ್‌ನಲ್ಲಿ ಒಂದು ಇನಿಂಗ್ಸ್‌ನಲ್ಲಿ 400 ಅಥವಾ ಅದಕ್ಕಿಂತ ಹೆಚ್ಚು ರನ್ ಗಳಿಸಿದ ವಿಶ್ವದ 9ನೇ ಬ್ಯಾಟರ್ ಎಂಬ ಗೌರವ ಅವರಿಗೆ ಒಲಿಯಿತು. 450 ಎಸೆತಗಳನ್ನು ಎದುರಿಸಿದ ಸ್ಯಾಮ್ 45 ಬೌಂಡರಿ ಮತ್ತು ಮೂರು ಸಿಕ್ಸರ್ ಹೊಡೆದರು.

ಇಂಗ್ಲಿಷ್ ಕೌಂಟಿ ಕ್ರಿಕೆಟ್ ಇತಿಹಾಸದಲ್ಲಿ ಆಟಗಾರನೊಬ್ಬ 400 ಕ್ಕಿಂತ ಅಧಿಕ ರನ್ ಗಳಿಸಿದ್ದು ಇದು ನಾಲ್ಕನೇ ಸಲ. ಲಾರಾ ಅಲ್ಲದೆ 1895 ರಲ್ಲಿ ಆರ್ಚಿ ಮೆಕ್‌ಲಾರೆನ್ (424), 1988 ರಲ್ಲಿ ಗ್ರೇಮ್ ಹಿಕ್ (405) ಈ ಸಾಧನೆ ಮಾಡಿದ್ದರು.

ಕ್ರಿಕೆಟಿಗರ ವಯಸ್ಸು ಪತ್ತೆಗೆ ತಂತ್ರಾಂಶ

ನವದೆಹಲಿ (ಪಿಟಿಐ): ಆಟಗಾರರ ವಯಸ್ಸು ಪತ್ತೆಗಾಗಿ ನೂತನ ತಂತ್ರಾಂಶವೊಂದನ್ನು ಪ್ರಾಯೋಗಿಕವಾಗಿ ಬಳಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸಿದ್ಧವಾಗಿದೆ.

ಸದ್ಯ ಜಾರಿಯಲ್ಲಿರುವ ಟಿಡಬ್ಲ್ಯು3 (ಎಡಗೈ ಮತ್ತು ಮಣಿಗಂಟಿನ ಕ್ಷಕಿರಣ ಆಧಾರಿತ) ಪದ್ಧತಿಯ ಜೊತೆಗೆ ಹೊಸ ತಂತ್ರಾಂಶವನ್ನೂ ಬಳಸುವುದರಿಂದ ಪರೀಕ್ಷೆ, ಪ್ರಕ್ರಿಯೆಯ ಖರ್ಚಿನಲ್ಲಿ ಶೇ 80ರಷ್ಟು ಉಳಿತಾಯ ಮಾಡಬಹುದು ಎಂದು ಮಂಡಳಿ ಹೇಳಿದೆ.

ಟಿಡಬ್ಲ್ಯು3 ಟೆಸ್ಟ್ ಮಾಡಲು ₹2400 ಖರ್ಚಾಗುತ್ತದೆ. ಫಲಿತಾಂಶವು ಬರಲು 3-4 ದಿನಗಳು ಬೇಕು. ಹೊಸದಾಗಿ ಬಳಸಲು ಉದ್ದೇಶಿಸಿರುವ ಬೋನ್‌ಎಕ್ಸ್‌ಪರ್ಟ್ ಸಾಫ್ಟ್‌ವೇರ್ ನಲ್ಲಿ ಕೇವಲ ₹288 ವೆಚ್ಚವಾಗಲಿದೆ. ಅಲ್ಲದೇ ತಕ್ಷಣವೇ ಫಲಿತಾಂಶವೇ ದೊರೆಯಲಿದೆ.

'ಆಟಗಾರರು ತಮ್ಮ ತವರು ರಾಜ್ಯದಲ್ಲಿ ಬಿಸಿಸಿಐನಿಂದ ಗುರುತಿಸಲಾದ ಪ್ರಯೋಗಾಲಯಗಳಲ್ಲಿಯೇ ಎಕ್ಸ್ ರೇ ತೆಗೆಸಿ, ಚಿತ್ರವನ್ನು ಮಂಡಳಿಯ ಎವಿಪಿ ವಿಭಾಗಕ್ಕೆ ಕಳಿಸುತ್ತಾರೆ. ಎವಿಪಿಯ ಸಂಗ್ರಹಿಸಿದ ಚಿತ್ರಗಳು ಮತ್ತು ಮಾಹಿತಿಯನ್ನು ಸ್ವತಂತ್ರ ರೆಡಿಯೊಲಾಜಿಸ್ಟ್‌ಗಳಿಗೆ ಕಳಿಸುತ್ತದೆ. ಬೋನ್ ಏಜ್ (ಎಲುವಿನ ವಯಸ್ಸು) ಪತ್ತೆ ಮಾಡಲು ಸಮಯ ಹೆಚ್ಚು ತೆಗೆದುಕೊಳ್ಳುತ್ತಾರೆ. 38 ಸಂಸ್ಥೆಗಳ ಆಟಗಾರರ ಸಂಖ್ಯೆ ಹೆಚ್ಚಿದ್ದು ರೇಡಿಯೊಲಾಜಿಸ್ಟ್‌ಗಳ ಸಂಖ್ಯೆ ಕಡಿಮೆ ಇದೆ' ಎಂದು ಮೂಲಗಳು ತಿಳಿಸಿವೆ.

ಬಾಜಾಸ್ ರೇಸ್‌ಗೆ ಐಶ್ವರ್ಯ ತಯಾರಿ

ಐಶ್ವರ್ಯ ಪಿಸೆ

ಟೆರುಲ್, ಸ್ಪೇನ್ (ಪಿಟಿಐ): ಸ್ಪೇನ್‌ನಲ್ಲಿ ಆರಂಭವಾಗಲಿರುವ ಬಾಜಾಸ್ ಮೋಟರ್ ಸ್ಪೋರ್ಟ್ಸ್‌ನಲ್ಲಿ ಪಾಲ್ಗೊಳ್ಳಲು ಭಾರತದ ಐಶ್ವರ್ಯ ಪಿಸೆ ತಯಾರಿ ನಡೆಸಿದ್ದಾರೆ.

ಎಫ್‌ಐಎಂ ಬಾಜಾಸ್ ವಿಶ್ವಕಪ್‌ನ ನಾಲ್ಕನೇ ಸುತ್ತಿನ ರೇಸ್ 'ಬಾಜಾ ಆ್ಯರಗನ್' ಶುಕ್ರವಾರ ಇಲ್ಲಿ ಆರಂಭವಾಗಲಿದೆ.

'ಶೆರ್ಕೊ ಟಿವಿಎಸ್ ರ‍್ಯಾಲಿ ಫ್ಯಾಕ್ಟರಿ' ತಂಡವನ್ನು ಪ್ರತಿನಿಧಿಸುತ್ತಿರುವ ಬೆಂಗಳೂರಿನ ಪಿಸೆ, ಒಂದೂವರೆ ವರ್ಷದ ಬಿಡುವಿನ ಬಳಿಕ ಮೊದಲ ಅಂತರರಾಷ್ಟ್ರೀಯ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

2021ರ ಮಾರ್ಚ್‌ನಲ್ಲಿ ಜೋರ್ಡಾನ್‌ನಲ್ಲಿ ನಡೆದ ಬಾಜಾ ರೇಸ್‌ನಲ್ಲಿ ಅಪಘಾತಕ್ಕೆ ಒಳಗಾಗಿ ಅವರು ಗಾಯಗೊಂಡಿದ್ದರು. ಚೇತರಿಸಿಕೊಂಡ ಬಳಿಕ ರಾಷ್ಟ್ರೀಯ ಮೋಟರ್ ಸ್ಪೋರ್ಟ್ಸ್ ರ‍್ಯಾಲಿಯಲ್ಲಿ ಪಾಲ್ಗೊಂಡು ಪ್ರಶಸ್ತಿ ಜಯಿಸಿದ್ದರು.

ಫಿಟ್‌ನೆಸ್ ಹೆಚ್ಚಿಸಲು ಮತ್ತು ಚಾಲನಾ ಕೌಶಲ ಉತ್ತಮಪಡಿಸಿಕೊಳ್ಳಲು ಪಿಸೆ, ಫ್ರಾನ್ಸ್ ಹಾಗೂ ಸ್ಪೇನ್‌ನಲ್ಲಿ 90 ದಿನಗಳ ತರಬೇತಿಯಲ್ಲಿ ಪಾಲ್ಗೊಂಡಿದ್ದರು.

ಪಿಸೆ ಅವರು 'ಬಾಜಾ ಆ್ಯರಗನ್' ರೇಸ್‌ನಲ್ಲಿ ತಮ್ಮ 'ಶೆರ್ಕೊ 450 ಎಂಡುರೊ' ಬೈಕ್‌ನಲ್ಲಿ ಅದೃಷ್ಟ ಪರೀಕ್ಷೆಗೆ ಇಳಿಯಲಿದ್ದಾರೆ. ತರಬೇತಿಯ ವೇಳೆಯಲ್ಲೂ ಇದೇ ಬೈಕ್ ಬಳಕೆ ಮಾಡಿದ್ದರು.

ಇಂಗ್ಲೆಂಡ್‌ಗೆ ಶರಣಾದ ದಕ್ಷಿಣ ಆಫ್ರಿಕಾ

ಮ್ಯಾಂಚೆಸ್ಟರ್ (ಪಿಟಿಐ): ಆಲ್‌ರೌಂಡ್ ಆಟವಾಡಿದ ಇಂಗ್ಲೆಂಡ್ ತಂಡ, ಎರಡನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ 118 ರನ್‌ಗಳ ಜಯ ಸಾಧಿಸಿತು.

ಮೊದಲ ಪಂದ್ಯ ಸೋತಿದ್ದ ಇಂಗ್ಲೆಂಡ್ ಈ ಗೆಲುವಿನ ಮೂಲಕ 3 ಪಂದ್ಯಗಳ ಸರಣಿಯನ್ನು 1–1 ರಲ್ಲಿ ಸಮಬಲ ಮಾಡಿಕೊಂಡಿತು. 3ನೇ ಹಾಗೂ ಕೊನೆಯ ಪಂದ್ಯ ಭಾನುವಾರ ನಡೆಯಲಿದೆ.

ಶುಕ್ರವಾರ ಪಂದ್ಯ ಮಳೆಯ ಕಾರಣ ನಾಲ್ಕು ಗಂಟೆ ತಡವಾಗಿ ಆರಂಭವಾಯಿತು. ಇದರಿಂದ ಓವರ್‌ಗಳ ಸಂಖ್ಯೆಯನ್ನು 29ಕ್ಕೆ ಇಳಿಸಲಾಗಿತ್ತು. ಮೊದಲು ಬ್ಯಾಟ್ ಮಾಡಿದ ಆತಿಥೇಯ ತಂಡ 28.1 ಓವರ್‌ಗಳಲ್ಲಿ 201 ರನ್ ಗಳಿಸಿತು. ದಕ್ಷಿಣ ಆಫ್ರಿಕಾ 20.4 ಓವರ್‌ಗಳಲ್ಲಿ 83 ರನ್‌ಗಳಿಗೆ ಆಲೌಟಾಯಿತು.

ಸಂಕ್ಷಿಪ್ತ ಸ್ಕೋರ್: ಇಂಗ್ಲೆಂಡ್ 28.1 ಓವರ್‌ಗಳಲ್ಲಿ 201 (ಜಾನಿ ಬೆಸ್ಟೊ 28, ಲಿಯಾಮ್ ಲಿವಿಂಗ್‌ಸ್ಟೋನ್ 38, ಸ್ಯಾಮ್ ಕರನ್ 35, ಡೇವಿಡ್ ವಿಲಿ 21, ಡ್ವೇನ್ ಪ್ರಿಟೋರಿಯಸ್ 36ಕ್ಕೆ 4, ಎನ್ರಿಕ್ ನಾರ್ಕಿಯಾ 53ಕ್ಕೆ 2, ತಬ್ರೇಜ್ ಶಂಸಿ 39ಕ್ಕೆ 2). ದಕ್ಷಿಣ ಆಫ್ರಿಕಾ 20.4 ಓವರ್‌ಗಳಲ್ಲಿ 83 (ಹೆನ್ರಿಕ್ ಕ್ಲಾಸೆನ್ 33, ಡ್ವೇನ್ ಪ್ರಿಟೋರಿಯಸ್ 17, ಆದಿಲ್ ರಶೀದ್ 29ಕ್ಕೆ 3, ಮೊಯೀನ್ ಅಲಿ 22ಕ್ಕೆ 2, ರೀಸ್ ಟಾಪ್ಲಿ 17ಕ್ಕೆ 2)

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ



ಶ್ರೀ ಎನ್.ಚಿನ್ನಸ್ವಾಮಿ ನಾಯ್ಡು (ಟೇಪಲಪ್ಪ)
ಜನನ :01.01.1930 ಮರಣ :13.07.2022
ಇವರ ವೈಕುಂಠ ಸಮಾರಾಧನೆಯನ್ನು ಭಾನುವಾರ 24ನೇ ಜುಲೈ 2022. ರಂದು ಸಂಕ್ರಾಂತಿ ಹಾಲ್, ನಂ.04, 27ನೇ ಕ್ರಾಸ್, 2ನೇ ಹಂತ, ಬನಶಂಕರಿ, ಬೆಂಗಳೂರು – 560070 ರಲ್ಲಿ ನೆರವೇರಿಸಲಾಗುವುದು.
ದುಃಖತಪ್ತರು
ಎನ್.ಸಿ ವಿಜಯಕುಮಾರ, ಸಹೋದರರು, ಮೊಮ್ಮಕ್ಕಳು ಹಾಗೂ ಕುಟುಂಬದವರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

WEEKEND CORNER
ಕ್ಲಾಸಿಫೈಡ್ಸ್

ಪ್ರವಾಸ
Travel

ಶ್ರೇಯಸ್ ಟೂರ್ಸ್: 13.08.2022 5ದಿನಗಳು ಸಂಪೂರ್ಣಅಹೋಬಲಂ ನವನಾರಸಿಂಹ ಯಾಗಂಟಿ ಬೇಲಂಗುಹೆ ಮಹಾನಂದಿ ಶ್ರೀಶೈಲಂ ಮಂತ್ರಾಲಯ 18.8.22 6ದಿನಗಳು ಕೇರಳದ ಕೊಚ್ಚಿನ್ ಗುರುವಾಯೂರು ಅಲೆಪ್ಪಿ ಮುನ್ನಾರ್ ತೇಕಡಿ ತಿರುವನಂತಪುರಂ ಅತ್ರಪಳ್ಳಿ ಪಾಲ್ಸ್.14.09.2022 6ದಿನಗಳು ಕಾಶಿ ಗಯಾ ಪ್ರಯಾಗ್‌ರಾಜ್ ನೈಮಿಷಾರಣ್ಯ ಅಯೋಧ್ಯೆ ವಿಂಧ್ಯಾವಾಸಿನಿ ಸೀತಾಮಡು.06.08.2022 13.08.2022 6ದಿನಗಳು ನವಗ್ರಹರಾಮೇಶ್ವರಂ ಚಿದಂಬರಂ ಮದುರೈ ಕನ್ಯಾಕುಮಾರಿ ಇತರೆ.14.09.22 10ದಿನಗಳು ಅಖಂಡ ನೇಪಾಳ ರಾಷ್ಟ್ರ(ಮುಕ್ತಿನಾಥಸಹಿತ) 6ವಿಮಾನಗಳಲ್ಲಿ.02.09.2022 12ದಿನಗಳು ಚಾರ್‌ದಾಮ್ ಯಾತ್ರೆ ಗಂಗೋತ್ರಿಯಮುನೋತ್ರಿ ಕೇದಾರ್‌ನಾಥ ಬದರಿನಾಥ. 8073824856/ 9206979202/ 6366322639

ನೇಪಾಳ-ಕಠ್ಮಂಡು 10 ದಿನದ ವಿದೇಶ ಪ್ರವಾಸ. ಕುವೆಂಪು ಕಲಾನಿಕೇತನ ಸಂಸ್ಥೆಯ ವತಿಯಿಂದ ಅಂತರಾಷ್ಟ್ರೀಯ ವಿಶ್ವಮಾನವ ಕುವೆಂಪು ಕಲಾ ಉತ್ಸವ-2022. ದಿನಾಂಕ:12-09-2022 ರಿಂದ ನೇಪಾಳಕಠ್ಮಂಡು ಪೋಕ್ರಾ ಗೋರಕಪುರ ಲುಂಬಿನಿ ಮುಕ್ತಿನಾಥ ಚಿತವಾನ್ ಮನೋಕಾಮನ ಜನಕಪುರಿ. ಸಂಪರ್ಕಿಸಿ: 09880988298/ 09448025130.

ರಿಯಲ್ ಎಸ್ಟೇಟ್ ಸೆಲ್ಲಿಂಗ್
House
Banashankari

BANASHANKARI 2ND STAGE, Building (GF, FF) for Sale 30'x45' S/F opposite to Umamaheshwara Park 9341890909.

Sites
Bannerghatta Road

BANNERGHATTA ROAD GOTTIGERE Sites Sale 'A' khatha. W/F 1) 38'x38' 2) 37'x38' 3) 33x130. 9341890909.

Out-Station

8300 SQFT KHB alloted commercial site highway facing attached-to highway at kadur, Sale. 9743535151, 9844811841.

ಉದ್ಯೋಗಾವಕಾಶ
Multiple Vacancy

ಬೇಕಾಗಿದ್ದಾರೆ: ಡ್ರೈವರ್ ಗಳು, ಆಯಾಗಳು, ಸೆಕ್ಯೂರಿಟೀ ಗಾರ್ಡ್‌ಗಳು, ಕೂಡಲೇ ಸಂಪರ್ಕಿಸಿ: ಕ್ಯಾಮ್ಲಿನ್ ಆಂಗ್ಲಶಾಲೆ, 6ನೇ 'ಸಿ' ಮೇನ್, 4ನೇ ಕ್ರಾಸ್, ಹಂಪಿನಗರ, ಬೆಂಗಳೂರು_104

'ಸಂಸಾರದಲ್ಲಿ ಗೊಂದಲವೇಕೆ' Part-1

RAMASWAMY
ನಿವೃತ್ತ ಅಧಿಕಾರಿ (HAL Over HUL)

ಗೊಂಧಲವಿಲ್ಲದ ಸಂಸಾರವೆಲ್ಲಿದೆ, ಇದು ತ್ರಿಮೂರ್ತಿಗಳಿಗೂ ಬಿಟ್ಟಿದ್ದಲ್ಲ, ಹಾಗಂತ ಜೀವನದುದ್ದಕ್ಕೂ ಗೊಂದಲ ಗೋಜುಮಯವಾಗಿರಬಾರದು. ಇದು ಹುಟ್ಟುವುದು ಪತಿ–ಪತ್ನಿ ನಡುವೆ, ತಂದೆ–ತಾಯಿ, ಅಣ್ಣ–ತಮ್ಮನ ಬಾಂಧವ್ಯದ ಮಧ್ಯೆ ಇದನ್ನು ಯಾರು ಬಯಸುವುದಿಲ್ಲ. ಇಂಥಹ ವಿಚಾರವೆಲ್ಲಾ ಅವರವರ ಜನ್ಮ ಕುಂಡಲಿ ಜಾತಕದಲ್ಲಿ ಇರುತ್ತದೆ. ಇಂಥಹ ಗೊಂದಲವಿದ್ದರೂ, ಪರಿಹಾರ ಮಾಡಿಕೊಳ್ಳಬಹುದು, ಇದಕ್ಕೆ ಮಾರ್ಗ ಸುರಿತ ಜ್ಯೋತಿಷ್ಯರಿಂದ ತಿಳಿಯಬಹುದು. ಇದಕ್ಕೆ ಸೂಕ್ತ ಮಾಹಿತಿ ಎಂದರೆ, ಮಕ್ಕಳ ನಿಖರವಾದ ಜನನ ತಾರೀಖು, ತಿಂಗಳು, ವರ್ಷ ಮತ್ತು ಕಾಲ. ಮಕ್ಕಳ ಜೀವನದ ಬದುಕು ಭವಿಷ್ಯ ನಿಮ್ಮಲ್ಲಿರುವ ಮೊಬೈಲನಿಂದಲ್ಲ, ಸಂಸಾರ ಕೆಟ್ಟಿರುವುದು ಇಂಥಾ ಹಾಳು ವಿಜ್ಞಾನದಿಂದ, ವಿಜ್ಞಾನ ದೇವರ ಸೃಷ್ಟಿಯಲ್ಲ, ಇದನ್ನು ಮಾಡಿದ್ದು ಮಾನವ, ಈ ಪ್ರಕೃತಿಯಲ್ಲಿರುವ ಎಲ್ಲವೂ, ಎಲ್ಲ ಜೀವರಾಶಿಗೂ ಒಳ್ಳೆಯದನ್ನೆ ಮಾಡುತ್ತದೆ, ಮಾನವನೇ ಪ್ರಕೃತಿಯನ್ನು ಸಂಸಾರವನ್ನು ಹಾಳು ಮಾಡುತ್ತಾನೆ, ಎಷ್ಟೋ ಸಂಸಾರದಲ್ಲಿ ತರಹೇವಾರಿ ಗೊಂದಲವಿದ್ದು, ಇದು ಹೊರಗಿನ ಜನರಿಗೆ ತಿಳಿದರೆ ತಮ್ಮ ಮಾನವನ್ನು ತಾವೇ ಬೀದಿಗೆಳೆದಂತಾಗುತ್ತದೆ ಎಂಬ ಭಯದಿಂದ ಸುಮ್ಮನಿರುತ್ತಾರೆ, ಆದರೆ ಸತ್ಯ ಕೆಂಡದಂತೆ ಮುಂದೊಂದು ದಿನ ಹೊರಬರುತ್ತದೆ. ಒಂದು ಗಂಡಿಗೆ ಒಂದು ಹೆಣ್ಣು ಬೇಕು, ಒಂದು ಹೆಣ್ಣಿಗೆ ಒಂದು ಗಂಡು ಬೇಕು, ಹಾಗಂತ ಮನಸಾ ಇಚ್ಚೆ ಸರಿಯಾಗಿ ವರ–ವಧುಗಳ ಲೋಪ ದೋಷಗಳನ್ನು ಅವರವರು ಮಾಡಿರುವ ಪಾಪ ಪುಣ್ಯ ಅದಕ್ಕೆ ಪರಿಹಾರವಾಗಿದೆಯೇ ಇಲ್ಲವೇ, ಆ ದೋಷ ಯಾವ ರೀತಿಯದು? ಸ್ವಯಂಕೃತವೇ, ಪಿತೃಶಾಪವೇ ಕುಜದೋಷವೇ, ಕಾಳಸರ್ಪದೋಷವೇ ಅಥವಾ ಕೆಟ್ಟ ನಕ್ಷತ್ರ, ರಾಶಿಯಲ್ಲಿ ಜನಿಸಿದ್ದಾಯೇ, ಇನ್ನು ಮುಂತಾದ ವಿಚಾರ ಜ್ಯೋತಿಷ್ಯರ ಬಳಿ ವಿಚಾರಿಸಿ ವಿವಾಹ ಸೂಕ್ತ ಎಂಬ ಅಭಿಪ್ರಾಯ ಬಂದ ಮೇಲೆ ಮುಂದುವರಿಯಬೇಕು, ದಯವಿಟ್ಟು ನಾಮ ನಕ್ಷತ್ರದ ಮೇಲೆ ಅಥವಾ ಬ್ರೋಕರಗಳ ಮಾತಿಗೆ ಮಾನ್ಯತೆ ಕೊಡಬೇಡಿ. ವಿವಾಹವೆನ್ನುವುದು ಅವರವರ ಜೀವನದ ಬಹುಮುಖ್ಯ ಘಟ್ಟ. ಪ್ರತಿ ಹೆಣ್ಣು 20–25 ವರ್ಷ ತಂದೆ–ತಾಯಿಯ ಮನೆಯಲ್ಲಿ ಬೆಳೆಯುತ್ತಾರೆ. ಮುಂದೆ ಆಕೆಯನ್ನು 60–70ವರ್ಷ ಪತಿಯು ಸಾಕುತ್ತಾನೆ, ಅದನ್ನು ಆಕೆ ಚನ್ನಾಗಿ ತಿಳಿಯಬೇಕು (ನಾಳೆ ಮುಂದುವರಿಯುತ್ತದೆ.)

Contact: RAMASWAMY ASTROLEGER
1176/1, 36th Main Road, Poornapragna Nagara, Uttarahalli, Bangalore-560061
M: 94482 43757, 94816 43757

'ಸಂಸಾರದಲ್ಲಿ ಗೊಂದಲವೇಕೆ' Part-II

RAMASWAMY
ನಿವೃತ್ತ ಅಧಿಕಾರಿ (HAL Over HUL)

(ಮುಂದುವರಿದ ಭಾಗ) ಸ್ತ್ರೀಯರಿಗೆ ವಿವಾಹವಾದ ಮೇಲೆ ಈಕೆಯು ತನ್ನ ಸಂಸಾರದಲ್ಲಿ ಪ್ರಧಾನ ಪಾತ್ರ ವಹಿಸಬೇಕು. ಆಕೆಯು ತನ್ನ ಗುಣ, ನಡತೆಯನ್ನು ಪತಿ ಮತ್ತು ಆವರ ಕುಟುಂಬಕ್ಕೆ ಹೊಂದಿಕೊಳ್ಳಬೇಕು, ಎಲ್ಲ ಸ್ತ್ರೀಯು ಸೀತೆಯಂತೆ ಇದ್ದರೆ ಎಲ್ಲ ಪುರುಷರು ರಾಮನಂತೆ ಇರುತ್ತಾರೆ. ಉದಾ: ಕೆಲವು ಸ್ತ್ರೀಯರು ಬಹಳ ಹಠ, ಕೋಪ, ಸಹನೆ ಇಲ್ಲದವರು, ಪತಿ ನನ್ನ ಭಾಗದ ದೇವರೆನ್ನುವ ಮನಸ್ಸು ಕಿಂಚಿತ್ತು ಇಲ್ಲದೆ, ಪತಿಯ ಋಣ ತಿಂದು ಬದುಕುತ್ತಾರೆ. ಇಲ್ಲೊಂದು ಉದಾಹರಣೆ ನೋಡಿ, ಪತಿ ಅನುರಾಧಾ ನಕ್ಷತ್ರದಲ್ಲಿ ಜನಸಿದರೆ, ಈ ನಕ್ಷತ್ರಕ್ಕೆ ಶನಿ ಅಧಿಪತಿ, ಇವರ ಜನ್ಮರಾಶಿ ವೃಶ್ಚಿಕ, ಶನಿಯ ಅಧೀನದಲ್ಲಿರುವುದು ಪುಷ್ಯ, ಅನುರಾಧಾ ಮತ್ತು ಉತ್ತರಾಭಾದ್ರಾ ಈ ಮೂರೂ ನಕ್ಷತ್ರಗಳು ಒಳ್ಳೆಯ ನಕ್ಷತ್ರ ಹಾಗೂ ದೇವಗಣವಾಗಿದ್ದರೂ ಸಂಸಾರದಲ್ಲಿ ಗೊಂದಲ ಏಕೆ? ವರ–ಅನುರಾಧ, ವಧು–ಪುಷ್ಯ ನಕ್ಷತ್ರ ಆದರೂ ಸುಖ–ಸಂತೋಷವಿಲ್ಲದ ಸಂಸಾರ. ಇದಕ್ಕೆ ಮೂಲ ಕಾರಣವೇನೂ ವರ ಕುಂಭ ಲಗ್ನ (ಶನಿ), ವಧು ಸಿಂಹ ಲಗ್ನ (ಸೂರ್ಯ), ಶನಿ ಸೂರ್ಯನ ಮಗನೇ ಆದರೂ ಇಬ್ಬರೂ ಬದ್ಧ ವೈರಿಗಳು, ಜೊತೆಗೆ ಇಬ್ಬರ ಜಾತಕದಲ್ಲೂ ಕುಜ ದೋಷ ಮತ್ತು ಕೇತುಕಾಳಸರ್ಪ ದೋಷ ಇರುವದರಿಂದ ಇಬ್ಬರಿಗೂ ಹೊಂದಾಣಿಕೆ ಇಲ್ಲದೆ, ಪ್ರೀತಿ–ವಾತ್ಸಲ್ಯ ಇಲ್ಲದೆ ಮಕ್ಕಳ ಫಲವಿಲ್ಲದೆ ನಿಧಾನವಾಗಿ ಗೊಂದಲದಲ್ಲೇ ಜೀವನ ಸಾಗಿಸುತ್ತಾರೆ. ಇದಕ್ಕೆ ಪರಿಹಾರ ದೋಷ ನಿವಾರಣೆ ಮಾಡಿ, ನಾವು ಕೊಡುವ ಯಂತ್ರವನ್ನು ಶ್ರದ್ಧಾ ಭಕ್ತಿಯಿಂದ ಪೂಜಿಸಿದರೆ, ಪರಿಹಾರ ಮಾಡಿಕೊಂಡರೆ, ದೈವಾನುಗ್ರಹವಾಗಿ 36ರ ಸಂಸಾರ 63 ಆದರೂ ಸುಖಮಯವಾಗಿರುತ್ತದೆ. ಅಲ್ಲದೆ ಒಳ್ಳೆಯ ವಂಶೋದ್ಧಾರಕ ಜನಿಸಿ, ಎರಡೂ ಕುಟುಂಬಕ್ಕೆ ನೆಮ್ಮದಿ, ಶಾಂತಿ ಸಿಗುತ್ತದೆ. ನಮ್ಮ ಸಲಹೆಯನ್ನು ಇಷ್ಟವಿದ್ದರೆ ನಂಬಿಕೆ ಇಟ್ಟು ಮಾನ್ಯತೆ ಮಾಡಿ, ಪ್ರಯತ್ನ ನಿಮ್ಮದು, ಆಶೀರ್ವಾದ ನಮ್ಮದು ಮತ್ತು ಅನುಗ್ರಹ ದೇವರದು. ಧರ್ಮೋ ರಕ್ಷಿತ ರಕ್ಷಿಥಃ. ಇದು ಸತ್ಯ ಸಂಪರ್ಕಿಸಿ.

Contact: RAMASWAMY ASTROLEGER
1176/1, 36th Main Road, Poornapragna Nagara, Uttarahalli, Bangalore-560061
M: 94482 43757, 94816 43757

ಭವಿಷ್ಯ
Astrology

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಟೀ ಮಾರಾಟಕ್ಕೆ
ಮೇಘಮಲೈ, ತಲೆಯಾರ್, ರಾಕ್‌ವುಡ್, ಬ್ರಿಯಾರ್ ಟೀ ಎಸ್ಟೇಟ್‌ಗಳಿಂದ ಟೀ ಪ್ಯಾಕೆಟ್ ನೇರ ಮಾರಾಟ
ಸಂಪರ್ಕಿಸಿ
8870601744 / 9487531481
WOODBRIAR GROUP
Coimbatore
Producers of Monica, Injipara, Srikundra, Pudhuthottam, Murugan, Venniar, Manalaar
Woodbriar, Sussex, Bulk Tea

★॥ಶ್ರೀಕೇದಾರನಾಥ॥★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್‌ಕಛೇರಿ ಸಾಲಬಾಧೆ ಯಾವುದೇ ಸಮಸ್ಯೆಯಿದ್ದರೂ. 100% ಶಾಶ್ವತ ಪರಿಹಾರ. 9148773459

ವೈವಾಹಿಕ
Brides Wanted
Muslim

BANGALORE BASED well known Sunni Muslim family is seeking a cultured,educated bride for the marriage of their 1996 Born MBA -IIM son.Working for Google Father-Director in an MNC(080-69103008)



ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್: ನಾರ್ಮನ್, ಶಾನೆ ಮಿಲ್ಲರ್‌ಗೆ ಚಿನ್ನ

ಹರ್ಡಲ್ಸ್: ಮೆಕ್‌ಲಾಫ್ಲಿನ್ ದಾಖಲೆ

ಮಹಿಳೆಯರ 400 ಮೀ. ಹರ್ಡಲ್ಸ್‌ನಲ್ಲಿ ವಿಶ್ವದಾಖಲೆಯೊಂದಿಗೆ ಚಿನ್ನ ಗೆದ್ದ ಸಿಡ್ನಿ ಮೆಕ್‌ಲಾಫ್ಲಿನ್ –ಎಎಫ್‌ಪಿ ಚಿತ್ರ

ಮುಖ್ಯಾಂಶಗಳು

- 50.68 ಸೆ.ಗಳಲ್ಲಿ ಗುರಿ ತಲುಪಿದ ಸಾಧನೆ
- ತಮ್ಮದೇ ದಾಖಲೆ ಉತ್ತಮಪಡಿಸಿದ ಅಮೆರಿಕದ ಅಥ್ಲೀಟ್

ಯೂಜೀನ್, ಅಮೆರಿಕ (ರಾಯಿಟರ್ಸ್/ಎಎಫ್‌ಪಿ): ಹೇವಾರ್ಡ್ ಫೀಲ್ಡ್‌ನ ಟ್ರ್ಯಾಕ್‌ನಲ್ಲಿ ಮಿಂಚುಹರಿಸಿದ ಅಮೆರಿಕದ ಸಿಡ್ನಿ ಮೆಕ್‌ಲಾಫ್ಲಿನ್, ಈ ಬಾರಿಯ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ವಿಶ್ವದಾಖಲೆ ಸ್ಥಾಪಿಸಿದರು.

ಶುಕ್ರವಾರ ನಡೆದ ಮಹಿಳೆಯರ 400 ಮೀ. ಹರ್ಡಲ್ಸ್‌ನಲ್ಲಿ ಅವರು 50.68 ಸೆ.ಗಳಲ್ಲಿ ಗುರಿ ತಲುಪಿ ಚಿನ್ನ ಗೆದ್ದರಲ್ಲದೆ, ತಮ್ಮದೇ ಹೆಸರಿನಲ್ಲಿದ್ದ ವಿಶ್ವದಾಖಲೆಯನ್ನು 0.73 ಸೆಕೆಂಡುಗಳಿಂದ ಉತ್ತಮಪಡಿಸಿಕೊಂಡರು.

22 ವರ್ಷದ ಅಥ್ಲೀಟ್ ಕಳೆದ ತಿಂಗಳು ಇದೇ ತಾಣದಲ್ಲಿ ನಡೆದಿದ್ದ ಕೂಟದಲ್ಲಿ 51.41 ಸೆಕೆಂಡುಗಳಲ್ಲಿ ಗುರಿತಲುಪಿ ವಿಶ್ವದಾಖಲೆ ನಿರ್ಮಿಸಿದ್ದರು. 400 ಮೀ. ಹರ್ಡಲ್ಸ್ ಸ್ಪರ್ಧೆಯನ್ನು 51 ಸೆಕೆಂಡುಗಳ ಒಳಗೆ ಪೂರ್ಣಗೊಳಿಸಿದ ಮೊದಲ ಅಥ್ಲೀಟ್ ಎಂಬ ಗೌರವ ಒಲಿಯಿತು.

ಒಲಿಂಪಿಕ್ ಚಾಂಪಿಯನ್ ಕೂಡಾ ಆಗಿರುವ ಮೆಕ್‌ಲಾಫ್ಲಿನ್, ಎರಡನೇ ಸ್ಥಾನ ಪಡೆದ ನೆದರ್ಲೆಂಡ್ಸ್‌ನ ಫೆಮ್ಕೆ ಬೊಲ್ (52.27 ಸೆ.) ಅವರನ್ನು ಸಾಕಷ್ಟು ಮೀಟರ್‌ಗಳ ಅಂತರದಿಂದ ಹಿಂದಿಕ್ಕಿದರು. ಅಮೆರಿಕದ ದಲೀಲಾ ಮುಹಮ್ಮದ್ (53.13 ಸೆ.) ಕಂಚು ಗೆದ್ದರು.

2019ರ ಚಾಂಪಿಯನ್ ದಲೀಲಾ ಮತ್ತು ಮೆಕ್‌ಲಾಫ್ಲಿನ್ ನಡುವಿನ ಪೈಪೋಟಿಯ ಕಾರಣ ಈ ಸ್ಪರ್ಧೆ ಸಾಕಷ್ಟು ಕುತೂಹಲ ಕೆರಳಿಸಿತ್ತು. ಮೆಕ್‌ಲಾಫ್ಲಿನ್ ಸ್ಪಷ್ಟ ಗೆಲುವಿನ ಮೂಲಕ ಸಾಮರ್ಥ್ಯ ಸಾಬೀತುಪಡಿಸಿದರು.

ನಾರ್ಮನ್, ಶಾನೆ ಮಿಲ್ಲರ್‌ಗೆ ಚಿನ್ನ: ಅಮೆರಿಕದ ಮೈಕಲ್ ನಾರ್ಮನ್ ಮತ್ತು ಬಹಾಮಸ್‌ನ ಶಾನೆ ಮಿಲ್ಲರ್ ಅವರು 400 ಮೀ. ಓಟದ ಸ್ಪರ್ಧೆಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಚಿನ್ನ ಜಯಿಸಿದರು.

ಆರಂಭದಿಂದಲೇ ಮುನ್ನಡೆ ಕಾಯ್ದುಕೊಂಡ ನಾರ್ಮನ್ 44.29 ಸೆ.ಗಳಲ್ಲಿ ಗುರಿ ತಲುಪಿದರು. ಮೂರು ಬಾರಿಯ ಒಲಿಂಪಿಕ್ ಪದಕ ವಿಜೇತ ಮತ್ತು 2011ರ ವಿಶ್ವ ಚಾಂಪಿಯನ್ ಗ್ರೆನಾಡದ ಕಿರನಿ ಜೇಮ್ಸ್ (44.68 ಸೆ.) ಬೆಳ್ಳಿ, ಬ್ರಿಟನ್‌ನ ಮ್ಯಾಥ್ಯೂ ಹಡ್ಸನ್ ಸ್ಮಿತ್ (44.66 ಸೆ.) ಕಂಚು ಪಡೆದುಕೊಂಡರು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಐದನೇ ಸ್ಥಾನ ಪಡೆದು ನಿರಾಸೆ ಅನುಭವಿಸಿದ್ದ ನಾರ್ಮನ್, 2019ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಫೈನಲ್ ಪ್ರವೇಶಿಸಲು ವಿಫಲರಾಗಿದ್ದರು.

ಮಹಿಳೆಯರ ವಿಭಾಗದಲ್ಲಿ ಶಾನೆ ಮಿಲ್ಲರ್ 49.11 ಸೆ.ಗಳಲ್ಲಿ ಗುರಿ ತಲುಪಿ ಅಗ್ರಸ್ಥಾನ ಪಡೆದುಕೊಂಡರು. ಡಾಮಿನಿಕನ್ ರಿಪಬ್ಲಿಕ್‌ನ ಮೆರಿಲಿಡಿ ಪೌಲಿನೊ 49.60 ಸೆ.ಗಳೊಂದಿಗೆ ಬೆಳ್ಳಿ ಹಾಗೂ ಬಾರ್ಬಡಾಸ್‌ನ ಸದಾ ವಿಲಿಯಮ್ಸ್ ಕಂಚು ಗಳಿಸಿದರು.

ಕಿಂಬರ್ಲಿಗೆ ಅಗ್ರಸ್ಥಾನ: ಪೆರುವಿನ ಕಿಂಬರ್ಲಿ ಗಾರ್ಸಿಯಾ ಅವರು ಮಹಿಳೆಯರ 35 ಕಿ.ಮೀ. ನಡಿಗೆಯಲ್ಲಿ ಅಗ್ರಸ್ಥಾನ ಪಡೆದುಕೊಂಡರು. ಅವರು 2 ಗಂಟೆ 39.16 ನಿಮಿಷಗಳಲ್ಲಿ ಗುರಿ ತಲುಪಿದರು. ಪೋಲೆಂಡ್‌ನ ಕ್ಯಾಥರಿನಾ ಜೆಲ್ಬೊ ಎರಡನೇ ಹಾಗೂ ಚೀನಾದ ಕ್ವಿಯಾಂಗ್ ಶಿಜಿ ಮೂರನೇ ಸ್ಥಾನ ಪಡೆದರು. 35 ಕಿ.ಮೀ. ನಡಿಗೆ ಸ್ಪರ್ಧೆಯನ್ನು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಇದೇ ಮೊದಲ ಬಾರಿ ಏರ್ಪಡಿಸಲಾಗಿದೆ.

ನೀರಜ್ ಚೋಪ್ರಾ

ಚಿನ್ನದತ್ತ ನೀರಜ್ ಚೋಪ್ರಾ ಚಿತ್ತ

ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದು ಐತಿಹಾಸಿಕ ಸಾಧನೆ ಮಾಡಿರುವ ನೀರಜ್ ಚೋಪ್ರಾ ಜಾವೆಲಿನ್ ಥ್ರೋ ಫೈನಲ್‌ನಲ್ಲಿ ಭಾನುವಾರ ಸ್ಪರ್ಧಿಸಲಿದ್ದು, ಇಡೀ ದೇಶದ ಚಿತ್ತ ಅವರತ್ತ ನೆಟ್ಟಿದೆ. ಈ ಬಾರಿಯ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಅವರು ಭಾರತಕ್ಕೆ ಮೊದಲ ಪದಕ ತಂದುಕೊಡುವ ನಿರೀಕ್ಷೆ ಮೂಡಿಸಿದ್ದಾರೆ.

ಅರ್ಹತಾ ಸುತ್ತಿನಲ್ಲಿ ಎರಡನೇ ಸ್ಥಾನ ಪಡೆದು ಅವರು ಫೈನಲ್ ಪ್ರವೇಶಿಸಿದ್ದರು. ಚೋಪ್ರಾ ಅವರಿಗೆ ಹಾಲಿ ಚಾಂಪಿಯನ್ ಗ್ರೆನಾಡದ ಆ್ಯಂಡರ್ಸನ್ ಪೀಟರ್ಸ್ ಪ್ರಬಲ ಪೈಪೋಟಿ ಒಡ್ಡುವ ಸಾಧ್ಯತೆಯಿದೆ. ಭಾರತದ ಇನ್ನೊಬ್ಬ ಅಥ್ಲೀಟ್ ರೋಹಿತ್ ಯಾದವ್ ಅವರೂ ಫೈನಲ್‌ನಲ್ಲಿ ಕಣಕ್ಕಿಳಿಯಲಿದ್ದಾರೆ.

ಜಾವೆಲಿನ್ ಥ್ರೋ ಫೈನಲ್‌ಗೆ ಮುನ್ನ ಪುರುಷರ ಟ್ರಿಪಲ್ ಜಂಪ್ ಫೈನಲ್ ನಡೆಯಲಿದ್ದು, ಭಾರತದ ಎಲ್ಡೋಸ್ ಪೌಲ್ ಅವರು ಸ್ಪರ್ಧಿಸಲಿದ್ದಾರೆ.

ಫೈನಲ್: ಟ್ರಿಪಲ್ ಜಂಪ್: ಬೆಳಿಗ್ಗೆ 6.30

ಜಾವೆಲಿನ್ ಥ್ರೋ: ಬೆಳಿಗ್ಗೆ 7.05 (ಭಾರತೀಯ ಕಾಲಮಾನ)

ಅನುರಾಣಿಗೆ ಏಳನೇ ಸ್ಥಾನ

ಭಾರತದ ಅನುರಾಣಿ ಸಿಂಗ್ ಮಹಿಳೆಯರ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಏಳನೇ ಸ್ಥಾನ ಪಡೆದರು. ವೈಯಕ್ತಿಕ ಶ್ರೇಷ್ಠ ಪ್ರದರ್ಶನಕ್ಕಿಂತ ತುಂಬಾ ಹಿಂದೆ ಬಿದ್ದ ಅವರು 61.12 ಮೀ. ದೂರ ಎಸೆದರು. 29 ವರ್ಷದ ಅನುರಾಣಿ ಅವರ ಶ್ರೇಷ್ಠ ಪ್ರದರ್ಶನ 63.82 ಮೀ. ಆಗಿದೆ.

ತಮ್ಮ ಎರಡನೇ ಪ್ರಯತ್ನದಲ್ಲಿ ಅವರು 61.12 ಮೀ. ಎಸೆದರು. ಇತರ ಐದು ಪ್ರಯತ್ನಗಳಲ್ಲೂ 60 ಮೀ. ಗಡಿ ದಾಟುವಲ್ಲಿ ವಿಫಲರಾದರು.

ಹಾಲಿ ಚಾಂಪಿಯನ್ ಕೂಡಾ ಆಗಿರುವ ಆಸ್ಟ್ರೇಲಿಯದ ಕೆಲ್ಸಿ–ಲೀ ಬಾರ್ಬೆರ್ 66.91 ಮೀ. ಸಾಧನೆಯೊಂದಿಗೆ ಚಿನ್ನ ಗೆದ್ದರು. ಅಮೆರಿಕದ ಕಾರಾ ವಿಂಗರ್ (64.05 ಮೀ.) ಬೆಳ್ಳಿ, ಜಪಾನಿನ ಹರುಕಾ ಕಿತಗುಚಿ (63.27ಮೀ.) ಕಂಚು ಪಡೆದುಕೊಂಡರು. ಒಲಿಂಪಿಕ್ ಚಾಂಪಿಯನ್ ಆಗಿರುವ ಚೀನಾದ ಶಿಯಿಂಗ್ ಲಿಯು (63.25 ಸೆ.) ನಾಲ್ಕನೇ ಸ್ಥಾನ ಗಳಿಸಿದರು.

ಚೆಸ್: ಇಶಾ ಶರ್ಮಾಗೆ ಮೊದಲ ಐಎಂ ನಾರ್ಮ್

ಪ್ರಜಾವಾಣಿ ವಾರ್ತೆ

ಇಶಾ ಶರ್ಮಾ

ಬೆಳ್ತಂಗಡಿ(ದಕ್ಷಿಣ ಕನ್ನಡ): ಕರ್ನಾಟಕದ ಚೆಸ್ ಪ್ರತಿಭೆ, ಉಜಿರೆಯ ಎಸ್‌ಡಿಎಂ ಕಾಲೇಜಿನ ವಿದ್ಯಾರ್ಥಿನಿ ಇಶಾ ಶರ್ಮಾ ಅವರು ಇಂಟರ್‌ನ್ಯಾಷನಲ್ ಮಾಸ್ಟರ್ ಆಗುವತ್ತ ಹೆಜ್ಜೆ ಹಾಕಿದ್ದಾರೆ.

ಈಚೆಗೆ ಪಿಯೆಸ್ಟನಿಯಲ್ಲಿ ನಡೆದ ಸ್ಲೊವಾಕಿಯಾ ಓಪನ್ ಟೂರ್ನಿಯ ಮೂರನೇ ಸುತ್ತಿನಲ್ಲಿ ಪೋಲೆಂಡ್‌ನ ಗ್ರ್ಯಾಂಡ್ ಮಾಸ್ಟರ್ ಮಿಚಲ್ ಕ್ರಸೆಂಕೊ ವಿರುದ್ಧ ಜಯ ಸಾಧಿಸಿ ಮೊದಲ ನಾರ್ಮ್ ಗಳಿಸುವ ಮೂಲಕ ಅವರು ಈ ಸಾಧನೆ ಮಾಡಿದ್ದಾರೆ. ಈ ಗೆಲುವಿನೊಂದಿಗೆ ಮಹಿಳಾ ಗ್ರ್ಯಾಂಡ್ ಮಾಸ್ಟರ್ ಆಗಲು ಬೇಕಾದ ನಾರ್ಮ್ ಕೂಡ ಅವರಿಗೆ ಲಭಿಸಿತು.

ಕೆ.ವಿಶ್ವೇಶ್ವರನ್ ಬಳಿ ತರಬೇತಿ ಪಡೆ ಯುತ್ತಿರುವ ಇಶಾ ಅವರು ವಾಣಿಜ್ಯ ವಿಜ್ಞಾನ ವಿಷಯದಲ್ಲಿ ಮೂರನೇ ವರ್ಷದ ವಿದ್ಯಾರ್ಥಿನಿ. 2020ರಲ್ಲಿ ಕರ್ನಾಟಕದ ಮೊದಲ ಮಹಿಳಾ ಇಂಟರ್‌ನ್ಯಾಷನಲ್ ಮಾಸ್ಟರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದ ಅವರು 2015ರಲ್ಲಿ ಏಷ್ಯನ್ ಅಂತರ ಶಾಲೆಗಳ 15 ವರ್ಷದೊಳಗಿನವರ ವಿಭಾಗದ ಸ್ಪರ್ಧೆಯಲ್ಲಿ ಕಂಚಿನ ಪದಕ ಗಳಿಸಿದ್ದರು. ಇರಾನ್‌ನಲ್ಲಿ 2017ರಲ್ಲಿ ನಡೆದ ಏಷ್ಯನ್ ಜೂನಿಯರ್ ಬಾಲಕಿಯರ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದರು.

ಸ್ಲೊವಾಕಿಯಾ ಓಪನ್‌ನ ಮೊದಲ ಸುತ್ತಿನಲ್ಲಿ ಸ್ಥಳೀಯ ಚೆಸ್ ಪಟು, ಇಂಟರ್‌ನ್ಯಾಷನಲ್ ಮಾಸ್ಟರ್ ನ್ಯುಗೆಬ್ಯುರ್ ಮಾರ್ಟಿನ್ ಅವರನ್ನು ಮಣಿಸಿದ್ದರು. 9 ಸುತ್ತುಗಳಲ್ಲಿ 5 ಪಾಯಿಂಟ್ ಗಳಿಸಿದ ಅವರು 48.8 ಎಲೊ ರೇಟಿಂಗ್ ಗಳಿಸಿದ್ದು ಸದ್ಯ 2306 ರೇಟಿಂಗ್ ಹೊಂದಿದ್ದಾರೆ. ಇಶಾ, ಬೆಳ್ತಂಗಡಿ ಕಾಂತಾಜೆ ನಿವಾಸಿಗಳಾದ ಡಾ.ಶ್ರೀಹರಿ ಮತ್ತು ಡಾ.ವಿದ್ಯಾ ದಂಪತಿಯ ಮಗಳು.



ಸ್ವಾಗತಿಸಲಾಗುತ್ತಿದೆ, ಭಾರತದ ಹೊಸ ರಾಷ್ಟ್ರಪತಿಗಳನ್ನು

ಸ್ಯಾಫ್ ಯುವ ಫುಟ್‌ಬಾಲ್: ಭಾರತ ತಂಡ ಪ್ರಕಟ

ಭುವನೇಶ್ವರ (ಪಿಟಿಐ): ಸ್ಯಾಫ್ 20 ವರ್ಷದೊಳಗಿನವರ ಫುಟ್‌ಬಾಲ್ ಚಾಂಪಿಯನ್‌ಷಿಪ್‌ಗೆ ಭಾರತದ 23 ಆಟಗಾರರ ತಂಡವನ್ನು ಶನಿವಾರ ಪ್ರಕಟಿಸಲಾಗಿದೆ.

ಭಾರತ ತಂಡವು ಬಹುತೇಕ ಎರಡು ವರ್ಷಗಳ ಬಳಿಕ ಅಂತರರಾಷ್ಟ್ರೀಯ ಫುಟ್‌ಬಾಲ್ ಟೂರ್ನಿಯಲ್ಲಿ ಆಡಲಿದ್ದಾರೆ. ಇಲ್ಲಿಯ ಕಳಿಂಗ ಕ್ರೀಡಾಂಗಣದಲ್ಲಿ ನಡೆಯಲಿರುವ ಮೊದಲ ಪಂದ್ಯದಲ್ಲಿ ಬುಧವಾರ ಬಾಂಗ್ಲಾದೇಶ ಸವಾಲನ್ನು ಆತಿಥೇಯ ತಂಡ ಎದುರಿಸಲಿದೆ.

ತಂಡ ಇಂತಿದೆ: ಗೋಲ್‌ಕೀಪರ್ಸ್: ಸೈಯದ್ ಜಾಹಿದ್ ಹುಸೇನ್ ಬುಖಾರಿ, ಮೋಹಿತ್ ಸಿಂಗ್ ಧಾಮಿ, ಸೋಮ್ ಕುಮಾರ್.ಡಿಫೆಂಡರ್ಸ್: ಅಮನ್‌ದೀಪ್, ಹಲೆನ್ ನೊಂಗ್ಟು, ವಿಕಾಸ್ ಯುಮ್ನಮ್, ಸಾಜದ್ ಹುಸೇನ್ ಪರಾಯ್, ರಾಜ್ ಬಾಸ್ಫೋರ್, ಬ್ರಿಜೇಶ್ ಗಿರಿ, ತಂಕಧರ್ ಬಾಗ್, ಪ್ರೀತಮ್ ಮೀಟೆ ಸೊರೊಖೈಬಮ್. ಮಿಡ್‌ಫೀಲ್ಡರ್ಸ್: ಸಿಬಜಿತ್ ಸಿಂಗ್ ಲೀಮಾಪೋಕ್‌ಪಮ್, ವಿಬಿನ್ ಮೋಹನನ್, ವಿನಯ್ ಹರ್ಜಿ, ಮಹೆಸನ್ ಸಿಂಗ್ ಟೋಂಗ್‌ಬ್ರಮ್, ಸುಜಿತ್ ಸಿಂಗ್, ಹರ್ಷ ಶೈಲೇಶ್ ಪತ್ರೆ, ಟೈಸನ್ ಸಿಂಗ್ ಲೋಯಿಟಾಂಗ್‌ಬಮ್, ಮ್ಯಾಕಾರ್ಟನ್ ಲೂಯಿಸ್ ನಿಕ್ಸನ್. ಫಾರ್ವರ್ಡ್ಸ್: ಗುರುಕೀರತ್ ಸಿಂಗ್, ಪಾರ್ಥಿಬ್ ಸುಂದರ್ ಗೊಗೊಯ್, ಹಿಮಾಂಶು ಜಾಂಗ್ರಾ, ಶುಭೋ ಪಾಲ್. **ಮುಖ್ಯ ಕೋಚ್:** ಷಣ್ಮುಗಂ ವೆಂಕಟೇಶ್.

ಟೆನಿಸ್: ಅಂತಿಮ ಅರ್ಹತಾ ಸುತ್ತಿಗೆ ಕೌಶಿಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಆಟವಾಡಿದ ಕೌಶಿಕ್ ರಾಜೇಶ್ ಅವರು ಕರ್ನಾಟಕ ಎಐಟಿಎ ಸೂಪರ್ ಸಿರೀಸ್ 16 ವರ್ಷದೊಳಗಿನವರ ಟೆನಿಸ್ ಟೂರ್ನಿಯ ಬಾಲಕರ ವಿಭಾಗದ ಅಂತಿಮ ಅರ್ಹತಾ ಸುತ್ತು ತಲುಪಿದರು.

ಇಲ್ಲಿನ ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಅಂಗಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಕೌಶಿಕ್ ಅವರು 9–8 (7–3)ರಿಂದ ಚರಣ್ ವರ್ಧಮ್ ಅವರನ್ನು ಸೋಲಿಸಿದರು.

ಅಂತಿಮ ಸುತ್ತಿನ ಅರ್ಹತಾ ಪಂದ್ಯಗಳು ಭಾನುವಾರ ನಡೆಯಲಿವೆ.

ಬಾಲಕರ ವಿಭಾಗದ ಅರ್ಹತಾ ಸುತ್ತಿನ ಇನ್ನುಳಿದ ಪಂದ್ಯಗಳಲ್ಲಿ ರೌರಿಕ್ ರಜಿನಿ 9-0ಯಿಂದ ಆರ್ಯ ಸಾತನೂರು ಎದುರು, ಚಂದನ್ ಪೊಕ್ಕುಲಾ 9-5ರಿಂದ ಚಿರಂಜೀವಿ ಪ್ರಕಾಶ್ ಎದುರು, ಪಾಲ್ ಚರಣ್ ತೇಜ್ ಎಂ. 9-6ರಿಂದ ದಿಗಂತ್ ಎಂ. ಎದುರು ಗೆದ್ದರು.

ಬಾಲಕಿಯರ ವಿಭಾಗದ ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಪೂಜಾ ನಾಗರಾಜ 9–0ಯಿಂದ ಪಲಕ್ ಪಾಷಾ ಎದುರು, ಮೇಘನಾ ಪೊಕ್ಕುಲುರಿ 9-5ರಿಂದ ತೀಕ್ಷ್ಣಾ ನಾಗೇಂದ್ರ ವಿರುದ್ಧ, ಶ್ರೇಯಾಂಶಿ ಘಿವಾರಿ 9-4ರಿಂದ ನಯನಾ ಪಾರ್ಥ ಸಾರಥಿ ವಿರುದ್ಧ ಜಯ ಸಾಧಿಸಿದರು.

ಲೋಕೇಶ್ ವಿರುದ್ಧ ಮಾನನಷ್ಟ ಮೊಕದ್ದಮೆ: ಶ್ರೀನಿವಾಸಗೌಡ

ಪ್ರಜಾವಾಣಿ ವಾರ್ತೆ

ಶ್ರೀನಿವಾಸ ಗೌಡ

ಮಂಗಳೂರು: 'ಕಂಬಳದಲ್ಲಿ ಸಾಧನೆ ಮಾಡುತ್ತಿರುವುದನ್ನು ಸಹಿಸಲಾಗದೆ ವೈಯಕ್ತಿಕವಾಗಿ ನನ್ನ ತೇಜೋವಧೆಗೆ ಹಾಗೂ ಕಂಬಳ ಕ್ರೀಡೆಗೆ ಕಳಂಕ ತರಲು ಲೋಕೇಶ್ ಶೆಟ್ಟಿ ಪ್ರಯತ್ನಿಸುತ್ತಿದ್ದು ಅವರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಲಾಗುವುದು' ಎಂದು ಕಂಬಳ ಓಟಗಾರ ಅಶ್ವತ್ಥಪುರ ಶ್ರೀನಿವಾಸ ಗೌಡ ತಿಳಿಸಿದರು.

ಕಂಬಳದ ಕೋಣಗಳ ಮಾಲೀಕರೊಂದಿಗೆ ಪತ್ರಿಕಾಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು 'ನಾನು ಕಂಬಳದಲ್ಲಿ ದಾಖಲೆ ಮಾಡಿರುವುದಾಗಿ ಸಮಾಜಕ್ಕೆ ತಪ್ಪು ಮಾಹಿತಿ ನೀಡಿದ್ದೇನೆ ಎಂದು ದೂರಿ ಮೂಡುಬಿದಿರೆ ಠಾಣೆಗೆ ಲೋಕೇಶ್ ದೂರು ನೀಡಿದ್ದಾರೆ. ದೂರು ದಾಖಲಾಗಲಿಲ್ಲವಾದರೂ ಸಾಮಾಜಿಕ ತಾಣಗಳಲ್ಲಿ ಸುಳ್ಳು ಸುದ್ದಿ ಹರಿಯಬಿಟ್ಟಿದ್ದಾರೆ. ಮಾಧ್ಯಮಗಳಿಗೂ ತಪ್ಪು ಮಾಹಿತಿ ನೀಡಿದ್ದಾರೆ. ಇದರಿಂದ ನನ್ನ ಘನತೆಗೆ ಚ್ಯುತಿ ಬಂದಿದೆ' ಎಂದರು.

'ನನ್ನನ್ನು ಉಸೇನ್ ಬೋಲ್ಟ್ ಅವರಿಗೆ ಹೋಲಿಸಿದ ಲೋಕೇಶ್ ಶೆಟ್ಟಿ ನಂತರ ಸಿನಿಮಾ ನಿರ್ಮಾಣ ಮಾಡಲು ಮುಂದಾದರು. ಅವರು ಮೋಸಗಾರ ಎಂದು ತಿಳಿದಿರುವುದರಿಂದ ಚಿತ್ರದಲ್ಲಿ ಪಾತ್ರ ಮಾಡುವುದಿಲ್ಲ ಎಂದು ಹೇಳಿದ್ದೆ. ಅದರ ಸೇಡು ತೀರಿಸಿಕೊಳ್ಳಲು ಕಾಯುತ್ತಿದ್ದ ಅವರು ಈಗ ಸುಳ್ಳು ದೂರು ದಾಖಲಿಸಲು ಪ್ರಯತ್ನಿಸಿದ್ದಾರೆ' ಎಂದು ಶ್ರೀನಿವಾಸ ಹೇಳಿದರು.

ಒಕ್ಕಾಡಿಗೋಳಿ ಕಂಬಳ ಸಮಿತಿಯ ಅಧ್ಯಕ್ಷ ಹಾಗೂ ಜಿಲ್ಲಾ ಕಂಬಳ ಸಮಿತಿಯ ಉಪಾಧ್ಯಕ್ಷ ರಶ್ಮಿತ್ ಶೆಟ್ಟಿ, ಕೋಣಗಳ ಮಾಲೀಕರಾದ ಶಕ್ತಿಪ್ರಸಾದ್, ಹರ್ಷವರ್ಧನ ಪಡಿವಾಳ ಮತ್ತು ಸಚಿನ್ ಅಡಪ ಅವರು 'ಪ್ರತಿಷ್ಠೆಗಾಗಿ ಕೆಲವರು ಮಾಡುತ್ತಿರುವ ಕುತಂತ್ರದಿಂದ ಕಂಬಳ ಕ್ರೀಡೆಗೆ ಕಳಂಕ ಉಂಟಾಗಿದೆ. ವೈಯಕ್ತಿಕ ಹಿತಾಸಕ್ತಿಗಾಗಿ ಬಡ ಓಟಗಾರರನ್ನು ಬಲಿ ಮಾಡಲು ಬಿಡುವುದಿಲ್ಲ, ಮಾನನಷ್ಟ ಮೊಕದ್ದಮೆ ಹೂಡಲು ಶ್ರೀನಿವಾಸಗೌಡ ಅವರಿಗೆ ನೆರವಾಗಲಿದ್ದೇವೆ' ಎಂದರು.

ಕೆವಿನ್‌ಗೆ ಪ್ರಶಸ್ತಿ

ಕೆವಿನ್ ಟೈಟಸ್

ಬೆಂಗಳೂರು: ಕೆವಿನ್ ಟೈಟಸ್ ಹಾಗೂ ಸಾಯಿ ಜಾನ್ವಿ ಅವರು ಎಐಟಿಎ 18 ವರ್ಷದೊಳಗಿನವರ ಟೆನಿಸ್ ಚಾಂಪಿಯನ್‌ಷಿಪ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು.

ಇಲ್ಲಿಯ ಟಾಪ್‌ಸ್ಪಿನ್ ಅಂಗಣದಲ್ಲಿ ಶುಕ್ರವಾರ ಕೊನೆಗೊಂಡ ಚಾಂಪಿಯನ್‌ಷಿಪ್‌ನ ಬಾಲಕರ ಫೈನಲ್‌ನಲ್ಲಿ ಕೆವಿನ್ 6-3, 6-4ರಿಂದ ತನುಶ್ ಅವರನ್ನು ಸೋಲಿಸಿದರು. ಬಾಲಕಿಯರ ಹಣಾಹಣಿಯಲ್ಲಿ ಜಾನ್ವಿ 6-3, 6-1ರಿಂದ ಹೃದಯೇಶಿ ವಿರುದ್ಧ ಜಯಿಸಿದರು.





ಮಾಗಿದ ಪ್ರಜ್ಞೆಯ ಮುಗ್ಧ ಸಾಧಕ 2

ವಿಶಿಷ್ಟ ಕಂಠದ ಮಧುರ ಗಾಯಕ 3

ಅಂಕೆ ಮೀರಿದ ನಾಯಕರು

ಬೆಂಕಿ ಬಿದ್ದ ಲಂಕೆ

ಡಿ. ಉಮಾಪತಿ

ಆರ್ಥಿಕ ಸಾಮಾಜಿಕ ಹಾಗೂ ರಾಜಕೀಯ ಪ್ರಪಾತಕ್ಕೆ ಕುಸಿದು ಬಿದ್ದಿದೆ ಶ್ರೀಲಂಕಾ. ತಲೆಯೆತ್ತುವ ಸೂಚನೆಗಳು ಸದ್ಯಭವಿಷ್ಯದಲ್ಲಿ ಕಾಣುತ್ತಿಲ್ಲ. ಬಿಕ್ಕಟ್ಟು ಬಾಣಲೆಯಿಂದ ಬೆಂಕಿಗೆ ಜಾರುವ ಸೂಚನೆಗಳು ಮೂಡತೊಡಗಿವೆ.

ರಾಷ್ಟ್ರಾಧ್ಯಕ್ಷರಾಗಿದ್ದ ಗೊಟಬಯ ಪರಾರಿಯಾದರೆ, ಪ್ರಧಾನಿಯಾಗಿದ್ದ ಮಹಿಂದ ರಾಜಪಕ್ಸ ತಲೆ ಮರೆಸಿಕೊಂಡಿದ್ದಾರೆ. ಸಂಸತ್ತು ಆರಿಸಿದ ಹೊಸ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಹಳೆಯ ಮಂತ್ರಿಮಂಡಲವನ್ನೇ ಉಳಿಸಿಕೊಂಡಿದ್ದಾರೆ. ದಮನದ ಹತಾರುಗಳನ್ನು ಹೊಸದಾಗಿ ಮಸೆದು ತ್ರಸ್ತ ಜನತೆಯ ಮೇಲೆ ಬೀಸತೊಡಗಿದ್ದಾರೆ. ಹಳೆಯ ಸರ್ವಾಧಿಕಾರಿಯ ಜಾಗಕ್ಕೆ ಹೊಸ ಸರ್ವಾಧಿಕಾರಿ ಬಂದಂತಾಗಿದೆ. ಎಲ್ಲ 25 ಜಿಲ್ಲೆಗಳ 'ಶಾಂತಿ ಸುವ್ಯವಸ್ಥೆ'ಯ ನಿರ್ವಹಣೆಯನ್ನು ಮಿಲಿಟರಿಗೆ ಒಪ್ಪಿಸಲಾಗಿದೆ. ತುರ್ತುಪರಿಸ್ಥಿತಿ ಘೋಷಣೆಯಾಗಿದೆ. ಶಾಂತಿಯುತ ಜನಾಂದೋಲನವನ್ನು ನಿರ್ದಯವಾಗಿ ಬಗ್ಗುಬಡಿಯಲಾಗುತ್ತಿದೆ. ಪತ್ರಕರ್ತರು-ವಕೀಲರು 'ಕಾಣೆ'ಯಾಗುತ್ತಿದ್ದಾರೆ.

ಆಳಿದ ರಾಜಪಕ್ಸ ಕುಟುಂಬದೆಡೆ ಸಿಡಿದಿದ್ದ ಜನಾಕ್ರೋಶ ಕಡೆಗೆ ತಿರುಗಿದ್ದು ಎಲ್ಲ 225 ಸಂಸದರ ವಿರುದ್ಧ. ಎಲ್ಲ ರಾಜಕೀಯ ಪಕ್ಷಗಳೂ ಈ ಝಳಕ್ಕೆ ಸಿಕ್ಕಿವೆ. ರಾಜಕಾರಣದಲ್ಲಿ ಇರಿಸಿದ್ದ ಜನರ ವಿಶ್ವಾಸ ಹಾರಿ ಹೋಗಿದೆ. ಸಹನೆ ಕಟ್ಟೆಯೊಡೆದಿದೆ. ವರ್ಷಗಳ ಕಾಲ ಅದುಮಿಟ್ಟಿದ್ದ ಹತಾಶೆ ತಾನಾಗಿ ಸ್ಫೋಟಿಸಿದೆ. ಮುಂದಾಳುಗಳಿಲ್ಲದ ಈ ಜನಾಂದೋಲನಕ್ಕೆ ಜನರೇ ನಾಯಕರು! ಸಾಮಾಜಿಕ ಜಾಲತಾಣಗಳು, ಸಂದೇಶ ವಿನಿಮಯ ಆ್ಯಪ್‌ಗಳೇ ಜನಸಂಪರ್ಕ- ಸಂಘಟನೆಯ ನರನಾಡಿಗಳು.

> ದ್ವೀಪರಾಷ್ಟ್ರ ಶ್ರೀಲಂಕಾ ಮುರಿದು ಬಿದ್ದಿದೆ. ಜನರ ಬವಣೆ ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ಅಸಹನೀಯ ಆಗುತ್ತಿದೆ. ಕೈಗೆ ಉದ್ಯೋಗವಿಲ್ಲ. ಅರ್ಥ ವ್ಯವಸ್ಥೆಯ ಬೆನ್ನೆಲುಬಾಗಿದ್ದ ಪ್ರವಾಸಿಗಳ ಸುಳಿವಿಲ್ಲ. ಗಂಜಿ ಬೇಯಿಸಲು ಅಡುಗೆ ಅನಿಲ ಇಲ್ಲ. ರೈಲು–ಬಸ್‌ಗಳು ಸಂಚರಿಸುತ್ತಿಲ್ಲ. ಲಂಕೆಯ ಇಂದಿನ ದಾರುಣಸ್ಥಿತಿಗೆ ಕಾರಣವೇನು?

ಜೀವನಾವಶ್ಯಕ ವಸ್ತುಗಳು-ಸೌಕರ್ಯಗಳ ವ್ಯವಸ್ಥೆ ನೆಲಕಚ್ಚಿದೆ. ಲಕ್ಷಾಂತರ ಮಂದಿ ಹಸಿವಿನಿಂದ ಕಂಗಾಲಾಗಿದ್ದಾರೆ. ಜನಸಾಮಾನ್ಯರ ಅನುದಿನದ ಬದುಕು ನರಕವಾಗಿ ಹೋಗಿದೆ. ದೇಶದ ಖರೀದಿ ಶಕ್ತಿ ಬಸಿದು ಹೋಗಿದೆ. ವಿದೇಶಿ ವಿನಿಮಯ ಸಂಗ್ರಹ ಪಾತಾಳ ಕಂಡಿದೆ. ಇತ್ತ ದೈನಂದಿನ ಬವಣೆಗಳು ಜನತೆಯನ್ನು ಕಿತ್ತು ಕಾಡಿದ್ದರೆ, ಅತ್ತ ರಾಜಪಕ್ಸ ಕುಟುಂಬ ಭೋಗವಿಲಾಸಗಳಲ್ಲಿ ಮುಳುಗೇಳುತ್ತಿತ್ತು.

ಜೀವನೋಪಾಯಗಳನ್ನು ಕಟ್ಟಿ ಕೊಡುವ ದೂರನೋಟವಿಲ್ಲದ ರಾಜಕೀಯ ದಿವಾಳಿಯೆದ್ದು ಬಹುಕಾಲವೇ ಆಗಿತ್ತು. ಪ್ರವಾಸೋದ್ಯೋಮ ಮತ್ತು ಆಮದನ್ನೇ ಅವಲಂಬಿಸಿದ್ದ ಆರ್ಥಸ್ಥಿತಿ ಅಲ್ಲಿಯದಾಗಿತ್ತು. ಮಿತಿಮೀರಿ ಸಾಲ ಎತ್ತಿದ ರಾಜಪಕ್ಸ ನೇತೃತ್ವದ ಸರ್ಕಾರಗಳು ದೇಶವನ್ನು ಋಣಭಾರದ ಬಲೆಗೆ ಕೆಡವವು. ಚೀನೀ ಸಾಲ ಪಡೆದು ರಾಜಪಕ್ಸಗಳು ನಿರ್ಮಿಸಿದ ಹತ್ತಾರು ಯೋಜನೆಗಳು ಬಿಳಿಯಾನೆಗಳಾಗಿ ಪರಿಣಮಿಸಿದವು. ಆಳುವ ಕುಟುಂಬದ ಖಾಸಗಿ ಬೊಕ್ಕಸ ಭರ್ತಿ ಮಾಡಿದವು. ಹಣದುಬ್ಬರದ ಅಬ್ಬರ ಲಕ್ಷ ಲಕ್ಷ ಬದುಕುಗಳನ್ನು ನುಂಗಿತು. ಲಂಕೆಯ ರೂಪಾಯಿ ಇದೀಗ ಜಗತ್ತಿನಲ್ಲೇ ಅತಿ ಅಗ್ಗದ ಕರೆನ್ಸಿ!

ರಾಸಾಯನಿಕ ಗೊಬ್ಬರಗಳು- ಕೀಟನಾಶಕಗಳನ್ನು ನಿಷೇಧಿಸಿ ಹಠಾತ್ತನೆ ಹೇರಲಾದ ಸಾವಯವ ಕೃಷಿ ಪದ್ಧತಿಯಿಂದಾಗಿ ಭತ್ತದ ಉತ್ಪಾದನೆ ತೀವ್ರವಾಗಿ ಕುಸಿಯಿತು. ಸ್ವಾವಲಂಬನೆ ಧ್ವಸ್ತವಾಗಿ ಭಾರೀ ಪ್ರಮಾಣದ ಅಕ್ಕಿಯನ್ನು ಆಮದು ಮಾಡಿಕೊಳ್ಳಬೇಕಾಯಿತು. ಅಕ್ಕಿಯ ದರಗಳು ಆಗಸಕ್ಕೆ ಜಿಗಿದವು. ಈ ಹಠಾತ್ ಹೇರಿಕೆಯು ವಿದೇಶಿ ವಿನಿಮಯ ಗಳಿಸಿಕೊಡುತ್ತಿದ್ದ ಚಹಾ ಉತ್ಪಾದನೆಯನ್ನೂ ನೆಲಕಚ್ಚಿಸಿತು. ಶತಕೋಟಿ ಡಾಲರುಗಳನ್ನು ಗಳಿಸುತ್ತಿದ್ದ ಈ ಉದ್ಯಮ ತಪ್ಪು ನೀತಿಗಳ ಕಾರಣ ದಿಕ್ಕೆಟ್ಟಿತು. ತೀವ್ರ ತೆರಿಗೆ ಕಡಿತ ಮಾಡಿದ ರಾಜಪಕ್ಸಗಳು ಐ.ಎಂ.ಎಫ್., ಚೀನಾ, ಬಾಂಗ್ಲಾದೇಶ ಮತ್ತು ಭಾರತದಿಂದ ಯದ್ವಾತದ್ವಾ ಸಾಲ ಪಡೆದರು. ಬೇಕಿಲ್ಲದ ಮೂಲಸೌಕರ್ಯಗಳ ಮೇಲೆ ಹಣ ಸುರಿದು ತಾವೂ ಬಾಚಿಕೊಂಡರು. ದೇಶವನ್ನು ದಿವಾಳಿಯೆಬ್ಬಿಸಿದರು. ಕೊರೊನಾ ಕಾರಣ ಪ್ರವಾಸೋದ್ಯಮದ ಆದಾಯ ಕುಸಿಯಿತು. ಆಹಾರ ಸಾಮಗ್ರಿಗಳ ಬೆಲೆ ಯದ್ವಾತದ್ವಾ ಏರಿದವು. ಪೆಟ್ರೋಲ್ ಖರೀದಿಗೆ ಡಾಲರುಗಳು ಉಳಿದಿಲ್ಲ. ಇಂಧನ ಉಳಿಸಲು ಶಾಲೆಗಳನ್ನು ಮುಚ್ಚಲಾಯಿತು. ಆಸ್ಪತ್ರೆಗಳಲ್ಲಿ ಈಗಲೂ ಔಷಧಗಳಿಲ್ಲ.

ಕಳೆದ 20 ವರ್ಷಗಳ ಕಾಲ ರಾಜಪಕ್ಸಗಳೇ ರಾಜ್ಯವಾಳಿದರು. ಸ್ವಜನಪಕ್ಷಪಾತದ ಪರಮಾವಧಿ ಅವಧಿಯಿದು. ಗೊಟಬಯ ರಾಜಪಕ್ಸ ರಾಷ್ಟ್ರಾಧ್ಯಕ್ಷರಾಗಿದ್ದರೆ, ಅವರ ಅಣ್ಣ ಮಹಿಂದ ರಾಜಪಕ್ಸ ಪ್ರಧಾನಮಂತ್ರಿ. ಮತ್ತೊಬ್ಬ ಅಣ್ಣ ಚಾಮಲ್ ರಾಜಪಕ್ಸ ನೀರಾವರಿ, ರಕ್ಷಣೆ ಹಾಗೂ ಗೃಹಮಂತ್ರಿ. ಇನ್ನೊಬ್ಬ ಅಣ್ಣ ಬಾಸಿಲ್ ರಾಜಪಕ್ಸ ಹಣಕಾಸು ಮಂತ್ರಿ. ಈ ಕುಟುಂಬಕ್ಕೆ ಸೇರಿದ ಹಲವರು ಸಂಸತ್ ಸದಸ್ಯರು, ಸರ್ಕಾರದ ಇಲ್ಲವೇ ಇತರೆ ಪ್ರಮುಖ ಹುದ್ದೆಗಳನ್ನು ಅನುಭವಿಸಿದರು. ದೇಶದ ಬಜೆಟ್ಟಿನ ಶೇ 70ರಷ್ಟು ಅಂಶ ರಾಜಪಕ್ಸ ಕುಟುಂಬದ ಸದಸ್ಯರ ನಿಯಂತ್ರಣದಲ್ಲಿತ್ತು. ದುರಾಡಳಿತ ಮತ್ತು ಲಂಚಗುಳಿತನ ತಾಂಡವ ಆಡಿತು. ದೇಶ ತಳಮಳಕ್ಕೆ ಸಿಲುಕಿದ್ದರೂ ಲೆಕ್ಕಿಸದೆ ಮಾಲ್ದೀವ್ಸ್‌ನಲ್ಲಿ ಜಲಕ್ರೀಡೆಯಲ್ಲಿ ನಿರತನಾಗಿದ್ದ ನಮಲ್ ರಾಜಪಕ್ಸ. ಈತ ಪ್ರಧಾನಮಂತ್ರಿಯ ಮಗ ಮತ್ತು ಸಚಿವನಾಗಿದ್ದಾತ.

ಪ್ರತ್ಯೇಕ ರಾಜ್ಯದ ಬೇಡಿಕೆಯಿಟ್ಟು ಹೋರಾಡಿದ ಲಕ್ಷಕ್ಕೂ ಹೆಚ್ಚು ತಮಿಳರ ನರಮೇಧ ನಡೆಸಿದ್ದು ರಾಜಪಕ್ಸಗಳ ಆಡಳಿತ. ನಂಬರ್ ಪ್ಲೇಟುಗಳೇ ಇಲ್ಲದ ಬಿಳಿಯ ವಾಹನಗಳು ಭಿನ್ನಮತೀಯರು ಮತ್ತು ಪತ್ರಕರ್ತರನ್ನು ಬೇಟೆಯಾಡಿ ಸುಳಿವಿಲ್ಲದಂತೆ ಮುಗಿಸಿದವು. ತಮ್ಮನ್ನು ಅಪ್ರತಿಮ ದೇಶಭಕ್ತರು ಮತ್ತು ಶ್ರೀಲಂಕೆಯನ್ನು ಕಾಪಾಡಲು ಧರೆಗಿಳಿದ ದೇವತೆಗಳೆಂದು ಕರೆಯಿಸಿಕೊಂಡರು ರಾಜಪಕ್ಸಗಳು. ಇವರ ಭ್ರಷ್ಟಾಚಾರವನ್ನು, ಜನಾಂಗೀಯ ದ್ವೇಷವನ್ನು, ತಮಿಳರ ನರಮೇಧ ಕೃತ್ಯವನ್ನು ಪ್ರಶ್ನಿಸಿದವರಿಗೆ ಭಯೋತ್ಪಾದಕರು, ದೇಶದ್ರೋಹಿಗಳೆಂಬ ಹಣೆಪಟ್ಟಿ ಹಚ್ಚಲಾಯಿತು. ದೇಶದ ಬಹುಸಂಖ್ಯಾತರಾದ ಬೌದ್ಧ ಸಿಂಹಳೀಯರನ್ನು ಎತ್ತಿಕಟ್ಟಿ ರಾಷ್ಟ್ರವಾದವನ್ನು ಬಡಿದೆಬ್ಬಿಸಿ ಚುನಾವಣೆಗಳನ್ನು ದೈತ್ಯ ಬಹುಮತದಿಂದ ಗೆದ್ದ ಕುಟುಂಬವಿದು. ಅಲ್ಪಸಂಖ್ಯಾತ ತಮಿಳರ ವಿರುದ್ಧ ಬಹುಸಂಖ್ಯಾತ ಬೌದ್ಧರನ್ನು ಹೂಡಿ ಜನಾಂಗೀಯ ದ್ವೇಷದ ನೀರು, ಗೊಬ್ಬರ ಹರಿಸಿ ರಾಜ್ಯಾಧಿಕಾರದ ಬಂಪರ್ ಬೆಳೆ ತೆಗೆದವರು. ರಾಜಪಕ್ಸಗಳು ಬಿತ್ತಿದ ತಮಿಳು ಮತ್ತು ಮುಸ್ಲಿಂ ದ್ವೇಷದ ನಶೆಯಲ್ಲಿ ಮೈಮರೆತರು ಬಹುಸಂಖ್ಯಾತ ಸಿಂಹಳೀಯರು. ಅವರನ್ನು ತಲೆಯ ಮೇಲೆ ಹೊತ್ತು ಮೆರೆಸಿದರು. ಅಲ್ಪಸಂಖ್ಯಾತರ ಮತಗಳನ್ನು ಧಿಕ್ಕರಿಸಿ ಗೆದ್ದ ಮೊದಲ ರಾಷ್ಟ್ರಪತಿಯೆಂದು ಕೊಂಡಾಡಿದರು. ಅವತಾರಪುರುಷನೆಂದೂ ಭಾವಿಸಿದರು. ತಮಿಳರು, ಮುಸ್ಲಿಮರು, ಕ್ರೈಸ್ತರ ದಮನವನ್ನು ಮೆಚ್ಚಿದರು. ಬಹುಸಂಖ್ಯಾತ ಬೌದ್ಧರ ವಿನಾ ಉಳಿದೆಲ್ಲರನ್ನೂ ಭಯೋತ್ಪಾದಕರೆಂದು ಕರೆಯಲಾಯಿತು. ತಮಿಳರ ನರಮೇಧದ ನಂತರ ಮುಸಲ್ಮಾನರ ಸರದಿ ಬಂದಿತು. ಅಲ್ಲಿಯೂ ಅಲ್ಪಸಂಖ್ಯಾತರಿಂದಾಗಿ ಬಹುಸಂಖ್ಯಾತ ಬೌದ್ಧ ಧರ್ಮ ಅಪಾಯದಲ್ಲಿದೆ ಎಂಬ ಭಯವನ್ನು ಬಿತ್ತಲಾಯಿತು.

ಅಲ್ಪಸಂಖ್ಯಾತರ ಆಹಾರ, ಆಚರಣೆ, ಉಡುಪುಗಳನ್ನು ಆಡಿಕೊಂಡು ಹಂಗಿಸಲಾಯಿತು. ಬೌದ್ಧ ಭಿಕ್ಷುಗಳು ಈ ದ್ವೇಷ ಪ್ರಸಾರದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಒಬ್ಬನೇ ಒಬ್ಬ ಮುಸಲ್ಮಾನ ಬೌದ್ಧರ ವಿರುದ್ಧ ಕೈ ಮಾಡಿದರೆ, ಮುಸಲ್ಮಾನರ ಸಂತತಿಯನ್ನೇ ನಾಶ ಮಾಡುವುದಾಗಿ ಸಾರ್ವಜನಿಕ ಭಾಷಣಗಳನ್ನು ಮಾಡಿದರು. ಚುನಾವಣೆಗಳಲ್ಲಿ ಗೊಟಬಯ ಅವರಿಗೆ ಶೇ 57ರಷ್ಟು ಭಾರೀ ಮತ ನೀಡಿ ಗೆಲ್ಲಿಸಲಾಯಿತು. ಬಹುಸಂಖ್ಯಾತ ಬಾಹುಳ್ಯ ಜಿಲ್ಲೆಗಳಲ್ಲಿ ಪ್ರತಿಪಕ್ಷಗಳಿಗೆ ಒಂದು ಸೀಟೂ ದಕ್ಕಲಿಲ್ಲ. ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಪರವಾಗಿಲ್ಲ, ದೇಶ ಸುರಕ್ಷಿತವಾಗಿರಬೇಕು. ಸರ್ಕಾರ ಬಲಿಷ್ಠವಾಗಿರಬೇಕು, ಪ್ರಚಂಡ ನಾಯಕ ಬೇಕೆಂಬ ಘೋಷಣೆಗಳು ಮೊಳಗಿದ್ದವು. ತಮಿಳರ ನರಮೇಧವನ್ನು, ಅವರ ಹೆಣ್ಣುಮಕ್ಕಳ ಮೇಲೆ ನಡೆದ ಅತ್ಯಾಚಾರಗಳನ್ನು ಸಂಭ್ರಮಿಸಿದ್ದರು ಬಹುಸಂಖ್ಯಾತ ಬೌದ್ಧರು. ಗೊಟಬಯ ಅವರಿಗೆ 'ಟರ್ಮಿನೇಟರ್', 'ಹಿಟ್ಲರ್' ಎಂಬ ಬಿರುದುಗಳ ನೀಡಿ ಬೀಗಿದರು. ಒಂದು ದೇಶ- ಒಂದು ಕಾನೂನು ಎಂಬ ಗೊಟಬಯ ಘೋಷಣೆ ಬಹುಸಂಖ್ಯಾತರ ಚಪ್ಪಾಳೆ ಗಳಿಸಿತು. ಸಿಂಹಳ ಶ್ರೇಷ್ಠತೆಯ ಗರ್ವದ ರಾಜಕಾರಣ ಮೆರೆದಾಡಿತು. ಶ್ರೀಲಂಕಾದ ಮೀಡಿಯಾ ಕೂಡ ಆಳುವವರ ಮಡಿಲಲ್ಲಿ ಆಡುವ ಮುದ್ದಿನ ನಾಯಿ ಆಯಿತು. ಕಾವಲು ನಾಯಿಯ ಪಾತ್ರವನ್ನು ಅರಿತೂ ಮರೆತಿತು. ಈಗ ಹಸಿವಿನ ಬೆಂಕಿ ಒಡಲುಗಳ ಸುಡುತ್ತಿರುವಾಗ ಪ್ರಚಂಡ ನಾಯಕ ದೇಶ ತೊರೆದು ಓಡಿ ಹೋಗಬೇಕಾಯಿತು. ಧರ್ಮ ಮತ್ತು ದ್ವೇಷಗಳು ಹೊಟ್ಟೆ ತುಂಬಿಸದಾಗಿವೆ. ಅಂಧರಾಷ್ಟ್ರವಾದದ ಅನುಸರಣೆಯು ಸಂಪನ್ನ ದೇಶವೊಂದರ ಕೈಗೆ ಭಿಕ್ಷಾಪಾತ್ರೆ ಹಿಡಿಸಿ ನಿಲ್ಲಿಸಿದೆ.

9C ಪುಟಕ್ಕೆ...

ಆಕ್ರೋಶದ ಅಶ್ರುವಾಯು ಗೋಟಬಯ ರಾಜಪಕ್ಸ ರಾಜೀನಾಮೆಗೆ ಒತ್ತಾಯಿಸಿ ಅಧ್ಯಕ್ಷರ ನಿವಾಸದ ಮುಂದೆ ನಡೆದ ಪ್ರತಿಭಟನೆ ವೇಳೆ ಪೊಲೀಸರತ್ತ ಟಿಯರ್ ಗ್ಯಾಸ್ ಶೆಲ್ ಎಸೆಯುತ್ತಿರುವ ಪ್ರತಿಭಟನಕಾರ



ಪರಸ್ಪರ ಸಮಾಧಾನವಷ್ಟೇ... ಪ್ರತಿಭಟನಾ ಶಿಬಿರದಲ್ಲಿ ಕಂಡ ನೋಟ

ಪ್ಲಾಗಿಂಗ್

ಜಾಗಿಂಗ್ ಮಾಡುತ್ತಾ... ಕಸ ಆಯುತ್ತಾ...

ಗೆಳೆಯರು, ಸಹಪಾಠಿಗಳಿಂದ ಕಬ್ರಾವಾಲಾ ಎಂಬ ತೆಗಳಿಕೆಗೆ ಗುರಿಯಾಗಿದ್ದ ವಿವೇಕ್ ಗುರವ್ ಬ್ರಿಟನ್ ಪ್ರಧಾನಿ ನೀಡುವ 'ಪಾಯಿಂಟ್ಸ್ ಆಫ್ ಲೈಟ್ಸ್' ಪ್ರಶಸ್ತಿಗೆ ಭಾಜನರಾಗಿದ್ದಾರೆ. ಬೀದಿ ಬದಿ ಬಿದ್ದಿರುವ ನೂರಾರು ಟನ್ ತ್ಯಾಜ್ಯವನ್ನು 'ಪ್ಲಾಗಿಂಗ್' ಅಭಿಯಾನದಡಿ ವಿಲೇವಾರಿ ಮಾಡಿರುವ ಈ ಪರಿಸರ ಹೋರಾಟಗಾರ ಪರಿಸರ ಸಂರಕ್ಷಣೆಯ ಜಾಗೃತಿ ಮೂಡಿಸುತ್ತಿದ್ದಾರೆ.

ಪ್ಲಾಗಿಂಗ್‌ನಲ್ಲಿ ನಿರತರಾದ ವಿವೇಕ್ ಗುರವ್

ಮಹಮ್ಮದ್ ನೂಮಾನ್

ಜಾಗಿಂಗ್ ಮಾಡುವವರಲ್ಲಿ ಪರಿಸರದ ಜಾಗೃತಿ ಮೂಡಿಸಿ ಅವರ ನೆರವಿನಿಂದ ಸ್ವಚ್ಛತಾ ಕೆಲಸ ನಡೆಸುವ 'ಪ್ಲಾಗಿಂಗ್' ಪರಿಕಲ್ಪನೆಯನ್ನು ಯಶಸ್ವಿಯಾಗಿ ಕಾರ್ಯರೂಪಕ್ಕಿಳಿಸಿದ ಪುಣೆ ಮೂಲದ ವಿವೇಕ್ ಗುರವ್, ಸಮುದಾಯದಲ್ಲಿ ಬದಲಾವಣೆಗೆ ಕಾರಣರಾಗಿರುವ ಪರಿಸರ ಹೋರಾಟಗಾರ.

ಪುಣೆಯಲ್ಲಿ ಯಶಸ್ವಿಯಾಗಿ ನಡೆಸುತ್ತಿರುವ ಪ್ಲಾಗಿಂಗ್ ಅಭಿಯಾನವನ್ನು ಬ್ರಿಟನ್‌ನ ಬ್ರಿಸ್ಟಲ್ ನಗರದಲ್ಲೂ ಕೈಗೊಂಡು ಅಲ್ಲಿನ ಪ್ರಧಾನಿಯ ಮೆಚ್ಚುಗೆ ಗಳಿಸಿದ್ದಾರೆ. ಜಾಗಿಂಗ್ ವೇಳೆ ಕೈಯಲ್ಲಿ ಚೀಲ ಹಿಡಿದುಕೊಂಡು ಪ್ಲಾಸ್ಟಿಕ್, ಇತರ ತ್ಯಾಜ್ಯ ಸಂಗ್ರಹಿಸುವುದೇ 'ಪ್ಲಾಗಿಂಗ್'. ಸ್ವಚ್ಛತಾ ಕೆಲಸವನ್ನು ಇನ್ನಷ್ಟು ಆಸಕ್ತಿ, ಮನರಂಜನೆಯೊಂದಿಗೆ ಮಾಡುವ ಪರಿಕಲ್ಪನೆ ಇದು.

'ಪುಣೆ ಪ್ಲಾಗರ್ಸ್' ಹೆಸರಿನ ಸ್ವಯಂಸೇವಕರ ಬಳಗ ಕಟ್ಟಿಕೊಂಡು, ಅಭಿಯಾನ ನಡೆಸುತ್ತಿರುವ ವಿವೇಕ್, 'ಪರಿಸರ ನೀತಿ ಮತ್ತು ನಿರ್ವಹಣೆ' ವಿಷಯದಲ್ಲಿ ಎಂಎಸ್ಸಿ ಮಾಡಲು 2021ರ ಸೆಪ್ಟೆಂಬರ್‌ನಲ್ಲಿ ಬ್ರಿಟನ್‌ನ ಬ್ರಿಸ್ಟಲ್ ನಗರದಲ್ಲಿರುವ ಬ್ರಿಸ್ಟಲ್ ವಿಶ್ವವಿದ್ಯಾಲಯ ಸೇರಿದ್ದರು.

ಪುಣೆಯಲ್ಲಿ ನಡೆಸುತ್ತಿರುವ ಪ್ಲಾಗಿಂಗ್ ಅಭಿಯಾನವನ್ನು ಅಲ್ಲೂ ಆರಂಭಿಸಿದರು. ಬ್ರಿಸ್ಟಲ್ ವಿ.ವಿ.ಯಲ್ಲಿ ವ್ಯಾಸಂಗ ಆರಂಭಿಸಿದ ಬೆನ್ನಲ್ಲೇ 'ಬ್ರಿಸ್ಟಲ್ ಪ್ಲಾಗರ್ಸ್' ಹೆಸರಿನ ತಂಡ ಕಟ್ಟಿಕೊಂಡು ನಗರದ ರಸ್ತೆ, ಬೀದಿ ಬದಿಗಳಲ್ಲಿ ಸ್ವಚ್ಛತೆಗೆ ಮುಂದಾದರು. 12 ರಾಷ್ಟ್ರಗಳ 140 ಸದಸ್ಯರನ್ನು ಬ್ರಿಸ್ಟಲ್ ಪ್ಲಾಗರ್ಸ್ ಹೊಂದಿದೆ. ಇದರಲ್ಲಿ ಅರ್ಧಕ್ಕೂ ಹೆಚ್ಚಿನವರು ಭಾರತೀಯರು. ಈ ತಂಡ ಬ್ರಿಸ್ಟಲ್‌ನಲ್ಲಿ ಈಗಾಗಲೇ 400 ಮೈಲುಗಳಷ್ಟು ದೂರ ಪ್ಲಾಗಿಂಗ್ ಮಾಡಿದ್ದು, 3,750 ಕೆ.ಜಿ ತ್ಯಾಜ್ಯ ಸಂಗ್ರಹಿಸಿದೆ.

ವಿವೇಕ್ ಅವರ ಪರಿಸರ ಕಾಳಜಿಯನ್ನು ಗುರುತಿಸಿದ ಬ್ರಿಟನ್ ಪ್ರಧಾನಿ, ಇತ್ತೀಚೆಗೆ 'ಪಾಯಿಂಟ್ಸ್ ಆಫ್ ಲೈಟ್ಸ್' ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಸಮುದಾಯದಲ್ಲಿ ಬದಲಾವಣೆಗೆ ಕಾರಣರಾದ, 'ಸ್ಫೂರ್ತಿದಾಯಕ ಸ್ವಯಂಸೇವಕ'ರಿಗೆ ನೀಡುವ ಪ್ರಶಸ್ತಿ ಇದು. 2014ರ ಏಪ್ರಿಲ್‌ನಲ್ಲಿ ಆರಂಭಿಸಲಾದ ಈ ಗೌರವಕ್ಕೆ ಭಾಜನರಾದವರಲ್ಲಿ ವಿವೇಕ್ 1,967ನೆಯವರು.

ಬ್ರಿಟನ್ ಪ್ರಧಾನಿಯ ಪ್ರಶಂಸೆಯ ನುಡಿಗಳು ಮತ್ತು ಸಹಿ ಒಳಗೊಂಡಿರುವ ಪತ್ರ ಹಾಗೂ ಸರ್ಟಿಫಿಕೇಟ್ ಒಳಗೊಂಡಿರುತ್ತದೆ. ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುವ ಬ್ರಿಟನ್‌ನ ಪ್ರಜೆಗಳಿಗೆ ಈ ಪ್ರಶಸ್ತಿಯನ್ನು ಸಾಮಾನ್ಯವಾಗಿ ನೀಡಲಾಗುತ್ತದೆ. ಈ ಗೌರವ ಪಡೆದ ವಿದೇಶಿಯರ ಸಂಖ್ಯೆ ವಿರಳ. ಅದರಲ್ಲೂ ಭಾರತದ ವಿದ್ಯಾರ್ಥಿಯೊಬ್ಬ ಪ್ರಶಸ್ತಿ ಪಡೆದದ್ದು ಇದೇ ಮೊದಲು.

9B ಪುಟಕ್ಕೆ...

ದ್ವೇಷಿಸುವುದು ಸುಲಭವಲ್ಲ!

ನಡಹಳ್ಳಿ ವಸಂತ್

'ದ್ವೇಷಿಸುವುದು ಪ್ರೀತಿಸುವುದಕ್ಕಿಂತ ಸುಲಭ' ಎಂದು ಚೀನಾದ ತತ್ವಶಾಸ್ತ್ರಜ್ಞ ಕನ್‌ಫ್ಯೂಶಿಯಸ್ ಹೇಳಿದ್ದ. ಇದು ಹೊರನೋಟದ ಸತ್ಯ ಮಾತ್ರ. ದ್ವೇಷಿಸುವವರು ಎದುರಿಸಬೇಕಾದ ಸವಾಲುಗಳ ಅರಿವಿದ್ದರೆ ಅವನು ಈ ಮಾತನ್ನು ಹೇಳುವುದು ಸಾಧ್ಯವಿರಲಿಲ್ಲ. ದ್ವೇಷಿಸುವವರ ಕಷ್ಟಗಳನ್ನು ಕೇಳಿದ ಮೇಲೆ ನೀವೂ ನನ್ನೊಡನೆ ತಲೆದೂಗುತ್ತೀರಿ.

ದ್ವೇಷಿಸುವುದಕ್ಕೆ ಮತ್ತು ದ್ವೇಷವನ್ನು ಕಳೆದುಕೊಳ್ಳದೆ ಉಳಿಸಿಕೊಳ್ಳುವುದಕ್ಕೆ ದೇಹ ನಿರಂತರವಾಗಿ ಒತ್ತಡದಲ್ಲಿ ಇರಬೇಕಾಗುತ್ತದೆ. ಈ ಒತ್ತಡವನ್ನು ಮಿದುಳು ಅಪಾಯವೆಂದು ಗ್ರಹಿಸಿ ಸೂಕ್ತ ರಕ್ಷಣೆ ಒದಗಿಸಲು ಅನುವಾಗುವಂತೆ ಅಡ್ರಿನಾಲಿನ್ ಮತ್ತು ಕಾರ್ಟಿಸೋಲ್ ಎನ್ನುವ ಒತ್ತಡದ ಹಾರ್ಮೋನ್‌ಗಳನ್ನು ಬಿಡುಗಡೆ ಮಾಡುತ್ತದೆ. ಆಗೊಮ್ಮೆ ಈಗೊಮ್ಮೆ ಬರುವ ಅಪಾಯಗಳಿಂದ ರಕ್ಷಿಸಿಕೊಳ್ಳಲು ಈ ಹಾರ್ಮೋನ್‌ಗಳು ಅನಿವಾರ್ಯ. ಆದರೆ ದ್ವೇಷವನ್ನೇ ಉಸಿರಾಗಿಸಿಕೊಂಡವರ ದೇಹದಲ್ಲಿ ಇವು ನಿರಂತರವಾಗಿ ಬಿಡುಗಡೆಯಾಗುತ್ತಲೇ ಇದ್ದಾಗ ರೋಗನಿರೋಧಕ ಶಕ್ತಿ ಕುಗ್ಗುವುದಲ್ಲದೆ ನೆನಪಿನ ಶಕ್ತಿಯ ಮೇಲೆ ದುಷ್ಪರಿಣಾಮ ಆಗುತ್ತದೆ. ದೇಹದಲ್ಲಿ ಹೆಚ್ಚುವ ಕಾರ್ಟಿಸೋಲ್‌ನ ಮಟ್ಟ ಖಿನ್ನತೆಗೂ ಕಾರಣವಾಗುತ್ತದೆ.

ದ್ವೇಷ ಮತ್ತು ಕೋಪ ತಾತ್ಕಾಲಿಕವಾಗಿ ದೇಹಕ್ಕೆ ಹೆಚ್ಚಿನ ಶಕ್ತಿ ನೀಡುತ್ತವೆ. ಆದರೆ, ಮುಂದಿನ ತಲೆಮಾರುಗಳಿಗೆ ಉಳಿಸಬೇಕಾದ ಪ್ರಾಕೃತಿಕ ಶಕ್ತಿ ಮೂಲಗಳನ್ನು ನಾವು ಈಗಲೇ ಉಪಯೋಗಿಸುತ್ತಿರುವಂತೆ ಜೀವನದ ಮುಂದಿನ ದಿನಗಳಿಗೆ ಬೇಕಾದ ಶಕ್ತಿಯನ್ನು ದೇಹ ಇಂದೇ ವ್ಯಯಿಸುತ್ತದೆ. ಹೀಗೆ ನಮ್ಮ ಆರೋಗ್ಯವನ್ನೂ ಬಲಿಕೊಟ್ಟು ದ್ವೇಷವನ್ನು ಉಳಿಸಿಕೊಳ್ಳುವುದು ಒಂದು ರೀತಿಯ ತ್ಯಾಗವೇ ಅಲ್ಲವೇ? ಹಾಗಾಗಿ ಧರ್ಮಕ್ಕಾಗಿಯೋ ದೇಶಕ್ಕಾಗಿಯೋ ಉಳಿಸಿಕೊಳ್ಳಬೇಕಾದ ದ್ವೇಷ ಮೌಲ್ಯವಾಗಿ ಕಾಣಿಸುವುದು ಸಹಜವೇ.

ದ್ವೇಷಿಸುವುದಕ್ಕೆ ಪ್ರಾರಂಭಿಸಿದ ಮೇಲೆ ನಿಧಾನವಾಗಿ ಅದು ರುಚಿಸತೊಡಗುತ್ತದೆ. ಆ ರುಚಿಯನ್ನು ಕಳೆದುಕೊಳ್ಳಲು ಮನಸ್ಸು ಒಪ್ಪುವುದೇ ಇಲ್ಲ. ಹಾಗಾಗಿ ದ್ವೇಷವನ್ನು ಉಳಿಸಿಕೊಳ್ಳಲೇಬೇಕಾಗುತ್ತದೆ. ನಿರಂತರವಾಗಿ ಮಾನವ ಸಹಜ ಪ್ರೀತಿ ಹೊರಹೊಮ್ಮದಂತೆ ಅವರು ಎಚ್ಚರವನ್ನೂ ವಹಿಸಬೇಕಾಗುತ್ತದೆ. ಆದರೆ, ನಮ್ಮ ವಿರೋಧಿ ನಮ್ಮನ್ನು ದ್ವೇಷಿಸುವುದನ್ನು ನಿಲ್ಲಿಸಿಬಿಟ್ಟರೆ? ದಿಢೀರನೆ ಎದ್ದುಬಂದು ಪ್ರಧಾನಿಯನ್ನು ಅಪ್ಪಿಕೊಂಡ ವಿರೋಧ ಪಕ್ಷದ ನಾಯಕನಂತೆ ವರ್ತಿಸಿಬಿಟ್ಟರೆ? ಇಂತಹ 'ಅನಾಹುತ'ಗಳು ಆಗದಂತೆ ಎಚ್ಚರವಹಿಸಬೇಕು. ಅದಕ್ಕೆ ಸಾಕಷ್ಟು ಎಚ್ಚರಿಕೆ, ಯೋಜನೆ, ಸಿದ್ಧತೆ ಎಲ್ಲವೂ ಬೇಕಾಗುತ್ತದೆ! ಇದೆಲ್ಲಾ ಸುಲಭದ ಕೆಲಸ ಅಂತ ದಡ್ಡರು ಮಾತ್ರ ಅಂದುಕೊಳ್ಳಲು ಸಾಧ್ಯ.

9C ಪುಟಕ್ಕೆ...

> ದ್ವೇಷಿಸುವುದಕ್ಕೆ ಪ್ರಾರಂಭಿಸಿದ ಮೇಲೆ ನಿಧಾನವಾಗಿ ಅದು ರುಚಿಸತೊಡಗುತ್ತದೆ. ಆ ರುಚಿಯನ್ನು ಕಳೆದುಕೊಳ್ಳಲು ಮನಸ್ಸು ಒಪ್ಪುವುದೇ ಇಲ್ಲ. ಆದರೆ, ನಮ್ಮ ವಿರೋಧಿ ನಮ್ಮನ್ನು ದ್ವೇಷಿಸುವುದನ್ನು ನಿಲ್ಲಿಸಿಬಿಟ್ಟರೆ? ದ್ವೇಷಾಲಜಿ ಕುರಿತು ಹೀಗೊಂದು ಮೀಮಾಂಸೆ

ಅಭಿಪ್ರಾಯ ಭೇದವಿಟ್ಟುಕೊಂಡೂ ಸೌಹಾರ್ದದಿಂದ ಬದುಕುವ ಕನಸನ್ನು ಕಾಣುತ್ತಿದ್ದ ರಾಜಶೇಖರ, ಜೀವಹಿಂಸೆಯ ವಿರುದ್ಧ ಪ್ರತಿಭಟಿಸಲು ಅಗತ್ಯವಾದ ಪ್ರತಿರೋಧಕ ಶಕ್ತಿಯನ್ನು ಜಗತ್ತಿನ ಸಾಂಸ್ಕೃತಿಕ ಸಂವಾದಗಳಲ್ಲಿ ಶೋಧಿಸಿ ಕೊಟ್ಟವರು. ಅವರ ನಿರ್ಗಮನದಿಂದ ನಮ್ಮ ಕಾಲದ ಜಾಗೃತ ಪ್ರಜ್ಞೆಯ ವಿಮರ್ಶಾ ವಿವೇಕ ಬಡವಾಗಿರುವುದು ಸುಳ್ಳಲ್ಲ

ಮಾಗಿದ ಪ್ರಜ್ಞೆಯ ಮುಗ್ಧ ಸಾಧಕ

ಶ್ರೀಧರ ಬಳಗಾರ

ನೆನಪು

ಅಂತರಾಳದಲ್ಲಿ ಮಗುವಿನ ಮುಗ್ಧತೆಯನ್ನು ಎಂದೂ ಕಳೆದುಕೊಂಡಿರದ ಜಿ. ರಾಜಶೇಖರ ನಮ್ಮ ಕಾಲದ ಸಂಕೀರ್ಣ ಸಂಕಟಗಳಿಗೆ ಕೋಪ ಮತ್ತು ಅನುಕಂಪದಿಂದ ಸ್ಪಂದಿಸುತ್ತಿದ್ದ ಮಾಗಿದ ಪ್ರಜ್ಞೆಯ ಪ್ರತೀಕವಾಗಿದ್ದರು. ಮುಗ್ಧತೆ ಅವರ ಸಹಜ ಸ್ವಭಾವವಾಗಿದ್ದರಿಂದ ತೋರುಗಾಣಿಕೆಯ ಅಪ್ರಾಮಾಣಿಕರ ಬಗ್ಗೆ, ರಾಜಕೀಯ ರಾಜೀತನದ ಲಾಭಕೋರರ ಬಗ್ಗೆ ಅವರ ಪ್ರತಿರೋಧವಿತ್ತು. ಒಳ್ಳೆಯತನ, ಬೌದ್ಧಿಕ ನಿಷ್ಠುರತೆ ಮುಖವಾಡವಾಗಿರುವ ಪ್ರಪಂಚದಲ್ಲಿ ಅವರು ಪ್ರಬುದ್ಧ ಓದನ್ನು ಅನುಭವದ ಕುಲುಮೆಯಲ್ಲಿ ಪರೀಕ್ಷಿಸಿಯೇ ಸತ್ಯವನ್ನು ನಂಬಿದವರು.

ನಂಬಿದ ಸಿದ್ಧಾಂತಕ್ಕೆ ಅವರು ಗುಲಾಮರಾದವರಲ್ಲ. ಸ್ವವಿಮರ್ಶೆಯಿಲ್ಲದೆ ಯಾವುದನ್ನೂ ಅವರು ಸಮರ್ಥಿಸಲು ಹೋದವರಲ್ಲ. ನಿರಂತರ ಬದಲಾವಣೆಗಳಿಗೆ ಸೂಕ್ಷ್ಮವಾಗಿ ಸ್ಪಂದಿಸುತ್ತಲೇ ತನ್ನ ಲೋಕಗ್ರಹಿಕೆಯಲ್ಲಿ ತಿದ್ದುಪಡಿ ಮಾಡಿಕೊಳ್ಳುತ್ತಲಿದ್ದರೂ ಜೀವಪರವಾದುದನ್ನು ಬಿಟ್ಟವರಲ್ಲ. ತಿರುಚಬಹುದಾದ ಸಾಕ್ಷಿ ಮತ್ತು ಹಟವಾದಿ ತರ್ಕಗಳನ್ನು ಮೀರಿದ ಮಾನವೀಯತೆ ಅವರ ಜೀವನ ದರ್ಶನವಾಗಿತ್ತು. ಪ್ರಬುದ್ಧತೆಯ ನಡುವೆ ಮುಗ್ಧತೆಯನ್ನು ಕಾಪಾಡಿಕೊಂಡಿದ್ದ ಅವರ ಪಾರದರ್ಶಕ ಒಳಗಣ್ಣಿಗೆ ಯಾರಿಗೂ ಕಾಣದ ಸತ್ಯ ಗೋಚರಿಸುತ್ತಿತ್ತು.

ಕನ್ನಡದ ನೆಲದಲ್ಲಿ ಜೀವಹಿಂಸೆಯ ಮೀಮಾಂಸೆಯನ್ನು ಅವರಷ್ಟು ತೀವ್ರ ಪ್ರತಿಭಟನೆಯ ರಿಸ್ಕಿನಲ್ಲಿ ಕಥಿಸಿದ ಮತ್ತೊಬ್ಬನನ್ನು ನಾನು ಕಂಡಿಲ್ಲ. ಭಾರತದ ಬಹುತ್ವದ ಬೇರುಗಳಿಗೆ ಹಿಂಸೆಯ ವಿರಾಟ ವಿಕಾರಗಳ ಸ್ವರೂಪವನ್ನೂ ಅವುಗಳಿಂದ ಬಿಡುಗಡೆ ಹೊಂದಲು ಸಾಧ್ಯವಿರುವ ಮಾರ್ಗೋಪಾಯಗಳನ್ನೂ ದಣಿವಿರದ ಬದ್ಧತೆಯಿಂದ ಚರ್ಚಿಸಿದ್ದ ಅವರದ್ದೊಂದು ಸೋಷಿಯಲ್ ಆಕ್ಟಿವಿಸ್ಟ್ ಜೀವಹಿಂಸೆಯ ಹಲವು ರೂಪಗಳನ್ನು ಕೋಮುವಾದ, ಪರಿಸರ ನಾಶ, ಪ್ರಭುತ್ವದ ಕ್ರೌರ್ಯ, ಯುದ್ಧ ಪಿಪಾಸೆ, ವಿಮರ್ಶೆಯ ವಿವೇಕವನ್ನು ಕಳೆದುಕೊಂಡ ಸಿದ್ಧಾಂತಗಳ ಹಟಮಾರಿತನ, ಆಧುನಿಕತೆಯ ವಿಕಾರಗಳನ್ನು ಸಾಹಿತ್ಯಕ ಪಠ್ಯ ಮತ್ತು ಸಾಂಸ್ಕೃತಿಕ ಬಿಕ್ಕಟ್ಟುಗಳ ಸಂದರ್ಭದಲ್ಲಿ ತಮ್ಮ ಖಚಿತವಾದ ನಿಲುವನ್ನು ವ್ಯಕ್ತಪಡಿಸಲು ಯಾವೊತ್ತೂ ಅವರು ಹಿಂಜರಿದವರಲ್ಲ.

ನಂಬಿದ್ದ ಮಾರ್ಕ್ಸ್‌ವಾದವನ್ನು ತಾತ್ವಿಕ ಅಮೂರ್ತ ಆಶಯದಲ್ಲಿ ಕಂದಾಚಾರಿಯಾಗಿ ಕಣ್ಮುಚ್ಚಿ ಅನುಸರಿಸದೆ ಅದರ ವಾಸ್ತವದಲ್ಲಿ ಪ್ರಕಟವಾದ ಅದರ ಹಿಂಸಾಕಾಂಡವನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸಿದರು. ಗಾಂಧಿ ವಿಚಾರಧಾರೆಯತ್ತ ವಾಲುತ್ತಿದ್ದದ್ದು ಅವರಿಗೆ ಮುಜುಗರದ ಪ್ರಶ್ನೆಯಾಗಲಿಲ್ಲ. ಒಂದು ಸಮುದಾಯದ ವ್ಯಕ್ತಿ ಮಾಡಿದ ತಪ್ಪಿಗಾಗಿ ಅವನ ಜಾತಿಯನ್ನೂ ಧರ್ಮವನ್ನೂ ಅಮಾನುಷವಾಗಿ ಆಕ್ರಮಿಸುವುದನ್ನು ಖಂಡಿಸಲು ಮರೆಯಲಿಲ್ಲ. ಅಧಿಕಾರ ಹಿಡಿಯಲು ಇತಿಹಾಸವನ್ನೂ ಧರ್ಮವನ್ನೂ ತಮ್ಮ ರಾಜಕೀಯ ಸಂಘಟನೆಗೆ ಮಾತ್ರ ಉಪಯೋಗಿಸಿಕೊಳ್ಳುವ ಶಕ್ತಿಗಳ ಬಗ್ಗೆ ಎಚ್ಚರಿಸುವ ಹೊಣೆಗಾರಿಕೆಯಿಂದ ನುಣುಚಿಕೊಂಡವರಲ್ಲ. ಸಾಹಿತ್ಯ ಕೃತಿಯೊಂದರ ಜೀವನಾಡಿಯ ಮಿಡಿತವನ್ನು ಸ್ಪಷ್ಟವಾಗಿ ಆಲಿಸಬಲ್ಲ, ವ್ಯಕ್ತಿಯ ಗುಣಾವಗುಣಗಳನ್ನು ವಿಶ್ಲೇಷಿಸಬಲ್ಲ ಕನ್ನಡದ ಕೆಲವೇ ಚಿಂತಕರಲ್ಲಿ ಅವರೂ ಒಬ್ಬರು.

ರಾಜಶೇಖರ ನನಗೆ ಪರಿಚಯವಾದದ್ದು ಎಂ. ರಾಮಮೋಹನ ಅವರ ಮೂಲಕ. ಅವರನ್ನು ಮೊದಲು ನಾನು ನೋಡಿದ್ದು ಉಡುಪಿಯ ಎಲ್.ಐ.ಸಿ. ಆಫೀಸಿನಲ್ಲಿ. ಉಡುಪಿಯನ್ನು ಹಾದು ಹೋಗುವಾಗ ಅವರನ್ನು ಭೇಟಿ ಮಾಡದೆ ನಾನು ಮುಂದೆ ಸಾಗುತ್ತಿರಲಿಲ್ಲ. ನಾವು ಮೂವರು ಕ್ಯಾಂಟೀನಿನಲ್ಲಿ ಕೂತು ಚಹಾ ಹೀರುತ್ತ ಸಾಹಿತ್ಯ ಸಲ್ಲಾಪ ನಡೆಸಿದ್ದು ಅದೆಷ್ಟು ಸಲವೋ. 'ನಿಮ್ಮ ಕಥಾ ಸಂಕಲನಕ್ಕೆ ಮುನ್ನುಡಿ ಮತ್ತು ಕಾದಂಬರಿಗೆ ಬೆನ್ನುಡಿ ಬರೆದ ನಾನು ಒಬ್ಬ ಲೇಖಕನ ಬಗ್ಗೆ ಹೀಗೆ ಎರಡು ಸಲ ಬರೆಯುವುದಿಲ್ಲ ಎಂಬ ನನ್ನ ನಿಯಮವನ್ನು ನಾನೇ ಮುರಿಯುವಂತಾಯ್ತು' ಎಂದು ನಕ್ಕಿದ್ದರು.

ಸಾದಾ ಉಡುಪನ್ನು ಧರಿಸುತ್ತಿದ್ದ ಅವರು ಯಾವ ಕುರ್ಚಿಯ ಮೇಲೆ ಕೂತು 'ನೌಕರಿ'ಯನ್ನು ಆರಂಭಿಸಿದ್ದರೋ ಅದೇ ಸದಾ ಮರದ ಕುರ್ಚಿಯಲ್ಲಿ ನಿವೃತ್ತರಾಗಿದ್ದರು! ಪದೋನ್ನತಿಯನ್ನು ನಿರಾಕರಿಸಿ, ವರ್ಗಾವಣೆಯಿಲ್ಲದ ಸೇವೆ ಸಲ್ಲಿಸಿದ ಅವರು ಪಡೆಯುತ್ತಿದ್ದ ಸಂಬಳಕ್ಕೆ ಸಂತೃಪ್ತರಾಗಿ ಸಂತನಂತಿದ್ದರು. ಎದುರಿಗೆ ಸಿಕ್ಕವರನ್ನು ನೋಡದೇ ಮುಂದೆ ನಡೆಯುತ್ತಿದ್ದ, ಮುಖದಲ್ಲಿ ನಗುವೂ ದುಬಾರಿಯಾದ ಅವರನ್ನು ಹಲವರು ಅಹಂಕಾರಿ ಎಂದು ಅಪಾರ್ಥ ಮಾಡಿಕೊಂಡದ್ದುಂಟು. ಸಭ್ಯತೆಯನ್ನು ಅಭಿನಯಿಸಿ ಗೊತ್ತಿರದ ಅವರ ವರ್ತನೆ ಒರಟಾಗಿ ಕಂಡದ್ದುಂಟು. ಚಿತ್ರಕಲೆಗೆ ಪ್ರಬಂಧ ಬರೆದುಕೊಟ್ಟು, ಬೀದಿಯ ನಾಯಿಗೆ ಬಿಸ್ಕತ್ ಹಂಚಲು ಮರೆಯದ ಅವರ ಸಾತ್ವಿಕತೆ, ಔಪಚಾರಿಕ ಸಮಾರಂಭದಲ್ಲಿ ವಿಲಕ್ಷಣವಾಗಿ ಕಂಡರೂ ಅಚ್ಚರಿಯಿಲ್ಲ. ಉಡುಪಿ, ಹೊನ್ನಾವರ, ಪುತ್ತೂರು ಕಾರ್ಯಕ್ರಮಗಳಲ್ಲಿ ಅವರೊಟ್ಟಿಗೆ ಕಳೆದ ಕ್ಷಣಗಳು ನನ್ನೊಳಗಿನ ನಕ್ಷತ್ರಗಳಾಗಿ ಮಿನುಗುತ್ತಿವೆ.

ಗೋಮಾಂಸದ ಕುರಿತಾದ ಮತೀಯ ಗಲಾಟೆಯ ಸಂದರ್ಭದಲ್ಲಿ ಆಹಾರ ಪದ್ಧತಿ ಮತ್ತು ಗೋವಧೆಯ ವಾದವಿವಾದ ನಡೆಯುತ್ತಿದ್ದಾಗ ರಾಜಶೇಖರ ತಮ್ಮ ನಿಲುವನ್ನು ಪ್ರಕಟಪಡಿಸಲೆಂದು ಅವರನ್ನು ಸಂದರ್ಶಿಸಿದವರು ಕೇಳಿದರು. ತನ್ನ ತಾಯಿ ಹಸುವನ್ನು ಕಟ್ಟಿ, ಅದರ ಹಾಲನ್ನು ಮಾರಿ ಬಂದ ಹಣದಿಂದ ನಮ್ಮನ್ನು ಬೆಳೆಸಿದಳೆಂದೂ ಹಸುವಿನಿಂದ ತಮ್ಮನ್ನು ಕಾಪಾಡಿದ ಹಸುವನ್ನು ನಿರ್ದಯವಾಗಿ ಕಾಣಲು ಹೇಗೆ ಸಾಧ್ಯ ಎಂದೂ ಉತ್ತರಿಸಿದ್ದರು. ಅನ್ನಕ್ಕೆ ಕಾರಣವಾದ ಪ್ರಾಣಿಯನ್ನು ತರ್ಕದ ಶಿಲುಬೆಗೇರಿಸಲು ತನ್ನ ಆತ್ಮಸಾಕ್ಷಿ ಒಪ್ಪುತ್ತಿಲ್ಲ ಎಂದರು.

ರಾಜಶೇಖರ ಮುಸ್ಲಿಮರ ಪರ ಮೃದು ಧೋರಣೆಯನ್ನು ಇಟ್ಟುಕೊಂಡೇ ಬರೆಯುತ್ತಾರೆ ಎಂಬ ಮಾತಿದೆ. ಅದಕ್ಕೆ ಅವರ ಪ್ರತಿಕ್ರಿಯೆ ಹೀಗಿದೆ: 'ಹಿಂದೂಗಳ ಹಾಗೆಯೇ ಮುಸ್ಲಿಮರ ನಡುವೆಯೂ ಕೋಮುವಾದದ ಸಂಘಟನೆಗಳು ಕೆಲಸ ಮಾಡುತ್ತಿರುವುದನ್ನು ನಾನು ಅಲ್ಲಗಳೆಯುತ್ತಿಲ್ಲ. ಅವು ಹಿಂದೂ ಕೋಮುವಾದಿಗಳಂತೆಯೇ ಅಪಾಯಕಾರಿ ಎಂದೂ ತಿಳಿದಿದ್ದೇನೆ. ಆದರೆ ಭಾರತದಲ್ಲಿ ಇಂದು ಹಿಂದೂ ಕೋಮುವಾದವೇ ಸ್ಪಷ್ಟವಾಗಿ ಮೇಲುಗೈ ಸಾಧಿಸಿದೆ. ಸದ್ಯದಲ್ಲಿ ಅದು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೂ ಆಶ್ಚರ್ಯವಿಲ್ಲ. ಆದರೆ ಮುಸ್ಲಿಮ್ ಕೋಮುವಾದ ಈ ದೇಶದಲ್ಲಿ ಎಂದೂ ಅಧಿಕಾರದ ಹತ್ತಿರ ಕೂಡ ಬರುವುದು ಸಾಧ್ಯವಿಲ್ಲ. ಅದೂ ಅಲ್ಲದೆ ಸ್ವತಃ ಒಬ್ಬ ಹಿಂದೂವಾಗಿ, ನಾನು ಹೆಚ್ಚು ಕಾಳಜಿಯಿಂದ ಯೋಚಿಸುವುದು, ನನ್ನ ಧರ್ಮದ ಅನುಯಾಯಿಗಳಲ್ಲಿ ಬೆಳೆಯುತ್ತಿರುವ ಕೋಮುವಾದದ ಬಗ್ಗೆ...' (ಜಿ. ರಾಜಶೇಖರ, ಬಹುವಚನ ಭಾರತ; 'ಅಭಿನವ' ಬೆಂಗಳೂರು).

ಎರಡು-ಮೂರು ವರ್ಷ ಹಿಂದಿನ ನೆನಪು. ರಾಜಶೇಖರರ ಆರೋಗ್ಯ ಹದಗೆಟ್ಟು ಆಸ್ಪತ್ರೆಗೆ ದಾಖಲಾದಾಗ ಅವರನ್ನು ಭೇಟಿ ಮಾಡಿದೆ. ರಕ್ತ ಹೆಪ್ಪುಗಟ್ಟಿದ ಮಿದುಳಿನ ಭಾಗವನ್ನು ಆಪರೇಷನ್ ಮಾಡಿದ್ದರು. ಗುರುತು ಸಿಗದಷ್ಟು ಇಳಿದು ಹೋಗಿದ್ದ ಅವರು ಅನಾರೋಗ್ಯದಿಂದ ಬೇಗನೆ ಚೇತರಿಸಿಕೊಂಡು ಮನೆಗೆ ವಾಪಸಾಗುತ್ತೇನೆ ಎಂದು ತಮ್ಮನ್ನು ತಾವೇ ನಂಬಿಸಿಕೊಳ್ಳುವಂತೆ ಆತ್ಮವಿಶ್ವಾಸದ ಮಾತಾಡಿದರು; ಆಸ್ಪತ್ರೆಯ ಹಾಸಿಗೆ ಮೇಲೆ ಕೂತು ಏನೋ ಭಾಷಾಂತರಿಸಲು ಯತ್ನಿಸುತ್ತಿದ್ದರು.

ಅನಾರೋಗ್ಯದಿಂದ ನರಳುತ್ತ ರಚಿಸಿದ ಗಂಗಾಧರ ಚಿತ್ತಾಲರ ಕೊನೆಯ ಪದ್ಯಗಳನ್ನು ನೆನಪಿಸಿಕೊಂಡರು. ಚಿತ್ತಾಲರು ಒಂದು ಪದ್ಯದಲ್ಲಿ ಬರೆದಿದ್ದ 'ಜೀವಕ್ಕೆ ಬಿಗಿದ ಘೋರಪಂಜರವಾದ ದೇಹ' ಎಂಬ ಸಾಲನ್ನು ತಮಗೆ ಅನ್ವಯಿಸಿಕೊಂಡರು. ನೋವಿನ ಅರ್ಥವೇನು ಎನ್ನುವ ಚಿತ್ತಾಲರ ಪ್ರಶ್ನೆ ಅವರನ್ನೂ ಕಾಡಿತ್ತು. 'ಈ ಸೃಷ್ಟಿಗೆ ತಾನು ಪರಕೀಯ; ದೇವರಿಲ್ಲವಾದ್ದರಿಂದ ತನ್ನ ಬದುಕು ಮತ್ತು ನೋವು ಕೂಡ ಅರ್ಥಹೀನ' ಎಂಬ ಅಸ್ತಿತ್ವವಾದಿ ತಾತ್ವಿಕತೆಯೇ ಚಿತ್ತಾಲರ ಕೊನೆಯ ಪದ್ಯಗಳ ಮೂಲ ಸತ್ವವಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು. ತಾನು ಅನುಭವಿಸಿದ ಕಾಯಿಲೆಯಿಂದ ದೇಹದ ಸತ್ಯ ಮತ್ತಷ್ಟು ಮನದಟ್ಟಾಗಿದೆ ಎಂದಿದ್ದರು.

ಅಭಿಪ್ರಾಯ ಭೇದವಿಟ್ಟುಕೊಂಡೂ ಸೌಹಾರ್ದದಿಂದ ಬದುಕುವ ಕನಸನ್ನು ಕಾಣುತ್ತಿದ್ದ ರಾಜಶೇಖರ, ಜೀವಹಿಂಸೆಯ ಬಹುರೂಪತೆಯನ್ನು ಪ್ರತಿಭಟಿಸಲು ಅಗತ್ಯವಾದ ಪ್ರತಿರೋಧಕ ಶಕ್ತಿಯನ್ನು ಜಗತ್ತಿನ ಸಾಂಸ್ಕೃತಿಕ ಸಂವಾದಗಳಲ್ಲಿ ಶೋಧಿಸಿ ಸ್ವಸ್ಥಸಮಾಜ ಕಟ್ಟಲು ಮಂಡಿಸಿದರು. ವೈಯಕ್ತಿಕ ನಂಬಿಕೆ ವಿರೋಧವೆನಿಸಿದರೂ ಪರರ ನಂಬಿಕೆಯನ್ನು ಗೌರವಿಸುವ ಮಾನವೀಯತೆಯ ವಿಷಯದಲ್ಲಿ ಶಿವರಾಮ ಕಾರಂತರ ಪರಂಪರೆಗೆ ಸೇರಿದವರು ಅವರು. ರಾಜಶೇಖರರ ನಿರ್ಗಮನದಿಂದ ನಮ್ಮ ಕಾಲದಲ್ಲಿ ಜಾಗೃತ ಪ್ರಜ್ಞೆಯ ವಿಮರ್ಶಾ ವಿವೇಕದ ಕೊಂಡಿಯೊಂದು ಕಳಚಿಹೋದದ್ದು ನಿಜ.

ಹುಸೇನಿ ಬ್ರಾಹ್ಮಣರ ಮೇಲೆ ಹೊಸ ಬೆಳಕು

ಜಿ.ಎಂ. ಶಿರಹಟ್ಟಿ

ಒಳನೋಟ

ಮೂಲಭೂತವಾದ, ಆದರಲ್ಲೂ ಧರ್ಮಾಂಧತೆ, ಎಂತಹ ಔದಾರ್ಯವನ್ನಾದರೂ ನುಂಗಿಹಾಕಬಲ್ಲದು. ಐತಿಹಾಸಿಕ ಸತ್ಯಗಳನ್ನು ಸಹಜವಾಗಿ ಸಮಾಧಿ ಮಾಡಬಲ್ಲದು. ಧರ್ಮಾಂಧತೆಯ ಕ್ರೌರ್ಯದಲ್ಲಿ ಸಿಲುಕಿ ಚಲ್ಲಾಪಿಲ್ಲಿಯಾದ ಐತಿಹಾಸಿಕ ಸತ್ಯಗಳ ಪುಟಗಳನ್ನು ಒಂದೆಡೆ ಶೇಖರಿಸಿ ನೋಡಿದಾಗ ಆಶ್ಚರ್ಯವಾಗುತ್ತದೆ. ಅಂತಹುದೇ ಆಶ್ಚರ್ಯ ಹಾಗೂ ಸೋಜಿಗವನ್ನುಂಟು ಮಾಡುವುದು ಎನ್.ಕೆ. ಮೋಹನರಾಂ ಅವರ ಇತ್ತೀಚಿನ ಪುಸ್ತಕ 'ಹುಸೇನಿ ಬ್ರಾಹ್ಮಣರು'.

ಯಾರು ಈ ಬ್ರಾಹ್ಮಣರು? ಒಂದು ಇಸ್ಲಾಂ ಹೆಸರು, ಇನ್ನೊಂದು ಹಿಂದೂ ಹೆಸರು. ಇಸ್ಲಾಂ, ಹಿಂದೂ ಹೆಸರನ್ನು ಇಟ್ಟುಕೊಂಡ ಈ ಬ್ರಾಹ್ಮಣರು ಯಾರು, ಎಲ್ಲಿದ್ದಾರೆ ಎಂಬ ಕುತೂಹಲದಿಂದ ಮೋಹನರಾಂ ಅವರು ಹುಸೇನಿ ಬ್ರಾಹ್ಮಣರ ಕುರಿತ ಕಳೆದುಹೋಗಿದ್ದ ಚರಿತ್ರೆಯ ಪುಟಗಳನ್ನು ಹೆಕ್ಕಿ ಈ ಪುಸ್ತಕದಲ್ಲಿ ಕೊಟ್ಟಿದ್ದಾರೆ. ಇದೊಂದು ಧಾರ್ಮಿಕ ಉತ್ಖನನ.

ಪೈಗಂಬರರ ನಂತರದ ಅರಬರ ರಾಜಕೀಯ ವಿಪ್ಲವದಲ್ಲಿ ಅತ್ಯಂತ ದಾರುಣ ಪ್ರಸಂಗ ಎಂದರೆ ಪೈಗಂಬರರ ಮೊಮ್ಮಕ್ಕಳಾದ ಹಸನ್ ಹಾಗೂ ಹುಸೇನ್ ಹಾಗೂ ಅವರ ಕುಟುಂಬದ ಸದಸ್ಯರು ವಜೀದನೊಡನೆ ನಡೆದ ಯುದ್ಧದಲ್ಲಿ ಹತರಾದದ್ದು. ಅದು ನಡೆದದ್ದು ಕ್ರಿ.ಶ. 680ರಲ್ಲಿ, ಕರಬಲಾ ಎಂಬ ಈಗಿನ ಇರಾಕ್‌ನ ಪ್ರದೇಶದಲ್ಲಿ. ಬಹಳ ಕಡಿಮೆ ಸೈನಿಕರನ್ನು ಹೊಂದಿದ್ದ ಇಮಾಮ್ ಹುಸೇನರು ವಜೀದನ ಸೈನಿಕರಿಂದ ಹತರಾದದ್ದು ಇತಿಹಾಸ. ಅವರ ಅಳಿದುಳಿದ ಸೈನಿಕರನ್ನು ಹಾಗೂ ಛಿದ್ರಗೊಂಡ ಇಮಾಮ್ ಹುಸೇನರ ದೇಹವನ್ನು ರಕ್ಷಿಸಿದ ರಹಬದತ್ತ ಹಾಗೂ ಅವನ ಸಂಗಡಿಗರ ಕುರಿತ ವಿಸ್ತಾರವಾದ ಐತಿಹಾಸಿಕ ಘಟನೆಗಳನ್ನು ಈ ಕೃತಿಯಲ್ಲಿ ಎಳೆಎಳೆಯಾಗಿ ಬಿಡಿಸಿಡಲಾಗಿದೆ.

ಮೊಹೈಲ್ ಬ್ರಾಹ್ಮಣರೆಂದೇ ಹೆಸರಾಗಿದ್ದ ಬ್ರಾಹ್ಮಣ ಸಮುದಾಯದವರು ಕ್ರಿ.ಶ. 67ನೇ ಶತಮಾನದಲ್ಲಿ ಅರಬ್ ಪ್ರದೇಶದಲ್ಲಿ ನೆಲೆಸಿದ್ದರು. ಈ ಬ್ರಾಹ್ಮಣರು ಅಲ್ಲಿ ಹೋಗಿ ನೆಲೆಸಿದ್ದು ಹೇಗೆ ಎಂಬುದರ ವಿಸ್ತಾರವಾದ ಐತಿಹಾಸಿಕ ವಿವರಗಳನ್ನು ಮೋಹನರಾಂ ದಾಖಲೆಗಳೊಂದಿಗೆ ನೀಡುವುದು ಈ ಪುಸ್ತಕದ ವೈಶಿಷ್ಟ್ಯ. ಅವರು ಉಪಯೋಗಿಸುವ ಭಾಷೆಯೂ ಗಮನಾರ್ಹವಾದುದು.

ಇನ್ನೊಂದು ಕುತೂಹಲವನ್ನೂ ಈ ಪುಸ್ತಕ ನಮ್ಮ ಮುಂದೆ ಇಡುತ್ತದೆ. ಇಮಾಮ್ ಹುಸೇನರ ಪತ್ನಿಯರಲ್ಲಿ ಒಬ್ಬರು ಹಿಂದೂ ಆಗಿದ್ದರೆಂಬುದು ಹಾಗೂ ಮೊಹರಮ್ಮಿನ ಚರಮಗೀತೆ ರಚನಾಕಾರರಲ್ಲಿ ಗುಲಬರ್ಗಾದ ಬ್ರಾಹ್ಮಣರಾದ ರಾಮರಾವ್ ಎಂಬವರು ಒಬ್ಬರು, ಅವರ ಕಾವ್ಯನಾಮ ಶೈವ ಎಂದಾಗಿತ್ತು ಎಂಬ ಸಂಗತಿಯನ್ನು ಸಂಶೋಧನಾ ಕೌತುಕತೆಯಿಂದ ವಿವರಿಸಲಾಗಿದೆ.

ರಹಬದತ್ತ ಹಾಗೂ ಅವನ ಸಂಗಡಿಗರು ಕರಬಲಾ ಯುದ್ಧದಲ್ಲಿ ಇಮಾಮ್ ಹುಸೇನರ ಪರವಾಗಿ ಹೋರಾಡಿದ್ದರು. ಶಿರಚ್ಛೇದವಾಗಿ ಅನಾಥವಾಗಿ ಬಿದ್ದಿದ್ದ ಇಮಾಮ್ ಹುಸೇನರ ರುಂಡವನ್ನು ರಹಬದತ್ತ ಹಾಗೂ ಅವನ ಮಕ್ಕಳು ತೆಗೆದುಕೊಂಡು ಹೋಗಿದ್ದರು. ವಜೀದನ ಸೈನಿಕರು ಅವರನ್ನು ಬೆನ್ನಟ್ಟಿ ಹುಸೇನರ ತಲೆಗಾಗಿ ಒತ್ತಾಯಿಸಿದ್ದರು. ರಹಬದತ್ತ ಒಂದೊಂದಾಗಿ ತನ್ನ ಮಕ್ಕಳ ತಲೆ ಕಡಿದು ಇದು ಇಮಾಮ್ ಹುಸೇನರ ರುಂಡ ಎಂದು ಅವರ ಮುಂದೆ ಇಟ್ಟಾಗ ವಜೀದನ ಸೈನಿಕರು ಯಾವುದೋ ಒಂದು ರುಂಡವನ್ನು ಸುಲ್ತಾನನಿಗೆ ತೋರಿಸಲು ಒಯ್ದಿದ್ದರು. ಕೊನೆಗೆ ರಹಬದತ್ತ ಇಮಾಮ್ ಹುಸೇನರ ರುಂಡವನ್ನು ಧಮಸ್ಕಸದಲ್ಲಿ ವಿಧಿವಿಧಾನಗಳೊಂದಿಗೆ ಅಂತ್ಯಕ್ರಿಯೆ ನಡೆಸಿದ್ದ ಎಂಬ ಕುತೂಹಲಕಾರಿ ವಿವರಗಳನ್ನು ಘಟನೆಗಳನ್ನು ಮೋಹನರಾಂ ಅವರ ಈ ಪುಸ್ತಕದಲ್ಲಿ ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದ್ದಾರೆ.

ಈ ಪುಸ್ತಕದ ಬಹುಮುಖ್ಯವಾದ ಪ್ರತಿಪಾದನೆ ಅಂದರೆ ಧಾರ್ಮಿಕ ಮೂಲಭೂತವಾದ ರಹಬದತ್ತ ಹಾಗೂ ಅವನ ಸಂಗಡಿಗರನ್ನು ಇತಿಹಾಸದಿಂದ ಅಳಿಸುವ ಪ್ರಯತ್ನ ನಡೆಸಿದ್ದುದು. ಕರಬಲಾ ಇತಿಹಾಸದ ದೊಡ್ಡ ಘಟನೆಯಲ್ಲಿ ಹಿಂದೂ ಧರ್ಮೀಯನೊಬ್ಬ ಪ್ರವಾದಿಯವರ ಕುಟುಂಬದ ರಕ್ಷಣೆಯ ಬಹುಮುಖ್ಯ ಭಾಗವಾಗಿದ್ದ ಎಂಬುದನ್ನೂ ಹೇಳಲು ಮುಸ್ಲಿಮರು ಸಿದ್ಧರಿಲ್ಲ ಎನ್ನುವುದನ್ನು ಈ ಕೃತಿ ಎತ್ತಿತೋರಿದೆ. ಅದರಂತೆಯೇ ಈ ಮನಸ್ಥಿತಿ 21ನೆಯ ಶತಮಾನದ ಮೊಹೈಲ್ ಬ್ರಾಹ್ಮಣರಲ್ಲಿಯೂ ಬಂದಿದೆ. ಹುಸೇನಿ ಬ್ರಾಹ್ಮಣರು ಕ್ರಮೇಣ ಅಳಿಯುತ್ತಾ ಬಂದಿದ್ದಾರೆ. ಇವರನ್ನು ಬ್ರಾಹ್ಮಣರು ಎಂದು ಒಪ್ಪಿಕೊಳ್ಳಲು ಉಳಿದ ಬ್ರಾಹ್ಮಣರು ತಯಾರಿಲ್ಲ. ಹುಸೇನಿ ಬ್ರಾಹ್ಮಣರ ಬಹುಸಂಸ್ಕೃತಿ, ಉದಾರತೆ, ಪರಾಕ್ರಮಗಳನ್ನು ಒಪ್ಪುವ, ಇವರ ಬಗ್ಗೆ ಹೆಮ್ಮೆಪಡುವ ಉದಾರತೆ ಸಹ ಅವರಿಗಿಲ್ಲ. ಅನೇಕ ಮುಸ್ಲಿಮರಿಗೆ ರಹಬದತ್ತನ ಪ್ರಸಂಗದ ಪರಿಚಯವೇ ಇಲ್ಲ.

ಈ ಕಾಲದಲ್ಲಿ ರಹಬದತ್ತರಂತಹ ಉದಾರವಾದಿ ಬಹುಸಂಸ್ಕೃತಿಯನ್ನು ಹೊಂದಿರುವ ಅಧ್ಯಾಯ ಇತಿಹಾಸದಿಂದ ಮಾಯವಾಗಿರುವುದು ಖೇದದ ಸಂಗತಿ. ಗೋಕುಲಾಷ್ಟಮಿ ಹಾಗೂ ಇಮಾಮ ಸಾಬಿಗೂ ಏನು ಸಂಬಂಧ ಎಂಬ ಪ್ರಶ್ನೆಗೆ ಉತ್ತರ ಹುಡುಕುತ್ತಿರುವ ನಮಗೆ ಮೋಹನರಾಂ ಅವರ ಪುಸ್ತಕ ಉತ್ತರ ನೀಡುತ್ತಾ ನಮ್ಮಲ್ಲಿರುವ ಭಯದ ವಾತಾವರಣವನ್ನು ತಿಳಿಯಾಗಿಸುತ್ತದೆ. ಬಹುತ್ವದ ಸಂಸ್ಕೃತಿಯಲ್ಲಿ ಹುಟ್ಟಿ ಬೆಳೆಯುವವರೆಲ್ಲರೂ ಈ ಪುಸ್ತಕವನ್ನು ಓದಲೇಬೇಕು.



ಪು: 84 ₹80

ಹುಸೇನಿ ಬ್ರಾಹ್ಮಣರು
ಲೇ: ಎನ್.ಕೆ. ಮೋಹನ್‌ರಾಂ
ಪ್ರ: ಆಕ್ರಾಂತ ಪ್ರಕಾಶನ ಬೆಂಗಳೂರು
ಸಂ: mohanramnk@gmail.com

ಕಥೆ
ಸ್ಮಿತಾ ಅಮೃತರಾಜ್, ಸಂಪಾಜೆ
ಅವರ
ಲಾಕಿ ಕೋಳಿ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಲಕ್ಷ್ಮಿ ಮುದೇನೂರು
ಅವರ
ಬೆಳಕಿನ ಹಾಡುಗಳು
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಬೆಂಕಿ ಬಿದ್ದ ಲಂಕೆ

ಒಂದನೇ ಪುಟದಿಂದ...

ದ್ವೇಷ ಮತ್ತು ಹುಸಿ ರಾಷ್ಟ್ರವಾದದ ಅರಿವಳಿಕೆಯ ಸ್ಥಿತಿ. ರಾಜಪಕ್ಸ ಕುಟುಂಬ ಲಂಕೆಯನ್ನು ಲೂಟಿ ಹೊಡೆಯಿತು. ಹಗಲು ದರೋಡೆಯಲ್ಲಿ ದೋಚಿತು.ಮುಗಿಲು ಮುಟ್ಟಿದ ಹಣದುಬ್ಬರ ಶೇ 54ರ ದರ ದಾಟಿತು. ಶ್ರೀಲಂಕಾ ಕರೆನ್ಸಿಯ ಡಾಲರ್ ವಿನಿಮಯ ದರ 350 ರೂಪಾಯಿ ಮುಟ್ಟಿತು. ಅಮಲು ಇಳಿದು 'ಮೈಮೇಲೆ ಉಳಿದದ್ದು ಲಂಗೋಟಿ'ಯೊಂದೇ ಎಂದು ತಿಳಿಯುವ ಹೊತ್ತಿಗೆ ಬಹಳ ತಡವಾಗಿತ್ತು. ಲಂಕೆಯ ಎರಡು ಕೋಟಿ ಇಪ್ಪತ್ತು ಲಕ್ಷ ನಾಗರಿಕರನ್ನು ಇದೀಗ ಕ್ರೋಧ ಹತಾಶೆಗಳು ಕವಿದಿವೆ. ಅರಿವಳಿಕೆ ನೀಡಿ ಅಂಗಾಂಗಗಳ ಕೊಯ್ದು ಹಾಕಿದವರನ್ನು ಹೊತ್ತು ಮೆರೆಸಿದ್ದು ತಪ್ಪೆಂದು ಈಗಲಾದರೂ ಅರ್ಥವಾಗಿದೆಯೇ ಎಂಬ ಖಾತರಿ ಇಲ್ಲ. ಹಾಲಿ ದುಸ್ಥಿತಿಗೆ ತಮ್ಮ ಆಡಳಿತ ಕಾರಣ ಅಲ್ಲ ಎಂಬುದಾಗಿ ದೇಶವನ್ನು ಉದ್ದೇಶಿಸಿ ಗೊಟಬಯ ಮಾಡಿದ ಭಾಷಣದಿಂದ ಜನ ಕುದ್ದು ಹೋದರು. ಸುಪ್ತವಾಗಿ ಮಲಗಿದ್ದ ಪ್ರತಿಭಟನೆಯ ಮದ್ದಿನ ಗೋಳಗಳಿಗೆ ಇಟ್ಟ ಬೆಂಕಿಯಾಗಿ ಪರಿಣಮಿಸಿದ್ದು ಇದೇ ಭಾಷಣ.

ಶ್ರೀಲಂಕಾದ ಜನಪ್ರಿಯ ಕ್ರಿಕೆಟ್ ತಾರೆ ಜಯಸೂರ್ಯ ತಮ್ಮ ನಾಡನ್ನು ಕವಿದಿರುವ ಕತ್ತಲೆಗೆ ಮರುಗಿದ್ದಾರೆ. ಮನಕಲಕುವ ಅವರ ಮಾತುಗಳು ಹೀಗಿವೆ-

'ಕವಿದು ಮುತ್ತಿರುವ ಬಿಕ್ಕಟ್ಟು ಬೃಹದಾಕಾರದ್ದು. ಬ್ರೆಡ್ಡಿಗೆಂದು, ಪೆಟ್ರೋಲಿಗಾಗಿ 24 ತಾಸುಗಳ ಕಾಲ ಉಷ್ಣೋಗ್ರತೆಯಲ್ಲಿ ಸರದಿ ನಿಲ್ಲಬೇಕಿರುವ ದುಸ್ಥಿತಿಯನ್ನು ಕಣ್ಣ ಮುಂದೆ ತಂದುಕೊಳ್ಳಿರಿ. ದೇಶ ಮುರಿದು ಬಿದ್ದಿದೆ. ಜನರ ಬವಣೆ ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ಅಸಹನೀಯ ಆಗುತ್ತಿದೆ. ವಿದ್ಯುತ್ ತಾಸುಗಟ್ಟಲೆ, ದಿನಗಟ್ಟಲೆ ಮಟಾಮಾಯ. ಗಂಜಿ ಬೇಯಿಸಲು ಅಡುಗೆ ಅನಿಲ ಇಲ್ಲ. ಹೊಟ್ಟೆಗೆ ಗತಿಯಿಲ್ಲ. ಪೌಂಡು ಬ್ರೆಡ್ಡಿನ ದರ 500-600 ರೂಪಾಯಿ. ಸಾರಿಗೆ ವ್ಯವಸ್ಥೆ ಕುಸಿದಿದೆ. ರೈಲುಗಾಡಿಗಳು ಸಂಚರಿಸುತ್ತಿಲ್ಲ. ಬಸ್ಸುಗಳ ಸುಳಿವಿಲ್ಲ. ಆದರೂ ಜನ ಅದೆಂತೋ ಕೊಲಂಬೊ ತಲುಪಿ ಪ್ರತಿಭಟಿಸುತ್ತಿದ್ದಾರೆ. ಪೆಟ್ರೋಲ್ ಸರದಿ ಸಾಲುಗಳಲ್ಲಿ ಈವರೆಗೆ 20 ಮಂದಿ ಪ್ರಾಣ ಬಿಟ್ಟಿದ್ದಾರೆ. ಈ ಸಂಖ್ಯೆ ಇನ್ನಷ್ಟು ಏರಲಿದೆಯೇ ವಿನಾ ಇಳಿಯುವುದಿಲ್ಲ. ಈ ಸಂಕಟದಿಂದ ಹೊರಬೀಳಬೇಕಿದೆ ನಾವು. ಬದುಕು ಈ ಹಿಂದಿನ ಸಾಮಾನ್ಯಸ್ಥಿತಿಗೆ ಸಹಜಗತಿಗೆ ಮರಳಬೇಕಿದೆ. ನನ್ನ ಜನರೊಂದಿಗೆ ನಿಲ್ಲುವುದು ನನ್ನ ಈ ಗಳಿಗೆಯ ಕರ್ತವ್ಯ. ಅವರ ಕಷ್ಟ ಕಣ್ಣೀರುಗಳನ್ನು ಭರಿಸಲಾರೆ. ಬೀದಿಗೆ ಇಳಿದರೆ ಕರುಳನ್ನು ಇರಿಯುವ ಜನರೋದನ. ತಾಯಂದಿರು, ಮಕ್ಕಳು, ಹೆಣ್ಣುಮಕ್ಕಳ ಆಕ್ರಂದನ. ಆಶಾಕಿರಣವನ್ನು ಅರಸುವ ಸೋತು ಸೊರಗಿದ ಜನಸಮುದಾಯ. ಇದನ್ನೆಲ್ಲ ನೋಡಿಯೂ ನೋಡದಂತೆ ಇರಲಾರೆ. ಇಂತಹ ಸನ್ನಿವೇಶದಲ್ಲಿ ಹಿಂಸಾಚಾರ ಸರ್ವಥಾ ಸಲ್ಲದು. ಯಾಕೆಂದರೆ ಹಿಂಸೆಯೆಂಬುದು ಯಾವ್ಯಾವುದಕ್ಕೂ ಪರಿಹಾರ ಅಲ್ಲ. ಪ್ರತಿಭಟನೆಗಳು ಅಹಿಂಸೆಯ ದಾರಿಯಲ್ಲೇ ಪರಿವರ್ತನೆಯನ್ನು ಅರಸಬೇಕಿದೆ. ಈ ಅಂಶವನ್ನು ಜನರಿಗೆ ಮನದಟ್ಟು ಮಾಡುವ ಪ್ರಯತ್ನ ನನ್ನದು. ಇರುಳು ಕಳೆದು ಬೆಳಗಾಗುವುದರ ಒಳಗಾಗಿ ಇದೆಲ್ಲ ಸಾಧ್ಯವಾಗುವುದಿಲ್ಲ. ಅಂತಹ ಭ್ರಮೆ ನನಗಿಲ್ಲ. ಸಂಘರ್ಷದ ಹಾದಿಯೇ ಹಾಗೆ, ದೀರ್ಘ ಸುದೀರ್ಘ. ಜನತೆಗೆ ನೆರವಾಗುವುದು ಜನಪ್ರತಿನಿಧಿಗಳ ಪರಮ ಕರ್ತವ್ಯ. ತಮ್ಮ ಕೈಲಾಗದೆ ಹೋದರೆ ಕುರ್ಚಿ ಖಾಲಿ ಮಾಡಿ ತೊಲಗಬೇಕು'.

ಕೊಲಂಬೊದಲ್ಲಿ ಶಾಂತಿಯುತ ಪ್ರತಿಭಟನಾ ಪ್ರದರ್ಶನದ ಮೇಲೆ ಮಿಲಿಟರಿ ದಾಳಿ-ದೌರ್ಜನ್ಯ ನಡೆದಿದೆ. ಪತ್ರಕರ್ತರು ಮತ್ತು ವಕೀಲರನ್ನು ಮಿಲಿಟರಿ ವಶಕ್ಕೆ ಪಡೆಯಲಾಗಿದೆ. ಈ ಪುಟ್ಟ ದ್ವೀಪ ರಾಷ್ಟ್ರದ ಹಣಕಾಸು ಮತ್ತು ರಾಜಕೀಯ ಬಿಕ್ಕಟ್ಟನ್ನು ಬಲಪ್ರಯೋಗದಿಂದ ಬಗೆಹರಿಸಲು ಬರುವುದಿಲ್ಲ. ಸಮಾಲೋಚನೆ ಸಂವಾದಗಳೇ ದಾರಿದೀವಿಗೆಗಳು.

ದ್ವೇಷಿಸುವುದೂ ಸುಲಭವಲ್ಲ

ಒಂದನೇ ಪುಟದಿಂದ...

ಒಬ್ಬೊಬ್ಬರೇ ದ್ವೇಷಿಸಿದರೆ ಅದು ಪರಿಣಾಮಕಾರಿಯಲ್ಲ. ಹಾಗಾಗಿ ಸಮಾನ ದ್ವೇಷಿಗಳ ಸಂಘಟನೆ ಮಾಡಬೇಕಾಗುತ್ತದೆ. ಸಮೂಹ ಮಟ್ಟದಲ್ಲಿ ದ್ವೇಷವನ್ನು ಹುಟ್ಟುಹಾಕಬೇಕಾದರೆ ಸಂಘಟನಾ ಶಕ್ತಿ ಇರಲೇಬೇಕು. ಇಲ್ಲಿಯೂ ಕೂಡ ತ್ಯಾಗ, ಬಲಿದಾನಗಳು ಇದ್ದೇ ಇರುತ್ತವೆ.

ದ್ವೇಷಿಸುವವರಲ್ಲಿ ಪ್ರೀತಿಯೇ ಇರುವುದಿಲ್ಲ ಎಂದು ನೀವಂದುಕೊಂಡಿದ್ದರೆ ಅದೂ ತಪ್ಪೇ. ಸಮಾನ ದ್ವೇಷಿಗಳ ನಡುವೆ ಅದ್ಭುತ ಸ್ನೇಹ, ಪ್ರೀತಿ ಇರುತ್ತದೆ. ಸಂಶೋಧನೆಗಳ ಪ್ರಕಾರ, ದ್ವೇಷಿಸುವವರ ನಡುವಿನ ಬಾಂಧವ್ಯ, ಪ್ರೀತಿಸುವವರ ನಡುವೆ ಇರುವ ಬಾಂಧವ್ಯಕ್ಕಿಂತ ಬಿಗಿಯಾಗಿರುತ್ತದೆ! ಪಾಕಿಸ್ತಾನವನ್ನು ದ್ವೇಷಿಸುವವರೆಲ್ಲ ಭಾರತದಲ್ಲಿ ಉತ್ತಮ ಸ್ನೇಹಿತರು. ಅವರ ನಡುವೆ ಎಂತಹ ಅದ್ಭುತ ಬಾಂಧವ್ಯವಿರುತ್ತದೆ ಎಂದರೆ ತಮ್ಮ ದ್ವೇಷವನ್ನು ಉಳಿಸಿ, ಬೆಳೆಸಿಕೊಳ್ಳಲು ಅವರು ಎಂತಹ ತ್ಯಾಗಕ್ಕೂ ಸಿದ್ಧ! ತ್ಯಾಗವು ಪ್ರೀತಿಯ ಗುಣವಲ್ಲವೇ? ಅಂದಮೇಲೆ ದ್ವೇಷಿಸುವವರಿಗೆ ತ್ಯಾಗ ಸಾಧ್ಯವಿಲ್ಲ ಎಂದು ಹೇಗೆ ಹೇಳುತ್ತೀರಿ? ತ್ಯಾಗ ಮಾಡುವುದು ಎಂತಹ ಕಷ್ಟದ ಕೆಲಸ ಎಂಬುದು ಮಾಡಲು ಪ್ರಯತ್ನಿಸಿ ವಿಫಲರಾದವರಿಗಷ್ಟೇ ಗೊತ್ತು!

ಸಮಾನ ದ್ವೇಷಿಗಳಲ್ಲೂ ಸಾಕಷ್ಟು ಹಂತಗಳಿರುತ್ತವೆ. ಯಾವುದನ್ನಾದರೂ ನಿಮಗಿಂತ ಕಡಿಮೆ ದ್ವೇಷಿಸುವವನನ್ನು ನೀವು ದ್ವೇಷಿಸುತ್ತೀರಿ. ಯಾವುದನ್ನಾದರೂ ನಿಮಗಿಂತ ಹೆಚ್ಚು ದ್ವೇಷಿಸುವವನು ನಿಮ್ಮನ್ನು ದ್ವೇಷಿಸುತ್ತಾನೆ! ನೆಹರೂ ಅವರನ್ನು ಸಮಾನವಾಗಿ ದ್ವೇಷಿಸುವವರ ನಡುವೆ ಮಾತ್ರ ಸ್ನೇಹ ಸಾಧ್ಯ. ನೀವು ಅವರ ಒಂದೆರಡಾದರೂ ಗುಣಗಳನ್ನು ಇಷ್ಟಪಟ್ಟರೆ ನೆಹರೂ ಅವರನ್ನು ಪೂರ್ಣ ದ್ವೇಷಿಸುವವರು ನಿಮ್ಮ ಸ್ನೇಹ ಬಿಡುತ್ತಾರೆ. ಅಂದರೆ ಸಮಾನ ಮಟ್ಟದ ದ್ವೇಷಿಗಳಲ್ಲಿ ಮಾತ್ರ ಸ್ನೇಹ, ಪ್ರೀತಿಯಿರುತ್ತದೆ. ಯಾರೊಬ್ಬರ ದ್ವೇಷದ ಮಟ್ಟ ಕಡಿಮೆಯಾದರೂ ಅವರಿಬ್ಬರ ಸ್ನೇಹ ಮುಗಿದಂತೆಯೇ. ತಮ್ಮ ದ್ವೇಷದ ಮಟ್ಟವನ್ನು ಕಾಪಾಡಿಕೊಂಡರೆ ಮಾತ್ರ ಅವರ ಸ್ನೇಹ ಉಳಿಯುತ್ತದೆ. ಹೀಗೆ ಸ್ನೇಹವನ್ನು ಉಳಿಸಿಕೊಳ್ಳಲು ಅವರು ಎಷ್ಟು ಕಷ್ಟಪಡುತ್ತಾರಲ್ಲವೇ?

ದ್ವೇಷವನ್ನೇ ತಮ್ಮ ವ್ಯಕ್ತಿತ್ವದ ಗುರುತಾಗಿ ಮಾಡಿಕೊಂಡು ಹಣ, ಪ್ರಚಾರ, ಅಧಿಕಾರ ಪಡೆದವರ ಕಷ್ಟಗಳಂತೂ ಹೇಳತೀರದು. ತಮ್ಮ ದ್ವೇಷದ ಮಟ್ಟವನ್ನು ಕಾಯ್ದುಕೊಳ್ಳುವುದಷ್ಟೇ ಸಾಕಾಗುವುದಿಲ್ಲ. ಅದನ್ನು ದಿನದಿನಕ್ಕೂ ಹೆಚ್ಚು ಮಾಡಿಕೊಳ್ಳುತ್ತಿರಬೇಕು. ಹಾಗೆ ಮಾಡದಿದ್ದರೆ ಆರಾಧಕರು ತಮ್ಮ ದ್ವೇಷದ 'ಪ್ರಾಮಾಣಿಕತೆ'ಯನ್ನು ಅನುಮಾನಿಸಬಹುದು ಎನ್ನುವ ಆತಂಕ ಅವರಿಗೆ ಸದಾ ಕಾಡುತ್ತದೆ. ಹಾಗಾಗಿ ನಿರಂತರವಾಗಿ ಹೊಸಹೊಸ ದ್ವೇಷದ ಮಾರ್ಗಗಳನ್ನು ಅವಿಷ್ಕರಿಸಬೇಕಾಗುತ್ತದೆ. ಇನ್ನು ಹೆಚ್ಚು ದ್ವೇಷಿಸುವುದು ಸಾಧ್ಯವೇ ಇಲ್ಲ ಎನ್ನಿಸಿದಾಗ ಕೊನೆಯ ಪ್ರಯತ್ನವಾಗಿ ಅಂಥವರು ದ್ವೇಷದ ಖಜಾನೆಯನ್ನು ಸ್ಫೋಟಿಸಲು ಪ್ರಯತ್ನಿಸುತ್ತಾರೆ. ಜ್ಯೂಗಳ ದ್ವೇಷದ ಮೇಲೆಯೇ ಸಾಮ್ರಾಜ್ಯ ಕಟ್ಟಿದ್ದ ಹಿಟ್ಲರ್ ಕೊನೆಗೆ ಎರಡನೇ ಮಹಾಯುದ್ಧಕ್ಕೆ ನಾಂದಿ ಹಾಡಿದ್ದ. ಕೊನೆಯ ದಿನಗಳಲ್ಲಿ ಹಿಟ್ಲರ್ ಪಟ್ಟ ಪಾಡನ್ನು ನೋಡಿದ ಮೇಲಾದರೂ ದ್ವೇಷಿಸುವುದು ಎಂತಹ ಕಷ್ಟದ ಕೆಲಸ ಎಂದು ನಮಗೆ ಅರಿವಾಗಬೇಕಲ್ಲವೇ?

ದ್ವೇಷಿಸುವವರ ನಡುವೆಯೂ ಸ್ಪರ್ಧೆ ಇರುತ್ತದೆ. ಪ್ರಪಂಚದ ಹಲವಾರು ದೇಶಗಳಲ್ಲಿನ ಆಗುಹೋಗುಗಳನ್ನು ನೋಡಿದರೆ ಮುಂದೊಂದು ದಿನ ದ್ವೇಷದ ಸ್ಪರ್ಧೆ ಬಂದರೂ ಆಶ್ಚರ್ಯವಿಲ್ಲ. ಆಗ ಸಕ್ಷಮವಾಗಿ ದ್ವೇಷಿಸುವುದು ಹೇಗೆ ಎಂದು ತರಬೇತಿ ನೀಡುವ ಸಂಸ್ಥೆಗಳೂ ತಜ್ಞರೂ ಹುಟ್ಟಿಕೊಳ್ಳಬಹುದು! ಶಾಲೆಗಳಲ್ಲಿ 'ದ್ವೇಷಾಲಜಿ' ಎನ್ನುವ ವಿಷಯವನ್ನೂ ಕಲಿಸಬಹುದು. ಆಗ ಬೇರೆ ಪಠ್ಯಗಳಲ್ಲಿ ಅದನ್ನು ತುರುಕುವ ಅಗತ್ಯವಿರುವುದಿಲ್ಲ! ಪ್ರಪಂಚದ ಎಲ್ಲಾ ದೇಶಗಳಲ್ಲಿ ಅಧಿಕಾರ ಸ್ಥಾನಕ್ಕೇರಲು ದ್ವೇಷಾಲಜಿಯಲ್ಲಿ ಪದವಿ ಪಡೆದಿರುವುದು ಕಡ್ಡಾಯ ಎನ್ನುವ ನಿಯಮಗಳು ಜಾರಿಗೆ ಬರಬಹುದು.

ಈಗ ಹೇಳಿ. ದ್ವೇಷಿಸುವವರನ್ನು ನೀವೂ ದ್ವೇಷಿಸಿ ಅವರಂತೆ ಕಷ್ಟಪಡುತ್ತೀರೋ? ಅಥವಾ ಪ್ರೀತಿಸುವುದೇ ಸುಲಭ ಎಂದು ಪ್ರೀತಿಗೆ ಒಡ್ಡಿಕೊಳ್ಳುತ್ತೀರೋ? ಪ್ರೀತಿಸದೆ ಇರುವವರನ್ನೆಲ್ಲಾ ದ್ವೇಷಿಸಲೇಬೇಕು ಅಂತೇನೂ ಇಲ್ಲವಲ್ಲ! ಪ್ರೀತಿಸಲು ಸಾಧ್ಯವೇ ಇಲ್ಲ ಎನ್ನಿಸಿದಾಗಲೂ ದ್ವೇಷಿಸುವುದನ್ನು ಮಾತ್ರ ನಿಲ್ಲಿಸಿದರೆ ನಿಮ್ಮ ಹೆಚ್ಚಿನ ಕಷ್ಟಗಳು ಇರುವುದಿಲ್ಲ. ಆದರೆ ನಿಮಗೆ ದ್ವೇಷಾಲಜಿಯಲ್ಲಿ ಪದವಿ ಮಾತ್ರ ಸಿಗುವುದಿಲ್ಲ. ಆಯ್ಕೆ ನಿಮ್ಮದು.

ಮೊದಲ ಓದು

ವ್ಯಕ್ತಿಯಾಚೆಗಿನ ವಿಶಾಲ ನೋಟ

'**ಸೇವೆ** ಮತ್ತು ರಾಜಕೀಯಕ್ಕೆ ಇರುವ ಸಂಬಂಧ ಪ್ರಾಯೋಗಿಕ ರಾಜಕಾರಣಕ್ಕೆ ಬರುವಾಗ ಬೇರೆಯೇ ಆಗಿದೆ. ಚುನಾವಣಾ ರಾಜಕೀಯದಲ್ಲಿ ಗೆಲ್ಲುವ ಸಾಮರ್ಥ್ಯ ಮುಂದಕ್ಕೆ ಬಂದಷ್ಟೂ ರಾಜಕಾರಣ ಮತ್ತು ಸೇವೆಯ ನಡುವಣ ಸಂಬಂಧ ಶಿಥಿಲವಾಗುತ್ತದೆ...'

ಇದು ಈ ಕೃತಿಯಲ್ಲಿರುವ 'ರಾಜಕೀಯ ಒಂದು ಸೇವೆ' ಲೇಖನದಲ್ಲಿ ಎ.ನಾರಾಯಣ ಅವರು ಬರೆದಿರುವ ಸಾಲು. ಇದೇ ಸಾಲಿನ ಚೌಕಟ್ಟಿನಲ್ಲಿ ಸಿದ್ದರಾಮಯ್ಯ ಅವರ ರಾಜಕೀಯ ಬದುಕಿನ ಅವಲೋಕಿಸುವ ಪ್ರಯತ್ನ ನಡೆದಿದೆ.

2013ರ ಮೇ 10ರಂದು ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ಅವರು ತಮ್ಮ ಐದು ವರ್ಷಗಳ ಅಧಿಕಾರವಧಿಯಲ್ಲಿ ಜಾರಿಗೆ ತಂದ ಯೋಜನೆಗಳ ಪರಿಣಾಮ ಏನಾಗಿದೆ ಎಂಬುದರ ಮೆಲುಕು ಇಲ್ಲಿದೆ. ಅವುಗಳ ಅಗತ್ಯದ ಬಗ್ಗೆ ಅಲ್ಲಲ್ಲಿ ಒತ್ತಿ ಹೇಳಲಾಗಿದೆ.

ತಾತ್ವಿಕ ವಿವೇಚನೆ ಅನ್ನುವುದೂ ಪುಸ್ತಕದ ಆಶಯವಾಗಿರುವ ಕಾರಣ, ಅಲ್ಲಲ್ಲಿ ವಿವಿಧ ರಾಜಕೀಯ ಸಂದರ್ಭಗಳ ಸೈದ್ಧಾಂತಿಕ ಉಲ್ಲೇಖಗಳು, ಅಧ್ಯಯನಗಳ ಸಂಗತಿಗಳೂ ಇವೆ. ಈ ವಿವರಗಳು ಸಿದ್ದರಾಮಯ್ಯ ಅವರ ವ್ಯಕ್ತಿ ಚಿತ್ರದಾಚೆಗೂ ಒಂದಿಷ್ಟು ಹೊಳಹುಗಳನ್ನು ನೀಡುವ ಪ್ರಯತ್ನ ಮಾಡಿವೆ. ರಾಜ್ಯಶಾಸ್ತ್ರ ವಿದ್ಯಾರ್ಥಿಗಳಿಗೆ ಇಲ್ಲಿನ ಹಲವು ವಿವರಗಳು ಕುತೂಹಲ ಹುಟ್ಟಿಸಬಹುದು.

ಕೃತಿಯ ಅಗತ್ಯವೇನೋ ಎಂಬಂತೆ ಒಂದಿಷ್ಟು 'ರಾಷ್ಟ್ರೀಯವಾದಿ', 'ಪುರೋಹಿತಶಾಹಿ'ಗಳನ್ನು ಟೀಕಿಸಿದ್ದೂ ಇದೆ. ಚಿಂತನೆ ಮತ್ತು ವಾಸ್ತವದ ವೈರುಧ್ಯಗಳನ್ನು ತೆರೆದಿಟ್ಟದ್ದೂ ಇದೆ. ಲೇಖನಗಳನ್ನು ನಾಡಿನ ಖ್ಯಾತನಾಮ ವಿದ್ವಾಂಸರು, ಲೇಖಕರು, ಪತ್ರಕರ್ತರು ಬರೆದಿದ್ದಾರೆ. ಹಾಗಾಗಿ ವಿಶ್ಲೇಷಣೆಗಳಲ್ಲಿ ತೀಕ್ಷ್ಣತೆಯೂ ಉಂಟು. ಸಿದ್ದರಾಮಯ್ಯ ಅವರನ್ನು ತಿಳಿದುಕೊಳ್ಳುವ ನೆಪದಲ್ಲಿ, ಕಾಂಗ್ರೆಸ್, ರಾಜಕೀಯ ಸಿದ್ಧಾಂತ, ಸಮಕಾಲೀನ ರಾಜಕೀಯ ಪಲ್ಲಟಗಳನ್ನು ಓದುವ ಅವಕಾಶ ಇಲ್ಲಿದೆ.

ಪು: 448 ₹500

ಸಿದ್ದರಾಮಯ್ಯ ಆಡಳಿತ
ನೀತಿ ನಿರ್ಧಾರ – ತಾತ್ವಿಕ ವಿವೇಚನೆ
ಸಂಪಾದಕರು: ಕಾ.ತ. ಚಿಕ್ಕಣ್ಣ, ಲಕ್ಷ್ಮಣ ಕೊಡಸೆ
ಸಂಯೋಜನೆ: ಎಂ. ರಾಮಯ್ಯ
ಪ್ರ: ಜನಮನ ಪ್ರಕಾಶನ ಬೆಂಗಳೂರು

ಕೀಟ ಪ್ರಪಂಚದೊಳಗೊಂದು ವಿಸ್ಮಯಲೋಕ

ಪಕ್ಷಿ, ಪ್ರಾಣಿ ಲೋಕದಂತೆಯೇ ಕೀಟ ಪ್ರಪಂಚದಲ್ಲೂ ಕಣ್ಣಿಗೆ ಕಾಣಿಸದ ಹಲವು ವಿಸ್ಮಯಗಳಿವೆ. ಇವುಗಳನ್ನು ಮ್ಯಾಕ್ರೊ ಲೆನ್ಸ್ ಮುಖಾಂತರ ನೋಡಿದವರು ಕೀಟಶಾಸ್ತ್ರಜ್ಞ, ವೃತ್ತಿಯಲ್ಲಿ ಕೃಷಿ ಅಧಿಕಾರಿಯಾಗಿರುವ ಡಾ.ನೂರ್ ಸಮದ್ ಅಬ್ಬಲಗೆರೆ. ಅವರು 'ಪ್ರಜಾವಾಣಿ'ಯ ಸಹಪಾಠಿಗೆ ಬರೆದ ಅಂಕಣಗಳ ಸಂಗ್ರಹವೇ ಈ ಕೃತಿ.

ಪ್ರತೀ ಲೇಖನವೂ ತನ್ನ ಶೀರ್ಷಿಕೆಯಿಂದಲೇ ಓದುಗರನ್ನು ಸೆಳೆಯುತ್ತದೆ. 'ನಗಾರಿ ಹೊಡೆಯುತ್ತಾ' ಕೃತಿಗೆ ಆರಂಭ ನೀಡುವ 'ಸಿಕಾಡ'ದಿಂದ ಹಿಡಿದು 'ಎಲೆಸುರಳಿಯಲ್ಲಿ ವಿರಾಜಮಾನ'ವಾದ ಹುಳುವರೆಗಿನ ಕೀಟಲೋಕ ನೂರು ವಿಸ್ಮಯ ಲೋಕವನ್ನು ತೆರೆದಿಡುತ್ತದೆ. ಪ್ರತೀ ಕೀಟ ಹಾಗೂ ಅದರ ಲೋಕದ ಆಳ–ಅಗಲವನ್ನು ಅಂಗೈಯಲ್ಲಿ ಹಿಡಿದಿಟ್ಟು, ವಿಜ್ಞಾನದ ವಿಷಯವನ್ನು ಸಾಮಾನ್ಯ ಜ್ಞಾನದ ರೀತಿಯಲ್ಲಿ ಓದುಗರ ಎದುರಿಗೆ ಇರಿಸಿದ್ದಾರೆ ಲೇಖಕರು. ಜೀರುಂಡೆಯೂ 'ಬಾಂಬ್' ತಯಾರಿಸುತ್ತೆ ಎನ್ನುವ ವಿಷಯ ಯಾರಿಗೆ ಗೊತ್ತಿದೆ ಹೇಳಿ! ಗೆದ್ದಲು ಹುಳುವಿಗೆ 'ಅನಕ್ಷರಸ್ಥ ಎಂಜಿನಿಯರ್' ಪಟ್ಟ ಕೊಟ್ಟಿದ್ದೇಕೆ? ಹೀಗೆ ಪುಟ ತೆರೆದಂತೆ ಕೌತುಕದ ಕೀಟಲೋಕದೊಳಗೆ ಓದುಗರೂ ಉರುಳುತ್ತಾರೆ. ಕೀಟಜಗತ್ತಿನೊಳಗೆ ಚಿಟ್ಟೆಗಳಿಗೂ ಒಂದು ಸ್ಥಾನವಿದೆ. ಲೇಖನದಷ್ಟೇ ಛಾಯಾಚಿತ್ರಗಳೂ ಶಾರ್ಪ್ ಆಗಿವೆ. ಇವೆಲ್ಲವುಗಳ ಹಿಂದೆ ನೂರ್ ಅವರ ಕಣ್ಣುಗಳೇ ಇರುವುದು ವಿಶೇಷ. ವಿಜ್ಞಾನದ ವಿದ್ಯಾರ್ಥಿಗಳಿಗೆ ಈ ಕೃತಿ ಉಪಯುಕ್ತ.



ಪು: 144 ₹220

ವಿಸ್ಮಯ ಕೀಟ ಪ್ರಪಂಚ–1
ಲೇ: ಡಾ. ನೂರ್ ಸಮದ್ ಅಬ್ಬಲಗೆರೆ
ಪ್ರ: ಗೀತಾಂಜಲಿ ಪುಸ್ತಕ ಪ್ರಕಾಶನ
ಸಂ: 9449886390

ಬರೀ ಪೇಟೆಯಲ್ಲ, ಕೌತುಕಗಳ ಕೋಟೆ

ಮಂಡ್ಯ ಜಿಲ್ಲೆಯ ಪುಟ್ಟ ತಾಲ್ಲೂಕಿನ ಅಗಾಧತೆಯನ್ನು ಸಂಶೋಧನಾ ರೂಪದಲ್ಲಿ ತೆರೆದಿಟ್ಟಿದೆ ಈ ಕೃತಿ. ಕೆ.ಆರ್. ಪೇಟೆ ಎಂದು ಒಂದು ಸಾಲಿನಲ್ಲಿ ಓದಿಸಿಕೊಂಡು ಹೋಗುವ ಊರಿನ, ತಾಲ್ಲೂಕು ವ್ಯಾಪ್ತಿಯ ಆಚೆ ಈಚೆಗಿನ ಸಂಗತಿಗಳನ್ನು ಕೃತಿಕಾರರು ತೆರೆದಿಟ್ಟಿದ್ದಾರೆ.

ಮೊದಲ ಕೆಲವು ಪುಟಗಳಲ್ಲಿ ಭೌಗೋಳಿಕ ಮಾಹಿತಿ, ಜನಸಂಖ್ಯೆ, ಆರ್ಥಿಕ ಚಟುವಟಿಕೆ ಇತ್ಯಾದಿ ಸಾಮಾನ್ಯ ವಿವರಗಳಿವೆ. ಮುಂದೆ ಈ ಭಾಗದ ಶಿಲಾಯುಗ ಕಾಲದ ಇತಿಹಾಸವಿದೆ. ಮೈಸೂರು ಅರಸರು ಇಲ್ಲಿ ಕೆರೆ ಕಟ್ಟಿಸಿದ ನಂತರ ಈ ಊರಿಗೆ ಕೃಷ್ಣರಾಜ ಪೇಟೆ ಎಂದು ಹೆಸರಾದದ್ದರ ಕುರಿತು ವಿವರಗಳಿವೆ.

ಈ ಹೆಸರು ಹಾಗೂ ಮೂಲ ಹೆಸರಿನ ಕುರಿತು ವಿವಿಧ ವಿದ್ವಾಂಸರಲ್ಲಿರುವ ಭಿನ್ನ ಅಭಿಪ್ರಾಯಗಳನ್ನೂ ಉಲ್ಲೇಖಿಸಲಾಗಿದೆ. ಕೃಷಿ, ಸಾಮಾಜಿಕ, ರಾಜಕೀಯ, ಧಾರ್ಮಿಕ ಸಾಂಸ್ಕೃತಿಕ ಕ್ಷೇತ್ರಕ್ಕೆ ಕೆ.ಆರ್.ಪೇಟೆಯ ಗಣನೀಯ ಕೊಡುಗೆಗಳ ಉಲ್ಲೇಖ, ವಿವಿಧ ಮಹನೀಯರ ಪರಿಚಯ ಹಾಗೂ ಸಣ್ಣ ಸಣ್ಣ ವಿವರಗಳನ್ನೂ ಒದಗಿಸಲಾಗಿದೆ. ರಾಜಧಾನಿಗೆ ಹತ್ತಿರವಿರುವ ಸದಾ ವಿವಿಧ ಕಾರಣಗಳಿಗೆ ಸುದ್ದಿಯಲ್ಲಿರುತ್ತಲೇ ಇರುವ ಕೃಷ್ಣರಾಜಪೇಟೆ ತಾಲ್ಲೂಕಿನ ಒಳಗೆ ಸುತ್ತು ಹಾಕುವ ಕುತೂಹಲವುಳ್ಳವರು ಓದಬೇಕಾದ ಕೃತಿ.



ಪು: 592 ₹650

ಕೃಷ್ಣರಾಜಪೇಟೆ ತಾಲ್ಲೂಕು ಮಹಾದರ್ಶನ
ಲೇ: ಬಲ್ಲೇನಹಳ್ಳಿ ಮಂಜುನಾಥ್
ಪ್ರ: ಮಣಿ ಪ್ರಕಾಶನ, ಮೈಸೂರು
ಸಂ: 96865 35465

ವಿಶಿಷ್ಟ ಕಂಠದ ಮಧುರ ಗಾಯಕ

ನಾ. ದಿವಾಕರ

ಮೂರು ದಶಕಗಳ ಕಾಲ ಬಾಲಿವುಡ್ ಮತ್ತು ಗಝಲ್ ಸಂಗೀತ ಲೋಕದಲ್ಲಿ ಸಾಮ್ರಾಟನಂತೆ ಮೆರೆದ ಈ ಗಾಯಕ, ತಮ್ಮ ಶಾಸ್ತ್ರೀಯ ಸಂಗೀತದ ಸ್ಪರ್ಶವನ್ನು ಉಳಿಸಿಕೊಂಡೇ ಜನಪ್ರಿಯತೆಯ ಶಿಖರಕ್ಕೇರಿದವರು. ಸಂಗೀತ ಪ್ರಿಯರಿಗೆ ಈ ಮಹಾನ್ ಗಾಯಕ ಭೂಪಿಂದರ್ ಸಿಂಗ್ ಎಂದರೆ ನೆನಪಾಗುವುದು ಅವರ ಮೆಲುದನಿಯ ಮಧುರ ಗಝಲ್‌ಗಳು. ಆದರೆ, ಹಿಂದಿ ಚಿತ್ರರಂಗ ಕಂಡ ಅತ್ಯಂತ ಪ್ರತಿಭಾವಂತ ಗಿಟಾರ್ ವಾದಕರಲ್ಲಿ ಭೂಪಿಂದರ್ ಒಬ್ಬರಾಗಿದ್ದರು ಎನ್ನುವುದು ಈಗಿನ ಪೀಳಿಗೆಯವರಿಗೆ ಅಚ್ಚರಿಯ ಸಂಗತಿಯಾಗಿ ತೋರಬಹುದು.

'ಹರೇರಾಮ ಹರೇಕೃಷ್ಣ' ಚಿತ್ರದ 'ದಮ್ ಮಾರೋ ದಮ್' ಹಾಡಿನ ಗಿಟಾರ್ ಇಂಪನ್ನು, 'ಯಾದೋಂಕಿ ಬಾರಾತ್' ಚಿತ್ರದ 'ಚುರಾಲಿಯಾ ಹೈ' ಹಾಡಿನ ಆರಂಭದ ಗಿಟಾರ್ ಸ್ವರವನ್ನು, 'ಶೋಲೆ' ಚಿತ್ರದ 'ಮೆಹಬೂಬಾ ಮೆಹಬೂಬಾ' ಹಾಡಿನ ಹಿನ್ನೆಲೆಯ ಸ್ವರವನ್ನು, 'ಚಲ್ತೇ ಚಲ್ತೇ' ಹಾಡಿನ ನೇಪಥ್ಯದ ಮಾಧುರ್ಯವನ್ನು ಯಾರಿಂದಲಾದರೂ ಮರೆಯಲು ಸಾಧ್ಯವೇ? ಈ ಗಿಟಾರ್ ವಾದನಕ್ಕೆ ಜೀವ ಕೊಟ್ಟವರು ಭೂಪಿಂದರ್. ಖಯ್ಯಾಂ, ಆರ್.ಡಿ.ಬರ್ಮನ್ ಮತ್ತು ಲಕ್ಷ್ಮೀಕಾಂತ್ ಪ್ಯಾರೇಲಾಲ್ ಅವರೊಡನೆ ಸಹಾಯಕರಾಗಿ, ಗಿಟಾರ್ ವಾದಕರಾಗಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದವರು ಅವರು. 12 ತಂತಿಗಳ ಗಿಟಾರ್ ಪರಿಚಯಿಸಿದ ಕೀರ್ತಿಯೂ ಭೂಪಿಂದರ್‌ಗೇ ಸಲ್ಲಬೇಕು.

> ಭೂಪಿಂದರ್ ಅವರ ಹೃದಯ ಬಡಿತವೇನೋ ಸ್ಥಗಿತಗೊಂಡಿದೆ. ಆದರೆ, ಅವರ ಗಿಟಾರ್ ತಂತಿಯ ಮಧುರ ಧ್ವನಿ ಸಂಗೀತ ಪ್ರಿಯರ ಹೃದಯದಲ್ಲಿ ಶಾಶ್ವತವಾಗಿ ನೆಲೆಸಿದೆ. ಅವರ ಕಂಠ ಮಾಧುರ್ಯ ಶ್ರೋತೃಗಳ ಎದೆಯಲ್ಲಿ ಆಳವಾಗಿ ನಾಟಿ ಕಾಯಂ ಆಗಿ ಉಳಿದಿರುತ್ತದೆ.

1940ರ ಫೆಬ್ರುವರಿ 6ರಂದು ಪಂಜಾಬ್‌ನ ಅಮೃತಸರದಲ್ಲಿ, ಸಂಗೀತಗಾರ ನಾಥಾ ಸಿಂಘ್‌ಜಿ ದಂಪತಿಗೆ ಜನಿಸಿದ ಭೂಪಿಂದರ್, ತಂದೆಯಿಂದಲೇ ಸಂಗೀತ ಶಿಕ್ಷಣ ಮತ್ತು ದೀಕ್ಷೆಯನ್ನು ಪಡೆದವರು. ಆಕಾಶವಾಣಿಯಲ್ಲಿ ಸತೀಶ್ ಭಾಟಿಯಾ ಅವರ ನಿರ್ದೇಶನದಲ್ಲಿ ತಾತ್ಕಾಲಿಕ ಕಲಾವಿದರಾಗಿ ತಮ್ಮ ವೃತ್ತಿ ಜೀವನ ಆರಂಭಿಸಿದ ಭೂಪಿಂದರ್, ಮುಂದೆ ದೂರದರ್ಶನದಲ್ಲಿಯೂ ಸೇವೆ ಸಲ್ಲಿಸಿದವರು. ಹಿಂದಿ ಚಿತ್ರರಂಗದ ಪ್ರಸಿದ್ಧ ಸಂಗೀತ ನಿರ್ದೇಶಕ ಮದನ್ ಮೋಹನ್ ಅವರನ್ನು ಸನ್ಮಾನಿಸಲು 1962ರಲ್ಲಿ ಸತೀಶ್ ಭಾಟಿಯಾ ಕಾರ್ಯಕ್ರಮವೊಂದನ್ನು ಏರ್ಪಡಿಸಿದ್ದರು. ಭೂಪಿಂದರ್ ಅವರ ಗಿಟಾರ್ ವಾದವನ್ನು ಕೇಳಿದ ಮದನ್ ಮೋಹನ್, ಅವರನ್ನು ಮುಂಬೈಗೆ ಆಹ್ವಾನಿಸಿದ್ದರು. ಚೇತನ್ ಆನಂದ್ ನಿರ್ಮಿಸಿದ 'ಹಖೀಕತ್' ಚಿತ್ರದಲ್ಲಿ ಮೊಹಮ್ಮದ್ ರಫಿ, ತಲತ್ ಮೆಹಮೂದ್, ಮನ್ನಾ ಡೇ ಅವರ ಜೊತೆಯಲ್ಲಿ ಹಾಡುವ ಭಾಗ್ಯ ಭೂಪಿಂದರ್‌ಗೆ ಒದಗಿಬಂತು. 'ಹೋಕೆ ಮಜಬೂರ್ ಮುಝೆ ಉಸ್ನೆ ಬುಲಾಯಾ ಹೋಗಾ' ಎಂಬ ಈ ಹಾಡು ಇಂದಿಗೂ ಸಂಗೀತಪ್ರಿಯರ ನಡುವೆ ಗುನುಗುತ್ತಲೇ ಇರುತ್ತದೆ.

ಗಿಟಾರ್ ವಾದನದಲ್ಲಿ ಭೂಪಿಂದರ್‌ಗೆ ಸರಿಸಾಟಿಯಾದವರು ಇರಲು ಸಾಧ್ಯವೇ ಇಲ್ಲ ಎಂದು ಖ್ಯಾತ ಸಂಗೀತ ನಿರ್ದೇಶಕ ನೌಷಾದ್ ಅಭಿಮಾನದಿಂದ ಹೇಳುತ್ತಿದ್ದರು. 'ಕಾದಂಬರಿ' ಚಿತ್ರದಲ್ಲಿ ಉಸ್ತಾದ್ ವಿಲಾಯತ್ ಖಾನ್ (ಇವರು ಸಂಗೀತ ನಿರ್ದೇಶನ ನೀಡಿದ ಏಕೈಕ ಚಿತ್ರ) ಸಂಗೀತ ನಿರ್ದೇಶನದಲ್ಲಿ ಭೂಪಿಂದರ್ ಅವರು ಹಾಡಿದ 'ಅಂಬರ್ ಕಿ ಏಕ್ ಪಾಕ್ ಸುರಾಹಿ' ಹಾಡು ಸಾರ್ವಕಾಲಿಕ ಶ್ರೇಷ್ಠ ಗಾಯನ ಎಂದೇ ನೌಷಾದ್ ಪ್ರಶಂಸೆ ವ್ಯಕ್ತಪಡಿಸಿದ್ದರು. ಭೂಪಿಂದರ್ ಅವರ ಗಿಟಾರ್ ವಾದನಕ್ಕೆ ಮತ್ತೊಂದು ಗರಿ ಮೂಡಿದ್ದು ಮದನ್ ಮೋಹನ್ ನಿರ್ದೇಶನದ 'ಹಸ್ತೇ ಜಖಂ' ಚಿತ್ರದಲ್ಲಿನ 'ತುಂ ಜೋ ಮಿಲ್‌ಗಯೇ ಹೋ...' ಹಾಡಿನ ಮೂಲಕ. ತಲತ್, ರಫಿ, ಮುಖೇಶ್, ಕಿಶೋರ್, ಮನ್ನಾ ಡೇ ಇಂತಹ ದಿಗ್ಗಜರ ನಡುವೆ ಬಾಲಿವುಡ್‌ನಲ್ಲಿ ಗಾಯಕರಾಗಿ ತಮ್ಮದೇ ಆದ ಸ್ಥಾನ ಪಡೆಯಬೇಕಾದ ಸಂದರ್ಭದಲ್ಲಿ ಭೂಪಿಂದರ್ ತಮ್ಮ ಸ್ವರ ಮಾಧುರ್ಯ ಮತ್ತು ಶಾಸ್ತ್ರೀಯ ಧಾಟಿಯನ್ನು ಎಲ್ಲಿಯೂ ಬಿಟ್ಟುಕೊಡದೆ, ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ನೂರಾರು ಮಧುರ ಗೀತೆಗಳನ್ನು ಸಂಗೀತ ಪ್ರೇಮಿಗಳಿಗೆ ಉಣಬಡಿಸಿದವರು. ಆರ್.ಡಿ. ಬರ್ಮನ್ ಅವರಿಗೆ ಸಹಾಯಕರಾಗಿ, ಗಿಟಾರ್‌ಗೆ ಹಿನ್ನೆಲೆ ವಾದ್ಯವಾಗಿ ಒಂದು ಪ್ರತಿಷ್ಠಿತ ಸ್ಥಾನವನ್ನು ಕಲ್ಪಿಸುವಲ್ಲಿ ಭೂಪಿಂದರ್ ಕೊಡುಗೆ ಹೆಚ್ಚಿದೆ. ಆರ್.ಡಿ.ಬರ್ಮನ್ ಗಿಟಾರ್ ವಾದ್ಯಕ್ಕೆ ಶಾಶ್ವತವಾದ ಒಂದು ಸ್ಥಾನ ಕಲ್ಪಿಸಿದ್ದರೆ, ಅದರ ಶ್ರೇಯ ಭೂಪಿಂದರ್‌ಗೆ ಸಲ್ಲಬೇಕು.

ಗಾಯನ ಸಾಮ್ರಾಜ್ಯದಲ್ಲಿ ತಮ್ಮದೇ ಆದ ಸ್ಥಾನ ಪಡೆಯಲು ಎಂದಿಗೂ ಸ್ಪರ್ಧಿಸದ ಭೂಪಿಂದರ್ ಸಂಗೀತದ ಶಾಸ್ತ್ರೀಯತೆ ಮತ್ತು ಮಾಧುರ್ಯದ ಗೆರೆಯನ್ನು ದಾಟಲೇ ಇಲ್ಲ ಎನ್ನುವುದು ವಿಶೇಷ. ಸಂಗೀತ ನಿರ್ದೇಶಕರು ಕೆಲವು ಸಂದರ್ಭಗಳಲ್ಲಿ ಹಾಡಿನಲ್ಲಿ ತಮ್ಮದೇ ಆದ ಹೊಸ ಸ್ವರಾನ್ವೇಷಣೆಯನ್ನು ತರಲು ಇಚ್ಛಿಸಿದರೂ ಭೂಪಿಂದರ್ ಅಂತಹ ಹಾಡುಗಳನ್ನು ನಿರಾಕರಿಸಿದ್ದಿದೆ. ಗಾಯನದಲ್ಲಿ ಶಾಸ್ತ್ರೀಯ ರಾಗಸ್ಪರ್ಶ ಮತ್ತು ಸಾಹಿತ್ಯದಲ್ಲಿ ಕಾವ್ಯಸ್ಪರ್ಶ ಇಲ್ಲದೆ ಹಾಡಲು ನಿರಾಕರಿಸುತ್ತಿದ್ದರು ಭೂಪಿಂದರ್. ಅವರ ಎಲ್ಲ ಹಾಡುಗಳಲ್ಲೂ ಈ ಛಾಪನ್ನು ಕಾಣಬಹುದು. ಕವಿ ಗುಲ್ಜಾರ್ ಅವರನ್ನು ತಮ್ಮ ಮಾರ್ಗದರ್ಶಕರೆಂದೇ ಭಾವಿಸಿದ್ದ ಭೂಪಿಂದರ್, ಗುಲ್ಜಾರ್ ಅವರ ಕವಿತೆಗಳ ಗುಚ್ಛವನ್ನೂ 'ಕುಚ್ ಇಂತಿಜಾರ್ ಹೈ' ಹೆಸರಿನ ಆಲ್ಬಂ ಮೂಲಕ ಪ್ರಸ್ತುತಪಡಿಸಿದ್ದರು. ಸಂಗೀತ ಆಲ್ಬಂಗಳಲ್ಲಿ ವಿಡಿಯೊ ಜೋಡಿಸುವಾಗ ಕಂಪನಿಗಳು ಅಸಂಬದ್ಧ ರೀತಿಯಲ್ಲಿ ಚಿತ್ರಗಳನ್ನು ಅಳವಡಿಸುವುದಕ್ಕೂ ತಮ್ಮ ವಿರೋಧ ವ್ಯಕ್ತಪಡಿಸುತ್ತಿದ್ದ ಭೂಪಿಂದರ್, ಇದರಿಂದ ಹಾಡಿನಲ್ಲಿರುವ ಸಾಹಿತ್ಯ ಮತ್ತು ಕಾವ್ಯಾಭಿವ್ಯಕ್ತಿಗೆ ಕುಂದುಬರುತ್ತದೆ ಎಂದು ಹೇಳುತ್ತಿದ್ದರು. ಒಂದು ಹಂತದ ನಂತರ ಆಲ್ಬಂಗಳಿಗೆ ಹಾಡುವುದನ್ನೇ ನಿಲ್ಲಿಸಿಬಿಟ್ಟಿದ್ದರು.

ಭೂಪಿಂದರ್ ಅವರ ಕೆಲವು ಬಾಲಿವುಡ್ ಗೀತೆಗಳೇ ಅವರ ಈ ಶಿಸ್ತುಬದ್ಧ ಗಾಯನಕ್ಕೆ ಸಾಕ್ಷಿಯಾಗಿ ನಿಲ್ಲುತ್ತವೆ. ಪರಿಚಯ್ ಚಿತ್ರದ 'ಬೀತಿ ನಾ ಬಿತಾಯಿ ರೈನಾ' (ಆರ್.ಡಿ. ಬರ್ಮನ್), ಮೌಸಮ್ ಚಿತ್ರದ 'ದಿಲ್ ಢೂಂಡ್ತಾ ಹೈ' (ಮದನ್ ಮೋಹನ್), ಕಿನಾರಾ ಚಿತ್ರದ 'ನಾಮ್ ಗುಮ್ ಜಾಯೇಗಾ' (ಆರ್. ಡಿ. ಬರ್ಮನ್), ಘರೋಂಡಾ ಚಿತ್ರದ 'ಏಕ್ ಅಖೇಲಾ ಇಸ್ ಶಹರ್ ಮೇ' 'ದೋ ದಿವಾನೆ ಶಹರ್ ಮೇ' (ಜೈದೇವ್), ಮಾಸೂಮ್ ಚಿತ್ರದ 'ಹುಝೂರ್ ಇಸ್ ಕದರ್ ಭೀ ನ ಇತ್ರಾ ಕೆ ಚಲಿಯೇ' (ಆರ್. ಡಿ.ಬರ್ಮನ್), ಏತ್‌ಬಾರ್ ಚಿತ್ರದ 'ಕಿಸೀ ನಝರ್ ಕೊ ತೆರಾ ಇಂತ್‌ಜಾರ್ ಆಜ್ ಭಿ ಹೈ' ಮತ್ತು 'ಆವಾಜ್ ದೀ ಹೈ ಆಜ್ ಏಕ್ ನಜರ್ ನೆ' (ಬಪ್ಪಿ ಲಹರಿ), 'ಬಾಝಾರ್' ಚಿತ್ರದ 'ಕರೋಗೆ ಯಾದ್ ತೊ ಹರ್ ಬಾತ್ ಯಾದ್ ಆಯೇಗಿ' (ಖಯ್ಯಾಂ), 'ದೂರಿಯಾ' ಚಿತ್ರದ 'ಜಿಂದಗಿ, ಜಿಂದಗಿ ಮೇರೆ ಘರ್ ಆನಾ' (ಜೈದೇವ್)... ಹಾಡುಗಳ ಪಟ್ಟಿ ಮಾಡುತ್ತಾ ಹೋದರೆ ಮುಗಿಯುವುದೇ ಇಲ್ಲ. ಈ ಹಾಡುಗಳು ಇಂದಿಗೂ ಸಂಗೀತಪ್ರಿಯರಿಗೆ ರುಚಿಸುವುದಷ್ಟೇ ಅಲ್ಲದೆ, ಈ ಹಾಡುಗಳಲ್ಲಿರುವ ಧ್ವನಿಯ ಆಳ, ಮಾಧುರ್ಯ, ಸಾಹಿತ್ಯಕ ಗುಣ ಮತ್ತು ಗಾಂಭೀರ್ಯ ಇವು ಸಾರ್ವಕಾಲಿಕವಾಗಿ ಮನ್ನಣೆ ಗಳಿಸುವಂತಿವೆ.

1980ರ ದಶಕದಲ್ಲಿ ಬಾಂಗ್ಲಾದೇಶದ ಗಾಯಕಿ ಮಿತಾಲಿ ಮುಖರ್ಜಿ ಅವರನ್ನು ವಿವಾಹವಾದ ನಂತರ ಚಲನಚಿತ್ರಗಳಿಗೆ ಹಾಡುವುದನ್ನು ಬಹುತೇಕವಾಗಿ ನಿಲ್ಲಿಸಿದ ಭೂಪಿಂದರ್ ಹಲವು ಸಂಗೀತ ಗುಚ್ಛಗಳನ್ನು ತಮ್ಮ ಆಲ್ಬಂಗಳ ಮೂಲಕ ಪರಿಚಯಿಸಿದ್ದರು. ಈ ಹಂತದಲ್ಲಿ ಬಾಲಿವುಡ್ ಹಾಡುಗಳು ಚಿತ್ರದ ಮೂಲ ಕತೆಯಿಂದ ವಿಮುಖವಾಗಿ, ಅಪ್ರಸ್ತುತವಾಗತೊಡಗಿದ್ದನ್ನು ವಿಶ್ಲೇಷಿಸುತ್ತಿದ್ದ ಭೂಪಿಂದರ್, 1980ರ ದಶಕದ ನಂತರ ಸಿನಿಮಾ ಹಾಡುಗಳು ಚಿತ್ರದ ಮತ್ತೊಂದು ಭಾಗವಾಗಿದ್ದವೇ ಹೊರತು, ಸತ್ವಯುತವಾಗಿರಲಿಲ್ಲ ಎಂದು ವಿಷಾದಿಸುತ್ತಿದ್ದರು. ರಾಮ್‌ಗೋಪಾಲ್ ವರ್ಮಾ ಅವರ 'ಸತ್ಯ' ಚಿತ್ರದ ನಂತರ ಭೂಪಿಂದರ್ ಸಿನಿಮಾ ಹಾಡುಗಳನ್ನು ಹಾಡಲಿಲ್ಲ. ತಮ್ಮ ಗಾಯನಶೈಲಿಗೆ ತಕ್ಕಂತೆ ಹಿಂದಿ ಚಿತ್ರದ ಹಾಡುಗಳು ಇಲ್ಲದಿರುವುದೇ ತಾವು ಹಿಂಜರಿಯಲು ಕಾರಣ ಎಂದು ಹೇಳುವ ಭೂಪಿಂದರ್, ಬಾಲಿವುಡ್ ಗೀತೆಗಳ ಹಿನ್ನೆಲೆಯಲ್ಲಿ ಕೇಳಿಬರುವ ಗಿಟಾರ್ ತಂತಿಯ ಸ್ವರದಿಂದಲೇ ಚಿತ್ರರಸಿಕರನ್ನು ರಂಜಿಸಿರುವುದನ್ನು ಮರೆಯುವಂತಿಲ್ಲ. ಯಾದೋಂಕಿ ಬಾರಾತ್ ಚಿತ್ರದ 'ಚುರಾಲಿಯಾ ಹೈ ತುಮ್ ನೆ ಜೊ ದಿಲ್ ಕೋ' ಹಾಡಿನ ಆರಂಭದ ಗಿಟಾರ್ ಸ್ವರ ಇತರ ಭಾಷೆಯ ಹಲವು ಹಾಡುಗಳಿಗೆ ಸ್ಫೂರ್ತಿ ನೀಡಿದೆ. ಹಾಗೆಯೇ ಶೋಲೆ ಚಿತ್ರದ 'ಮೆಹಬೂಬಾ ಮೆಹಬೂಬಾ' ಹಾಡಿನ ಆರಂಭಿಕ ಗಿಟಾರ್ ವಾದನ ಕೂಡ.

1980–90ರ ದಶಕದಲ್ಲಿ ಪಂಕಜ್ ಉದಾಸ್, ಮನ್ಹರ್ ಉದಾಸ್, ಜಗಜೀತ್ ಸಿಂಗ್, ಚಿತ್ರಾ ಸಿಂಗ್ ಮುಂತಾದ ಗಝಲ್ ದಿಗ್ಗಜರ ನಡುವೆಯೇ ತಮ್ಮ ವಿಶಿಷ್ಟ ಗಾಯನ ಶೈಲಿಯಿಂದ ಛಾಪು ಮೂಡಿಸಿದ್ದರು ಭೂಪಿಂದರ್. ಸಂಗೀತದಲ್ಲಿ ಭಾರತೀಯತೆ ಮತ್ತು ಭಾರತದ ಶಾಸ್ತ್ರೀಯ ಸಂಗೀತದ ಛಾಪನ್ನು ಉಳಿಸಿಕೊಂಡೇ, ಆರ್.ಡಿ.ಬರ್ಮನ್ ಅವರೊಡನೆ ಪಾಶ್ಚಿಮಾತ್ಯ ಸಂಗೀತಕ್ಕೆ ತಕ್ಕಂತೆ ಗಿಟಾರ್ ನುಡಿಸುತ್ತಿದ್ದ ಭೂಪಿಂದರ್, ತಮ್ಮ ಬೆಳವಣಿಗೆಯಲ್ಲಿ ಬರ್ಮನ್ ಅವರ ಕೊಡುಗೆ ಇರುವುದನ್ನೂ ಹೆಮ್ಮೆಯಿಂದ ಸ್ಮರಿಸುತ್ತಿದ್ದರು. ಪತ್ನಿ ಮಿತಾಲಿ ಸಿಂಗ್ ಜೊತೆಗೂಡಿ 'ಆರ್ಝೂ', 'ಚಾಂದ್‌ನಿ ರಾತ್', 'ಗುಲ್‌ಮೊಹರ್', 'ಗಝಲ್ ಕೆ ಫೂಲ್', 'ಏಕ್ ಆರ್ಝೂ', 'ಆನಂದ್ ಲೋಕ್ ಮೇ' ಮುಂತಾದ ಆಲ್ಬಂಗಳನ್ನು ಬಿಡುಗಡೆ ಮಾಡಿದ್ದರು. ಗುಲ್ಜಾರ್ ಅವರೊಡನೆ ಸುರ್ಮಯಿ ರಾತ್ ಎಂಬ ಆಲ್ಬಂ ಕೂಡ ನೀಡಿದ್ದರು. ಸಿನಿಮಾ ಹಾಡುಗಾರಿಕೆಯನ್ನು ನಿಲ್ಲಿಸಿದರೂ ಮೂರು ದಶಕಗಳ ಕಾಲ ಗಝಲ್ ಗಾಯನದ ಮೂಲಕ ಸಂಗೀತ ಪ್ರಿಯರ ಹೃದಯ ಸಾಮ್ರಾಜ್ಯದಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನ ಗಳಿಸಿದ್ದರು.

ಭೂಪಿಂದರ್ ಅವರ ಹೃದಯ ಬಡಿತವೇನೋ ಸ್ಥಗಿತಗೊಂಡಿದೆ. ಆದರೆ, ಅವರ ಗಿಟಾರ್ ತಂತಿಯ ಮಧುರ ಧ್ವನಿ ಸಂಗೀತ ಪ್ರಿಯರ ಹೃದಯದಲ್ಲಿ ಶಾಶ್ವತವಾಗಿ ನೆಲೆಸಿದೆ. ಅವರ ಕಂಠ ಮಾಧುರ್ಯ ಶ್ರೋತೃಗಳ ಎದೆಯಲ್ಲಿ ಆಳವಾಗಿ ನಾಟಿ ಕಾಯಂ ಆಗಿ ಉಳಿದಿರುತ್ತದೆ. ಅವರದೇ ಒಂದು ಹಾಡಿನಲ್ಲಿ 'ನಾಮ್ ಗುಮ್ ಜಾಯೇಗಾ, ಚೆಹರಾ ಏ ಬದಲ್ ಜಾಯೇಗಾ, ಮೇರಿ ಆವಾಜ್ ಹೀ ಪೆಹಚಾನ್ ಹೈ' ಎಂದು ಹೇಳುವಂತೆ ಭೂಪಿಂದರ್ ಅವರ ಹೆಸರು ಕಾಲ ಕಳೆದಂತೆ ವಿಸ್ಮೃತಿಗೆ ಜಾರಿದರೂ ಅವರ ಮುಖಚಹರೆ ಮರೆತುಹೋದರೂ ಅವರ ಮಧುರ ಧ್ವನಿ ಗುನುಗುನಿಸುತ್ತಲೇ ಇರುತ್ತದೆ, ಶಾಶ್ವತವಾಗಿ.



ಗಿಟಾರ್ ಮಾಧುರ್ಯವನ್ನು ಶಾಶ್ವತವಾಗಿ ಉಳಿಸಿಹೋದ ಭೂಪಿಂದರ್ ಸಿಂಗ್

ಭೂಪಿಂದರ್ ಸಿಂಗ್: ಐಎಎನ್‌ಎಸ್ ಚಿತ್ರ

ಪ್ಲಾಗಿಂಗ್

ಒಂದನೇ ಪುಟದಿಂದ...

'ಇದು ನನಗೆ ದೊರೆತ ಬಲುದೊಡ್ಡ ಗೌರವ. ಭಾರತ ಮತ್ತು ಬ್ರಿಟನ್‌ನಲ್ಲಿ ಪ್ಲಾಗಿಂಗ್ ಅಭಿಯಾನ ದೊಡ್ಡ ಪ್ರಮಾಣದಲ್ಲಿ ನಡೆಯಬೇಕಿರುವುದು ಕಾಲದ ಬೇಡಿಕೆಯಾಗಿದೆ. ನಾವು ನಡೆಸಿಕೊಂಡು ಬರುತ್ತಿರುವ ಚಳವಳಿಯ ಬಲ ವರ್ಧನೆಗೆ ಈ ಪ್ರಶಸ್ತಿ ನೆರವಾಗಲಿದೆ' ಎಂಬುದು ವಿವೇಕ್ ಪ್ರತಿಕ್ರಿಯೆ.

ಎಂಎಸ್ಸಿ ಕೋರ್ಸ್ ಸದ್ಯದಲ್ಲೇ ಪೂರ್ಣಗೊಳಿಸಲಿರುವ ವಿವೇಕ್ ಕೆಲಕಾಲ ಬ್ರಿಟನ್‌ನಲ್ಲೇ ಇದ್ದುಕೊಂಡು ಪರಿಸರ ವಿಜ್ಞಾನ, ಹವಾಮಾನ ವೈಪರೀತ್ಯಕ್ಕೆ ಸಂಬಂಧಿಸಿದ ಇನ್ನಷ್ಟು ಅಧ್ಯಯನ ನಡೆಸಲು ಬಯಸಿದ್ದಾರೆ.

'ಅಭಿವೃದ್ಧಿ ಹೊಂದಿದ ದೇಶಗಳು ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಹವಾಮಾನ ವೈಪರೀತ್ಯದ ಬಗ್ಗೆ ಹೊಂದಿರುವ ತಿಳಿವಳಿಕೆಯಲ್ಲಿ ಸಾಕಷ್ಟು ಅಂತರವಿದೆ. ಆ ಅಂತರ ಕಡಿಮೆ ಮಾಡುವುದು ನನ್ನ ಉದ್ದೇಶ' ಎನ್ನುತ್ತಾರೆ ವಿವೇಕ್.

ಪುಣೆಯ ಎಂಐಟಿ ಅಕಾಡೆಮಿ ಆಫ್ ಎಂಜಿನಿಯರಿಂಗ್‌ನಲ್ಲಿ ಕಂಪ್ಯೂಟರ್ ಸೈನ್ಸ್‌ನಲ್ಲಿ ಬಿಇ ಪೂರೈಸಿರುವ ವಿವೇಕ್, ಪರಿಸರ ವಿಜ್ಞಾನದ ಬಗ್ಗೆ ಹೊಂದಿರುವ ಉತ್ಕಟ ಅಭಿಲಾಷೆಯಿಂದ ಶಿಕ್ಷಣದ ಪಥವನ್ನೇ ಬದಲಿಸಿದ್ದಾರೆ.

ಸ್ವೀಡನ್‌ನಲ್ಲಿ ಹುಟ್ಟಿದ 'ಪ್ಲಾಗಿಂಗ್'

'ಪ್ಲಾಗಿಂಗ್' ಪರಿಕಲ್ಪನೆ ಹುಟ್ಟಿದ್ದು ಸ್ವೀಡನ್ ದೇಶದಲ್ಲಿ. 'jogga' ಅಂದರೆ ಜಾಗಿಂಗ್ ಮತ್ತು 'Plocka up' (pickup) ಪದಗಳ ಸಂಯೋಜನೆಯಿಂದ ಪ್ಲಾಗಿಂಗ್ ಹೆಸರು ಬಳಕೆಗೆ ಬಂದಿದೆ. ಬೆಳಗಿನ ವಾಯುವಿಹಾರ, ಜಾಗಿಂಗ್ ಮಾಡುತ್ತಲೇ ಹಾದಿಯಲ್ಲಿ ಸಿಗುವ ಕಸ ಹೆಕ್ಕುವುದು ಈ ವಿನೂತನ ಕಲ್ಪನೆಯ ತಿರುಳು. ದೈಹಿಕ ಆರೋಗ್ಯ ಕಾಪಾಡುವ ಜತೆಯಲ್ಲೇ ಸ್ವಚ್ಛತಾ ಕಾರ್ಯವೂ ನೆರವೇರುತ್ತದೆ. 2016ರಲ್ಲಿ ಸ್ವೀಡನ್‌ನಲ್ಲಿ ಸಂಘಟಿತ ಅಭಿಯಾನದ ರೂಪದಲ್ಲಿ ಮುನ್ನೆಲೆಗೆ ಬಂದ 'ಪ್ಲಾಗಿಂಗ್', ಸಾಮಾಜಿಕ ಮಾಧ್ಯಮಗಳ ಮೂಲಕ ಬಹಳ ಬೇಗನೇ ಜಾಗತಿಕ ಟ್ರೆಂಡ್ ಆಗಿ ಬದಲಾಯಿತು. 2018ರ ವೇಳೆಗೆ ಭಾರತಕ್ಕೂ ಕಾಲಿಟ್ಟಿತು.

ಪುಣೆಯಲ್ಲಿ ಪೌರಕಾರ್ಮಿಕರ ಜತೆ ಪ್ಲಾಗರ್ ವಿವೇಕ್

ಇಂದ್ರಾಯಣಿ ನದಿ ದಡದಿಂದ...

ವಿವೇಕ್ ಅವರಿಗೆ ಎಳೆ ವಯಸ್ಸಿನಲ್ಲೇ ಪರಿಸರದ ಮೇಲೆ ಎಲ್ಲಿಲ್ಲದ ಪ್ರೀತಿ. ಮನೆಯ ಸುತ್ತಮುತ್ತಲಿನ ಬೀದಿಗಳಲ್ಲಿ ಗಿಡಗಳನ್ನು ನೆಟ್ಟು ಪೋಷಿಸುತ್ತಿದ್ದರು. ಆದರೆ ಅವರಲ್ಲಿ ಹುದುಗಿದ್ದ ಪರಿಸರ ಸಂರಕ್ಷಣೆಯ ಹಂಬಲ ಒಂದು ಆಂದೋಲನವಾಗಿ ಹೊರಹೊಮ್ಮಿದ್ದು ಇಂದ್ರಾಯಣಿ ನದಿ ದಡದಲ್ಲಿ.

ಕೊಲ್ಲಾಪುರದ ಜಯಸಿಂಗಪುರದಲ್ಲಿ ಹುಟ್ಟಿದ ವಿವೇಕ್, ಪಿಯುಸಿವರೆಗೆ ಅಲ್ಲೇ ಶಿಕ್ಷಣ ಪೂರೈಸಿದ್ದರು. ಎಂಜಿನಿಯರಿಂಗ್ ಶಿಕ್ಷಣಕ್ಕೆ ಪುಣೆಗೆ ಬಂದಿದ್ದರು.

'ಎಂಜಿನಿಯರಿಂಗ್ ಪದವಿ ಪಡೆಯಲು 2014ರಲ್ಲಿ ಪುಣೆಗೆ ಬಂದೆ. ಇಂದ್ರಾಯಣಿ ನದಿಯ ಪರಿಸರ ತೀರಾ ಕೆಟ್ಟುಹೋಗಿತ್ತು. ಜನರು ಕಸ ತಂದು ನದಿಗೆ ಸುರಿಯುತ್ತಿದ್ದರು. ಕಾಲೇಜು ತರಗತಿ ಕೊನೆಗೊಂಡ ಬಳಿಕ ನಾನು ಗೆಳೆಯರ ಜತೆ ನದಿ ದಡದಲ್ಲಿ ವಾಯುವಿಹಾರ ಮಾಡುತ್ತಿದ್ದೆ. ಇಡೀ ಪ್ರದೇಶವನ್ನು ನಾವು ಏಕೆ ಸ್ವಚ್ಛಗೊಳಿಸಬಾರದು ಎಂಬ ಯೋಚನೆ ಮನಸ್ಸಿಗೆ ಹೊಳೆಯಿತು. ನದಿಯಲ್ಲಿ ನೀರು ಇದ್ದರೂ, ಬಳಕೆಗೆ ಯೋಗ್ಯವಲ್ಲದ ಪರಿಸ್ಥಿತಿಯಿತ್ತು' ಎಂಬುದನ್ನು ವಿವೇಕ್ ನೆನಪಿಸಿಕೊಂಡರು.

'ನದಿಗೆ ತ್ಯಾಜ್ಯ ಸುರಿಯುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸ್ಥಳೀಯ ಆಡಳಿತಕ್ಕೆ ಹಲವು ಸಲ ಮನವಿ ಮಾಡಿದ್ದರೂ ಸಕಾರಾತ್ಮಕ ಪ್ರತಿಕ್ರಿಯೆ ದೊರೆಯಲಿಲ್ಲ. ಆದ್ದರಿಂದ ನಾವೇ ಒಂದಷ್ಟು ಗೆಳೆಯರು ಸೇರಿಕೊಂಡು ನದಿಯ ಸ್ವಚ್ಛತೆಗೆ ಮುಂದಾದೆವು' ಎಂದು ಅಭಿಯಾನದ ಆರಂಭವನ್ನು ವಿವರಿಸಿದರು.

ನದಿ ಸ್ವಚ್ಛತಾ ಕೆಲಸ ಐದು ವರ್ಷ ನಿರಂತರ ನಡೆಯಿತು. ಬರಬರುತ್ತಾ ಎಲ್ಲರಿಗೂ ಏಕತಾನತೆ ಎನಿಸತೊಡಗಿತು. ತಂಡದ ಒಬ್ಬೊಬ್ಬರೇ ಆಸಕ್ತಿ ಕಳೆದುಕೊಂಡರು. 300 ಮಂದಿಯಿದ್ದ ತಂಡದ ಸದಸ್ಯರ ಸಂಖ್ಯೆ 30–40ಕ್ಕೆ ಇಳಿಯಿತು. ಅಭಿಯಾನಕ್ಕೆ ಹೊಸ ರೂಪ ಕೊಡಬೇಕು ಎಂದು ವಿವೇಕ್ ನಿರ್ಧರಿಸಿದರು. ಆ ಬಗ್ಗೆ ಆಲೋಚನೆ ಮಾಡುತ್ತಿರುವಾಗ ಸ್ವೀಡನ್‌ನಲ್ಲಿ ಆರಂಭವಾಗಿ ಇತರ ದೇಶಗಳಿಗೆ ವಿಸ್ತರಿಸಿಕೊಂಡಿರುವ 'ಪ್ಲಾಗಿಂಗ್' ಬಗ್ಗೆ ಅವರು ತಿಳಿದುಕೊಂಡರು.

300ನೇ ಅಭಿಯಾನಕ್ಕೆ ಸಿದ್ಧತೆ

'ಪ್ಲಾಗಿಂಗ್ ಪರಿಕಲ್ಪನೆಯನ್ನು ಪುಣೆಯಲ್ಲಿ ಮೊದಲ ಬಾರಿ ಪರಿಚಯಿಸಿದೆ. 2019ರ ಅಕ್ಟೋಬರ್‌ನಲ್ಲಿ ಪುಣೆ ಪ್ಲಾಗರ್ಸ್ ಬಳಗ ರಚಿಸಲಾಯಿತು. ಇದು ಯುವಕರು, ವಿದ್ಯಾರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸಿತು. ಪ್ರತಿ ಶನಿವಾರ ಹಾಗೂ ಭಾನುವಾರ ಪ್ಲಾಗಿಂಗ್ ಅಭಿಯಾನ ಆಯೋಜಿಸತೊಡಗಿದೆ. ದೈಹಿಕ ಆರೋಗ್ಯ ಕಾಪಾಡುವ ಜತೆಯಲ್ಲೇ ಸ್ವಚ್ಛತಾ ಕಾರ್ಯ ನಡೆಸುವ ಈ ಹೊಸ ಪರಿಕಲ್ಪನೆ ಜನಪ್ರಿಯತೆ ಗಳಿಸಿತು. ಬರಬರುತ್ತಾ ನಮ್ಮ ಬಳಗ ದೊಡ್ಡದಾಗಿ ಬೆಳೆಯಿತು. ಒಂದೊಂದು ಅಭಿಯಾನದಲ್ಲಿ 4–5 ಕಿ.ಮೀ. ಜಾಗಿಂಗ್ ನಡೆಸಿ ತ್ಯಾಜ್ಯ ಸಂಗ್ರಹಿಸುತ್ತಿದ್ದೆವು. ಕೆಲವೊಮ್ಮೆ ಇದು 7–8 ಕಿ.ಮೀ. ವರೆಗೂ ಮುಂದುವರಿಯುತ್ತಿತ್ತು' ಎಂದು ಹೇಳಿದರು.

ಪುಣೆ ಪ್ಲಾಗರ್ಸ್ ತಂಡ ಇದುವರೆಗೆ 1,000 ಟನ್ ತ್ಯಾಜ್ಯ ಸಂಗ್ರಹಿಸಿದ್ದು, ವಿಲೇವಾರಿ ಘಟಕಗಳಿಗೆ ಕಳುಹಿಸಲಾಗಿದೆ. ಪುಣೆಯಲ್ಲಿ 300ನೇ ಪ್ಲಾಗಿಂಗ್ ಅಭಿಯಾನಕ್ಕೆ ಸಿದ್ಧತೆ ನಡೆದಿದೆ.

ವಿವೇಕ್ ಅವರ ಗೆಳೆಯರು ಇತರ ನಗರಗಳಲ್ಲೂ ಅಭಿಯಾನಕ್ಕೆ ಚಾಲನೆ ನೀಡಿದ್ದಾರೆ. ದೇಶದ ವಿವಿಧ ನಗರಗಳಲ್ಲಿ ಹತ್ತು ಸಾವಿರಕ್ಕೂ ಅಧಿಕ ಸ್ವಯಂಸೇವಕರು ಪ್ಲಾಗಿಂಗ್ ಅಭಿಯಾನದಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದಾರೆ. ಮುಂಬೈ, ನಾಸಿಕ್, ಕೋಲ್ಕತ್ತ, ಔರಂಗಾಬಾದ್, ಪಟಿಯಾಲ ಸೇರಿದಂತೆ ಇತರ ಕೆಲವು ನಗರಗಳಲ್ಲೂ ಪ್ಲಾಗರ್ಸ್ ತಂಡಗಳು ಸಕ್ರಿಯವಾಗಿವೆ.

ಆರಂಭದ ದಿನಗಳಲ್ಲಿ ವಿವೇಕ್, ಗೆಳೆಯರು ಮತ್ತು ಪೋಷಕರ ವಿರೋಧ ಎದುರಿಸಿದ್ದರು. ಗೆಳೆಯರು ಇವರನ್ನು 'ಕಚ್ರಾವಾಲಾ' ಎಂದು ಲೇವಡಿ ಮಾಡಿದ್ದೂ ಇದೆ. 'ನಿನ್ನನ್ನು ಈ ಕೊಳಕು ಕೆಲಸ ಮಾಡಲು ನಾವು ಪುಣೆಗೆ ಕಳುಹಿಸಿಲ್ಲ' ಎಂದು ತಂದೆ–ತಾಯಿ ಬುದ್ಧಿವಾದವನ್ನೂ ಹೇಳಿದ್ದರು.

'ಬರಬರುತ್ತಾ ಎಲ್ಲರೂ ನನಗೆ ಪ್ರೋತ್ಸಾಹ ನೀಡತೊಡಗಿದರು. ಬ್ರಿಟನ್ ಪ್ರಧಾನಿಯಿಂದ ಪ್ರಶಂಸೆಗೆ ಪಾತ್ರವಾದದ್ದು ತಿಳಿಸಿದಾಗ ಹೆತ್ತವರು ನನ್ನ ಬಗ್ಗೆ ಹೆಮ್ಮೆಪಟ್ಟರು' ಎಂದು ಸಾರ್ಥಕತೆಯ ಭಾವ ವ್ಯಕ್ತಪಡಿಸುವರು.

'ಜನರು ಎಲ್ಲೆಂದರಲ್ಲಿ ಕಸ ಎಸೆಯುತ್ತಲೇ ಇರುತ್ತಾರೆ. ಅವರು ಎಸೆಯಲಿ, ನಾವು ಹೆಕ್ಕುತ್ತಲೇ ಇರುತ್ತೇವೆ' ಎನ್ನುವ ವಿವೇಕ್ ಅವರಂತಹ ಪರಿಸರ ಹೋರಾಟಗಾರರು ಭರವಸೆಯ ಬೆಳಗಾಗಿ ಕಾಣುತ್ತಾರೆ.

ಮುನ್ನೋಟ 24-07-2022 ರಿಂದ 30-07-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಒಂದು ರೀತಿಯ ವ್ಯಗ್ರತೆ ನಿಮ್ಮನ್ನು ಕಾಡಬಹುದು. ಹಣದ ಹರಿವು ಅವಶ್ಯಕತೆಗೆ ತಕ್ಕಷ್ಟು ಇರುತ್ತದೆ. ಸರ್ಕಾರಿ ಆಸ್ತಿಗಳನ್ನು ಕೊಳ್ಳುವ ಮನಸ್ಸು ಇರುತ್ತದೆ ಅಥವಾ ಅದರ ವ್ಯವಹಾರದಲ್ಲಿ ಸಾಕಷ್ಟು ಮುನ್ನಡೆಯನ್ನು ಕಾಣಬಹುದು. ವಿದ್ಯಾರ್ಥಿಗಳಿಗೆ ಉತ್ತಮ ಮುನ್ನಡೆ ಇರುತ್ತದೆ. ರಕ್ತಸಂಬಂಧಿ ಕಾಯಿಲೆಗಳಿರುವವರು ಎಚ್ಚರ ವಹಿಸಿರಿ. ಸಂಗಾತಿಯ ಅತಿ ಹೆಚ್ಚು ಖರ್ಚು ತಲೆಬಿಸಿ ತರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಬಹಳ ಚುರುಕಾಗಿ ಎಲ್ಲ ಕೆಲಸಕಾರ್ಯಗಳಲ್ಲಿ ತೊಡಗಿಕೊಳ್ಳುವಿರಿ. ಹಣದ ಒಳಹರಿವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ಎಲ್ಲ ಕಾರ್ಯಗಳಲ್ಲಿ ಭಾಗವಹಿಸಿ ಚುರುಕಾಗಿ ಓಡಾಡುತ್ತೀರಿ. ವಿದ್ಯಾರ್ಥಿಗಳಿಗೆ ಉತ್ತಮ ಅಧ್ಯಯನ ಮಾಡುವ ಯೋಗವಿದೆ. ಉದರಕ್ಕೆ ಸಂಬಂಧಪಟ್ಟ ಕಾಯಿಲೆ ಇರುವವರು ಚಿಕಿತ್ಸೆಗೆ ಹೋಗುವುದು ಒಳ್ಳೆಯದು. ಸಂಗಾತಿಯ ಕಡೆಯ ಆಸ್ತಿ ವಿಚಾರದಲ್ಲಿ ಕಾವೇರಿದ ಮಾತುಗಳು ಆಗಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಉಲ್ಲಾಸಕರವಾದ ವಾತಾವರಣ ಇರುತ್ತದೆ. ಆದಾಯದಷ್ಟೇ ಖರ್ಚು ಇರುತ್ತದೆ. ಸ್ವಯಂ ಉದ್ಯೋಗ ಮಾಡುವವರ ವ್ಯವಹಾರ ಹೆಚ್ಚುತ್ತದೆ. ಕಟ್ಟಡಗಳನ್ನು ಕಟ್ಟುವ ಸಂಸ್ಥೆಗಳಿಗೆ ಕಾನೂನು ತೊಡಕುಗಳು ಎದುರಾಗಬಹುದು. ನಿಮ್ಮ ಅಗತ್ಯತೆಗೆ ಬೇಕಾದ ಸಾಲ ಸೌಲಭ್ಯಗಳು ದೊರೆಯುತ್ತವೆ. ಮಕ್ಕಳಿಂದ ಅಗೌರವ ಆಗಬಹುದು. ಕೃಷಿಕರಿಗೆ ಅಲ್ಪಹಿನ್ನಡೆ ಇರುತ್ತದೆ, ಆದರೆ ನಂತರ ಸರಿಯಾಗುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಹೊಸ ಜನರ ಪರಿಚಯವಾಗುವ ಸಾಧ್ಯತೆಗಳಿವೆ. ಸರ್ಕಾರಿ ಕೆಲಸಕಾರ್ಯಗಳಲ್ಲಿ ಮುನ್ನಡೆಯನ್ನು ಕಾಣಬಹುದು. ಹಣದ ಒಳಹರಿವು ನಿಮ್ಮ ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ. ನಿಮ್ಮ ನಡವಳಿಕೆಯು ಸಂಪೂರ್ಣ ವ್ಯಾವಹಾರಿಕವಾಗಿರುತ್ತದೆ. ಆಸ್ತಿ ಮಾಡುವ ವಿಚಾರದಲ್ಲಿ ಹಿನ್ನಡೆಯನ್ನು ಕಾಣಬಹುದು. ಮಕ್ಕಳ ಸಂತೋಷಕ್ಕಾಗಿ ಹೆಚ್ಚು ಹಣ ಖರ್ಚು ಮಾಡುವಿರಿ. ಕೃಷಿಕರ ಆದಾಯ ಹೆಚ್ಚಾಗುವ ಸಾಧ್ಯತೆ ಇದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಸ್ವಲ್ಪ ಆಲಸಿತನ ಹೆಚ್ಚಾಗುವ ಸಾಧ್ಯತೆಗಳಿವೆ. ಆದಾಯಕ್ಕಿಂತ ಖರ್ಚು ಹೆಚ್ಚಾಗಬಹುದು. ಒಡಹುಟ್ಟಿದವರ ಸಂಬಂಧಗಳಲ್ಲಿ ವ್ಯತ್ಯಾಸಗಳು ಆಗುವ ಸೂಚನೆ ಇದೆ. ವಿದೇಶಗಳಿಗೆ ಆಹಾರ ವಸ್ತುಗಳನ್ನು ರಫ್ತು ಮಾಡುವವರ ವ್ಯವಹಾರದಲ್ಲಿ ಸ್ವಲ್ಪ ಕಾನೂನು ತೊಡಕುಗಳು ಆಗಬಹುದು. ಸೂಕ್ತ ದಾಖಲೆಗಳನ್ನು ಒದಗಿಸಿದಲ್ಲಿ ಎಲ್ಲವೂ ಪರಿಹಾರವಾಗುತ್ತದೆ. ಮಕ್ಕಳ ಏಳಿಗೆ ನಿಧಾನಗತಿಯಲ್ಲಿ ಇರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಸರ್ಕಾರಿ ಸಂಸ್ಥೆಗಳ ಜೊತೆ ಮಾಡುವ ವ್ಯವಹಾರಗಳಲ್ಲಿ ನಿಧಾನಗತಿ ಇರುತ್ತದೆ. ಸ್ವಂತ ವ್ಯವಹಾರಗಳಲ್ಲಿ ಅಭಿವೃದ್ಧಿ ಇರುತ್ತದೆ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ಬಂಧು ಬಾಂಧವರಿಂದ ನಿಷ್ಠುರಗಳು ಎದುರಾಗಬಹುದು. ದೈವಭಕ್ತಿ ಹೆಚ್ಚಾಗುವ ಸಾಧ್ಯತೆ ಇದೆ. ಸಾಲಗಾರರ ಕಾಟ ಹೆಚ್ಚಾಗುವ ಸಾಧ್ಯತೆಗಳಿವೆ. ಸಂಗಾತಿ ಆದಾಯದಲ್ಲಿ ಏರಿಕೆಯನ್ನು ಕಾಣಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಮನಸ್ಸಿನಲ್ಲಿ ಪಾಪಪ್ರಜ್ಞೆ ಕಾಡುತ್ತಿರುತ್ತದೆ. ಹಣಕಾಸಿನ ಬಿಕ್ಕಟ್ಟುಗಳು ಹೆಚ್ಚಾಗಬಹುದು. ನೀವು ನಂಬಿದ್ದ ಜನರು ಕೈಕೊಡುವ ಸಾಧ್ಯತೆಗಳಿವೆ. ತಂದೆಯಿಂದ ಸಿದ್ಧ ಉಡುಪುಗಳ ವ್ಯವಹಾರ ಮಾಡಲು ಹಣಸಹಾಯ ದೊರೆಯುತ್ತದೆ. ಹೈನುಗಾರಿಕೆ ಮಾಡಲು ಹೋದ ಕೆಲವರಿಗೆ ಹಿಂಜರಿಕೆ ಉಂಟಾಗಬಹುದು. ಉದ್ಯೋಗ ಸ್ಥಳದಲ್ಲಿ ಅಭಿವೃದ್ಧಿ ಇರುತ್ತದೆ. ವೃತ್ತಿಯ ಸ್ಥಳದಲ್ಲಿದ್ದ ಗೋಜಲುಗಳು ಮರೆಯಾಗುತ್ತವೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ವಿದೇಶದಲ್ಲಿ ಇರುವವರಿಗೆ ಸ್ವದೇಶದಲ್ಲಿ ಆಸ್ತಿ ಮಾಡುವ ಯೋಗವಿದೆ. ಹಣದ ಒಳಹರಿವು ಸಾಮಾನ್ಯಗತಿಯಲ್ಲಿ ಇರುತ್ತದೆ. ಹಿರಿಯರಿಂದ ನಿಮಗೆ ಸಲ್ಲಬೇಕಾದ ಆಸ್ತಿ ಪಾಲು ದೊರೆಯುತ್ತದೆ. ಎಣ್ಣೆ ಕಾಳುಗಳನ್ನು ಬೆಳೆಯುವವರಿಗೆ ಬೇಡಿಕೆ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಬಹಳ ಉತ್ತಮ ಸಾಧನೆಯನ್ನು ಮಾಡುವ ಅವಕಾಶ ದೊರೆಯುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಆಲಸ್ಯದ ನಡವಳಿಕೆ ನಿಮ್ಮದಾಗಿರುತ್ತದೆ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ತೀಕ್ಷ್ಣವಾಗಿ ಮಾತನಾಡಿ ನಿಮ್ಮತನವನ್ನು ತೋರಿಸಿಕೊಳ್ಳುವಿರಿ. ಆಸ್ತಿ ಮಾಡುವ ವಿಚಾರದಲ್ಲಿ ಪ್ರಗತಿಯನ್ನು ಸಾಧಿಸಬಹುದು. ಮಕ್ಕಳ ನಡುವಳಿಕೆ ಸಾಕಷ್ಟು ಅಚ್ಚರಿಯನ್ನು ಉಂಟುಮಾಡುತ್ತದೆ. ಶ್ವಾಸಕೋಶದ ತೊಂದರೆ ಇದ್ದರೆ ಹೆಚ್ಚು ಎಚ್ಚರವಹಿಸಿರಿ. ಸಂಗಾತಿಯ ನಡವಳಿಕೆಯಲ್ಲಿ ಹೊಸತನವನ್ನು ಕಾಣಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಕೆಲಸದ ಒತ್ತಡ ಅಧಿಕವಾಗಿರುತ್ತದೆ. ಹಣದ ಹರಿವು ಕಡಿಮೆ ಇದ್ದರೂ ಜಾಣ್ಮೆಯಿಂದ ನಿಮ್ಮ ಆರ್ಥಿಕ ನಿರ್ವಹಣೆಯನ್ನು ಮಾಡುವಿರಿ. ನಡವಳಿಕೆಯಲ್ಲಿ ಹೆಚ್ಚಿನ ದೈವಭಕ್ತಿ ಕಂಡುಬರುತ್ತದೆ. ಆಸ್ತಿ ವಿಚಾರದಲ್ಲಿ ಹೆಚ್ಚಿನ ತಗಾದೆ ಬೇಡ. ವಿದ್ಯಾರ್ಥಿಗಳಿಗೆ ಉತ್ತಮ ಕಾಲ. ಸಂಗಾತಿಗೆ ವೃತ್ತಿಯಲ್ಲಿ ಹೆಚ್ಚಿನ ಸ್ಥಾನಮಾನ ದೊರೆಯುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಬೇಕಾಗಿದ್ದ ಎಲ್ಲ ರೀತಿಯ ಸವಲತ್ತುಗಳು ದೊರೆತು ವಿದ್ಯಾರ್ಥಿಗಳಿಗೆ ಸಂತೋಷವಾಗುತ್ತದೆ. ನಿಶ್ಚಿತ ಆಸ್ತಿಯನ್ನು ಖಂಡಿತ ಖರೀದಿ ಮಾಡಬಹುದು. ಕಣ್ಣಿನ ತೊಂದರೆ ಇರುವವರು ಎಚ್ಚರವಹಿಸಿರಿ. ಹಣದ ಒಳಹರಿವು ಉತ್ತಮವಾಗಿದ್ದರೂ ನಿರ್ವಹಣೆ ಅತಿ ಮುಖ್ಯ. ಮಹಿಳೆಯರು ನಡೆಸುವ ಉದ್ಯಮಗಳಲ್ಲಿ ಸಾಕಷ್ಟು ಪ್ರಗತಿ ಇರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಸರ್ಕಾರಿ ಕೆಲಸಗಳಲ್ಲಿ ಸಾಕಷ್ಟು ಮುನ್ನಡೆ ಇರುತ್ತದೆ. ಲೇವಾದೇವಿ ಅಥವಾ ಬಡ್ಡಿ ವ್ಯವಹಾರ ಖಂಡಿತ ಬೇಡ. ಸಹೋದರಿಯರಿಂದ ಸಾಕಷ್ಟು ಸಹಾಯ ದೊರೆಯುತ್ತದೆ. ಭೂ ವ್ಯವಹಾರ ಮಾಡುವವರಿಗೆ ವ್ಯಾಪಾರ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ದರ್ಜೆಯ ವಿದ್ಯಾಸೌಲಭ್ಯ ದೊರೆಯುತ್ತದೆ. ಹೃದಯದ ತೊಂದರೆ ಇರುವವರು ಹೆಚ್ಚಿನ ಎಚ್ಚರಿಕೆ ವಹಿಸಿರಿ. ಅದಿರು ವ್ಯಾಪಾರಿಗಳಿಗೆ ಬೇಡಿಕೆ ಹೆಚ್ಚಾಗಿ ಲಾಭವಿದೆ.

ಪದಬಂಧ 2748



ಮೇಲಿನಿಂದ ಕೆಳಕ್ಕೆ

2. ಸಜ್ಜಾಗಿರುವ ನಾಟಕದ ವೇದಿಕೆಯ ಹಂದರ 5
3. ರಸ ತುಂಬಿದ ವಸ್ತುಗಳ ಮಿಶ್ರಣ 4
4. ನಾವೆಲ್ಲರೂ ಪಯಣಿಸಬಹುದಾದ ದೋಣಿ 2
5. ಮಹಾಭಾರತದಲ್ಲಿ ದಾಸಿ ಪುತ್ರ ಹೇಳಿದ ಧರ್ಮದ ಸಾರ 5
7. ಯೋಧರ ಮೊದಲ ನಾಯಕ 5
8. ವಿವಾಹಕ್ಕೆ ಬರಬೇಕಾದ ಕುಟುಂಬ ಮತ್ತು ಅವರ ಸಮೀಪದ ಮಂದಿ 5
12. ಬೆಳ್ಳಿಯಂತೆ ಹೊಳೆಯುವ ಬೆಟ್ಟ 5
15. ಮನಸ್ಸನ್ನು ಹಗುರವಾಗಿಸಲು ದೊರೆತ ಚಿಕ್ಕ ಬಿಡುವು 5
17. ಮೈಸೂರಿನ ಸುವಾಸಿತ ಪುಷ್ಪ ಅರಣ್ಯದಲ್ಲಿ ಅರಳಿದೆ 5
19. ಜೋಡಿಯಾಗಿ ಬರುವ ಸಮುದ್ರದ ಬಿಳಿ ಮತ್ತು ಕೆಂಪು ರತ್ನಗಳು 5
21. ಚಿಕ್ಕ ಕತೆ 4
24. ಯಾವುದೇ ಮಸಾಲೆಯಿಲ್ಲದ ಸಾಧಾರಣ ದೋಸೆ 2

ಎಡದಿಂದ ಬಲಕ್ಕೆ

1. ವಿಠಲನನ್ನು ಆರಾಧಿಸಿದ ದಾಸ ವರೇಣ್ಯ 4
4. ನಮ್ಮ ನುಡಿ ನೆಲದ ದೈವಸ್ವರೂಪಿ ಮಾತೆ 4
6. ಈ ಕೈಂಕರ್ಯ ನಿರರ್ಥಕವಾದುದಲ್ಲ 5
8. ಸಂಬಂಧ ಬೆಸೆದು ಸುಂದರವಾದದ್ದು 3
9. ಮಗುವಿನ ರಚ್ಚೆ 2
10. ಒಂಬತ್ತು ವಿಧದ ಹೊಸ ಹಣೆಬರಹ 4
11. ಲೌಕಿಕದ ಎಣಿಕೆಗೆ ಬಾರದ್ದು 2
13. ವಸಂತ ಮಾಸದಲ್ಲಿ ಅರಳಿದ ಉತ್ತರ ಭಾರತದ ಹೂವು ಶೋಲೆ ಸಿನಿಮಾದ ನಾಯಕಿಯನ್ನು ನೆನಪಿಸುತ್ತದೆ 3
14. ಸಮಸ್ಯೆ ಸುಲಭವಾದುದಲ್ಲ, ಬಹಳ ಕ್ಲಿಷ್ಟವಾದದ್ದು 3
16. ಕರಗ ಎತ್ತುವ ವೀರಕುಮಾರನ ಕುಲದವ 3
17. ಅಪೇಕ್ಷೆ ಅಥವಾ ಬಯಕೆಯಿರುವವ 3
18. ಒತ್ತು ಕಳೆದುಕೊಂಡ ಆಂಗ್ಲದ ಗೋಂದು 2
20. ಮುಂದಾಳು ಇಲ್ಲದವನಿಗೆ ಅಗ್ರಪೂಜೆ 4
22. ಗಾಂಭೀರ್ಯ ಮತ್ತು ಹಮ್ಮುಗಳಿಂದ ಬಾಗದ ಕತ್ತು 2
23. ಕೋತಿಯಾಡಿಸುತ್ತಾ ದಾರಿ ಹುಡುಕುವವ 3
24. ಸಂಗೀತ ಪ್ರದವಾದ ವೇದದ ಹಾಡುಗಾರಿಕೆ 5
25. ಕಾಲಿಗೆ ಕಟ್ಟಿದ ಕಿಂಕಿಣಿಯ ಸದ್ದು 4
26. ಮಾಪನಕ್ಕೆ ನೋಟದಲ್ಲೇ ಮಾಡಬಹುದಾದ ಲೆಕ್ಕಾಚಾರ 4

ಪದಬಂಧ ಉತ್ತರ -2747

ಮೇಲಿಂದ ಕೆಳಕ್ಕೆ

1.ಪ್ರವರ್ತಕ 2.ರಮಾಮಣಿ 3.ಅರವಿಂದ 4.ರತ್ನಮಾಲ 6.ಸವಿಗಾನ 8.ರಸಸಂಗಮ 9.ಕಪಾಲಮೋಕ್ಷ 10.ನಾಗಶಯನ 11.ಲೋಕೋಪಯೋಗಿ 16.ಕಲಾಕುಂಚ 17.ಕಷ್ಟಜೀವಿ 18.ಲಾವಾರಸ 20.ವರಾಗಮ 21.ರಿಕ್ಷಾವಾಲ

ಎಡದಿಂದ ಬಲಕ್ಕೆ

1. ಪ್ರವರ 3.ಅದರ 5.ಮಾನಸಸರೋವರ 7.ಕರಣಿಕ 10.ನಾದಲೋಲ 12. ಪಾವನಗಂಗ 13.ಸಂಕುಲ 14.ಶಥಪ 17.ಕಮಲಾಕ್ಷ 19.ನವಗಿರಿ 22.ರಜತಾಚಲಶೃಂಗ 23.ವಿನ್ಯಾಸ 24.ಮಸಾಲ

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಪದ-ಆಟ

ಇಲ್ಲಿ ಕೊಟ್ಟಿರುವ ಆದಿ-ಅಂತ್ಯ ಒಂದೇ ಆಗಿರುವ ಅಕ್ಷರಗಳ ಮೂರು ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತ ಅಕ್ಷರ ಆಯ್ದು ತುಂಬಿ ಪದ ಪೂರ್ಣ ಮಾಡಿ.

ಎ. 1. ನ __ __ ನ
2. ರ __ __ ರ
3. ಕ __ __ ಕ

ಬಿ. 1. ಸ __ __ ಸ
2. ರ __ __ ರ
3. ಸ __ __ ಸ

ಸಿ. 1. ಸ __ __ ಸ
2. ರ __ __ ರ
3. ತಿ __ __ ತಿ

ಯ __ ಘು __ ಮ
ಧೀ __ ಜ __ ನ್ನ
ವಾ __ ಣ __ ಮಂ
ಸೇ __ ಡ __ ಪ
ರು __ ವಿ __ ಹ
ಪ __ ರ __ ವಾ

ಟ್ವೆಂಟಿ – 20 ಮ್ಯಾಚ್

ಎಡಭಾಗದ ವಿಶೇಷತೆಗಳಿಗೆ ಬಲಭಾಗದ ಸಂಗತಿ ಹೊಂದಿಸಿರಿ

A ವಿಭಾಗ			
1	ಸಂಗೀತ ಕ್ಷೇತ್ರದ ಮಿನುಗುತಾರೆ	A	ಡಿ.ಎಸ್.ಕರ್ಕಿ
2	ವ್ಯಾಕರಣ ತೀರ್ಥ	B	ಎಚ್ಚೆಸ್ಕೆ
3	ಎಂಜಿನಿಯರ್ ಸಾಹಿತಿ	C	ಕೊರಟ ಶ್ರೀನಿವಾಸ ರಾವ್
4	ಶಾಸನ ತಜ್ಞ	D	ಕರ್ಪೂರ ಶ್ರೀನಿವಾಸರಾಯ
5	ಐತಿಹಾಸಿಕ ಕಾದಂಬರಿಕಾರ	E	ಸಮೇತನಹಳ್ಳಿ ರಾಮರಾಯರು
6	ಹಚ್ಚೇವು ಕನ್ನಡದ ದೀಪ ಎಂದವರು	F	ಆರ್.ಎಸ್.ಕೇಶವಮೂರ್ತಿ
7	ಬಿಹಾರದ ರಾಜ್ಯಪಾಲ ಕನ್ನಡದ ವಿದ್ವಾಂಸ	G	ಆರ್.ನರಸಿಂಹಾಚಾರ್ಯ
8	ಸಾಹಿತಿಯಾದ ಆರೋಗ್ಯ ತಪಾಸಣಾಧಿಕಾರಿ	H	ಚಂದ್ರಶೇಖರ ಶಾಸ್ತ್ರಿ
9	ಅರ್ಥಶಾಸ್ತ್ರ ಪ್ರವೀಣ ಸಾಹಿತಿ	I	ವೀ.ಸೀತಾರಾಮಯ್ಯ
10	ಕನ್ನಡದ ಪ್ರಸಿದ್ಧ ಅಂಕಣಕಾರ	J	ರಂಗನಾಥ ದಿವಾಕರ

B ವಿಭಾಗ			
ಇಲ್ಲಿರುವ ಇಂಗ್ಲಿಷ್‌ನ ಪದಗಳನ್ನು ಹೊಂದಿಸಿರಿ			
1	CAME	A	E
2	SAND	B	ET
3	MAT	C	AT
4	ROCK	D	CH
5	GO	E	AL
6	ME	F	ET
7	READ	G	AN
8	BULL	H	L
9	MAD	I	Y
10	BAN	J	K

ಗಣಿತದಲ್ಲಿ ಗರ್ದಿ ಗಮ್ಮತ್ತು

ದೊಡ್ಡಾಟ

ಹೊಂದಿಸು ಆನಂದಿಸು

ಇಲ್ಲಿ ಕೊಟ್ಟಿರುವ 6 x 6 ಚೌಕಗಳಲ್ಲಿ ಎಡದಿಂದ ಬಲಕ್ಕೆ ನೋಡಿದರೂ ಮೇಲಿನಿಂದ ಕೆಳಕ್ಕೆ ನೋಡಿದರೂ ಹಾಗೂ ಮೂಲೆಯಿಂದ ಮೂಲೆಗೆ ನೋಡಿದರೂ ಒಂದು ಹರಳು ಮಾತ್ರ ಕಾಣಬೇಕು. ಹಾಗೆ ಹೊಂದಿಸಿ ಆನಂದಿಸಿ

ಹರಳುಗಳು

ಸಣ್ಣಾಟ

ಅಂಕಿ-ಆಟ

ಇಲ್ಲಿರುವ ಎಂಟು 8ರ ನಡುವೆ ನಾಲ್ಕು + ಚಿಹ್ನೆ ಹಾಕಿ 1000 ಮಾತ್ರ ಆಗುವಂತೆ ಮಾಡಿರಿ

88888888 = 1000

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂಲ ಅಕ್ಷರಗಳಿಗೆ ಪಕ್ಕದಲ್ಲಿ ಕೊಟ್ಟಿರುವ ಸುಳಿವು ಆಧರಿಸಿ ಸರಿಯಾದ ಪದ ರಚಿಸಿ

	ಮ	ನ	ಸುಳಿವು
1			ಯೋಗಿ
2			ಶಾಂತಸ್ಥಿತಿ
3			ಆಲಯ
4			ಗೌರವ
5			ಚೂಪಾದುದು

ಅದಲು ಬದಲು ಕಂಚಿ ಕದಲು

1. ಸಸಿಹೊಂದಿರಿ = ________
2. ಸಸಿಪಡಿರಿ = ________
3. ಪರದಾಟದ = ________
4. ಮೂಲಗಿಡ = ________

ಕಳೆದ ಸಂಚಿಕೆಯ ಸರಿ ಉತ್ತರಗಳು

ಟ್ವೆಂಟಿ -20 ಮ್ಯಾಚ್
1-K 2-N 3-F 4-Q 5-H 6-D 7-M 8-P 9-S 10- R 11-J 12-O 13- T 14-L 15-I 16-E 17-B 18-C 19-G 20-A

ಜಾಣಪದ ಆಟ
1. ಸೋವಿ 2. ಸೇವೆ 3. ಸಾವೆ 4. ಸಾವು 5. ಸವಿ

ಅದಲುಬದಲು ಕಂಚಿ ಕದಲು
1. ಪಾಪದ ಕೊಡ 2. ಬಾಲಕ ವಿನಾಯಕ 3. ಹರಕತ್ತು 4. ಸಂಭಾವಿತ

ಪದಶೋಧ
1. ಕಾಕಿ 2. ಖೋಖೋ 3. ಗೂಗೆ 4. ಜಾಜಿ 5. ತಾತ 6. ಪಾಪ 7. ಲಾಲಿ 8. ಸೂಸು 9. ಸೇಸೆ 10. ಸೊಸೆ 11. ಲೀಲೆ 12. ಗಂಗೆ 13. ತಂತಿ 14. ತೂತು 15. ಪಂಪ

ಮೋಡಿ ಮಾಯಾಚೌಕ

2	13	8	11
16	13	10	5
9	6	15	4
7	12	1	14

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಉತ್ತರ ಕಳುಹಿಸಲು ಇಮೇಲ್ ವಿಳಾಸ:
majakoora@prajavani.co.in

ದೃಶ್ಯ ಚಿತ್ರಕಲಾಶ್ರೇಷ್ಠ ಕಥೆಯ | ಶ್ರವಣಬೆಳಗೊಳ ದರ್ಶನ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಇದು ಶ್ರವಣಬೆಳಗೊಳ. ಹಾಸನ ಜಿಲ್ಲೆಯ ಐತಿಹಾಸಿಕ, ಧಾರ್ಮಿಕ ತಾಣ. ಇಲ್ಲಿನ ಚಂದ್ರಗಿರಿಯಲ್ಲಿ ವಿಶ್ವವಿಖ್ಯಾತ ಬಾಹುಬಲಿಯ (58.8 ಅಡಿ ಎತ್ತರ) ಮೂರ್ತಿಯಿದೆ. ಜೈನ ಧಾರ್ಮಿಕ ಕೇಂದ್ರ. ನಾಲ್ಕನೇ ರಾಚಮಲ್ಲನ ಮಂತ್ರಿ ಚಾವುಂಡರಾಯನ ನೇತೃತ್ವದಲ್ಲಿ ಇದನ್ನು ನಿರ್ಮಿಸಲಾಯಿತು



ಬಾಹುಬಲಿ ಮೂರ್ತಿಯ ಪಾದದ ನೋಟ. ಚಂದ್ರಗಿರಿ ಬೆಟ್ಟದಲ್ಲಿರುವ ಮೂರ್ತಿಯ ಪಾದಗಳಿಗೆ ಪ್ರತಿ ದಿನ ಪುಷ್ಪಾರ್ಪಣೆ ಮಾಡಿ ಪೂಜೆ ಸಲ್ಲಿಸಲಾಗುತ್ತದೆ. ಸಾವಿರಾರು ಪ್ರವಾಸಿಗರು ಇಲ್ಲಿಗೆ ಭೇಟಿ ನೀಡುತ್ತಾರೆ



ಚಂದ್ರಗಿರಿ ಬೆಟ್ಟದ ಮೇಲಿರುವ ಮಾನಸ್ತಂಭ ಮತ್ತು ಹೆಬ್ಬಾಗಿಲು. ಬಾಹುಬಲಿಯ ದರ್ಶನಕ್ಕೆ ಹೋಗುವ ಮುನ್ನ ಈ ಹೆಬ್ಬಾಗಿಲನ್ನು ದಾಟಿ ಹೋಗಬೇಕು. ಈ ಪ್ರದೇಶದಲ್ಲಿ ನಿಂತು ನೋಡಿದರೆ ಶ್ರವಣಬೆಳಗೊಳದ ಸುಂದರ ಪರಿಸರವನ್ನು ಆಸ್ವಾದಿಸಬಹುದು

ಚಂದ್ರಗಿರಿ ಬೆಟ್ಟಕ್ಕೆ ಹೋಗುವ ಮೆಟ್ಟಿಲುಗಳ ಹಾದಿಯಲ್ಲಿ ಸಿಗುವ ಕಲ್ಲು ಮಂಟಪ. ಬೆಟ್ಟವೇರುವ ಹೊತ್ತಿನಲ್ಲಿ ಯಾತ್ರಿಕರು ಈ ಕಲ್ಲುಮಂಟಪದ ಅಡಿ ಕುಳಿತು ವಿಶ್ರಾಂತಿ ಪಡೆದು ಮುಂದುವರಿಯುತ್ತಾರೆ. ಮಂಟಪವು ಆಕರ್ಷಕ ಕೆತ್ತನೆಗಳಿಂದ ಕೂಡಿದೆ.

ಚಂದ್ರಗಿರಿ ಬೆಟ್ಟದಲ್ಲಿರುವ ಭದ್ರಬಾಹು ಮುನಿಗಳ ಗುಹೆ ಇದು. ಜೈನ ಧರ್ಮದ ಗುರುವಾಗಿದ್ದ ಇವರು ಮೌರ್ಯರ ದೊರೆ ಚಂದ್ರಗುಪ್ತನ ಗುರುಗಳೂ ಆಗಿದ್ದರು. ಅವರು ತಮ್ಮ ಕೊನೆಗಾಲವನ್ನು ಇಲ್ಲಿಯೇ ಕಳೆದರು ಎಂದೂ ಇತಿಹಾಸ ಹೇಳುತ್ತದೆ



ಶ್ರವಣಬೆಳಗೊಳದ ವಿಂಧ್ಯಗಿರಿಯಲ್ಲಿರುವ ವದೆಗಲ್ ಬಸದಿ. ಇದರ ಒಳಗೆ ಕನ್ನಡ ಶಾಸನಗಳು, ಕಪ್ಪು ಶಿಲೆಯಲ್ಲಿ ಕೆತ್ತಲಾದ ಜೈನ ತೀರ್ಥಂಕರರಾದ ಆದಿನಾಥ, ಶಾಂತಿನಾಥ ಮತ್ತು ನೇಮಿನಾಥರ ವಿಗ್ರಹಗಳು ಇವೆ, ಶ್ರವಣ ಬೆಳಗೊಳದಲ್ಲಿ ಇಂಥ ಹಲವಾರು ಬಸದಿಗಳಿವೆ

ಪ್ರಜಾವಾಣಿ
ದೀಪಾವಳಿ ವಿಶೇಷಾಂಕ 2022
ಕನ್ನಡ ಕಥಾ ಜಗತ್ತಿನ ವಾರ್ಷಿಕ ಸಂಭ್ರಮ
ಕಥೆ-ಕವನ ಸ್ಪರ್ಧೆಯ ಪ್ರವೇಶಗಳಿಗೆ ಇದೋ ಆಹ್ವಾನ
ಪ್ರವೇಶಗಳು ನಮಗೆ ತಲುಪಲು ಕೊನೆಯ ದಿನಾಂಕ ಆಗಸ್ಟ್ 13, 2022
ವಿವರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

SHAKTHI Education Trust
SHAKTHI RESIDENTIAL SCHOOL (CBSE)
Affiliated to CBSE Board, New Delhi (Affn No.: 830956)
ADMISSION OPEN 2022-23 for Grade 1 to 10
INSPIRING EXCELLENCE BUILDING CHARACTER
"Stepping into 5th year of inception"
FOCUS ON 20 POINT PROGRAMME
SWIMMING
MORNING ASSEMBLY
YOGA
KIDS PLAY AREA
VEGETABLE GARDEN
DANCE (CLASSICAL) (ZUMBA)
KEY BOARD / GUITAR
KARATE
CUBS/BULBULS
ART & CRAFT
CRICKET COACHING
KABADDI
KHO - KHO
FIELD TRIP
STUDENT COUNCIL
ECO CLUB ACTIVITIES (VANAMAHOTSAVA)
SHAKTHI ADVANCED LEARNING
DIGITAL STUDIO
DIGITAL CLASSROOM
SWACHA CAMPUS
100% Results in GRADE X & XII (2021-22)
SHAKTHI PU COLLEGE
ADMISSION OPEN 2022-23
Science
PCMB Physics, Chemistry Mathematics and Biology
PCMC Physics, Chemistry Mathematics and Computer Science
Commerce
EBAC Economics, Business Studies Accountancy and Computer Science
EBAS Economics, Business Studies Accountancy and Statistics
LANGUAGES:
English Kannada / Hindi / Sanskrit / French
SHAKTHI COACHING ACADEMY
Coaching available for KCET / NEET / JEE / NATA / NDA
SHAKTHI ADVANCED COMMERCE LEARNING
CA, CS - Foundation Course CLAT
Fee concession available for meritorious students
Hostel Facilities Available for BOYS & GIRLS (Class 4 onwards)
SHAKTHI ADVANCED LEARNING (SAL)
Foundational Course for competitive exams like CET, JEE, NTSE, NEET, NATA, NDA & KVPY
SCAN THE QR CODE FOR CAMPUS VIDEO
Shakthi Residential School & PU College
Near Shree Gopalakrishna Temple, Shakthinagar, Mangaluru - 575016
Ph: 0824 2230452 | 0824 2231452 | 84312 47425 | 91080 43552
Website: shakthi.edu.in | Email: info@shakthi.edu.in
www.tarjani.co